ಭಾನುವಾರ, ಮಾರ್ಚ್ 22, 2026 ₹ 7.00
www.prajavani.net
prajavani.net prajavani

ಚಿಣ್ಣರ ಸಂಭ್ರಮ

ದಾವಣಗೆರೆಯ ಪಿ.ಬಿ. ರಸ್ತೆಯಲ್ಲಿ ಈದ್ ಉಲ್ ಫಿತ್ರ್ ಹಬ್ಬದ ಅಂಗವಾಗಿ ಮುಸ್ಲಿಮರ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದ ಮಕ್ಕಳ ಸಂಭ್ರಮ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ತಮನ್ನಾ ನೋಟ

ಮುಂಬೈನಲ್ಲಿ ನಡೆದ 'ಲ್ಯಾಕ್ಮೆ ಫ್ಯಾಷನ್ ವೀಕ್'ನಲ್ಲಿ ಬಾಲಿವುಡ್ ನಟಿ ತಮನ್ನಾ ಭಾಟಿಯಾ ಅವರು ಭೂಮಿಕಾ ಶರ್ಮಾ ವಿನ್ಯಾಸಗೊಳಿಸಿದ ದಿರಿಸಿನಲ್ಲಿ ಗಮನ ಸೆಳೆದರು

163 ವರ್ಷಗಳ ವಿಶ್ವಾಸಾರ್ಹ ಪರಂಪರೆ

ಅದ್ದೂರಿ ಉದ್ಘಾಟನಾ
ಸಮಾರಂಭಕ್ಕೆ ಸ್ವಾಗತ

ಬಾಬಿ ಚೆಮ್ಮನೂರು ಇಂಟರ್ನ್ಯಾಷನಲ್ ಜ್ಯುವೆಲ್ಲರ್ಸ್ ಇಂದು
ಮಂಗಳೂರಿನಲ್ಲಿ
ತನ್ನ ಹೊಸ ಶೋ ರೂಂ ಅನ್ನು ತೆರೆಯುತ್ತಿದೆ
ಮಾರ್ಚ್ 22, ಆದಿತ್ಯವಾರ
ಸಂಜೆ 5 ಗಂಟೆಗೆ
ವ್ಯಾಪಕ ಶ್ರೇಣಿಯ ಸಂಗ್ರಹಗಳೊಂದಿಗೆ ಆಕರ್ಷಕ ಆಭರಣಗಳು ನಿಮ್ಮ ಮುಂದೆ

ಉದ್ಘಾಟನೆ
ಶ್ರೀ. ಡಿ. ಕೆ. ಶಿವಕುಮಾರ್
(ಕರ್ನಾಟಕದ ಗೌರವಾನ್ವಿತ ಉಪ ಮುಖ್ಯಮಂತ್ರಿಗಳು)

ಮುಖ್ಯ ಅತಿಥಿಗಳು
ಶ್ರೀ. ಸೈಫ್ ಅಲಿ ಖಾನ್
(ಬಾಲಿವುಡ್ ತಾರೆ)
ಶ್ರೀ. ಉಪೇಂದ್ರ ರಾವ್
(ಕನ್ನಡ ನಟ ಮತ್ತು ಚಲನಚಿತ್ರ ನಿರ್ಮಾಪಕ)
ಶ್ರೀ ಇಮ್ರಾನ್ ಹಶ್ಮಿ
(ಬಾಲಿವುಡ್ ಸ್ಟಾರ್)

ಬೋಚೆ
(812 Km. Run Unique World Record & Guinness Record Holder : World Peace)

Diamond Section Inauguration

Mr. U. T. Khader
Hon. Speaker

Gold First sale

Capt. Mr. Brijesh Chowta
Hon. MP, Dakshina Kannada

Diamond First sale

Mr. D. Vedavyas Kamath
Hon. MLA, Mangaluru City South

Lucky winners prize distribution

Mr. Ivan D'Souza
Hon. Member of Legislative Council

Felicitation

Mr. Manoj Kumar
Hon. Ex. Mayor

Mrs. Poornima
Hon. Ex. Deputy Mayor

ಸಗಟು ಬೆಲೆ
HUID 916 ಚಿನ್ನದ ಆಭರಣಗಳಿಗೆ

BOCHE FANS CHARITABLE TRUST
ಉದ್ಘಾಟನಾ ದಿನದಂದು, ಬೋಚೆ ಅವರು ಮಂಗಳೂರಿನ ಆಯ್ದ ಬಡ ರೋಗಿಗಳಿಗೆ ಬೋಚೆ ಫ್ಯಾನ್ಸ್ ಚಾರಿಟೆಬಲ್ ಟ್ರಸ್ಟ್‌ನ ವತಿಯಿಂದ ಆರ್ಥಿಕ ಸಹಾಯವನ್ನು ವಿತರಿಸಲಿದ್ದಾರೆ.

BOBY CHEMMANUR INTERNATIONAL GROUP
CHEMMANUR
INTERNATIONAL JEWELLERS
"BELIEVE IN GOD. INVEST IN GOLD"
22 & 24 KARAT GOLD AND DIAMOND JEWELLERY
INDIA • UAE • USA

ರೂ. 2 ಲಕ್ಷಕ್ಕಿಂತ ಹೆಚ್ಚಿನ ಮೌಲ್ಯದ ವಜ್ರ, ಅನ್‌ಕಟ್ ಮತ್ತು ಪ್ಲಾಟಿನಂ ಆಭರಣಗಳನ್ನು ಖರೀದಿಸಿ ಮತ್ತು
ಉಚಿತ ಚಿನ್ನದ ನಾಣ್ಯವನ್ನು ಪಡೆಯಿರಿ.

ಮುಂಗಡ ಬುಕಿಂಗ್ ಕೊಡುಗೆ
ಏರುತ್ತಿರುವ ಚಿನ್ನದ ಬೆಲೆಯಿಂದ ರಕ್ಷಣೆ ಪಡೆಯಿರಿ. ಚಿನ್ನದ ದರದಲ್ಲಿ ಒಂದು ನಿರ್ದಿಷ್ಟ ಮೊತ್ತವನ್ನು ಪಾವತಿಸುವುದರೊಂದಿಗೆ ಮುಂಚಿತವಾಗಿ ಬುಕ್ ಮಾಡಿ. ಚಿನ್ನದ ದರ ಕಡಿಮೆಯಾದರೆ, ಗ್ರಾಹಕರು ಕಡಿಮೆ ದರದಲ್ಲಿ ಅಥವಾ ಬುಕ್ ಮಾಡಿದ ದರದಲ್ಲಿ ಆಭರಣಗಳನ್ನು ಖರೀದಿಸಬಹುದು.

ಹಗುರವಾದ ವಜ್ರದ ಆಭರಣಗಳ ನವೀನ ಶೈಲಿಯ ಸಂಗ್ರಹ ನಿಮಗಾಗಿ!

ಚಿನ್ನದ ವಿನಿಮಯ ಕೊಡುಗೆ
ನಿಮ್ಮ ಹಳೆಯ ಚಿನ್ನವನ್ನು ಹೊಸ HUID 916 ಆಭರಣಗಳೊಂದಿಗೆ ವಿನಿಮಯ ಮಾಡಿಕೊಳ್ಳಲು ಸುವರ್ಣ ಅವಕಾಶ

0% ಮಜೂರಿ

50% ವರೆಗೆ ರಿಯಾಯಿತಿ
ಅಮೂಲ್ಯವಾದ ಮತ್ತು ಅನ್‌ಕಟ್ ಆಭರಣಗಳ ಮೇಲಿನ ಮಜೂರಿ ಮೇಲೆ

ಬೆಳ್ಳಿ ಆಭರಣಗಳ ಅದ್ಭುತ ಸಂಗ್ರಹ

*Terms & Conditions Apply

ಕ್ಲಾಕ್ ಟವರ್ ಹತ್ತಿರ, ಹಂಪನಕಟ್ಟೆ, ಮಂಗಳೂರು
9745 067 916 | 9645 067 916

OPENING SHORTLY LAKSHADWEEP • UK • AUSTRALIA • FUJAIRAH

chemmanurinternationalofficial | boby chemmanur international jewelers | chemmanur_jewellers_official | www.chemmanurinternational.com
The Jewellery Group With BIS & ISO Certification For Quality | Toll Free No. 1800 3000 2916

ಲಕ್ಕಿ ಡ್ರಾ ಕೂಪನ್
Name:........................ Ph:........................
Address:........................
....
ದಯವಿಟ್ಟು ಕೂಪನ್ ಅನ್ನು ಭರ್ತಿ ಮಾಡಿ ಮತ್ತು ಉದ್ಘಾಟನೆಗೆ ಮುನ್ನ ನಮ್ಮ ಶೋ ರೂಂನಲ್ಲಿ ಇರಿಸಲಾಗಿರುವ ಪೆಟ್ಟಿಗೆಯೊಳಗೆ ಹಾಕಿ

ಲಕ್ಕಿ ಡ್ರಾ ಮೂಲಕ 5 ವಿಜೇತರಿಗೆ ಉದ್ಘಾಟನಾ ದಿನದಂದು ವಜ್ರದ ಉಂಗುರವನ್ನು ವಿತರಿಸಲಾಗುವುದು.

ಅಧಿಕಾರಿಯಾಗಲು ಅವಕಾಶ
ಮಂಗಳೂರಿನಲ್ಲಿ ಮಾರಾಟ
ಪುರುಷ / ಮಹಿಳೆ | ಪೂರ್ಣ ಸಮಯ / ಅರೆಕಾಲಿಕ

ನೀವು ತಿಂಗಳಿಗೆ ₹1 ಲಕ್ಷಕ್ಕಿಂತ ಹೆಚ್ಚು ಗಳಿಸಬಹುದು
ವಿಮಾ ಏಜೆಂಟ್‌ಗಳು, ಸ್ತ್ರೀಶಕ್ತಿ ಸದಸ್ಯರು, ಆಶಾ ಕಾರ್ಯಕರ್ತೆಯರು, ಬ್ಯೂಟಿಷಿಯನ್‌ಗಳು ಮತ್ತು ಗೃಹಿಣಿಯರಿಗೆ ಆದ್ಯತೆ ನೀಡಲಾಗುವುದು.
9544 067 916 | 9645 067 916
ಈಗಲೇ ಅರ್ಜಿ ಸಲ್ಲಿಸಿ! ನಿಮ್ಮ ಸ್ವ-ವಿವರವನ್ನು sohr@chemmanurinternational.com ಗೆ ಕಳುಹಿಸಿ.

The Boby Chemmanur International Group consists of
BOCHE GOLD LOAN | OXYGEN Resorts | BOCHE SHAKESBIERRE Bengaluru | BOCHE Club Bengaluru | BOCHE 1000 acre India's Biggest Resort & Entertainment World | BOCHE INSURANCE | BOCHE APPLIANCES | BOCHE TEA | BOCHE ISLAND | BOCHE LENS | phygicart.com | BOCHE TOURS & TRAVELS

ಸ್ಪರ್ಧಿಗಳಿಗೆ ಎಸ್‌ಐಆರ್ 'ತೀರ್ಪು ಬಾಕಿ' ಭೀತಿ

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಎಸ್‌ಐಆರ್‌ನಲ್ಲಿ 63.6 ಲಕ್ಷ ಮತದಾರರನ್ನು ಕೈಬಿಡಲಾಗಿದೆ
- ಟಿಎಂಸಿ, ಬಿಜೆಪಿ ಅಭ್ಯರ್ಥಿಗಳ ಹೆಸರು ತೀರ್ಪು ಬಾಕಿ

ನವದೆಹಲಿ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಹಲವು ಅಭ್ಯರ್ಥಿಗಳ ಹೆಸರು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಪಟ್ಟಿಯಲ್ಲಿ ಸೇರಿಕೊಂಡಿದೆ. ಇದರಿಂದಾಗಿ, ಈ ಅಭ್ಯರ್ಥಿಗಳಲ್ಲಿ ಆತಂಕ ಮನೆ ಮಾಡಿದೆ.

ರಾಜ್ಯದಲ್ಲಿ ನಡೆಸಿದ್ದ ಎಸ್‌ಐಆರ್ ಬಳಿಕ 63.66 ಲಕ್ಷ (ಶೇ 8.3ರಷ್ಟು) ಮತದಾರರ ಹೆಸರನ್ನು ಕೈಬಿಡಲಾಗಿತ್ತು. ಇದರಿಂದಾಗಿ, ರಾಜ್ಯದ ಒಟ್ಟು ಮತದಾರರ ಸಂಖ್ಯೆ 7.04 ಕೋಟಿಗೆ ಇಳಿದಿತ್ತು. ಸುಮಾರು 60.6 ಲಕ್ಷ (ಶೇ 8.7) ಮತದಾರರಿಗೆ ಸಂಬಂಧಿಸಿದಂತೆ ನ್ಯಾಯಾಂಗ ಅಧಿಕಾರಿಗಳಿಂದ ಪರಿಶೀಲನೆ ನಡೆಯುತ್ತಿದೆ. ಟಿಎಂಸಿ ಹಾಗೂ ಬಿಜೆಪಿಯ ಹಲವು ಅಭ್ಯರ್ಥಿಗಳ ಹೆಸರನ್ನು 'ತೀರ್ಪು ಬಾಕಿ' ಎಂದು ಗುರುತಿಸಲಾಗಿದೆ.

2021ರ ಚುನಾವಣೆಯಲ್ಲಿ ಪೂರ್ವ ಬುರ್ದ್ವಾನ್ ಜಿಲ್ಲೆಯ ಆಸ್ಗ್ರಾಮ್ ಕ್ಷೇತ್ರದಿಂದ 11 ಸಾವಿರ ಮತಗಳಿಂದ ಸೋತಿದ್ದ 38 ವರ್ಷದ ಕಲಿತಾ ಮಾಝಿ ಅವರಿಗೆ ಬಿಜೆಪಿ ಮತ್ತೆ ಟಿಕೆಟ್ ನೀಡಿದೆ.

ಪಶ್ಚಿಮ ಬಂಗಾಳದ ಬಲುರ್‌ಘಾಟ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿದ್ಯುತ್ ರಾಯ್ ಅವರು ಶನಿವಾರ ಪ್ರಚಾರದ ವೇಳೆ ವೃದ್ಧೆಯ ಆಶೀರ್ವಾದ ಕೋರಿದರು

ಅವರ ಹೆಸರು ನ್ಯಾಯಾಂಗ ಅಧಿಕಾರಿಗಳ ಪರಿಶೀಲನೆಯ ಪಟ್ಟಿಯಲ್ಲಿದೆ. ತಮ್ಮ ಹೆಸರು ಯಾವ ಕಾರಣಕ್ಕೆ ಈ ಪಟ್ಟಿಯಲ್ಲಿ ಸೇರಿಕೊಂಡಿತು ಎಂಬುದೇ ಮಾಝಿ ಅವರಿಗೆ ಗೊತ್ತಿಲ್ಲ.

59 ವರ್ಷದ ಸ್ವಾತಿ ಖಂಡೋಕರ್ ಅವರು ಹೂಗ್ಲಿಯ ಚಂಡಿತಾಲದಿಂದ ಟಿಎಂಸಿ ಅಭ್ಯರ್ಥಿ ಮತ್ತು ಹಾಲಿ ಶಾಸಕಿ. ಅವರು 2006 ರಿಂದ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿದ್ದಾರೆ ಮತ್ತು ನಾಲ್ಕು ಬಾರಿ ವಿಜಯಶಾಲಿಯಾಗಿದ್ದಾರೆ. ಅವರ ಉಪನಾಮ ಬದಲಾವಣೆ ಆಗಿದ್ದರಿಂದ 'ತೀರ್ಪು ಬಾಕಿ' ಪಟ್ಟಿಯಲ್ಲಿ ಸೇರಿಕೊಂಡಿದೆ.

ಎರಡು ಹಂತಗಳಲ್ಲಿ ನಡೆಯುವ ಚುನಾವಣೆಗೆ ಬಿಜೆಪಿಯು 255 ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಿಸಿದೆ. 'ಪಕ್ಷದ ಒಬ್ಬ ಅಭ್ಯರ್ಥಿಯ ಹೆಸರು ಮಾತ್ರ ಪರಿಶೀಲನೆ ಹಂತದಲ್ಲಿದೆ' ಎಂದು ಬಿಜೆಪಿ ನಾಯಕರು ಸ್ಪಷ್ಟಪಡಿಸಿದ್ದಾರೆ.

ಆಡಳಿತಾರೂಢ ಟಿಎಂಸಿಯು 291 ಅಭ್ಯರ್ಥಿಗಳ ಹೆಸರನ್ನು ಘೋಷಿಸಿದ್ದು, ಮೂರು ಕ್ಷೇತ್ರಗಳನ್ನು ಮಿತ್ರಪಕ್ಷಕ್ಕೆ ಬಿಟ್ಟು ಕೊಟ್ಟಿದೆ. ಹಾಲಿ ಶಾಸಕರು ಮತ್ತು ಸಚಿವರು ಸೇರಿದಂತೆ ಅನೇಕ ಅಭ್ಯರ್ಥಿಗಳ ಹೆಸರುಗಳು ನ್ಯಾಯಾಂಗ ಅಧಿಕಾರಿಗಳ ಪರಿಶೀಲನೆಗೆ ಒಳಪಟ್ಟಿವೆ ಎಂದು ಪಕ್ಷದ ನಾಯಕರು ತಿಳಿಸಿದ್ದಾರೆ.

ಬಾಂಗ್ಲಾ ದೇಶದ ಗಡಿಯಲ್ಲಿರುವ ಮತ್ತು ಮುಸ್ಲಿಂ ಬಾಹುಳ್ಯದ ಜಿಲ್ಲೆಗಳಾದ ಮುರ್ಷಿದಾಬಾದ್ ಮತ್ತು ಮಾಲ್ಡಾಗಳು ನ್ಯಾಯಾಂಗ ಅಧಿಕಾರಿಗಳಿಂದ ವಿಚಾರಣೆಗೆ ಒಳಪಟ್ಟಿರುವ ಅತಿ ಹೆಚ್ಚು ಪ್ರಕರಣಗಳನ್ನು ಹೊಂದಿವೆ. ಮುರ್ಷಿದಾಬಾದ್‌ನಲ್ಲಿ 11,11,45 ಪ್ರಕರಣಗಳಿದ್ದರೆ, 8,28,127 ಪ್ರಕರಣಗಳೊಂದಿಗೆ ಮಾಲ್ಡಾ ಎರಡನೇ ಸ್ಥಾನದಲ್ಲಿದೆ.

'ನನ್ನ ಕುಟುಂಬದ ಮೂವರ ಹೆಸರು ಪರಿಶೀಲನೆಯ ಪಟ್ಟಿಯಲ್ಲಿದೆ. ನಮ್ಮ ಹೆಸರನ್ನು ತಪ್ಪಾಗಿ ಪಟ್ಟಿಗೆ ಸೇರಿಸಲಾಗಿದೆ' ಎಂದು ಮುರ್ಷಿದಾಬಾದ್‌ನ ಸಾಗರಿಧಿ ವಿಧಾನಸಭಾ ಸ್ಥಾನದ ಟಿಎಂಸಿ ಅಭ್ಯರ್ಥಿ ಬೇರಾನ್ ಬಿಸ್ವಾಸ್ ದೂರಿದರು.

ಜಂಗಿಪುರದಿಂದ ಸ್ಪರ್ಧಿಸಿರುವ ಜಾಕೀರ್ ಹುಸೇನ್ ಮತ್ತು ಸಂಸರ್‌ಗಂಜ್‌ನಿಂದ ಸ್ಪರ್ಧಿಸಿರುವ ನೂರ್ ಆಲಂ ಸೇರಿದಂತೆ ಜಿಲ್ಲೆಯ ನಾಲ್ವರು ಟಿಎಂಸಿ ಅಭ್ಯರ್ಥಿಗಳ ಹೆಸರುಗಳು ನ್ಯಾಯಾಂಗ ಅಧಿಕಾರಿಗಳ ಪರಾಮರ್ಶೆಗೆ ಒಳಪಟ್ಟಿವೆ.

ಈ ಪಟ್ಟಿಯಲ್ಲಿರುವ ಮತ್ತೆರಡು ಪ್ರಮುಖ ಹೆಸರುಗಳೆಂದರೆ ಗೋಲ್ ಪೋಖರ್‌ನಿಂದ ಟಿಎಂಸಿ ಅಭ್ಯರ್ಥಿಯಾಗಿರುವ ನವೀಕರಿಸಬಹುದಾದ ಇಂಧನ ಸಚಿವ ಮುಹಮ್ಮದ್ ಗುಲಾಮ್ ರಬ್ಬಾನಿ ಹಾಗೂ ಮುರ್ಷಿದಾಬಾದ್‌ನ ಜಲಂಗಿಯ ಸಿಪಿಐಎಂ ಅಭ್ಯರ್ಥಿ ಉನುಸ್ ಸರ್ಕಾರ್ ಅವರದ್ದು.

ಅಸ್ಸಾಂ: ಟಿಎಂಸಿ 17 ಅಭ್ಯರ್ಥಿಗಳ ಪಟ್ಟಿ

ಗುವಾಹಟಿ(ಪಿಟಿಐ): 126 ಸದಸ್ಯರ ಅಸ್ಸಾಂ ವಿಧಾನಸಭೆಗೆ ನಡೆಯಲಿರುವ ಚುನಾವಣೆಗೆ ಪಕ್ಷದ ರಾಜ್ಯ ಹಿರಿಯ ಉಪಾಧ್ಯಕ್ಷ ದುಲು ಅಹ್ಮದ್ ಸೇರಿದಂತೆ ತನ್ನ 17 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಶನಿವಾರ ಪ್ರಕಟಿಸಿದೆ.

ದಿ ನ್ಯಾಷನಲ್ ಪೀಪಲ್ಸ್ ಪಾರ್ಟಿ-(ಎನ್‌ಪಿಪಿ) ಕೂಡ ಮೂರು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಇದರಲ್ಲಿ ಇತ್ತೀಚೆಗಷ್ಟೇ ಪಕ್ಷಾಂತರಗೊಂಡಿರುವ ಎಐಯುಡಿಎಫ್ ಎಂಎಲ್‌ಎ ಅಮಿನುಲ್ ಇಸ್ಲಾಮ್ ಕೂಡ ಸೇರಿದ್ದಾರೆ.

ಇಸ್ಲಾಮ್ ಅವರು ಮನ್‌ಕಾಚರ್ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ಎನ್‌ಪಿಪಿಯ ಇಬ್ಬರು ಅಭ್ಯರ್ಥಿಗಳಾದ ಡೇನಿಯಲ್ ಲೈಂಗ್ಥಾಸ ಅವರು ಹಾಫ್‌ಲಾಂಗ್ ಕ್ಷೇತ್ರದಿಂದ ಮತ್ತು ಗಾನ್‌ಸೆಂಗ್ ಬಿ. ಸಂಗ್ಮಾ ಅವರು ಬೊಕೊ–ಚಾಯ್‌ಗ್ರಾಮ ಕ್ಷೇತ್ರದಿಂದ ಕಣಕ್ಕಿಳಿಯುತ್ತಿದ್ದಾರೆ.

ಮೋದಿ ಅತಿದೊಡ್ಡ ನುಸುಳುಕೋರ: ಮಮತಾ

ಕೋಲ್ಕತ್ತ (ಪಿಟಿಐ): ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿಚಾರವಾಗಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕಿಡಿಕಾರಿದ್ದು, ಪ್ರಧಾನಿ ಮೋದಿ ಅವರನ್ನು 'ನುಸುಳುಕೋರ' ಎಂದು ಟೀಕಿಸಿದ್ದಾರೆ.

ಇಲ್ಲಿನ ಐತಿಹಾಸಿಕ ರೆಡ್ ರೋಡ್‌ನಲ್ಲಿ ಈದ್ ಪ್ರಾರ್ಥನೆಯ ಬಳಿಕ ಜನರನ್ನುದ್ದೇಶಿಸಿ ಮಾತನಾಡಿ, 'ರಾಜ್ಯದಲ್ಲಿ ಮುಂಬರಲಿರುವ ಚುನಾವಣೆಯು ಪ್ರಜಾಸತ್ತಾತ್ಮಕ ಹಕ್ಕುಗಳು ಹಾಗೂ ಪಶ್ಚಿಮ ಬಂಗಾಳದ ಬಹುತ್ವ ಸಮಾಜದ ರಕ್ಷಣೆಗಾಗಿ ನಡೆಯುತ್ತಿರುವ ಯುದ್ಧ' ಎಂದಿದ್ದಾರೆ. 'ನಿಮ್ಮ ಮತದಾನದ ಹಕ್ಕುಗಳನ್ನು ಕಸಿಯಲು ಮೋದಿ ಹಾಗೂ ಬಿಜೆಪಿಗೆ ಎಂದಿಗೂ ಅಸ್ಪದ ನೀಡುವುದಿಲ್ಲ. ಕೊನೆಯವರೆಗೂ ನಾವು ಹೋರಾಟ ನಡೆಸುತ್ತೇವೆ' ಎಂದೂ ಮಮತಾ ಭರವಸೆ ನೀಡಿದ್ದಾರೆ.

ಈದ್ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದ ರೆಡ್ ರೋಡ್‌ನಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸಭಿಕರನ್ನುದ್ದೇಶಿಸಿ ಭಾಷಣ ಮಾಡಿದರು – ಪಿಟಿಐ ಚಿತ್ರ

ಮೋದಿ ಅವರ ಹೆಸರನ್ನು ಉಲ್ಲೇಖಿಸದೆ ಪರೋಕ್ಷವಾಗಿ ಚಾಟಿ ಬೀಸಿರುವ ಅವರು, 'ನೀವು ವಿದೇಶಗಳಿಗೆ ಹೋದಾಗ ಅಲ್ಲಿನ ನಾಯಕರೊಂದಿಗೆ ಹಸ್ತಲಾಘವ ಮಾಡುತ್ತೀರಿ, ಸ್ನೇಹದ ಬಗ್ಗೆ ಮಾತನಾಡುತ್ತೀರಿ. ಆದರೆ, ಭಾರತಕ್ಕೆ ವಾಪಸಾಗುತ್ತಿದ್ದಂತೆಯೇ ಇದ್ದಕ್ಕಿದ್ದಂತೆ ಹಿಂದೂ–ಮುಸ್ಲಿಂ ವಿಚಾರಗಳು ಶುರುವಾಗುತ್ತವೆ. ಜನರನ್ನು ನುಸುಳುಕೋರರು ಎಂದು ಕರೆಯಲು ಪ್ರಾರಂಭಿಸುತ್ತೀರಿ' ಎಂದು ಆರೋಪಿಸಿದ್ದಾರೆ.

ಮಮತಾ ಹೇಳಿದ್ದೇನು?

- ಎಸ್‌ಐಆರ್‌ನಲ್ಲಿ ಬಹಳಷ್ಟು ಜನರ ಹೆಸರು ಅಳಿಸಲಾಗಿದೆ
- ಜನರಿಗಾಗಿ ಸುಪ್ರೀಂ ಕೋರ್ಟ್ ಮೆಟ್ಟಿಲನ್ನೂ ಏರಿದ್ದೇನೆ
- ಜನರ ಹಕ್ಕುಗಳ ರಕ್ಷಣೆಯಾಗುತ್ತದೆ ಎಂಬ ನಂಬಿಕೆ ಇದೆ
- ರಾಜ್ಯದ ಜನರೊಂದಿಗೆ ಯಾರಿಲ್ಲದಿದ್ದರೂ ನಾನಿರುತ್ತೇನೆ
- ಕೇಂದ್ರದಿಂದ ಅಘೋಷಿತ ರಾಷ್ಟ್ರಪತಿ ಆಡಳಿತ ಹೇರಿಕೆ
- ಜನರನ್ನು ವಿಭಜಿಲು ನೋಡುವವರು ನರಕಕ್ಕೆ ಹೋಗಲಿ

'ಮತದಾರರ ಪಟ್ಟಿಯಿಂದ ಹೆಸರುಗಳನ್ನು ಅಳಿಸಲು ಹೇಳಿ, ಜನರಿಗೆ ನುಸುಳುಕೋರರು ಎಂಬ ಪಟ್ಟ ಕಟ್ಟುತ್ತೀರಿ. ನಿಮ್ಮದು ಬಹುದೊಡ್ಡ ನುಸುಳುಕೋರ ಸರ್ಕಾರ' ಎಂದೂ ಟೀಕಿಸಿದ್ದಾರೆ.

ಚುನಾವಣೆ ಹೊಸ್ತಿಲಿನಲ್ಲಿರುವ ಪಶ್ಚಿಮ ಬಂಗಾಳದಲ್ಲಿ ಅಕ್ರಮ ವಲಸೆ ವಿಚಾರವನ್ನೇ ಬಿಜೆಪಿ ಅಸ್ತ್ರವಾಗಿಸಿಕೊಂಡಿರುವ ನಡುವೆಯೇ ಮಮತಾ ಅವರ ಈ ವಾಗ್ದಾಳಿ ಮಹತ್ವ ಪಡೆದಿದೆ.

ಬಿಜೆಪಿ ಆಕ್ಷೇಪ: ಮಮತಾ ಅವರ ಹೇಳಿಕೆ ಕುರಿತು ಬಿಜೆಪಿ ನಾಯಕ ಸುವೇಂದು ಅಧಿಕಾರಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ಈ ಹೇಳಿಕೆ ನೀಡಿರುವ ಮಮತಾ ಅವರಿಗೆ ಬಹುಶಃ ತಲೆ ಕೆಟ್ಟಿರಬಹುದು, ಅವರು ತಕ್ಷಣವೇ ರಾಂಚಿಗೆ ಭೇಟಿ ನೀಡುವುದು ಸೂಕ್ತ' ಎಂದಿದ್ದಾರೆ.

'ದೇಶದ ಪ್ರಧಾನಿಯನ್ನೇ ನುಸುಳುಕೋರ ಎಂದು ಕರೆಯುವ ಯಾವುದೇ ವ್ಯಕ್ತಿಯು ಸಾಂವಿಧಾನಿಕ ಹುದ್ದೆಯನ್ನು ಅಲಂಕರಿಸಲು ಅರ್ಹರಲ್ಲ' ಎಂದೂ ಸುವೇಂದು ಹೇಳಿದ್ದಾರೆ.

ಕೇರಳ ಘಟಕದ ಬಿಜೆಪಿ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ಅವರು ಶನಿವಾರ ನಾಮಪತ್ರ ಸಲ್ಲಿಸಿದರು. ಇದೇ ವೇಳೆ ರಾಜಸ್ಥಾನ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಅವರು ಜೊತೆಗಿದ್ದರು –ಪಿಟಿಐ ಚಿತ್ರ

ರಾಜೀವ್ ನಾಮಪತ್ರ ಸಲ್ಲಿಕೆ

ತಿರುವನಂತಪುರ (ಪಿಟಿಐ): ಕೇರಳ ಘಟಕದ ಬಿಜೆಪಿ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ಅವರು ನೇಮಂ ಕ್ಷೇತ್ರದಿಂದ ಶನಿವಾರ ನಾಮಪತ್ರ ಸಲ್ಲಿಸಿದ್ದು, ಚರಾಸ್ತಿ ಮತ್ತು ಸ್ಥಿರಾಸ್ತಿ ಸೇರಿ ಒಟ್ಟು ₹93 ಕೋಟಿಗೂ ಅಧಿಕ ಮೌಲ್ಯದ ಆಸ್ತಿ ಹೊಂದಿದ್ದಾರೆ. ನಾಮಪತ್ರ ಸಲ್ಲಿಸುವ ವೇಳೆ ರಾಜಸ್ಥಾನದ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಅವರು ರಾಜೀವ್ ಅವರ ಜೊತೆಗಿದ್ದರು.

ರಾಜೀವ್ ಅವರು ₹107 ಕೋಟಿಗೂ ಅಧಿಕ ಸಾಲ ಹೊಂದಿದ್ದು, ಇವರ ಪತ್ನಿ ಹೆಸರಿನಲ್ಲಿ ₹1.62 ಕೋಟಿ ಸಾಲ ಇದೆ.

2024–25ರ ಆದಾಯ ತೆರಿಗೆ ಪ್ರಕಾರ ರಾಜೀವ್ ಅವರ ಆದಾಯವು ₹92.91 ಕೋಟಿ ಇದ್ದು, ಪತ್ನಿಯ ಆದಾಯವು ₹60.50 ಕೋಟಿ ಇದೆ.

ಒಟ್ಟು ಚರಾಸ್ತಿಯ ಮೌಲ್ಯ ₹78.81 ಕೋಟಿ ಇದ್ದರೆ, ಚಿರಾಸ್ತಿಯ ಮೌಲ್ಯವು 15.07 ಕೋಟಿಗೂ ಅಧಿಕವಿದೆ. ರಾಜೀವ್ ಅವರು ಬೆಂಗಳೂರಿನಲ್ಲಿ ಆಸ್ತಿ ಹೊಂದಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಂಚಿಕೊಂಡ ವಿಚಾರಕ್ಕೆ ಸಂಬಂಧಿಸಿ ರಾಜೀವ್ ಅವರು ಎರಡು ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ.

ರಾಜ್ಯಸಭೆ, ಪರಿಷತ್‌ನಲ್ಲಿ ಪ್ರಾತಿನಿಧ್ಯ; ಷರತ್ತು ಒಡ್ಡಿದ ಮುಸ್ಲಿಂ ನಾಯಕರು

ದಾವಣಗೆರೆ: ಸಮರ್ಥ್ ಹೆಸರು ಅಂತಿಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶನಿವಾರವೂ ಸರಣಿ ಸಭೆಗಳನ್ನು ನಡೆಸಿದ್ದು, ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸುವಲ್ಲಿ ಸಫಲರಾಗಿದ್ದಾರೆ.

ವಸತಿ ಸಚಿವ ಜಮೀರ್ ಅಹಮದ್ ಖಾನ್ ಸೇರಿದಂತೆ ಹಲವು ಮುಖಂಡರು ಈ ಬಾರಿ ಅಲ್ಪಸಂಖ್ಯಾತ ಸಮುದಾಯದ ಅಭ್ಯರ್ಥಿಗೆ ನೀಡಬೇಕು ಎಂದು ಬಿಗಿಪಟ್ಟು ಹಿಡಿದಿದ್ದರು. ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರೂ ಆಗಿರುವ ಅರಣ್ಯ ಸಚಿವ ಈಶ್ವರ ಖಂಡ್ರೆ ಸೇರಿ ಹಲವರು, ಶಾಮನೂರು ಶಿವಶಂಕರಪ್ಪ ಪ್ರತಿನಿಧಿಸಿದ್ದ ಕ್ಷೇತ್ರದಲ್ಲಿ, ಅವರ ಮಗ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪುತ್ರ ಸಮರ್ಥಗೆ ಟಿಕೆಟ್ ನೀಡುವಂತೆ ಬಿಗಿಪಟ್ಟು ಹಾಕಿದ್ದರು. ಹೀಗಾಗಿ, ದಾವಣಗೆರೆ ದಕ್ಷಿಣ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಕಗ್ಗಂಟಾಗಿತ್ತು.

ಶನಿವಾರ ಎರಡೂ ಗುಂಪುಗಳ ಪ್ರಮುಖರ ಸಭೆ ನಡೆಸಿದ ಸಿದ್ದರಾಮಯ್ಯ, ಶಿವಕುಮಾರ್ ಹಾಗೂ ಸುರ್ಜೇವಾಲಾ ಅವರು ಮುಸ್ಲಿಂ ಸಮುದಾಯದ ಮುಖಂಡರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸಮರ್ಥ್ ಅವರಿಗೆ ಟಿಕೆಟ್ ಸಿಗುವುದು ಬಹುತೇಕ ಖಚಿತವಾಗಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ದಾವಣಗೆರೆ, ಬಾಗಲಕೋಟೆ ಅಭ್ಯರ್ಥಿ ಆಯ್ಕೆ ಕುರಿತು ರಣದೀಪ್ ಸಿಂಗ್ ಸುರ್ಜೇವಾಲಾ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸಭೆ ನಡೆಸಿದರು. ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್, ಜಮೀರ್ ಅಹಮದ್ ಖಾನ್ ಉಪಸ್ಥಿತರಿದ್ದರು

ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಉಪ ಚುನಾವಣೆ - 2026

ರಾಜ್ಯಸಭೆ ಹಾಗೂ ವಿಧಾನಪರಿಷತ್ ಚುನಾವಣೆಗಳ ಅಭ್ಯರ್ಥಿ ಆಯ್ಕೆಯ ವೇಳೆ ಅಲ್ಪಸಂಖ್ಯಾತ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಬೇಕು. ಜನ ಸಂಖ್ಯೆಗೆ ಅನುಗುಣವಾಗಿ ಭವಿಷ್ಯದ ಚುನಾವಣೆಗಳಲ್ಲಿ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂದು ಮುಸ್ಲಿಂ ಸಮುದಾಯದ ಸಚಿವರು, ಶಾಸಕರ ತಮ್ಮ ಷರತ್ತು ಮುಂದಿಟ್ಟರು. ಸಚಿವ ಮಲ್ಲಿಕಾರ್ಜುನ್ ಸಮ್ಮುಖದಲ್ಲಿ ಪಕ್ಷದ ನಾಯಕರು ಸಮ್ಮತಿಸಿದ ನಂತರವೇ ದಾವಣಗೆರೆ ಕ್ಷೇತ್ರವನ್ನು ಶಾಮನೂರು ಕುಟುಂಬಕ್ಕೆ ಬಿಟ್ಟುಕೊಡಲು ಒಪ್ಪಿಗೆ ನೀಡಿದರು ಎನ್ನಲಾಗಿದೆ.

ಎರಡೂ ಕ್ಷೇತ್ರಗಳ ಉಪಚುನಾವಣೆಗೆ ನಾಮಪತ್ರ ಸಲ್ಲಿಸಲು ಸೋಮವಾರ ಕೊನೆಯ ದಿನವಾಗಿದ್ದು, ಭಾನುವಾರ ಬೆಳಿಗ್ಗೆ ಅಭ್ಯರ್ಥಿಗಳ ಆಯ್ಕೆಯನ್ನು ಅಧಿಕೃತವಾಗಿ ಘೋಷಿಸಲಾಗುತ್ತದೆ ಎಂದು ಪಕ್ಷದ ನಾಯಕರು ಹೇಳಿದ್ದಾರೆ.

ಬಾಗಲಕೋಟೆಗೆ ಉಮೇಶ್ ಮೇಟಿ

ಬಾಗಲಕೋಟೆ ಕ್ಷೇತ್ರದಲ್ಲಿ ಎಚ್.ವೈ.ಮೇಟಿ ಅವರ ಪುತ್ರ ಉಮೇಶ್ ಮೇಟಿ ಅವರಿಗೆ ಟಿಕೆಟ್ ಅಂತಿಮಗೊಳಿಸಲಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಮೇಟಿ ಅವರ ಕುಟುಂಬದ ಸದಸ್ಯರು ಚುನಾವಣೆಯಲ್ಲಿ ಸ್ಪರ್ಧಿಸಲು ಪೈಪೋಟಿ ನಡೆಸುತ್ತಿದ್ದರು. ಸಿದ್ದರಾಮಯ್ಯ, ಶಿವಕುಮಾರ್ ಅವರು ಮೇಟಿ ಅವರ ಮಕ್ಕಳ ಜತೆ ಸತತವಾಗಿ ಚರ್ಚೆ ನಡೆಸಿದ ನಂತರ ಟಿಕೆಟ್ ಅಂತಿಮಗೊಳಿಸಿದ್ದಾರೆ ಎನ್ನಲಾಗಿದೆ. ಈ ಚುನಾವಣೆಯಲ್ಲಿ ತಮಗೆ ಟಿಕೆಟ್ ನೀಡಬೇಕು ಎಂದು ಮೇಟಿಯವರ ಮಗಳು ಬಾಯಕ್ಕ ಹಟ ಹಿಡಿದಿದ್ದರು.

'ಎಸ್‌ಪಿಎ' ಮೈತ್ರಿಯಲ್ಲಿ ಸೀಟು ಹಂಚಿಕೆ ಕಗ್ಗಂಟು

ಪ್ರಜಾವಾಣಿ ವಾರ್ತೆ

ಚೆನ್ನೈ: ಡಿಎಂಕೆ, ಸಿಪಿಎಂ, ವಿಸಿಕೆ ಮತ್ತು ನಟ ಕಮಲ್ ಹಾಸನ್ ಅವರ ಎಂಎನ್‌ಎಂ ಪಕ್ಷಗಳು ಒಗ್ಗೂಡಿ ಮಾಡಿಕೊಂಡಿರುವ ಜಾತ್ಯತೀತ ಪ್ರಗತಿಪರ ಮೈತ್ರಿಕೂಟದಲ್ಲಿ (ಎಸ್‌ಪಿಎ) ಸೀಟು ಹಂಚಿಕೆ ಪ್ರಕ್ರಿಯೆಯು ಕಗ್ಗಂಟಾಗಿದೆ. ಸಣ್ಣ ಪಕ್ಷಗಳು ಡಿಎಂಕೆ ಕುರಿತು ಬೇಸರಗೊಂಡಿವೆ.

ಈ ಪಕ್ಷಗಳೊಂದಿಗೆ ಮಾತುಕತೆ ಮುಗಿದ ಬಳಿಕ ನಟ ವಿಜಯಕಾಂತ್ ಅವರ ಡಿಎಂಡಿಕೆ ಪಕ್ಷದೊಂದಿಗೆ ಡಿಎಂಕೆ ಮಾತುಕತೆ ನಡೆಸಲಿದೆ. ಡಿಎಂಡಿಕೆ ಪಕ್ಷಕ್ಕೆ ಎಷ್ಟು ಸೀಟು ನೀಡಲಾಗುತ್ತದೆ ಎಂಬುದನ್ನು ಡಿಎಂಕೆ ಬಹಿರಂಗ ಮಾಡಿಲ್ಲ. ಇದೇ ವಿಚಾರ ಸಿಪಿಎಂ ಸೇರಿ ಇತರ ಪಕ್ಷಗಳಿಗೆ ಬೇಸರ ತರಿಸಿದೆ.

2021ರ ಚುನಾವಣೆಯಲ್ಲಿ 6 ಸ್ಥಾನಗಳಲ್ಲಿ ಸಿಪಿಎಂ ಸ್ಪರ್ಧಿಸಿತ್ತು. ಈ ಬಾರಿ 5 ಸ್ಥಾನಗಳಿಗೆ ಒಪ್ಪಿಕೊಳ್ಳುವಂತೆ ಡಿಎಂಕೆ ಕೇಳಿಕೊಳ್ಳುತ್ತಿದೆ. ಅಂತೆಯೇ ವಿಸಿಕೆ ಪಕ್ಷಕ್ಕೆ ಕೂಡ ಕಳೆದ ಬಾರಿಗಿಂತ ಒಂದು ಸ್ಥಾನ ಕಡಿಮೆ, ಅಂದರೆ 7 ಸ್ಥಾನಗಳಿಗೆ ಒಪ್ಪಿಕೊಳ್ಳುವಂತೆ ಡಿಎಂಕೆ ಹೇಳುತ್ತಿದೆ. ಆದರೆ, 10 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡಬೇಕು ಎಂಬುದು ವಿಸಿಕೆ ಆಗ್ರಹ.

ಇನ್ನಷ್ಟು ಪಕ್ಷಗಳು ಮೈತ್ರಿಕೂಟವನ್ನು ಸೇರಿಕೊಂಡಿವೆ. ಆದ್ದರಿಂದ ಎಲ್ಲ ಪಕ್ಷಗಳಿಗೆ ಕಡಿಮೆ ಸೀಟುಗಳು ದೊರೆಯಲಿವೆ ಎನ್ನುತ್ತಿದೆ ಡಿಎಂಕೆ. ಆದರೆ, 'ಕಾಂಗ್ರೆಸ್‌ಗೆ ಮಾತ್ರ ಕಳೆದ ಬಾರಿಗಿಂತ 3 ಸೀಟು ಹೆಚ್ಚಿಗೆ ನೀಡಲಾಗಿದೆ. ಇದರೊಂದಿಗೆ ಒಂದು ರಾಜ್ಯಸಭೆ ಸೀಟನ್ನೂ ನೀಡಲಾಗಿದೆ. ಆದ್ದರಿಂದ ನಮಗೂ ಹೆಚ್ಚಿನ ಸೀಟು ನೀಡಿ' ಎನ್ನುತ್ತಿವೆ ಸಣ್ಣ ಪಕ್ಷಗಳು.

'ಆರು ಸೀಟುಗಳು ಬೇಕು ಎಂದು ಸಿಪಿಎಂ ಹಟ ಹಿಡಿದರೆ, ನಾವು ಕೊಡಲೇಬೇಕಾಗುತ್ತದೆ. ವಿಸಿಕೆ ಪಕ್ಷಕ್ಕೆ 8 ಸೀಟುಗಳನ್ನು ನೀಡುವ ಯೋಜನೆ ಇದೆ. ನಮ್ಮ ಮೈತ್ರಿ ಪಕ್ಷಗಳ ಸೀಟುಗಳನ್ನು ಕಡಿತ ಮಾಡುತ್ತಿದ್ದೇವೆ ಎಂದಲ್ಲ. ಕಳೆದ ಬಾರಿ ಚುನಾವಣೆಯ ಹೋಲಿಕೆಯಲ್ಲಿ ನಮ್ಮ ಸೀಟುಗಳು ಕೂಡ ಕಡಿತಗೊಂಡಿವೆ. ನಾವೂ ಕಡಿಮೆ ಸೀಟುಗಳಲ್ಲಿಯೇ ಸ್ಪರ್ಧಿಸುತ್ತಿದ್ದೇವೆ' ಎಂದು ಡಿಎಂಕೆ ನಾಯಕರೊಬ್ಬರು ಹೇಳಿದರು.

ಎಂಎನ್‌ಎಂ ಪಕ್ಷದವರು ನಮ್ಮ ಪಕ್ಷದ ಚಿಹ್ನೆಯಲ್ಲಿಯೇ ಸ್ಪರ್ಧಿಸಲಿ ಎನ್ನುತ್ತಿದೆ ಡಿಎಂಕೆ. ಆದರೆ, ಹೀಗೆ ಮಾಡಿದರೆ ನಮ್ಮ ಸ್ವಂತಿಕೆಗೆ ಹೊಡೆದ ಬೀಳಲಿದೆ ಎನ್ನುವುದು ಎಂಎನ್‌ಎಂ ಪ್ರತಿಕ್ರಿಯೆ.

ತಮಿಳುನಾಡು ವಿಧಾನಸಭೆ-ಅಮಿತ್ ಶಾ ಜೊತೆಗೆ ಮಾತುಕತೆ: ಟಿಟಿವಿ ದಿನಕರನ್

'ಸೀಟು ಹಂಚಿಕೆ ಚೆನ್ನೈನಲ್ಲೆ ಅಂತಿಮಗೊಳ್ಳಲಿದೆ'

ನವದೆಹಲಿ/ಚೆನ್ನೈ (ಪಿಟಿಐ): ತಮಿಳುನಾಡು ವಿಧಾನಸಭೆಯಲ್ಲಿ ಡಿಎಂಕೆಯನ್ನು ಮಣಿಸಲು ಕಾರ್ಯತಂತ್ರ ರೂಪಿಸುವ ಬಗ್ಗೆ ಮಾತ್ರ ಕೇಂದ್ರ ಸಚಿವ ಅಮಿತ್ ಶಾ ಅವರ ಜೊತೆ ಮಾತುಕತೆ ನಡೆಸಲಾಗಿದೆ. ಸೀಟು ಹಂಚಿಕೆಯ ಬಗ್ಗೆ ಚರ್ಚೆ ನಡೆದಿಲ್ಲ ಎಂದು ಎಎಂಎಂಕೆ ಪ್ರಧಾನ ಕಾರ್ಯದರ್ಶಿ ಟಿ.ಟಿ.ವಿ ದಿನಕರನ್ ಅವರು ಶನಿವಾರ ತಿಳಿಸಿದ್ದಾರೆ.

ಟಿಟಿವಿ ದಿನಕರನ್

'ಎನ್‌ಡಿಎ ಮೈತ್ರಿಕೂಟದ ಸೀಟು ಹಂಚಿಕೆ ನಿರ್ಧಾರವು ಮುಂದಿನ ಎರಡು–ಮೂರು ದಿನಗಳಲ್ಲಿ ಚೆನ್ನೈನಲ್ಲೆ ಅಂತಿಮಗೊಳ್ಳಲಿದೆ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಎಎಂಎಂಕೆಯ ಮಿತ್ರಪಕ್ಷವಾದ ಎಐಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಪಳನಿಸ್ವಾಮಿ ಅವರು ಪದೇ ಪದೇ ದೆಹಲಿಗೆ ಭೇಟಿ ನೀಡಿ ಬಿಜೆಪಿ ನಾಯಕರ ಜೊತೆ ಮಾತುಕತೆ ನಡೆಸಿದ ಬಗ್ಗೆ ಟೀಕಿಸಿದ್ದ ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು, 'ಮುಂಬರುವ ವಿಧಾನಸಭಾ ಚುನಾವಣೆಯು ತಮಿಳುನಾಡು ಮತ್ತು ದೆಹಲಿ ತಂಡದ ನಡುವಿನ ಸ್ಪರ್ಧೆಯಾಗಿರಲಿದೆ' ಎಂದು ಹೇಳಿದ್ದರು.

'ನಾವು ದೆಹಲಿಗೆ ಬರುವುದು ನಿಮಗೆ ಯಾಕೆ ಇಷ್ಟವಿಲ್ಲ' ಎಂದು ದಿನಕರನ್ ಸುದ್ದಿಗಾರರನ್ನು ಪ್ರಶ್ನಿಸಿದರು.

ಎಐಎಡಿಎಂಕೆಗೆ ಸಿಂಹಪಾಲು

ಎಐಎಡಿಎಂಕೆ–ಎನ್‌ಡಿಎ ಸೀಟು ಹಂಚಿಕೆ ಪ್ರಕ್ರಿಯೆ ನಿರ್ಣಾಯಕ ಹಂತಕ್ಕೆ ತಲುಪಿದ್ದು, ಎಐಎಡಿಎಂಕೆಯು ಸಿಂಹ ಪಾಲು ಪಡೆಯಲಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

'234 ಕ್ಷೇತ್ರಗಳ ಪೈಕಿ ಎಐಎಡಿಎಂಕೆ ಪಕ್ಷವು ಸುಮಾರು 160–170 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರು ಗುರುವಾರ ದೆಹಲಿಯಲ್ಲಿ ಸೀಟು ಹಂಚಿಕೆ ಬಗ್ಗೆ ಮಾತುಕತೆ ನಡೆಸಿದ್ದಾರೆ' ಎಂದು ತಿಳಿಸಿವೆ.

'ಬಿಜೆಪಿ 30 ಮತ್ತು ಪಿಎಂಕೆ 17, ಎಎಂಎಂಕೆ 9 ಮತ್ತು ಟಿಎಂಸಿ ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಸಾಧ್ಯತೆ ಇದೆ' ಎಂದು ಮಾಹಿತಿ ನೀಡಿವೆ.

ಸುದ್ದಿ 2 ನಿಮಿಷ

'ಕೇರಳ: ಯುಡಿಎಫ್ ಗೆದ್ದರೆ, ಟಿಕೆಟ್ ವಂಚಿತರಿಗೆ ಪ್ರಮುಖ ಹುದ್ದೆ'

ಕೊಚ್ಚಿ, ಕೇರಳ (ಪಿಟಿಐ): 'ಕೇರಳದಲ್ಲಿ ಯುಡಿಎಫ್ ಗೆದ್ದರೆ, ಕಾಂಗ್ರೆಸ್‌ನಿಂದ ಟಿಕೆಟ್ ವಂಚಿತರಿಗೆ ಪ್ರಮುಖ ಹುದ್ದೆಗಳನ್ನು ನೀಡಲಾಗುವುದು' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

ಕೊಚ್ಚಿಯಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, 'ಹಲವು ಅರ್ಹ ನಾಯಕರು ಪಕ್ಷದಿಂದ ಟಿಕೆಟ್ ಬಯಸಿದ್ದಾರೆ. ತಮ್ಮ ಕಳವಳವನ್ನು ಪಕ್ಷದ ನಾಯಕರ ಜೊತೆಗೆ ಹಂಚಿಕೊಂಡಿದ್ದಾರೆ. ಕೇಂದ್ರ ಚುನಾವಣಾ ಸಮಿತಿಯು ಪಟ್ಟಿಗೆ ಅಂತಿಮ ಒಪ್ಪಿಗೆ ನೀಡಿದ ನಂತರವೇ ಅಭ್ಯರ್ಥಿಗಳನ್ನು ಪ್ರಕಟಿಸಲಾಗಿದೆ. ಅನೇಕ ಅರ್ಹ ನಾಯಕರನ್ನು ಪರಿಗಣಿಸಲಾಗಿತ್ತು ಎಂಬುದು ನಿಜ. ಟಿಕೆಟ್ ವಂಚಿತರಿಗೂ ಯುಡಿಎಫ್ ಸರ್ಕಾರ ರಚಿಸಿದ ಬಳಿಕ ಸೂಕ್ತ ಸ್ಥಾನಮಾನ ಕಲ್ಪಿಸಲಾಗುವುದು' ಎಂದು ಅವರು ತಿಳಿಸಿದ್ದಾರೆ.

'ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಪ್ರಾಮಾಣಿಕವಾಗಿ ಶ್ರಮಿಸಿದವರಿಗೆ ಮುಂದಿನ ದಿನಗಳಲ್ಲಿ ಉತ್ತಮ ಸ್ಥಾನಮಾನ ನೀಡಲಾಗುವುದು' ಎಂದು ಭರವಸೆ ನೀಡಿದ್ದಾರೆ.



ಬಿಜೆಪಿ–ಸಿಪಿಐ(ಎಂ) ಒಳ ಒಪ್ಪಂದ: ಪಾಲಕ್ಕಾಡ್ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಬಿಜೆಪಿ ಹಾಗೂ ಸಿಪಿಎಂ ಪಕ್ಷವು ಒಳ ಒಪ್ಪಂದ ಮಾಡಿಕೊಂಡಿವೆ. ಈ ಕುರಿತು ಮತ್ತಷ್ಟು ಮಾಹಿತಿಗಳು ಮುಂದಿನ ದಿನಗಳಲ್ಲಿ ತಿಳಿಯಲಿವೆ. ಚುನಾವಣಾ ದಿನಾಂಕ ಘೋಷಣೆ ಕುರಿತಂತೆಯೂ ಅನುಮಾನಗಳಿವೆ' ಎಂದೂ ವೇಣುಗೋಪಾಲ್ ಪ್ರತಿಕ್ರಿಯಿಸಿದ್ದಾರೆ.

ಇವಿಎಂ: ಮೊದಲ ಹಂತದ ಯಾದೃಚ್ಛಿಕ ಆಯ್ಕೆ ಪೂರ್ಣ

ನವದೆಹಲಿ (ಪಿಟಿಐ): ಅಸ್ಸಾಂ, ಕೇರಳ ಮತ್ತು ಪುದುಚೇರಿ ವಿಧಾನಸಭಾ ಚುನಾವಣೆಯಲ್ಲಿ ಬಳಸಲಾಗುವ ಎಲೆಕ್ಟ್ರಾನಿಕ್ ಮತ ಯಂತ್ರ(ಇವಿಎಂ) ಮತ್ತು ಮತದಾನ ದೃಢೀಕರಣ ರಸೀದಿ ಯಂತ್ರಗಳ(ವಿವಿ–ಪ್ಯಾಟ್) ಮೊದಲ ಹಂತದ ಯಾದೃಚ್ಛಿಕ ಆಯ್ಕೆಯನ್ನು ಚುನಾವಣಾ ಆಯೋಗ ಪೂರ್ಣಗೊಳಿಸಿದೆ.

ಪಾರದರ್ಶಕತೆ ಮತ್ತು ರಾಜಕೀಯ ಪಕ್ಷಗಳು ಹಾಗೂ ಮತದಾರರ ವಿಶ್ವಾಸವನ್ನು ಹೆಚ್ಚಿಸಲು ಆಯೋಗವು ಮತಗಟ್ಟೆಗಳಿಗೆ ಇವಿಎಂ ಮತ್ತು ವಿವಿ–ಪ್ಯಾಟ್ ಹಂಚಿಕೆಯನ್ನು ಎರಡು ಹಂತದ ಯಾದೃಚ್ಛಿಕ ಆಯ್ಕೆ ಪ್ರಕ್ರಿಯೆಯ ಮೂಲಕ ನಡೆಸುತ್ತದೆ.

ಮೊದಲ ಹಂತದಲ್ಲಿ ಜಿಲ್ಲಾ ಮಟ್ಟದ ಸಂಗ್ರಹಗಾರಕ್ಕೆ ಇವಿಎಂ ಮತ್ತು ವಿವಿ–ಪ್ಯಾಟ್‌ಗಳನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಲಾಗುತ್ತದೆ. ಎರಡನೇ ಹಂತದಲ್ಲಿ ವಿಧಾನಸಭಾ ಕ್ಷೇತ್ರಗಳ ಮತಗಟ್ಟೆಗಳಿಗೆ ಹಂಚಿಕೆ ಮಾಡಲಾಗುತ್ತದೆ.

ಗೋವಾ, ಕರ್ನಾಟಕ, ನಾಗಾಲ್ಯಾಂಡ್ ಮತ್ತು ತ್ರಿಪುರಾದಲ್ಲಿ ನಡೆಯಲಿರುವ ಉಪಚುನಾವಣೆಗೂ ಇವಿಎಂ ಮತ್ತು ವಿವಿ–ಪ್ಯಾಟ್‌ಗಳ ಯಾದೃಚ್ಛಿಕ ಆಯ್ಕೆ ಪ್ರಕ್ರಿಯೆ ನಡೆದಿದೆ.

ರಾಹುಲ್ ಬಿಜೆಪಿಯ 'ಬಿ–ಟೀಮ್': ಪಿಣರಾಯಿ

ತಿರುವನಂತಪುರ (ಪಿಟಿಐ): ಕಾಂಗ್ರೆಸ್ ಮತ್ತು ಅದರ ನಾಯಕ ರಾಹುಲ್ ಗಾಂಧಿ ಅವರು ಬಿಜೆಪಿಯ 'ಬಿ-ಟೀಮ್' ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಶನಿವಾರ ಆರೋಪಿಸಿದರು.

ಪಿಣರಾಯಿ ವಿಜಯನ್

'ಕೇಂದ್ರೀಯ ತನಿಖಾ ಸಂಸ್ಥೆಗಳು ಕೇರಳ ಮುಖ್ಯಮಂತ್ರಿ ವಿಜಯನ್ ಅವರನ್ನು ಹೊರತುಪಡಿಸಿ ವಿರೋಧ ಪಕ್ಷಗಳ ನಾಯಕರನ್ನು ಬಂಧಿಸುತ್ತಿವೆ ಅಥವಾ ಕರೆದು ವಿಚಾರಣೆ ನಡೆಸುತ್ತಿವೆ' ಎಂಬ ರಾಹುಲ್ ಗಾಂಧಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಕಾಂಗ್ರೆಸ್ ಬಿಜೆಪಿಯ ಬಿ–ಟೀಮ್' ಎಂದು ಹೇಳಿದರು.

'ಕೆಲವು ಜನರು ನೋಡಿ ಅಥವಾ ಅನುಭವದಿಂದ ಕಲಿಯುವುದಿಲ್ಲ. ಅವರು ಸಾಮಾನ್ಯ ಜನರಂತಲ್ಲ, ಅಪರೂಪದ ವ್ಯಕ್ತಿಗಳು. ಇಂಥವರು ಸಾಮಾನ್ಯ ಸಂಗತಿಯನ್ನು ಗ್ರಹಿಸಲೂ ಅಸಮರ್ಥರಿರುತ್ತಾರೆ. ರಾಹುಲ್ ಗಾಂಧಿ ಈ ವರ್ಗಕ್ಕೆ ಸೇರುತ್ತಾರೆ' ಎಂದು ಟೀಕಿಸಿದರು.

'ರಾಹುಲ್ ಗಾಂಧಿ ಅವರು ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಅವರ ವಿರುದ್ಧ ಗಂಭೀರ ಆರೋಪ ಮಾಡಿದರು. ಆದರೆ ನ್ಯಾಯಾಲಯವು ಅವರ ವಿರುದ್ಧದ ಎಲ್ಲ ಆರೋಪಗಳನ್ನು ಅಲ್ಲಗಳೆದು ಖುಲಾಸೆಗೊಳಿಸಿತು. ಇದು ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರಿಗೆ ಹಿನ್ನಡೆಯನ್ನುಂಟುಮಾಡಿತ್ತು. ಆದರೆ ಇದಾದ ಬಳಿಕವೂ ರಾಹುಲ್ ತಮ್ಮ ಚಾಳಿ ಮುಂದುವರಿಸಿದ್ದಾರೆ' ಎಂದು ಹೇಳಿದರು.

ಈ ಹಿಂದೆ ರಾಜ್ಯದಲ್ಲಿ ಕಾಂಗ್ರೆಸ್–ಬಿಜೆಪಿ ಅನೇಕ ಬಾರಿ ಮೈತ್ರಿ ಮಾಡಿಕೊಂಡಿವೆ. ಆದರೆ ಮುಂಬರುವ ಚುನಾವಣೆಯಲ್ಲಿ ಏನಾಗುತ್ತದೋ ಕಾದು ನೋಡಬೇಕು. ಎರಡೂ ಪಕ್ಷಗಳು ಎಲ್‌ಡಿಎಫ್ ಅನ್ನು ವಿರೋಧಿಸುತ್ತವೆ' ಎಂದು ಹೇಳಿದರು.

ನಾಲ್ವರು ಪಕ್ಷೇತರರಿಗೆ ಯುಡಿಎಫ್ ಬೆಂಬಲ

ಇತ್ತೀಚೆಗೆ ಸಿಪಿಐ ತ್ಯಜಿಸಿರುವ ನಾಲ್ವರು ಪಕ್ಷೇತರ ಅಭ್ಯರ್ಥಿಗಳನ್ನು ಕೇರಳ ವಿಧಾನಸಭೆ ಚುನಾವಣೆಯಲ್ಲಿ ಯುಡಿಎಫ್ ಬೆಂಬಲಿಸಲಿದೆ ಎಂದು ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ತಿಳಿಸಿದರು.
ಜಿ.ಸುಧಾಕರನ್, ಪಿ.ಕೆ.ಶಶಿ, ಟಿ.ಕೆ.ಗೋವಿಂದನ್, ವಿ.ಕುಞಿಕೃಷ್ಣನ್ ಅವರಿಗೆ ಬೆಂಬಲ ನೀಡುವುದಾಗಿ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.
ಈ ಅಭ್ಯರ್ಥಿಗಳ ಗೆಲುವಿಗಾಗಿ ಒಗ್ಗಟ್ಟಿನಿಂದ ಕೆಲಸ ಮಾಡುವಂತೆ ಅವರು ಕಾರ್ಯಕರ್ತರಲ್ಲಿ ಮನವಿ ಮಾಡಿದ್ದಾರೆ.

ಬಿಜೆಪಿ ಸಿ.ಎಂಗಳು ಕೇರಳಕ್ಕೆ

ಬಿಜೆಪಿ ಅಧಿಕಾರದಲ್ಲಿ ಇರುವ ರಾಜ್ಯಗಳ ಮುಖ್ಯಮಂತ್ರಿಗಳು ಕೇರಳಕ್ಕೆ ಭೇಟಿ ನೀಡಿ, ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆಗೆ ಮಾರ್ಗದರ್ಶನ ನೀಡಿದರು ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ತಿಳಿಸಿದರು.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, 'ನನ್ನನ್ನೂ ಸೇರಿದಂತೆ 40 ಅಭ್ಯರ್ಥಿಗಳು ಶನಿವಾರ ನಾಮಪತ್ರ ಸಲ್ಲಿಸಿದರು. ಉಳಿದವರು ಸೋಮವಾರ ಸಲ್ಲಿಸಲಿದ್ದಾರೆ' ಎಂದು ತಿಳಿಸಿದರು.

ರಾಜಸ್ಥಾನ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ, ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಕೆಲ ಕ್ಷೇತ್ರಗಳಿಗೆ ಭೇಟಿ ನೀಡಿ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯ ವೇಳೆ ಅಭ್ಯರ್ಥಿಗಳಿಗೆ ಸಲಹೆ ನೀಡಿದರು ಎಂದರು.

ರಾಜಸ್ಥಾನ ಉಪ ಮುಖ್ಯಮಂತ್ರಿ ಪ್ರೇಮ್ ಚಂದ್ ಬೈರವ, ಕೇಂದ್ರ ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರೂ ವಿವಿಧ ಕ್ಷೇತ್ರಗಳಿಗೆ ಭೇಟಿ ನೀಡಲಿದ್ದಾರೆ ಎಂದು ತಿಳಿಸಿದರು.

3ನೇ ಪಟ್ಟಿ ಬಿಡುಗಡೆ: (ನವದೆಹಲಿ) ಕೇರಳ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ 11 ಅಭ್ಯರ್ಥಿಗಳನ್ನು ಒಳಗೊಂಡ 3ನೇ ಪಟ್ಟಿಯನ್ನು ಬಿಜೆಪಿ ಶನಿವಾರ ಬಿಡುಗಡೆ ಮಾಡಿದೆ. ಕರಮನ ಜಯನ್ ಅವರನ್ನು ತಿರುವನಂತಪುರದಿಂದ ಕಣಕ್ಕಿಳಿಸಿದೆ. ರವೀಂದ್ರನಾಥ್ ವಾಕಥಾನಂ ಅವರು ಪುತುಪಳ್ಳಿಯಿಂದ, ಕೆ.ಆರ್.ರಾಜೇಶ್ ಅವರು ಚವಾರಾದಿಂದ ಸ್ಪರ್ಧಿಸಲಿದ್ದಾರೆ.

ಕೇರಳ: ಮತ್ತಿಬ್ಬರು ನಟರು ಕಣಕ್ಕೆ

ತಿರುವನಂತಪುರ: ಕೇರಳ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಎಲ್‌ಡಿಎಫ್ ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎ ಪ್ರಕಟಿಸಿದ್ದು, ಮತ್ತಿಬ್ಬರು ನಟರು ಕಣಕ್ಕಿಳಿದಿದ್ದಾರೆ.

ನಟ ಸುಧೀರ್ ಕರಮನ ಅವರು ತಿರುವನಂತಪುರ ಕ್ಷೇತ್ರದಿಂದ ಎಲ್‌ಡಿಎಫ್ ಬೆಂಬಲಿತ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಕಿರುತೆರೆ ನಟ ವಿವೇಕ್ ಗೋಪನ್ ಅವರು ಎನ್‌ಡಿಎ ಅಭ್ಯರ್ಥಿಯಾಗಿ ಅರುವಿಕ್ಕರ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ.

ಪಾಲಕ್ಕಾಡ್ ಕ್ಷೇತ್ರದಿಂದ ಸ್ಪರ್ಧಿಸಿರುವ ಯುಡಿಎಫ್ ಅಭ್ಯರ್ಥಿ ರಮೇಶ್ ಪಿಶಾರಾಡಿ ಅವರಿಗೆ ನಟ ಮಮ್ಮೂಟಿ ಅವರು ಶನಿವಾರ ವಿಡಿಯೊ ಕರೆ ಮಾಡಿ ಶುಭ ಹಾರೈಸಿದರು.

ಭಾನುವಾರ, ಮಾರ್ಚ್ 22, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 80 | ಪುಟ 20
www.prajavani.net
prajavani.net prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ
ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಯಶಸ್ವಿನಿಗೆ ಕಿರೀಟ

ಪಿಎಸ್‌ಪಿಬಿ ತಂಡವನ್ನು ಪ್ರತಿನಿಧಿಸುವ ಕರ್ನಾಟಕದ ಯಶಸ್ವಿನಿ ಘೋರ್ಪಡೆ, ಇಂದೋರ್‌ನಲ್ಲಿ ನಡೆದ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಸಿಂಗಲ್ಸ್ ಪ್ರಶಸ್ತಿ ಗೆದ್ದರು

3 ತಿಂಗಳಿಂದ ಎಪಿಪಿಗಳಿಗಿಲ್ಲ ವೇತನ 5
ಎಲ್ಲಾ ಭಾಷೆಗಳಿಗೆ ತೀರ್ಪು ಅನುವಾದ 5

ಸಾಯುತ್ತಿರುವ ಜೀವ ನದಿಗಳು !

ಕೈಗಾರಿಕೆ, ಕೃಷಿ, ಮಾನವ ತ್ಯಾಜ್ಯದಿಂದ ಅವಸಾನದತ್ತ ನಾಡಿನ ಜೀವನಾಡಿಗಳು

ಇಂದು ವಿಶ್ವ ಜಲದಿನ

ಒಳನೋಟ

● ವೆಂಕಟೇಶ ಜಿ.ಎಚ್

ಶಿವಮೊಗ್ಗ: 'ಮೊದಲೆಲ್ಲ ಮುರುಗು (ಮೃಗಾಲು), ಕಾಟ್ಲಾ, ರೋವು ಮೀನು ಇಲ್ಲೇ ದಂಡೆಯಲ್ಲಿ ಸಿಗುತ್ತಿದ್ದವು. ಈಗ ಅವು ಇತ್ತ ಬರುವುದಿಲ್ಲ. ದೂರ ಹೋಗಿವೆ. ಈಗ ಹೊಳೆಯಲ್ಲಿರೋದು ಕೊಳಚೆ ನೀರು ಮಾತ್ರ. ಇಲ್ಲೇನಿದ್ದರೂ ಸಿಗೋದು ಜಿಲೇಬಿ ಮೀನು' ಎನ್ನುತ್ತಾ ಮಾತಿಗೆ ಸಿಕ್ಕರು ಶಿವಮೊಗ್ಗದ ತುಂಗಾ ನದಿ ದಂಡೆಯ ಕೋರ್ಪಾಲಯ್ಯನ ಛತ್ರ ಮಂಟಪದ ಬಳಿ ಬಲೆಯ ದಾರ ಬಿಗಿಯುತ್ತಾ ಕುಳಿತಿದ್ದ ಮೀನುಗಾರ ನಾಗರಾಜ.

ಹಿಂದೆಲ್ಲ ನಮ್ ಹಿರಿಯರು 'ತುಂಗಾ ಪಾನ, ಗಂಗಾ ಸ್ನಾನ' ಅಂತಾ ಅನ್ನೋರು. ಈಗ ಹೊಳೆಯ (ತುಂಗೆ) ಸ್ಥಿತಿ ಕಂಡರೆ ಮನಸ್ಸು ಮರುಗುತ್ತದೆ. ಇಲ್ಲಿ ದಂಡೆ ಮೇಲೂ ಮೂಗು ಮುಚ್ಚಿಕೊಂಡೇ ಅಡ್ಡಾಡಬೇಕಿದೆ. ನೀರು ಕರಿ ಬಣ್ಣ, ಜಿಲೇಬಿ ಮೀನೂ ಮೊದಲಿನಷ್ಟು ಈಗ ಸಿಗುತ್ತಿಲ್ಲ. ಈ ನೀರಲ್ಲಿ ಹುಳು ಬಿಟ್ಟರೆ ಏನೂ ಬದುಕಲ್ಲ. ಈ ನೀರು ಕುಡಿಯುವ ಮನುಷ್ಯರು, ಪ್ರಾಣಿಗಳು ಬದುಕುತ್ತಾವಾ? ಎಂದು ವ್ಯಂಗ್ಯವಾಡುತ್ತಾ, ಅವರು ಮೀನು ಬಲೆ, ಹರಿಗೋಲು ಹಿಡಿದು ನದಿಯತ್ತ ಮೆಟ್ಟಿಲು ಇಳಿದರು.

ಶಿವಮೊಗ್ಗದ ಭೀಮನಮಡು ಬಳಿ ನೇರ ತುಂಗಾ ನದಿ ಒಡಲಿಗೆ ಸೇರುವ ಒಳಚರಂಡಿ ತ್ಯಾಜ್ಯ

ಇದು ಬರೀ ತುಂಗಾ ನದಿಯ ಸಂಕಟವಲ್ಲ. ಪಕ್ಕದ ಭದ್ರಾವತಿಯನ್ನು ಬಳಸಿಕೊಂಡು ಹೋಗುವ ಭದ್ರೆ ಸೇರಿದಂತೆ ರಾಜ್ಯದ ಜೀವನಾಡಿಗಳಾದ ಕಾವೇರಿ, ಕಬಿನಿ, ಅರ್ಕಾವತಿ, ಲಕ್ಷ್ಮಣತೀರ್ಥ, ಕಾಗಿಣಾ, ಕೃಷ್ಣಾ, ಶಿಂಷಾ, ಭೀಮಾ, ನೇತ್ರಾವತಿ ಕೂಡ ವಿಪರೀತ ಕಲುಷಿತಗೊಂಡಿವೆ. ರಾಜ್ಯದಲ್ಲಿ 12 ಪ್ರಮುಖ ನದಿಗಳಲ್ಲಿ ಸುಮಾರು 700 ಕಿ.ಮೀ. ಅಂತರದಷ್ಟು ನೀರು ಅಪಾಯಕಾರಿ ಮಟ್ಟದಲ್ಲಿ ಮಲಿನಗೊಂಡಿದೆ ಎಂಬುದನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಗುರುತಿಸಿದೆ.

ಅದರಲ್ಲೂ ತುಂಗೆಯನ್ನು ರಾಜ್ಯದ ಅತ್ಯಂತ ಮಲಿನಕಾರಿ ನದಿಗಳ ಪಟ್ಟಿಗೆ ('ಸಿ' ಕೆಟಗರಿ) ಸೇರಿಸಿದ್ದು, ಅಲ್ಯೂಮಿನಿಯಂ ಅಂಶ ಅಪಾಯಕಾರಿ ಮಟ್ಟದಲ್ಲಿರುವುದರಿಂದ ನದಿಯ ನೀರು ಕುಡಿಯಲು ಮಾತ್ರವಲ್ಲ ಬಳಕೆಗೂ (ಸ್ನಾನಕ್ಕೂ) ಯೋಗ್ಯವಿಲ್ಲ ಎಂದು ಹೇಳಿದೆ. ಇನ್ನು ದಕ್ಷಿಣ ಕನ್ನಡ ಜಿಲ್ಲೆಯ ಜೀವನಾಡಿ ನೇತ್ರಾವತಿ 'ಬಿ' ಕೆಟಗರಿಗೆ ಸೇರಿದ್ದು, ಅದು ಕೂಡ ಸಂಸ್ಕರಿಸದೇ ಕುಡಿಯಲು ಯೋಗ್ಯವಾಗಿಲ್ಲ.

▶ 4

ನದಿ	ಎಲ್ಲಿಂದ ಎಲ್ಲಿವರೆಗೆ ಹೆಚ್ಚು ಕಲುಷಿತ	ಉದ್ದ (ಕಿ.ಮೀ.)
ಅರ್ಕಾವತಿ	ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಕನಕಪುರದವರೆಗೆ	55
ಶಿಂಷಾ	ಎಡೆಯೂರಿನಿಂದ ಹಲಗೂರು ಸೇತುವೆಯವರೆಗೆ	80
ತುಂಗಭದ್ರಾ	ಹರಿಹರದಿಂದ ಹರಳಹಳ್ಳಿವರೆಗೆ	60
ಭದ್ರಾ	ಭದ್ರಾವತಿಯಿಂದ ಹೊಳೆಹೊನ್ನೂರು ಪಟ್ಟಣದವರೆಗೆ	10
ಕಾವೇರಿ	ರಂಗನತಿಟ್ಟು ಪಕ್ಷಿಧಾಮದಿಂದ ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲ ಸೇತುವೆಯವರೆಗೆ	50
ಕಬಿನಿ	ನಂಜನಗೂಡಿನಿಂದ ಹೆಜ್ಜಿಗೆ ಗ್ರಾಮದವರೆಗೆ	9
ಕಾಗಿಣ	ಶಹಾಬಾದ್‌ನಿಂದ ಹೊನಗುಂಟಾವರೆಗೆ	10
ಕೃಷ್ಣಾ	ಯಲಗೂರಿನಿಂದ ನಾರಾಯಣಪುರ ಡ್ಯಾಂ ಮತ್ತು ದೇವದುರ್ಗ ತಾಲ್ಲೂಕಿನಲ್ಲಿ	189
ಭೀಮಾ	ಗಾಣಗಾಪುರದಿಂದ ಯಾದಗಿರಿವರೆಗೆ	160
ನೇತ್ರಾವತಿ	ಉಪ್ಪಿನಂಗಡಿಯಿಂದ ಮಂಗಳೂರುವರೆಗೆ	50
ತುಂಗಾ	ಶಿವಮೊಗ್ಗ ಬಳಿಯ ಗಾಜನೂರು ಜಲಾಶಯದಿಂದ ಕೂಡಲಿವರೆಗೆ (ತುಂಗ-ಭದ್ರಾ ಸಂಗಮ ಸ್ಥಳ)	33
ಲಕ್ಷ್ಮಣತೀರ್ಥ	ಹುಣಸೂರಿನಿಂದ ಕಟ್ಟೆಮಳಲವಾಡಿವರೆಗೆ	10

ಡಿಯೆಗೊ ಗಾರ್ಸಿಯಾ ದ್ವೀಪಕ್ಕೆ ಇರಾನ್‌ನಿಂದ ಕ್ಷಿಪಣಿ ಗುರಿ

ಬ್ರಿಟನ್ ನೆಲೆ ಮೇಲೆ ದಾಳಿ

ದುಬೈ (ಎಪಿ): ಪಶ್ಚಿಮ ಏಷ್ಯಾ ಸಂಘರ್ಷ ನಾಲ್ಕನೇ ವಾರಕ್ಕೆ ಕಾಲಿಟ್ಟಿದ್ದು, ಹಿಂದೂ ಮಹಾಸಾಗರದ ಡಿಯೆಗೊ ಗಾರ್ಸಿಯಾ ದ್ವೀಪದಲ್ಲಿರುವ ಬ್ರಿಟನ್ ಮತ್ತು ಅಮೆರಿಕ ಸೇನಾ ನೆಲೆಗಳನ್ನು ಗುರಿಯಾಗಿಸಿ ಇರಾನ್ ಎರಡು 'ಬ್ಯಾಲಿಸ್ಟಿಕ್ ಕ್ಷಿಪಣಿ'ಗಳ ಮೂಲಕ ಶನಿವಾರ ದಾಳಿ ನಡೆಸಿದೆ.

ಆದರೆ, ಆ ಕ್ಷಿಪಣಿಗಳು ಗುರಿ ತಲುಪುವಲ್ಲಿ ವಿಫಲವಾಗಿವೆ ಎಂದಿರುವ ಬ್ರಿಟನ್, ಅವು ತನ್ನ ಸೇನಾ ನೆಲೆಗೆ ಎಷ್ಟು ಸಮೀಪ ಬಂದಿದ್ದವು ಎಂಬುದನ್ನು ಸ್ಪಷ್ಟಪಡಿಸಿಲ್ಲ.

ಇರಾನ್‌ನಿಂದ ಸುಮಾರು 4,000 ಕಿ.ಮೀ. ದೂರದಲ್ಲಿ ಈ ದ್ವೀಪವಿದೆ. ಇಷ್ಟು ದೂರದಲ್ಲಿರುವ ನೆಲೆಯನ್ನು ಗುರಿಯಾಗಿಸಿ ಇರಾನ್ ಕ್ಷಿಪಣಿ ದಾಳಿ ನಡೆಸಿದ್ದು, ಅಮೆರಿಕ ಮತ್ತು ಅದರ ಮಿತ್ರರಾಷ್ಟ್ರಗಳಲ್ಲಿ ಅಚ್ಚರಿ ಮೂಡಿಸಿದೆ. ಟೆಹರಾನ್ ಬಳಿ ಹಿಂದೆ ಘೋಷಿಸಿದ್ದಕ್ಕಿಂತ ಹೆಚ್ಚು ವ್ಯಾಪ್ತಿಯ ಕ್ಷಿಪಣಿಗಳು ಇವೆ ಎಂಬುದು ಇದರಿಂದ ಸ್ಪಷ್ಟವಾಗಿದೆ ಎಂದು ವರದಿಯೊಂದು ತಿಳಿಸಿದೆ.

ಇರಾನ್ ಬಳಿಯ ಬ್ಯಾಲಿಸ್ಟಿಕ್ ಕ್ಷಿಪಣಿಗಳು 2,000 ಕಿ.ಮೀ. ವ್ಯಾಪ್ತಿಯ ಮಿತಿಯನ್ನು ಹೊಂದಿವೆ ಎಂಬುದಾಗಿ ಜಗತ್ತು ತಿಳಿದಿತ್ತು. ಆದರೆ ಡಿಯೆಗೊ ಗಾರ್ಸಿಯಾ ಮೇಲಿನ ದಾಳಿಯ ಯತ್ನವು ಇರಾನ್ ಕ್ಷಿಪಣಿಗಳ ವ್ಯಾಪ್ತಿಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿವೆ.

▶ 6

ಅಮೆರಿಕದ 'ಎಫ್–35'ಕ್ಕೆ ಹಾನಿ: ಇರಾನ್

'ವಿಶ್ವದ ಅತ್ಯಂತ ಮುಂದುವರಿದ, ಸದ್ದಿಲ್ಲದೆ ರಹಸ್ಯವಾಗಿ ಚಲಿಸುವ ಯುದ್ಧ ವಿಮಾನಗಳಲ್ಲಿ ಒಂದಾದ ಅಮೆರಿಕದ ಎಫ್–35 ಅನ್ನು ಈ ವಾರದಲ್ಲಿ ಹೊಡೆದು, ಹಾನಿಗೊಳಿಸಿದ್ದೇವೆ' ಎಂದು ಇರಾನ್ ಹೇಳಿಕೊಂಡಿದೆ.

ಈ ಕುರಿತ ದೃಶ್ಯವನ್ನು ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ (ಐಆರ್‌ಜಿಸಿ) ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಿದೆ. ಮಾರ್ಚ್ 19ರಂದು (ಗುರುವಾರ) ನಸುಕಿನ 2.50ಕ್ಕೆ ಐಆರ್‌ಜಿಸಿ ವಾಯು ರಕ್ಷಣಾ ವ್ಯವಸ್ಥೆಯು ಅಮೆರಿಕದ ಜೆಟ್ ಅನ್ನು ಹೊಡೆದುರುಳಿಸಿದೆ ಎಂದು ತಿಳಿಸಿದೆ.

▶ 6

ಭಾರತ ಸ್ವತಂತ್ರ ಪಾತ್ರ ವಹಿಸಲಿ: ಇರಾನ್

ನವದೆಹಲಿ (ಪಿಟಿಐ): 'ಬ್ರಿಕ್ಸ್' ದೇಶಗಳ ನಾಯಕತ್ವ ವಹಿಸಿರುವ ಭಾರತವು, ಇರಾನ್ ವಿರುದ್ಧ ಅಮೆರಿಕ ಮತ್ತು ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ನಿಲ್ಲಿಸಲು 'ಸ್ವತಂತ್ರ ಪಾತ್ರ' ವಹಿಸಬೇಕು ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಮನವಿ ಮಾಡಿದ್ದಾರೆ.

ಪ್ರಧಾನಿ ಮೋದಿ ಅವರೊಂದಿಗೆ ಶನಿವಾರ ನಡೆಸಿದ ದೂರವಾಣಿ ಸಂಭಾಷಣೆಯಲ್ಲಿ ಪೆಜೆಶ್ಕಿಯಾನ್ ಈ ಪ್ರಸ್ತಾಪ ಇರಿಸಿದ್ದಾರೆ.

'ಪಶ್ಚಿಮ ಏಷ್ಯಾದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ತರಲು, ಈ ವಲಯದ ದೇಶಗಳನ್ನು ಒಳಗೊಂಡ ಪ್ರಾದೇಶಿಕ ಭದ್ರತಾ ಚೌಕಟ್ಟು ರೂಪಿಸುವ ಅಗತ್ಯ ಇದೆ' ಎಂದೂ ಪೆಜೆಶ್ಕಿಯಾನ್ ಹೇಳಿದ್ದಾರೆ. 'ಇರಾನ್ ತನ್ನ ಅಣ್ವಸ್ತ್ರ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದನ್ನು ತಡೆಯಲು ಮಿಲಿಟರಿ ದಾಳಿ ಆರಂಭಿಸಬೇಕಾಯಿತು' ಎಂಬ ಅಮೆರಿಕದ ಹೇಳಿಕೆಯನ್ನು ಪೆಜೆಶ್ಕಿಯಾನ್ ಅಲ್ಲಗಳೆದಿದ್ದಾರೆ. 'ಇರಾನ್‌ನ ಪರಮೋಚ್ಚ ನಾಯಕರಾಗಿದ್ದ ಆಯತೊಲ್ಲಾ ಖಮೇನಿ ಅವರೇ ಅಣ್ವಸ್ತ್ರ ಅಭಿವೃದ್ಧಿಯನ್ನು ತೀವ್ರವಾಗಿ ವಿರೋಧಿಸಿದ್ದರು' ಎಂದು ಅವರು ಹೇಳಿದ್ದಾರೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

ದೇಗುಲ ಕಟ್ಟೆ ಮೇಲೆ ಕುಳಿತಿದ್ದ ಪರಿಶಿಷ್ಟರ ಮೇಲೆ ಗುಂಪು ಹಲ್ಲೆ

ಪ್ರಜಾವಾಣಿ ವಾರ್ತೆ

ಗುರುಮಠಕಲ್ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಯಂಪಾಡ ಗ್ರಾಮದಲ್ಲಿ ಶನಿವಾರ ಹನುಮಾನ ದೇಗುಲದ ಮುಂಭಾಗದ ಕಟ್ಟೆಯ ಮೇಲೆ ಕುಳಿತಿದ್ದ ಪರಿಶಿಷ್ಟರ ಮೇಲೆ ಕಬ್ಬಲಿಗ ಸಮುದಾಯದ ಗುಂಪೊಂದು ಹಲ್ಲೆ ಮಾಡಿದ್ದು, ಇಬ್ಬರು ಗಾಯಗೊಂಡಿದ್ದಾರೆ.

ಗಾಜರಕೋಟ ನಿವಾಸಿ, ಸಮಾಜ ಕಲ್ಯಾಣ ಇಲಾಖೆಯ 'ಡಿ' ದರ್ಜೆ ನೌಕರ ಅನಿಲ್‌ಕುಮಾರ್ ಮತ್ತು ಸಿದ್ದಲಿಂಗಪ್ಪ ಗಾಯಗೊಂಡಿದ್ದು, 'ಯಿಮ್ಸ್' ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಎಂ.ಟಿ.ಪಲ್ಲಿ ಗ್ರಾಮದ ಸಂಬಂಧಿಕರ ಮಗನ ಜವಳ ಕಾರ್ಯಕ್ರಮ ಹನುಮಾನ ಮಂದಿರದಲ್ಲಿ ನಡೆಯುತ್ತಿತ್ತು. ಬಿಸಿಲು ಹೆಚ್ಚಾಗಿದ್ದರಿಂದ ದೇಗುಲದ ಮುಂದಿನ ಕಟ್ಟೆಯ ಮೇಲೆ ಕುಳಿತಿದ್ದೆ. ದೇವಸ್ಥಾನದ ಪೂಜಾರಿ ಅನಂತಪ್ಪ ನನ್ನ ಬಳಿ ಬಂದು, 'ಪರಿಶಿಷ್ಟರು ಇಲ್ಲಿ ಕೂರುವಂತಿಲ್ಲ, ಬೇರೆಡೆ ಪ್ರತ್ಯೇಕವಾದ ಕಟ್ಟೆ ಇದೆ. ಅಲ್ಲಿಯೇ ಕೂರಬೇಕು' ಎಂದು ತಿಳಿಸಿದರು.

▶ 7

ಬೋಧಕೇತರ ಹುದ್ದೆ: ಶಿಕ್ಷಕರಿಗೆ ನಿಷೇಧ

ವರ್ಗಾವಣೆಗೆ ಹೊಸ ಮಸೂದೆ ● ಬಜೆಟ್ ಅಧಿವೇಶನದಲ್ಲೇ ಮಂಡನೆಗೆ ಸಿದ್ಧತೆ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರ ಕೊರತೆ ನೀಗಿಸಿ, ಗುಣಮಟ್ಟದ ಶಿಕ್ಷಣ ಖಾತ್ರಿಯೂ ಸೇರಿ ಹಲವು ಸುಧಾರಣೆ ತರಲು ಮುಂದಾಗಿರುವ ಶಿಕ್ಷಣ ಇಲಾಖೆ, ಬೋಧಕೇತರ ಹುದ್ದೆಗಳಿಗೆ ಶಿಕ್ಷಕರ ನಿಯೋಜನೆಯನ್ನು ಸಂಪೂರ್ಣ ನಿಷೇಧಿಸಲಿದೆ.

ಶಾಲೆಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿದೆ. ಕರ್ನಾಟಕ ಪಬ್ಲಿಕ್ ಶಾಲೆಗಳು, ಆದರ್ಶ ವಿದ್ಯಾಲಯಗಳು,

ಪಿಎಂಶ್ರೀ ಶಾಲೆಗಳನ್ನು ತುರ್ತು ಸೇವಾ ಗುಂಪು ಎಂದು ಪರಿಗಣಿಸಿದೆ. ಅದಕ್ಕಾಗಿ ಶಿಕ್ಷಕರ ವರ್ಗಾವಣೆ ಸ್ವರೂಪದಲ್ಲಿ ಆಮೂಲಾಗ್ರ ಬದಲಾವಣೆ ಒಳಗೊಂಡ 'ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ಮಸೂದೆ–2026' ರೂಪಿಸಿದೆ. ಈಗ ನಡೆಯುತ್ತಿರುವ ಅಧಿವೇಶನದಲ್ಲಿ ಮಸೂದೆ ಮಂಡಿಸುವ ಸಾಧ್ಯತೆ ಇದೆ.

ದಶಕಗಳಿಂದ ಶಿಕ್ಷಕರ ವರ್ಗಾವಣೆಗೆ ಇದ್ದ ನಿರ್ಬಂಧಗಳನ್ನು ರದ್ದುಪಡಿಸಿ, 2022ರ ನವೆಂಬರ್‌ನಿಂದ ಜಾರಿಗೆ ಬರುವಂತೆ ಶಿಕ್ಷಕ ಸ್ನೇಹಿ ವರ್ಗಾವಣೆ ನೀತಿ ಜಾರಿಗೊಳಿಸಲಾಗಿತ್ತು.

▶ 5

ಮೂರು ವರ್ಗಗಳು

- **ವರ್ಗ–1:** ಕರ್ನಾಟಕ ಪಬ್ಲಿಕ್ ಶಾಲೆಗಳು, ಆದರ್ಶ ವಿದ್ಯಾಲಯಗಳು, ಪಿಎಂಶ್ರೀ ಶಾಲೆಗಳು
- **ವರ್ಗ 2:** ವಿದ್ಯಾರ್ಥಿಗಳ ಸಂಖ್ಯೆ 250ಕ್ಕಿಂತ ಹೆಚ್ಚು ಇರುವ ಸರ್ಕಾರಿ ಶಾಲೆಗಳು, ಪದವಿಪೂರ್ವ ಕಾಲೇಜುಗಳು
- **ವರ್ಗ 3:** ವರ್ಗ 1 ಮತ್ತು 2ಕ್ಕೆ ಸೇರಿದ ಪ್ರೌಢ ಶಾಲಾ ಮುಖ್ಯಶಿಕ್ಷಕರು, ಉಪ ಪ್ರಾಂಶುಪಾಲರು, ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು

ವಾಣಿಜ್ಯ ಎಲ್‌ಪಿಜಿ ಹಂಚಿಕೆ ಹೆಚ್ಚಳ

ನವದೆಹಲಿ (ಪಿಟಿಐ): ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಹೆಚ್ಚುವರಿಯಾಗಿ ಶೇಕಡ 20ರಷ್ಟು ವಾಣಿಜ್ಯ ಎಲ್‌ಪಿಜಿ ಹಂಚಿಕೆ ಮಾಡಲು ಕೇಂದ್ರ ಸರ್ಕಾರ ಶನಿವಾರ ಒಪ್ಪಿಗೆ ನೀಡಿದೆ. ಇದರಿಂದಾಗಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹಂಚಿಕೆಯಾಗುವ ವಾಣಿಜ್ಯ ಬಳಕೆ ಎಲ್‌ಪಿಜಿ ಪ್ರಮಾಣವು ಶೇ 50ಕ್ಕೆ ಏರಿಕೆ ಆಗಿದೆ.

ವಿವರ ▶ 7

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಹಾಕಿ: ಐಡಿಯಲ್ ಸ್ಪೋರ್ಟ್ಸ್ ಅಕಾಡೆಮಿ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಡಿಯಲ್ ಸ್ಪೋರ್ಟ್ಸ್ ಅಕಾಡೆಮಿ ತಂಡವು ಶನಿವಾರ ಇಲ್ಲಿ ಆರಂಭಗೊಂಡ ಕೆಎಸ್‌ಎಚ್‌ಎ 'ಬಿ' ಡಿವಿಷನ್ ಹಾಕಿ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಶಿವಮೊಗ್ಗದ ಸಹ್ಯಾದ್ರಿ ಹಾಕಿ ಕ್ಲಬ್ ಎದುರು ಸುಲಭ ಜಯ ಸಾಧಿಸಿತು.

ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ (ಕೆಎಸ್‌ಎಚ್‌ಎ) ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಐಡಿಯಲ್ ಸ್ಪೋರ್ಟ್ಸ್ ತಂಡವು 7–1ರಿಂದ ಸಹ್ಯಾದ್ರಿ ತಂಡವನ್ನು ಸೋಲಿಸಿತು.

ಶಾಂತಿನಗರದ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಐಡಿಯಲ್ ಸ್ಪೋರ್ಟ್ಸ್ ತಂಡದ ಕಾರ್ತಿಕ್ (11ನೇ ನಿಮಿಷ ಹಾಗೂ 32ನೇ ನಿಮಿಷ), ವಿನೀಷ್ (18ನೇ ನಿಮಿಷ ಹಾಗೂ 35ನೇ ನಿಮಿಷ) ಮತ್ತು ಅಜಯ್ (41ನೇ ನಿಮಿಷ ಹಾಗೂ 42ನೇ ನಿಮಿಷ) ಅವಳಿ ಗೋಲು ಹೊಡೆದರೆ, ಪ್ರತೀಕ್ (37ನೇ ನಿಮಿಷ) ಒಂದು ಗೋಲು ಗಳಿಸಿದರು. ಸಹ್ಯಾದ್ರಿ ತಂಡದ ಕೆ.ಜೆ. ಗಗನ್ (31ನೇ ನಿಮಿಷ) ಏಕೈಕ ಗೋಲು ಗಳಿಸಿದರು.

ಭಾನುವಾರ ಮಧ್ಯಾಹ್ನ 1.30ಕ್ಕೆ ಆರಂಭವಾಗುವ ಪಂದ್ಯದಲ್ಲಿ ಶಿವಮೊಗ್ಗದ ಸಹ್ಯಾದ್ರಿ ಹಾಕಿ ಕ್ಲಬ್ ಮತ್ತು ಎಸ್.ಎ.ಎಸ್.ಎ ತಂಡಗಳು ಮುಖಾಮುಖಿಯಾಗಲಿವೆ.

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ
ನೇರ ಸಂದರ್ಶನ–ಎನ್‌ಐಎಎನ್‌ಪಿ/ಎಡಿವಿ–3–ಸಿಡಿಎನ್/2025–26
ಕೆಳಗಿನ ವಿವರಗಳನ್ವಯ ತಾತ್ಕಾಲಿಕ ಆಧಾರದಲ್ಲಿ ಯಂಗ್ ಪ್ರೊಫೆಷನಲ್ಸ್ ತೊಡಗಿಸಿಕೊಳ್ಳಲು, 01.04.2026 ರಂದು ಬೆಳಗ್ಗೆ 10:30 ಗಂಟೆಗೆ ನೇರ–ಸಂದರ್ಶನ ಆಯೋಜಿಸಲಾಗಿದೆ:
1) ಯಂಗ್ ಪ್ರೊಫೆಷನಲ್–II (ಮಾಸಿಕ ಕ್ರೋಢೀಕೃತ ಸಂಭಾವನೆ ₹42,000/–) ತೆಂಗು ಅಭಿವೃದ್ಧಿ ಮಂಡಳಿಯ ಯೋಜನೆಯ ಅಡಿಯಲ್ಲಿ, ಜುಲೈ 2026ರ ಅವಧಿಯವರೆಗೆ.
2) ಯಂಗ್ ಪ್ರೊಫೆಷನಲ್–II (ಮಾಸಿಕ ಕ್ರೋಢೀಕೃತ ಸಂಭಾವನೆ ₹ 30,000/–) ಅಧಿಕೃತ ಭಾಷಾ (ಹಿಂದಿ) ಕೋಶದ ಅಡಿಯಲ್ಲಿ, ಆರಂಭಿಕ ಒಂದು ವರ್ಷ ಅವಧಿಯವರೆಗೆ.
ಆಸಕ್ತಿಯುಳ್ಳ ಅಭ್ಯರ್ಥಿಗಳು, ಅಗತ್ಯ ವಿದ್ಯಾರ್ಹತೆ ಮತ್ತು ಅನುಭವ, ವಯೋಮಿತಿ ಹಾಗೂ ಇನ್ನಿತರ ಷರತ್ತು ಮತ್ತು ನಿಬಂಧನೆಗಳ ವಿವರಗಳಿಗಾಗಿ, ಸಂಸ್ಥೆಯ www.nianp.res.in ವೆಬ್‌ಸೈಟ್‌ಗೆ ಭೇಟಿ ನೀಡಿ, ವಿವರವಾದ ಜಾಹೀರಾತು ಪರಿಶೀಲಿಸಬಹುದು.
ಸಹಿ/– ಆಡಳಿತಧಿಕಾರಿ

ಸಂಭ್ರಮದಿಂದ ಈದ್ ಉಲ್ ಫಿತ್ರ್ ಆಚರಣೆ

ಈದ್ಗಾ ಮೈದಾನಗಳಲ್ಲಿ ಸಾಮೂಹಿಕ ಪ್ರಾರ್ಥನೆ ವಿದ್ಯುತ್ ಬೆಳಕಿನಲ್ಲಿ ಕಂಗೊಳಿಸಿದ ಮಸೀದಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ತಿಂಗಳ ರಂಜಾನ್ ಉಪವಾಸ ಮುಗಿಸಿದ ಬಳಿಕ ಈದ್ ಉಲ್ ಫಿತ್ರ್ ಅನ್ನು ಮುಸ್ಲಿಮರು ಶನಿವಾರ ಸಂಭ್ರಮದಿಂದ ಆಚರಿಸಿದರು.

ಹೊಸ ಬಟ್ಟೆ ಧರಿಸಿ ಸಮೀಪದ ಈದ್ಗಾ ಮೈದಾನಗಳು, ಮಸೀದಿಗಳಿಗೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ನಂತರ ಸಿಹಿ ಹಂಚಿ, ಪರಸ್ಪರ ಆಲಿಂಗಿಸಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು. ಪ್ರಾರ್ಥನೆ ಸಲ್ಲಿಸಿದ ಧರ್ಮಗುರುಗಳು, ಹಬ್ಬದ ಸಂದೇಶ ನೀಡಿದರು.

ನಗರದ ಮೈಸೂರು ರಸ್ತೆಯ ಈದ್ಗಾ ಮೈದಾನದಲ್ಲಿ ಈದ್–ಉಲ್ ಫಿತ್ರ್ ಅಂಗವಾಗಿ ಬೆಳಿಗ್ಗೆ ಸಾವಿರಾರು ಮುಸ್ಲಿಮರು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡರು.

ಒಂದು ಗಂಟೆಗೂ ಹೆಚ್ಚು ಕಾಲ ಸಾಮೂಹಿಕ ಪ್ರಾರ್ಥನೆ ನಡೆಯಿತು. ಕುರಾನ್ ಪಠಿಸಲಾಯಿತು. ನೂರಾರು ಸಂಖ್ಯೆಯಲ್ಲಿ ಮಕ್ಕಳು ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.

ಪ್ರಾರ್ಥನೆಯ ಸಂದರ್ಭ ವಿವಿಧೆಡೆ ವಾಹನಗಳ ಸಂಚಾರ ಮಾರ್ಗವನ್ನು ಬದಲಿಸಲಾಗಿತ್ತು. ನಗರದ ಮಸೀದಿ, ದರ್ಗಾ ಹಾಗೂ ಮದರಸಾಗಳಿಗೆ ವಿಶೇಷ ವಿದ್ಯುತ್ ಹಾಗೂ ಬಣ್ಣದ ಕಾಗದಗಳ ಅಲಂಕಾರ ಮಾಡಲಾಗಿತ್ತು. ವಿದ್ಯುತ್ ಬೆಳಕಿನಲ್ಲಿ ಮಸೀದಿಗಳು ಕಂಗೊಳಿಸಿದವು.

ಪ್ರತಿ ಮುಸಲ್ಮಾನರ ಮನೆಯಲ್ಲಿಯೂ ಹಬ್ಬದ ಸಂಭ್ರಮವು ಮನೆ ಮಾಡಿತ್ತು. ಸಂಬಂಧಿಕರು ಹಾಗೂ ಸ್ನೇಹಿತರನ್ನು ಮನೆಗೆ ಆಹ್ವಾನಿಸಿ ಹಬ್ಬದ ಶುಭಾಶಯ ಕೋರಿದರು.

ಗಳಿಕೆಯಲ್ಲಿ ಬಡವರಿಗೆ ದಾನ ಮಾಡುವ ಸಂಪ್ರದಾಯವನ್ನು ಪಾಲಿಸಿದರು. ಜಕಾತ್, ಫಿತ್ರ್ ದಾನ ಮಾಡಿದರು. ದವಸ–ಧಾನ್ಯ, ನಗದು ನೀಡಿದರು.

ಬೆಂಗಳೂರಿನ ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಮುಸ್ಲಿಮರು ಈದ್ ಉಲ್ ಫಿತ್ರ್ ಅಂಗವಾಗಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು
– ಪ್ರಜಾವಾಣಿ ಚಿತ್ರಗಳು: ಎಂ. ಎಸ್. ಮಂಜುನಾಥ್

ಈದ್ ಉಲ್ ಫಿತ್ರ್ ಪ್ರಯುಕ್ತ ಮಕ್ಕಳು ಪರಸ್ಪರ ಶುಭಾಶಯ ಕೋರಿದರು

ಮಿಲ್ಲರ್ ರಸ್ತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರವಚನ ಆಲಿಸಿದರು

'ಮಾನವಕುಲದ ಒಳಿತಿಗೆ ಪ್ರಾರ್ಥಿಸಿ'

ಮಾನವಕುಲದ ಒಳಿತಿಗೆ ಪ್ರಾರ್ಥಿಸುವುದು ಅವಶ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಈದ್ ಉಲ್ ಫಿತ್ರ್ ಪ್ರಯುಕ್ತ ಮಿಲ್ಲರ್ ರಸ್ತೆಯಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು 'ಮಾನವೀಯತೆಯಿಂದ, ಪರಸ್ಪರ ಪ್ರೀತಿ ವಿಶ್ವಾಸದಿಂದ ಬಾಳುವುದು ಅವಶ್ಯ. ಭಾರತ ದೇಶ ವಿವಿಧ ಜಾತಿ, ಸಂಸ್ಕೃತಿಗಳಿಂದ ಕೂಡಿದೆ. ವಿವಿಧತೆಯಲ್ಲಿ ಏಕತೆಯಿರುವ ನಮ್ಮ ದೇಶದಲ್ಲಿ ಎಲ್ಲರೂ ಒಟ್ಟಾಗಿ ಬಾಳಬೇಕು. ಯಾವುದೇ ಧರ್ಮವೂ ದ್ವೇಷವನ್ನು ಬೋಧಿಸುವುದಿಲ್ಲ. ಎಲ್ಲ ಧರ್ಮಗಳೂ ಪ್ರೀತಿಯನ್ನು ಬೋಧಿಸುತ್ತವೆ' ಎಂದರು.

ಯುದ್ಧ ಕೊನೆಯಾಗಲೆಂದು ಪ್ರಾರ್ಥನೆ

ಹೊಸಕೋಟೆ: ಸೂಲಿಬೆಲೆ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಈದ್ ಉಲ್ ಫಿತ್ರ್ ಪ್ರಯುಕ್ತ ಸಾಮೂಹಿಕ ಪ್ರಾರ್ಥನೆ ನಡೆಯಿತು.

ಇದೇ ಸಂದರ್ಭದಲ್ಲಿ ಅಮೆರಿಕ, ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಯುದ್ಧ ಸಾರಿರುವುದು ಇಡೀ ಜಗತ್ತಿನ ವಿನಾಶಕ್ಕೆ ಕಾರಣವಾಗುತ್ತದೆ. ಆದ್ದರಿಂದ ಯುದ್ಧ ಶೀಘ್ರ ಕೊನೆಗೊಳ್ಳಲಿ ಎಂದು ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದರು.

ಈದ್ಗಾ ಮೈದಾನ ಅಭಿವೃದ್ಧಿ: ನಗರದಲ್ಲಿ ಮುಸ್ಲಿಂ ಸಮುದಾಯದವರ ಪ್ರಾರ್ಥನೆಗಾಗಿ ಈದ್ಗಾ ಮೈದಾನಕ್ಕೆ ಜಮೀನನ್ನು ಈ ಹಿಂದೆಯೇ ಸರ್ಕಾರ ಮಂಜೂರು ಮಾಡಿತ್ತು. ಮುಂದಿನ ದಿನಗಳಲ್ಲಿ ಈದ್ಗಾ ಮೈದಾನಕ್ಕೆ ವಕ್ಫ್ ಮಂಡಳಿಯಿಂದ ಸುಸಜ್ಜಿತ ಕಾಂಪೌಂಡ್ ನಿರ್ಮಿಸಿಕೊಡಲಾಗವುದು ಎಂದು ಶಾಸಕ ಶರತ್ ಬಚ್ಚೇಗೌಡ ತಿಳಿಸಿದರು.

ನಗರದಲ್ಲಿ ಶನಿವಾರ ನಡೆದ ಈದ್ ಸಾಮೂಹಿಕ ಪ್ರಾರ್ಥನೆ-ಯಲ್ಲಿ ಪಾಲ್ಗೊಂಡು ಮಾತನಾಡಿ, ತಾಲೂಕಿನ ಮುತ್ಕೂರು, ಸೂಲಿಬೆಲೆ, ಮುತ್ಸಂದ್ರ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ಈದ್ಗಾ ಮೈದಾನಕ್ಕೆ ತಡೆಗೋಡೆ ನಿರ್ಮಿಸಿ ಕಾಂಕ್ರೀಟ್ ನೆಲಹಾಸು ಮಾಡಿಸಿಕೊಡಲಾಗಿದೆ. ನಗರದ ಖಬರಸ್ಥಾನದಲ್ಲೂ ಅಗತ್ಯ ಕಾಮಗಾರಿ ಕೈಗೊಳ್ಳಲಾಗುವುದು ಎಂದರು.

ಅಮೆರಿಕ-ಇರಾನ್ ನಡುವಿನ ಯುದ್ಧದಿಂದ ಇರಾನ್ ನಲುಗಿ ಹೋಗಿದೆ. ಆದಷ್ಟು ಬೇಗ ಇರಾನ್‌ನಲ್ಲಿ ಶಾಂತಿ ನೆಲೆಸಲಿ ಎಂದರು.

ಡಿವೈಎಸ್ಪಿ ಮಲ್ಲೇಶ್, ಮುಸ್ಲಿಂ ಹಿರಿಯ ಮುಖಂಡ ಇಮ್ತಿಯಾಜ್ ಪಾಷ, ಜಿಲ್ಲಾ ವಕ್ಫ್ ಸಮಿತಿ ಮಾಜಿ ಅಧ್ಯಕ್ಷ ನಿಸಾರ್ ಅಹಮದ್, ಅಹ್ಲೆ ಸುನಾತುಲ್ ಜಮಾತ್ ಜಾಮಿಯಾ ಮಸೀದಿ ಅಧ್ಯಕ್ಷ ಸಯ್ಯದ್ ನವಾಜ್, ಉಪಾಧ್ಯಕ್ಷ ಫೈಜಲ್ ಅಹಮದ್, ಕಾರ್ಯದರ್ಶಿ ಎಜಾಜ್ ಅಹಮದ್ ಶರೀಫ್, ಅಯಾಜ್ ಪಾಷ, ಜಾವಿದ್ ಪಾಷ, ನಯಾಜ್ ಅಹಮದ್, ಮೊಹಮದ್ ನವಾಜ್, ಮುಖಂಡರಾದ ಅಪ್ಸರ್ ಪಾಷ, ಇರ್ಷಾದ್ ಅಹಮದ್, ಅನ್ಸರ್ ಪಾಷ, ಪರ್ವೀಜ್ ಅಹಮದ್, ಆಖಿಲ್ ಅಹಮದ್ ಇದ್ದರು.

ನಗರದಲ್ಲಿ ಮೌಂಟ್ ಕಾರ್ಮೆಲ್ ಕಾಲೇಜಿನ ಕನ್ನಡ ವಿಭಾಗ ಆಯೋಜಿಸಿದ್ದ 'ಅನಿಕೇತನ' ರಾಜ್ಯಮಟ್ಟದ ಅಂತರ ಕಾಲೇಜು ಕನ್ನಡ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಅತ್ಯಧಿಕ ಬಹುಮಾನ ಗೆಲ್ಲುವ ಮೂಲಕ 'ಸರ್ವೋತ್ತಮ ಪ್ರಶಸ್ತಿ'ಗೆ ಭಾಜನರಾದ ಜ್ಯೋತಿ ನಿವಾಸ್ ಕಾಲೇಜಿನ ಕನ್ನಡ ವಿಭಾಗದ ವಿದ್ಯಾರ್ಥಿನಿಯರ ಜತೆಗೆ ಕಾಲೇಜಿನ ಪ್ರಾಂಶುಪಾಲರಾದ ಲೂಯಿಸಾ ಸೆಬಾಸ್ಟಿಯನ್, ನಳಿನಿ, ಸಜಿತ, ಕನ್ನಡ ವಿಭಾಗದ ಗೂಳಪ್ಪ ವಕ್ಕುಂದ, ಲೀಲಾವತಿ, ಮಂಜುನಾಥ ಉಪಸ್ಥಿತರಿದ್ದರು

ಸರ್ಜಾಪುರ ಯಲ್ಲಮ್ಮನಿಗೆ ಮುಸ್ಲಿಮರ ಬಾಗಿನ

ಪ್ರಜಾವಾಣಿ ವಾರ್ತೆ

ಅತ್ತಿಬೆಲೆ (ಆನೇಕಲ್): ಸರ್ಜಾಪುರದಲ್ಲಿ ಶನಿವಾರ ಅದ್ದೂರಿಯಾಗಿ ನಡೆದ ರೇಣುಕಾ ಯಲ್ಲಮ್ಮ ಜಾತ್ರಾ ಮಹೋತ್ಸವದಲ್ಲಿ ಮುಸ್ಲಿಂ ಸಮುದಾಯದವರು ದೇವಿಗೆ ಬಾಗಿನ ಅರ್ಪಿಸಿ ಸಾಮರಸ್ಯಕ್ಕೆ ಸಾಕ್ಷಿಯಾದರು.

ಜಾತ್ರೆಯಲ್ಲಿ ಪಾಲ್ಗೊಂಡಿದ್ದ ಮುಸ್ಲಿಂ ಸಮುದಾಯದವರು ದೇವಿಗೆ ಮಡಿಲಕ್ಕಿ ಸಲ್ಲಿಸಿ ಭಕ್ತಿ ಸಮರ್ಪಿಸಿದರು. ನಂತರ ದೇವಿಗೆ ಜಯಘೋಷ ಹಾಕಿದರು. ಜಾತ್ರೆಗೆ ಬಂದಿದ್ದ ಭಕ್ತರಿಗೆ ಮುಸ್ಲಿಮರು ಸಿಹಿ ಮತ್ತು ನೀರು ವಿತರಿಸಿದರು.

ಈದ್ ಉಲ್ ಫಿತ್ರ್ ಮತ್ತು ರೇಣುಕಾ ಯಲ್ಲಮ್ಮ ಜಾತ್ರೆ ಒಂದೇ ದಿನ ನಡೆದಿದ್ದು, ಮುಸ್ಲಿಮರು ಮತ್ತು ಹಿಂದೂಗಳು ಒಗ್ಗೂಡಿ ಹಬ್ಬ ಮತ್ತು ಜಾತ್ರೆ ಆಚರಿಸಿದರು.

ಶನಿವಾರ ಮಧ್ಯಾಹ್ನ 1.30ರ ಸುಮಾರಿಗೆ ಅಲಂಕೃತ ರಥದಲ್ಲಿ ದೇವಿಯ ಉತ್ಸವ ಮೂರ್ತಿ ಕುಳ್ಳಿರಿಸಲಾಯಿತು. ರಾಜಾಪುರದ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ ಹಾಗೂ ಭಕ್ತ ಸಾಮೂಹ ರಥೋತ್ಸವಕ್ಕೆ ಸಾಕ್ಷಿಯಾದರು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ರಥವನ್ನು ಎಳೆಯಲಾಯಿತು. ರಥೋತ್ಸವದಲ್ಲಿ ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಂಡಿದ್ದವು. ಮಹಿಳೆಯರು ದೀಪಾರತಿ ಹೊತ್ತು ಭಕ್ತಿ ಸಮರ್ಪಿಸಿದರು.

ಸರ್ಜಾಪುರದ ರೇಣುಕಾ ಯಲ್ಲಮ್ಮ ದೇವಿ ಜಾತ್ರಾ ಮಹೋತ್ಸವದಲ್ಲಿ ಮುಸ್ಲಿಮರು ದೇವಿಗೆ ಬಾಗಿನ ಸಲ್ಲಿಸಿದರು



ಬೃಹತ್ ಬ್ಲಾಕ್‌ಬಸ್ಟರ್ ಚಿತ್ರದ ಎರಡನೇ ಭಾಗ ಬಿಡುಗಡೆ ಮಾಡಿದೆ!

ಬೆಲೆ ಏರಿಕೆ: ಖಾಲಿ ಸಿಲಿಂಡರ್ ಪ್ರದರ್ಶಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಅತ್ತಿಬೆಲೆ (ಆನೇಕಲ್): ಸಿಲಿಂಡರ್ ಬೆಲೆ ಏರಿಕೆ ನಿಯಂತ್ರಿಸಬೇಕು ಹಾಗೂ ಕನ್ನಡ ಶಾಲೆಗಳನ್ನು ಉಳಿಸಬೇಕೆಂದು ಅತ್ತಿಬೆಲೆ ಗಡಿ ಭಾಗದಲ್ಲಿ ಕನ್ನಡ ಚಳವಳಿ ವಾಟಾಳ್ ಪಕ್ಷ ಮತ್ತು ಕನ್ನಡ ಜಾಗೃತಿ ವೇದಿಕೆಯಿಂದ ಪ್ರತಿಭಟನೆ ನಡೆಸಲಾಯಿತು.

ವಾಟಾಳ್ ನಾಗರಾಜ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಖಾಲಿ ಸಿಲಿಂಡರ್ ಹಾಗೂ ಪಾತ್ರೆಗಳ್ನು ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಲಾಯಿತು.

ಎಲ್‌ಪಿಜಿ ಸಿಲಿಂಡರ್ ಸಮಸ್ಯೆಯಿಂದ ಕರ್ನಾಟಕ ಜನತ ಪರದಾಡುವಂತಾಗಿದೆ. ಮುಖ್ಯಮಂತ್ರಿಯವರು ಪ್ರಧಾನಿ ಜೊತೆ ಚರ್ಚೆ ನಡೆಸಿ ಸಮಸ್ಯೆಗೆ ಪರಿಹಾರ ಹುಡುಕಲು ಸಾಧ್ಯವಾಗಿಲ್ಲ. ಹಾಗಾಗಿ ರಾಜ್ಯ ಸರ್ಕಾರ ಕನ್ನಡಿಗರ ಪರವಾಗಿ ನಿಲ್ಲಬೇಕಾಗಿದೆ. ಬೆಲೆ ಇಳಿಕೆಯಾಗದಿದ್ದರೆ ಕರ್ನಾಟಕ ಬಂದ್ ಮಾಡಲಾಗುವುದು ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಎಚ್ಚರಿಕೆ ನೀಡಿದರು.

ರಾಜ್ಯದಲ್ಲಿ ಆರು ಸಾವಿರ ಕನ್ನಡ ಶಾಲೆಗಳನ್ನು ರಾಜ್ಯದಲ್ಲಿ ಮುಚ್ಚಲಾಗಿದೆ. 30 ವರ್ಷಗಳಿಂದ ಕನ್ನಡ ಶಾಲೆಗಳಿಗೆ ಅನುದಾನ ಕೊಟ್ಟಿಲ್ಲ. ಕನ್ನಡ ಶಾಲೆಗಳ ಅಭಿವೃದ್ಧಿ ಮಾಡದಿರುವುದನ್ನು ಖಂಡಿಸಿ ಮುಖ್ಯಮಂತ್ರಿ ಮನೆಯ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಹೇಳಿದರು.

ವಾಹನ ದಟ್ಟಣೆ : ಪ್ರತಿಭಟನೆಯಿಂದ ರಾಷ್ಟ್ರೀಯ ಹೆದ್ದಾರಿ 44ರ ಅತ್ತಿಬೆಲೆ ಗಡಿಯಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ವಾಹನ ದಟ್ಟಣೆ ಹೆಚ್ಚಾಗಿತ್ತು. ರಾಷ್ಟ್ರೀಯ ಹೆದ್ದಾರಿ ತಡೆ ಮಾಡಲು ಪ್ರತಿಭಟನಾಕಾರರು ಮುಂದಾದಾಗ ಪೊಲೀಸರು ಪ್ರತಿಭಟನಕಾರರನ್ನು ವಶಕ್ಕೆ ಪಡೆದರು.

'ತೆಲುಗು ವಿಜ್ಞಾನ ಸಮಿತಿ' ಶನಿವಾರ ಆಯೋಜಿಸಿದ್ದ ಯುಗಾದಿ ಉತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ತೆಲುಗು ಗೀತರಚನೆಕಾರ ಚಂದ್ರಬೋಸ್ ಮತ್ತು ಸಂಗೀತ ನಿರ್ದೇಶಕ ಗುರುಕಿರಣ್ ಅವರಿಗೆ 'ಶ್ರೀಕೃಷ್ಣ ದೇವರಾಯ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಮಿತಿಯ ಗೌರವ ಕಾರ್ಯಕಾರಿ ಸಮಿತಿ ಸದಸ್ಯ ಇಡಮಕಂಠಿ ಲಕ್ಷ್ಮಿರೆಡ್ಡಿ, ಅಧ್ಯಕ್ಷ ಎ. ರಾಧಾಕೃಷ್ಣ ರಾಜು, ಶಾಸಕ ಸಿ.ಎನ್. ಅಶ್ವತ್ಥನಾರಾಯಣ, ಉಪಾಧ್ಯಕ್ಷ ಆದಿಕೇಶವುಲು ನಾಯ್ಡು, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಸಮಿತಿ ಉಪಾಧ್ಯಕ್ಷ ಗಂಗರಾಜು ಮತ್ತು ಸಂಯುಕ್ತ ಕಾರ್ಯದರ್ಶಿ ಚಂದ್ರಮೋಹನ್ ಇದ್ದಾರೆ – ಪ್ರಜಾವಾಣಿ ಚಿತ್ರ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

'ಮಹಿಳೆಯರ ಸಾಧನೆ ಶ್ಲಾಘನೀಯ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಅಸ್ಮಿತೆಯೊಂದಿಗೆ ಪ್ರತಿಭೆಯನ್ನು ಮರೆಯುತ್ತಿರುವುದು ಒಳ್ಳೆಯ ಬೆಳವಣಿಗೆ' ಎಂದು ಸಾಹಿತಿ ವೈ.ಬಿ. ಎಚ್. ಜಯದೇವ್ ಅಭಿಪ್ರಾಯಪಟ್ಟರು.

ಹಾವನೂರು ಬಡಾವಣೆಯ ಭೂಮಿಕಾ ಸೇವಾ ಫೌಂಡೇಶನ್ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

'ಮಹಿಳೆ ಶೈಕ್ಷಣಿಕ, ಆರ್ಥಿಕವಾಗಿ ಸಬಲೆಯಾಗಿ ಸ್ವಾವಲಂಬಿಯಾಗಿದ್ದಾಳೆ. ತಾಂತ್ರಿಕ ಯುಗದಲ್ಲೂ ಮಹಿಳೆ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಅಪಾರ ಸಾಧನೆ ಮಾಡುತ್ತಿರುವುದು ಶ್ಲಾಘನೀಯ. ಪುರುಷರ ಸಮಾನ ಸ್ಥಾನಮಾನವನ್ನು ಸಂಪಾದಿಸಿದ್ದಾಳೆ' ಎಂದು ಹೇಳಿದರು.

ಶಾಸಕ ಎಸ್. ಮುನಿರಾಜು ಮಾತನಾಡಿ, 'ಎಲ್ಲ ರಂಗದಲ್ಲೂ ಯಶಸ್ವಿಯಾಗಿ ಕಾರ್ಯನಿರ್ವಹಿಸುವ ಶಕ್ತಿಯನ್ನು ಭಗವಂತ ಮಹಿಳೆಯರಿಗೆ ನೀಡಿದ್ದಾನೆ. ಶಕ್ತಿ ದೇವರ ಪೂಜೆ ಮಾಡಿ ಕುಟುಂಬವನ್ನು ಆರೋಗ್ಯವಂತರನ್ನಾಗಿ ಕಾಪಾಡಿಕೊಳ್ಳುವ ಕಾಳಜಿ ಮಹಿಳೆಯರಿಗಿದೆ' ಎಂದರು.

ಫೌಂಡೇಶನ್ ಅಧ್ಯಕ್ಷೆ ಲತಾ ಕುಂದರಗಿ, 'ನಮ್ಮ ಸಂಸ್ಥೆಯಿಂದ ಮಹಿಳೆಯರಿಗೆ ಉಚಿತ ಕಂಪ್ಯೂಟರ್, ಹೊಲಿಗೆ, ಬ್ಯೂಟಿಷಿಯನ್ ತರಬೇತಿ ನೀಡಿ ಅವರಿಗೆ ತರಬೇತಿ ಪ್ರಮಾಣ ಪತ್ರ ನೀಡಲಾಗುತ್ತಿದೆ' ಎಂದರು.

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಅಭಿನಂದಿಸಲಾಯಿತು.

ಸೇಂಟ್ ಮಾರ್ಕ್ಸ್ ಶಾಲೆಯ ಪ್ರಾಂಶುಪಾಲರಾದ ಚೈತ್ರಾ ಗೌಡ, ಆಸೆಂಟ್ ಕಾಲೇಜಿನ ಉಪನ್ಯಾಸಕಿ ಶ್ವೇತಾ ವೆಂಕಟೇಶ್, ಕನ್ನಡ ಸೇನೆ ಖಜಾಂಚಿ ರಾಜೇಂದ್ರ ಕೊಣ್ಣೂರ ಉಪಸ್ಥಿತರಿದ್ದರು.

ಭೂಮಿಕ ಸೇವಾ ಫೌಂಡೇಶನ್‌ನಲ್ಲಿ ಉಚಿತ ಕಂಪ್ಯೂಟರ್ ಮತ್ತು ಹೊಲಿಗೆ ತರಬೇತಿಗೆ ಎಸ್. ಮುನಿರಾಜು ಚಾಲನೆ ನೀಡಿದರು. ವೈ.ಬಿ.ಎಚ್. ಜಯದೇವ್, ಲತಾ ಕುಂದರಗಿ, ರಾಜೇಂದ್ರ ಕೊಣ್ಣೂರ, ಶ್ವೇತಾ ವೆಂಕಟೇಶ್, ಚೈತ್ರಾ ಗೌಡ ಉಪಸ್ಥಿತರಿದ್ದರು

FASHION & LIFESTYLE EXHIBITION CUM SALE

SUBH CONVENTION HALL
22nd MARCH-26
SUN 10AM-10PM
UPTO 90% OFF

STARTING PRICE ₹ 99 ONLY

ಎಲ್ಲಾ ಹೊಸ ಬ್ರಾಂಡ್‌ನ 100% ಫ್ರೆಷ್ ದಾಸ್ತಾನನ್ನು, ಗರಿಷ್ಠ ರಿಯಾಯತಿ ದರದಲ್ಲಿ ಮಾರಾಟ ಮಾಡಲಾಗುತ್ತದೆ

ಬ್ರಾಂಡೆಡ್ ಉಡುಪುಗಳು, ಶೂಗಳು, ಅಕ್ಸೆಸರಿಗಳು ಮತ್ತು ಲೇಡೀಸ್ ಬ್ಯಾಗ್‌ಗಳನ್ನು, ಆನ್‌ಲೈನ್ ಬೆಲೆಗಿಂತ ಕಡಿಮೆ ದರಗಳಲ್ಲಿ ಇಲ್ಲಿ ಖರೀದಿಸಿರಿ

Special Counter: ಕಂಫರ್ಟರ್ಸ್, ಬೆಡ್ ಷೀಟ್ಸ್, ಲೇಡೀಸ್-ಜೆಂಟ್ಸ್ ಬ್ಯಾಗ್ ಮತ್ತು ಪರ್ಸ್, ಗಾಗಲ್ಸ್, ಪ್ರೀಮಿಯಂ ಸಾಕ್ಸ್ ಹಾಗೂ ಇನ್ನೂ ಅನೇಕ 100ಕ್ಕಿಂತ ಹೆಚ್ಚು ವೆರೈಟಿಗಳು ನಂಬಲಸಾಧ್ಯ ದರಗಳಲ್ಲಿ ದೊರೆಯುತ್ತವೆ!!.

ಎಂಆರ್‌ಪಿ ರೂ.500–1000 ಮೌಲ್ಯದ ಹಾಫ್ ಸ್ಲೀವ್ ಟಿ–ಷರ್ಟ್ಸ್, ಕಾಟನ್ ಡೆನಿಮ್, ಬ್ರಾ, ಶಾರ್ಟ್ಸ್, ಪುರುಷರ ಒಳ ಉಡುಪುಗಳು, ಪ್ಯಾಂಟಿ, ಫ್ಯಾನ್ಸಿ ಸ್ಕರ್ಟ್, ಪ್ಯಾರಲ್ಲೆಲ್ ಪೈಜಾಮಾ, ಲೆಗ್ಗಿಂಗ್, ಕಾಟನ್ ಟಾಪ್, ಫ್ರಾಕ್‌ಗಳು ಕೇವಲ ರೂ.100/– & ಮೇಲ್ಪಟ್ಟ ಬೆಲೆಗೆ ಇಂದು ಮಾತ್ರ

ಎಂಆರ್‌ಪಿ ರೂ.2000 – 5000 ಮೌಲ್ಯದ ಪ್ರೀಮಿಯಂ ಬ್ರಾಂಡೆಡ್ ಫಾರ್ಮಲ್ ಮತ್ತು ಪಾರ್ಟಿ ವಿಯರ್ ಷರ್ಟ್ ಖರೀದಿಸಿ ಕೇವಲ ರೂ.900/– ರಲ್ಲಿ ಮಾತ್ರ

ಎಂಆರ್‌ಪಿ ರೂ.1500–3000 ವರೆಗಿನ ಪ್ರೀಮಿಯಂ ಲೇಡೀಸ್ ಗಾರ್ಮೆಂಟ್ಸ್ ಇಂದು ಖರೀದಿಸಿ ಕೇವಲ ರೂ.200–500/– ರಲ್ಲಿ ಮಾತ್ರ

ಎಂಆರ್‌ಪಿ ರೂ.4000 ವರೆಗಿನ ಕುರ್ತಿ ಮತ್ತು ಕುರ್ತಿ ಪ್ಲಾಜೋಗಳನ್ನು ಇಂದು ಖರೀದಿಸಿ ಕೇವಲ ರೂ.400–900/– ರಲ್ಲಿ ಮಾತ್ರ

ಎಂಆರ್‌ಪಿ ರೂ.1000– 2000ವರೆಗಿನ ಮಕ್ಕಳ ಬ್ರಾಂಡೆಡ್ ಉಡುಪುಗಳನ್ನು ಇಂದು ಖರೀದಿಸಿ ಕೇವಲ ರೂ.100–300/– ರಲ್ಲಿ ಮಾತ್ರ

ಎಂಆರ್‌ಪಿ ರೂ.4000–9000ವರೆಗಿನ ಪ್ರೀಮಿಯಂ ಬ್ರಾಂಡೆಡ್ ಶೂಗಳು, ಸ್ಯಾಂಡಲ್‌ಗಳನ್ನು ಖರೀದಿಸಿ ಕೇವಲ ರೂ.2000ಕ್ಕೆ ಮಾತ್ರ

ಎಂಆರ್‌ಪಿ ರೂ.10000ವರೆಗಿನ ಬ್ರಾಂಡೆಡ್ ಟ್ರಾಲಿ ಬ್ಯಾಗ್, ಲ್ಯಾಪ್‌ಟಾಪ್ ಬ್ಯಾಗ್ – ಕಾರ್ಪೊರೇಟ್ ಲೆದರ್ ಬ್ಯಾಗ್ ಖರೀದಿಸಿ ಕೇವಲ ರೂ.1500ಕ್ಕೆ ಮಾತ್ರ

ಎಂಆರ್‌ಪಿ ರೂ.4000–9000 ವರೆಗಿನ ಮೆನ್ಸ್ ಡೆನಿಮ್, ಷರ್ಟ್, ಟಿ–ಷರ್ಟ್, ಟ್ರಸರ್ ಇತ್ಯಾದಿಗಳನ್ನು ಖರೀದಿಸಿ ಕೇವಲ ₹700–₹1200ರಲ್ಲಿ ಮಾತ್ರ

Brands are hidden because we cannot showcase the Brand Display because of such High Discounts, but majorly all the premiums Brands are avaliable

ಭಾನುವಾರ
ಕೊನೆಯ 12 ಗಂಟೆಗಳು
22ನೇ ಮಾರ್ಚ್, 2026
ಸಮಯ ಬೆಳಗ್ಗೆ 10 – ರಾತ್ರಿ 10 ಗಂಟೆ

ಪ್ರವೇಶ ಉಚಿತ
ಶುಭ್ ಕನ್ವೆನ್ಷನ್
6ನೇ ಮೇನ್, ಕೊತ್ತನೂರ ಮುಖ್ಯರಸ್ತೆ, ಜೆಪಿ ನಗರ ಹಂತ–7, ಬ್ರಿಗೇಡ್ ಮಿಲೇನಿಯಂ ಎದುರು, ಬೆಂಗಳೂರು–560078
ಉಚಿತ ಪಾರ್ಕಿಂಗ್

Note: 1. Products can get mixed in different counters, for final price confirm at the cash counter. 2. Any of the mentioned product may not be available in case of stock ends.
ಡಿಜಿಟಲ್ ಪಾವತಿಗಳನ್ನು ಸ್ವೀಕರಿಸಲಾಗುತ್ತದೆ

The BIG Xperience
HARSHA
Happiness. Redefined.
'ಹರ್ಷೋತ್ಸವ'ದ ಸಂಭ್ರಮಾಚರಣೆಯಲಿ
ಭಾಗಿಯಾದ ನಿಮಗಿದೋ
ಅಭಿವಂದನೆಗಳು!
ನಿಮಗೆಂದೇ ರೂಪಿಸಿದ ಶಾಪಿಂಗ್ ಹಬ್ಬ!
ಸಂಭ್ರಮಿಸಿ ಸ್ಮಾರ್ಟ್ ಅಪ್‌ಗ್ರೇಡ್
• Up to ₹5,000* on AC and Refrigerators
• Up to ₹3,000* on Washing Machines
• Up to ₹10,000* on LED TVs
ಸಂಭ್ರಮಿಸಿ ಎಕ್ಸ್ಟ್ರಾ ಜಾಯ್
• Get Bluetooth Speakers* with LED TV
• Get Aristocrat Fronx Strolley Bag* with AC
ಸಂಭ್ರಮಿಸಿ ಕಾಂಬೋ ಡೀಲ್ಸ್
• 564 ltr Side-by-Side Refrigerator + Washer Dryer + Dishwasher - Get Combo benefit of ₹30,000*
• Bottom Freezer Refrigerator + Washer Dryer + Dishwasher - Get Combo benefit of ₹25,000*
• Top Freezer Refrigerator + Washer Dryer + Dishwasher - Get Combo benefit of ₹20,000*
ಸಂಭ್ರಮಿಸಿ ಈಸಿ ಇಎಮ್ಐ
• No Down Payment*
• Buy Now - Pay Later on EMI and Get 1 EMI free*
• 24 months Long Tenure EMI*
ಸಂಭ್ರಮಿಸಿ ಇನ್ಸ್ಟಂಟ್ ಸರ್‌ಪ್ರೈಸಸ್
• Up to ₹31,000* on LED TVs & Refrigerators
• Up to ₹7,500* on Washing Machines
ಸಂಭ್ರಮಿಸಿ ಗ್ರೇಟ್ ಪ್ರೈಸ್
• Get 100 inch Mini LED TV @ ₹2,72,999*
• Up to ₹50,000 OFF* on Side-by-Side Refrigerator
'ಹರ್ಷೋತ್ಸವ' ಸಂಭ್ರಮಾಚರಣೆಯನ್ನು ಅವಿಸ್ಮರಣೀಯಗೊಳಿಸಿ ಅದರ ಯಶಸ್ಸಿನ ರೂವಾರಿಗಳಾದ ನಿಮಗಿದೋ ಹೃದಯಾಂತರಾಳದ ಧನ್ಯವಾದಗಳು. ಈ ಶಾಪಿಂಗ್ ಹಬ್ಬವು ಇಂದು ಕೊನೆಗೊಳ್ಳುತ್ತಿದ್ದು, ನಿಮಗಿಷ್ಟವಾದ ವಸ್ತು-ವೈವಿಧ್ಯಗಳನ್ನು ಆಕರ್ಷಕ ಕೊಡುಗೆಗಳೊಂದಿಗೆ ಖರೀದಿಸಲು ಇದುವೇ ಕೊನೆಯ ಅವಕಾಶ. ಇನ್ನೇಕೆ ತಡ, ಕೂಡಲೇ 'ಹರ್ಷೋತ್ಸವ'ಕ್ಕೆ ಬನ್ನಿ, ಇದು ನಿಮಗೆಂದೇ ರೂಪಿಸಿದ ಶಾಪಿಂಗ್ ಹಬ್ಬ.
ಹರ್ಷೋತ್ಸವ
ವಾರ್ಷಿಕ ಸಂಭ್ರಮಾಚರಣೆ
18th - 22nd March 2026
LAST DAY TO CELEBRATE
ಇನ್ಸ್ಟಂಟ್ ಲಕ್ಕಿ ಡ್ರಾನೊಂದಿಗೆ ಖಚಿತ ಉಡುಗೊರೆ
Microwave Ovens
Air Conditioners
LED TVs
Panasonic Electric Cookers
Air Fryers
Panasonic Mixier Grinders
Smartwatches
Redmi Smartphones
...ಜೊತೆಗೆ ಇನ್ನಷ್ಟು ಉಡುಗೊರೆಗಳು
ಇಎಮ್ಐ ಲಕ್ಕಿ ಡ್ರಾ
Chance to win 2 LED TVs, 2 refrigerators, 2 washing machines, 1 air-conditioner, 4 microwave ovens and 1 party speakers, all from LG
eHarsha.India
digital_harsha
www.harshaindia.com
Cashback up to ₹15,000
Cashback up to ₹31,000
Instant Discount up to ₹10,000
Instant Discount up to ₹3,000
Cashback up to ₹22,500
Instant Discount up to 7.5%
Instant Discount up to ₹10,000
Conditions apply. Offers applicable on select models and brands. Models shown are indicative. Offer valid till stocks last. Finance at the sole discretion of the financier. Finance available only within city limits. Taxes applicable on Lucky Draw gifts.
ಉಳ್ಳಾಲ್ ಮುಖ್ಯ ರಸ್ತೆ, ಜ್ಞಾನ ಗಂಗಾ ನಗರ, ಬೆಂಗಳೂರು - 56. • ಫೀಲ್ಡ್ ಮಾರ್ಷಲ್ ಜನರಲ್ ಕಾರ್ಯಪ್ಪ ಪಾರ್ಕ್ ಸಮೀಪ, ರಾಜರಾಜೇಶ್ವರಿ ನಗರ, ಬೆಂಗಳೂರು – 98.

The BIG Xperience
HARSHA
Happiness. Redefined.
Celebrate
PRODUCTIVITY THAT TRAVELS WITH YOU.
The Only Shopping Festival Made For You.
LAST DAY TO CELEBRATE
NEW ARRIVAL
EMI @ ₹2,356*
Apple iPhone 17
256GB, Black
24 Months No Cost EMI*
Pay ₹499, get Apple Accessories worth ₹4,999*
₹81,400 | Now @ ₹74,400*
NEW ARRIVAL
EMI @ ₹2,084*
Google Pixel 10a, 5G
8GB RAM, 256GB Storage
24 Months No Cost EMI*
Pay ₹599, get Boat Airdopes worth ₹6,999*
₹49,999 | Now @ ₹46,999*
NEW ARRIVAL
EMI @ ₹6,666*
Samsung Galaxy S26 Ultra, 5G
12GB RAM, 512GB Storage
24 Months No Cost EMI*
FREE Samsung 45W Adapter worth ₹3,499*
₹1,59,999 | Now @ ₹1,50,999*
NEW ARRIVAL
EMI @ ₹2,528*
Vivo V70, 5G
8GB RAM, 256B Storage
18 Months No Cost EMI*
Pay ₹599 and get Boat Airdopes worth ₹6,999*
₹45,999 | Now @ ₹42,999*
EMI @ ₹2,028*
Samsung Galaxy A36, 5G
8GB RAM, 256GB Storage
18 Months No Cost EMI*
Get ₹2,000 Cash Back*
₹36,499 | Now @ ₹34,499*
EMI @ ₹3,750*
Oppo Reno 15C, 5G
8GB RAM, 256GB Storage
10 Months No Cost EMI*
Pay ₹599, get Boat Airdopes worth ₹6,999*
₹37,999 | Now @ ₹33,749*
EMI @ ₹3,000*
Motorola Edge 70, 5G
8GB RAM, 256GB Storage
7 Months No Cost EMI*
Pay ₹699 and get Smart Watch worth ₹6,999*
₹29,999 | Now @ ₹28,499*
NEW ARRIVAL
EMI @ ₹2,499*
Vivo Y51 Pro, 5G
8GB RAM, 128GB Storage
10 Months No Cost EMI*
Pay ₹399, get TWS Buds worth ₹3,499*
₹24,999 | Now @ ₹22,499*
EMI @ ₹1,917*
Redmi Note 15, 5G
8GB RAM, 128GB Storage
8 Months No Cost EMI*
Pay ₹399, get TWS Buds worth ₹3,499*
₹22,999 | Now @ ₹20,999*
Nothing Phone 3A Lite
8GB RAM, 128GB Storage
12 Months No Cost EMI*
Pay ₹399, get TWS Buds worth ₹3,499*
₹21,999 | Now @ ₹20,999*
EMI @ ₹2,125*
Oppo A6s, 5G
6GB RAM, 128GB Storage
18 Months No Cost EMI*
Get ₹1,000 Cash Back*
₹16,999 | Now @ ₹15,999*
NEW ARRIVAL
EMI @ ₹1,687*
Realme C83, 5G
4GB RAM, 64GB Storage
6 Months No Cost EMI*
Pay ₹299, get BTN Speaker worth ₹1,499*
Now @ ₹13,499*
NEW ARRIVAL
MacBook Air M5 Chip
16 GB RAM/ 512GB SSD/ 13 inch
EMI @ ₹3,684*
Pay ₹499, get 8-in-1 Adapter worth ₹4,499*
₹1,19,900 | Now @ ₹1,10,900*
HP Victus 15-i5 13th Gen
16GB/512GB SSD/4GB GFX RTX 3050/MS Office/W11
EMI @ ₹5,000*
Pay ₹699, get BT Speakers worth ₹3,999*
₹78,990 | Now @ ₹71,490*
Asus TUF Gaming A15
R7 7445HS/16GB/512GB SSD/4GB GFX/MS Office/W11
EMI @ ₹5,066*
Pay ₹999, get Boat Headphones worth ₹3,790*
₹80,990 | Now @ ₹77,990*
Lenovo LOQ 15ARP9
AMD R5 7235HS/ 16GB/ 512GB SSD/4GB RTX 3050A/MS Office/W11
EMI @ ₹4,833*
Pay ₹599, get BT Headphones worth ₹2,999*
₹74,990 | Now @ ₹68,866*
Dell 15
13th Gen Intel Core i5/16GB RAM/ 512GB SSD/MS Office/W11
EMI @ ₹5,749*
Pay ₹599, get BT Headphones worth ₹2,999*
₹69,990 | Now @ ₹67,990*
Asus Vivobook S14 Flip Touchscreen 2-in-1
13th Gen / 16GB, 512GB SSD/MS Office/W11
EMI @ ₹4,366*
Pay ₹699, get BT Speakers worth ₹3,999*
₹67,990 | Now @ ₹63,490*
HP 15
Core5-120U/16GB/512SSD/MS Office/W11
EMI @ ₹4,300*
Pay ₹699, get BT Speakers worth ₹3,999*
₹69,490 | Now @ ₹61,990*
H SERIES PROCESSOR
Lenovo IdeaPad Slim 3
13th Gen Intel Core i5-13420H, 16GB, 512GB SSD/MS Office/W11
EMI @ ₹7,999*
Get ₹3,000 Cash Back*
₹72,990 | Now @ ₹60,990*
Asus Vivobook 16
i5-13420H/16 GB/512 GB SSD/MS Office/W11
EMI @ ₹5,000*
Pay ₹699, get BT Speakers worth ₹3,999*
₹60,990 | Now @ ₹57,990*
HP OmniBook 3 Next Gen AI
AMD Ryzen AI 5 340/16GB DDR5/512GB SSD/MSO/W11
EMI @ ₹4,033*
Pay ₹599, get BT Headphones worth ₹2,999*
₹66,990 | Now @ ₹56,990*
Dell 15 - DC 15255
15.6" FHD 120Hz/R5-7520U/8GB RAM/512GB SSD/MSO/W11
EMI @ ₹4,649*
Pay ₹599, get BT Headphones worth ₹2,999*
₹46,490 | Now @ ₹44,740*
HP 15
AMD Ryzen 3 7320U/ 8GB/ 512GB SSD/MSO/ Win11
EMI @ ₹2,666*
Pay ₹599, get BT Headphones worth ₹2,999*
₹42,990 | Now @ ₹38,490*
Pay ₹999, Get Ambrane Travel Kit worth ₹4,999*
Upto ₹13,000 Instant Discount*
₹15,000 Cash Back* on Select Cards
Upto ₹10,000 Upgrade Offer*
24 Months No Cost EMI
HARSHOTSAVA
ANNIVERSARY CELEBRATIONS
18th - 22nd March 2026
INSTANT LUCKY DRAW WITH ASSURED GIFTS
Microwave Ovens
Air Conditioners
LED TVs
Panasonic Electric Cookers
Air Fryers
Panasonic Mixier Grinders
Smartwatches
Redmi Smartphones
AND MORE...
EMI LUCKY DRAW
Chance to win 2 LED TVs, 2 refrigerators, 2 washing machines, 1 air-conditioner, 4 microwave ovens and 1 party speakers, all from LG
Cashback up to ₹15,000 BAJAJ FINANCE
Cashback up to ₹31,000 HDB FINANCIAL SERVICES
Instant Discount up to ₹10,000 HDFC BANK
Instant Discount up to ₹3,000 ICICI Bank
Cashback up to ₹22,500 IDFC FIRST Bank
Instant Discount up to 7.5% Canara Bank
Instant Discount up to ₹10,000 Bank of Baroda Credit Card
AMERICAN EXPRESS
AXIS BANK
DBS
FEDERAL BANK
SBI card
IndusInd Bank
kotak Kotak Mahindra Bank
TVS CREDIT
YES BANK
Pixel
motorola
NOKIA
NOTHING
ONEPLUS
oppo
realme
SAMSUNG
vivo
Conditions apply. Offers applicable on select models and brands. Models shown are indicative. Offer valid till stocks last. Finance at the sole discretion of the financier. Finance available only within city limits.
Net Prices are inclusive of cashback, upgrade bonus and instant discount. Free Smartwatch and Bluetooth Speaker offers applicable on products above ₹60,000.
Scan for Location
Ullal Main Road, Jnana Ganga Nagara, Jnanabharathi Post, Bengaluru - 560056. Ph: 080-29919904/5/6, 45032774
eHarsha.India
digital_harsha
www.harshaindia.com
Jawaharlal Nehru Rd., Near Field Marshal General Cariappa Park, RR Nagar, BENGALURU – 560098. Ph: 080-26983100, 35188342
Scan for Location

4ನೇ ಸಲವೂ 'ಪಟ್ಟಿಯಿಂದ ಹೊರಕ್ಕೆ'

ಡಿಪಿಆರ್ ಸಲ್ಲಿಸದೆ ಅನುಮೋದನೆ ಪ್ರಕ್ರಿಯೆ ಅಸಾಧ್ಯ: ಅರಣ್ಯ ಸಚಿವಾಲಯ

• ಮಂಜುನಾಥ ಹೆಬ್ಬಾರ್

ನವದೆಹಲಿ: ಮೇಕೆದಾಟು ಸಮತೋಲನ ಜಲಾಶಯ ನಿರ್ಮಿಸುವ ಯೋಜನೆಗೆ 5,200 ಹೆಕ್ಟೇರ್ (12,692 ಎಕರೆ) ಅರಣ್ಯ ಬಳಕೆಗೆ ಅನುಮೋದನೆ ಪಡೆಯಲು ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವವನ್ನು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯವು ನಾಲ್ಕನೇ ಬಾರಿಗೆ ಪಟ್ಟಿಯಿಂದ 'ತೆಗೆದು ಹಾಕಿದೆ (ಡಿ–ಲಿಸ್ಟ್)'.

ಯಾವುದೇ ಯೋಜನೆಗೆ ಅನುಮೋದನೆ ಪಡೆಯುವ ಮುನ್ನ ಯೋಜನೆಯ ಉದ್ದೇಶ, ವ್ಯಾಪ್ತಿ ಹಾಗೂ ಪಾಲಿಸಬೇಕಾದ ನಿಯಮಗಳನ್ನು (ಟಿಒಆರ್) ದಾಖಲಿಸಿ ಒಪ್ಪಿಗೆ ಪಡೆಯುವುದು ಅತ್ಯಗತ್ಯ ಪ್ರಕ್ರಿಯೆ. ಟಿಒಆರ್‌ಗೆ ಒಪ್ಪಿಗೆ ನೀಡಬೇಕು ಎಂದು ಕೋರಿ ಕರ್ನಾಟಕ ಸರ್ಕಾರವು ಸಚಿವಾಲಯಕ್ಕೆ 2019ರ ಜೂನ್‌ನಲ್ಲಿ ಪ್ರಸ್ತಾವ ಸಲ್ಲಿಸಿತ್ತು. ಸಚಿವಾಲಯವು 2022ರ ಸೆಪ್ಟೆಂಬರ್‌ನಲ್ಲಿ ಪ್ರಸ್ತಾವವನ್ನು 'ಡಿ ಲಿಸ್ಟ್' ಮಾಡಿತ್ತು.

'ಈ ಯೋಜನೆಯು ಅಂತರ ರಾಜ್ಯ ಜಲ ವಿವಾದವನ್ನು ಒಳಗೊಂಡಿದೆ. ಹೀಗಾಗಿ, ಯೋಜನೆಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಿಂದ ಒಪ್ಪಿಗೆ ಸಿಕ್ಕ ಬಳಿಕ ಹಾಗೂ ಜಲಶಕ್ತಿ ಸಚಿವಾಲಯವು ಡಿಪಿಆರ್‌ಗೆ ಒಪ್ಪಿಗೆ ನೀಡಿದ ನಂತರವಷ್ಟೇ ಟಿಒಆರ್‌ಗೆ ಒಪ್ಪಿಗೆ ನೀಡಲಾಗುವುದು' ಎಂದು ಪರಿಸರ ಸಚಿವಾಲಯ ಸ್ಪಷ್ಟಪಡಿಸಿತ್ತು.

ರಾಜ್ಯ ಸರ್ಕಾರವು 2024ರ ಮೇ 29ರಂದು ಮತ್ತೊಮ್ಮೆ ಪ್ರಸ್ತಾವ ಸಲ್ಲಿಸಿತ್ತು. ಅಂತರ ರಾಜ್ಯ ಜಲವಿವಾದ, ಸುಪ್ರೀಂ ಕೋರ್ಟ್‌ನಲ್ಲಿ-ರುವ ಪ್ರಕರಣಗಳ ಬಗ್ಗೆ ಸಚಿವಾಲಯವು ವಿವರಣೆ ಕೇಳಿತ್ತು. ಈ ಯೋಜನೆಗೆ ಸುಪ್ರೀಂ ಕೋರ್ಟ್ ತಡೆ ನೀಡಿಲ್ಲ ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿತ್ತು. ಈ ಉತ್ತರದಿಂದ ಸಮಾಧಾನಗೊಳ್ಳದ ಸಚಿವಾಲಯವು ಜುಲೈ 25ರಂದು ಇನ್ನಷ್ಟು ಸ್ಪಷ್ಟನೆಗಳನ್ನು ಕೇಳಿತ್ತು. ಆದರೆ, ರಾಜ್ಯ ಸರ್ಕಾರವು ಪ್ರತಿಕ್ರಿಯೆ ನೀಡಿರಲಿಲ್ಲ. ಆ ಬಳಿಕ, ಸಚಿವಾಲಯವು ಡಿ–ಲಿಸ್ಟ್ ಮಾಡಿತ್ತು. 2025ರಲ್ಲೂ ಈ ಪ್ರಕ್ರಿಯೆ ಪುನಾರವರ್ತನೆಯಾಗಿತ್ತು.

ಮೇಕೆದಾಟು ಯೋಜನೆ ಆಕ್ಷೇಪಿಸಿ ತಮಿಳುನಾಡು ಸರ್ಕಾರದ ತಕರಾರು ಅರ್ಜಿಯನ್ನು ವಜಾಗೊಳಿಸಿದ ಬಳಿಕ ಕಾವೇರಿ ನೀರಾವರಿ ನಿಗಮವು 2026ರ ಜನವರಿ 5ರಲ್ಲಿ ಸಚಿವಾಲಯಕ್ಕೆ ಮತ್ತೊಮ್ಮೆ ಪ್ರಸ್ತಾವ ಸಲ್ಲಿಸಿತ್ತು.

'ಕೇಂದ್ರ ಜಲ ಆಯೋಗವು ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ಪರಿಶೀಲನೆ ನಡೆಸುತ್ತಿದೆ. ಆಯೋಗದ ಹಲವು ಆಕ್ಷೇಪಗಳಿಗೆ ರಾಜ್ಯ ಸರ್ಕಾರವು ಉತ್ತರ ನೀಡುತ್ತಿದೆ. ಟಿಒಆರ್ ನೀಡುವುದಕ್ಕಾಗಿ ಈ ಪ್ರಸ್ತಾವವನ್ನು ಪರಿಶೀಲಿಸಲು ಸಚಿವಾಲಯಕ್ಕೆ ಯಾವುದೇ ಅಡ್ಡಿ ಇಲ್ಲ. ಮೂಲ ದತ್ತಾಂಶ ಸಂಗ್ರಹಕ್ಕೆ ಹೆಚ್ಚಿನ ಕಾಲಾವಕಾಶ ಬೇಕಾಗುತ್ತದೆ. ಟಿಒಆರ್‌ಗೆ ಅನುಮೋದನೆ ನೀಡಿದರೆ ದತ್ತಾಂಶ ಸಂಗ್ರಹ ಹಾಗೂ ಯೋಜನೆಗೆ ಸಮಾನಾಂತರವಾಗಿ ಅನುಮೋದನೆ ಪಡೆಯುವ ಪ್ರಕ್ರಿಯೆ ವೇಗಗೊಳಿಸಲು ಅನುಕೂಲವಾಗುತ್ತದೆ' ಎಂದು ನಿಗಮವು ಕೋರಿತ್ತು.

ಜನವರಿ 15ಕ್ಕೆ ಮತ್ತೆ ಆಕ್ಷೇಪ ವ್ಯಕ್ತಪಡಿಸಿದ್ದ ಅರಣ್ಯ ಸಚಿವಾಲಯವು, ಕೇಂದ್ರ ಜಲ ಆಯೋಗವು ಅಂತಿಮಗೊಳಿಸಿದ ಮತ್ತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಅನುಮೋದಿಸಿರುವ ವಿಸ್ತೃತ ಯೋಜನಾ ವರದಿ ಸಲ್ಲಿಸಬೇಕು ಎಂದು ನಿರ್ದೇಶನ ನೀಡಿತ್ತು. ಸಮೀಕ್ಷೆ ಕಾರ್ಯ ನಡೆಸಲು ಡಿಪಿಆರ್ ಸಲ್ಲಿಸುವ ಅಗತ್ಯ ಇಲ್ಲ ಎಂದು ನೀರಾವರಿ ನಿಗಮ ಸ್ಪಷ್ಟಪಡಿಸಿತ್ತು. ಅದರ ಬೆನ್ನಲ್ಲೇ, ಸಚಿವಾಲಯವು ಪ್ರಸ್ತಾವವನ್ನು ಡಿ–ಲಿಸ್ಟ್ ಮಾಡಿದೆ.

ಪರಿಹಾರಾತ್ಮಕ ಅರಣ್ಯೀಕರಣಕ್ಕೆ 7,400 ಹೆಕ್ಟೇರ್

ಮೇಕೆದಾಟು ಯೋಜನೆಯಿಂದ ಅಪಾರ ಪ್ರಮಾಣದ ಕಾಡು ನಾಶವಾಗುತ್ತಿರುವ ಕಾರಣದಿಂದ ಬೆಂಗಳೂರು ದಕ್ಷಿಣ, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ರಾಜ್ಯ ಸರ್ಕಾರ 7,400 ಹೆಕ್ಟೇರ್ ಜಾಗ ಗುರುತಿಸಿದೆ.

ಮಂಡ್ಯ ಹಾಗೂ ಇತರ ಜಿಲ್ಲೆಗಳಲ್ಲಿ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಜಾಗ ಗುರುತಿಸಲಾಗುತ್ತಿದೆ ಹಾಗೂ ಮರಗಳ ಗಣತಿ ಮಾಡಲಾಗುತ್ತಿದೆ ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಇನ್ನೊಂದೆಡೆ, ಮೇಕೆದಾಟು ಯೋಜನೆಯ ವಿನ್ಯಾಸ ಅಂತಿಮಗೊಳಿಸಿ ಕೇಂದ್ರ ಜಲ ಆಯೋಗದೊಂದಿಗೆ ಸಮನ್ವಯ ಸಾಧಿಸಲು ರಾಜ್ಯ ಸರ್ಕಾರವು 'ಕೇಂದ್ರ ವಿನ್ಯಾಸ ಸಂಘಟನೆ (ಸಿಡಿಒ)'ಯನ್ನು ಮಾರ್ಚ್ 3ರಂದು ರಚಿಸಿದೆ. ಡಿಪಿಆರ್‌ಗೆ ಶೀಘ್ರ ಅನುಮೋದನೆ ಪಡೆಯುವ ಸಂಬಂಧ ಜಲ ಸಂಪನ್ಮೂಲ ಇಲಾಖೆ ಅಧಿಕಾರಿಗಳು ಕೇಂದ್ರ ಜಲ ಆಯೋಗದ ಜತೆಗೆ ಎರಡು ಸುತ್ತಿನ ಮಾತುಕತೆ ನಡೆಸಿದ್ದಾರೆ.

'ಈಗಿನ ಮಾರುಕಟ್ಟೆ ದರಕ್ಕೆ ಅನುಗುಣವಾಗಿ ಪರಿಷ್ಕೃತ ವಿಸ್ತೃತ ಯೋಜನಾ ವರದಿ ತಯಾರಿಸಿ ಯೋಜನಾ ಮೊತ್ತವನ್ನು ಪರಿಷ್ಕರಿಸಿ ಜಲ ಆಯೋಗಕ್ಕೆ ಶೀಘ್ರ ಸಲ್ಲಿಸಲಾಗುವುದು' ಎಂದು ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ತಿಳಿಸಿದರು.

ಚಿಟಿಕೆ ಸುದ್ದಿ

ಬಾಣಸವಾಡಿ-ತುಮಕೂರು ನಡುವೆ ಮೆಮು ರೈಲು

ಬೆಂಗಳೂರು: ಪ್ರಯಾಣಿಕರ ದಟ್ಟಣೆಯನ್ನು ಸರಿದೂಗಿಸಲು ನೈರುತ್ಯ ರೈಲ್ವೆ ವತಿಯಿಂದ ಬಾಣಸವಾಡಿ ಮತ್ತು ತುಮಕೂರು ನಡುವೆ ಮಾರ್ಚ್ 22ರಂದು ಮೆಮು ವಿಶೇಷ ರೈಲು ಒಂದು ಟ್ರಿಪ್ ಸಂಚರಿಸಲಿದೆ.

ಮಧ್ಯಾಹ್ನ 3.30ಕ್ಕೆ ಬಾಣಸವಾಡಿಯಿಂದ ಹೊರಟು ಸಂಜೆ 5.15ಕ್ಕೆ ತುಮಕೂರು ತಲುಪಲಿದೆ. ತುಮಕೂರಿನಿಂದ ಸಂಜೆ 5.45ಕ್ಕೆ ಹೊರಡಲಿರುವ ಇದೇ ರೈಲು ರಾತ್ರಿ 7.40ಕ್ಕೆ ಬಾಣಸವಾಡಿ ತಲುಪಲಿದೆ.

ಯಶವಂತಪುರ, ಹೆಬ್ಬಾಳ, ಚಿಕ್ಕಬಾಣಾವರ, ಗೊಲ್ಲಹಳ್ಳಿ, ದೊಡ್ಡಬೆಲೆ, ನಿಡವಂದ, ಹಿರೇಹಳ್ಳಿ ಮತ್ತು ಕ್ಯಾತ್ಸಂದ್ರ ನಿಲ್ದಾಣಗಳಲ್ಲಿ ಈ ರೈಲಿಗೆ ನಿಲುಗಡೆಯನ್ನು ನೀಡಲಾಗಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಚಪ್ಪಲಿ ಮೇಲೆ ಧಮ್ಮಚಕ್ರ: ಆಕ್ರೋಶ

ಶಹಾಬಾದ್: ನಗರದಲ್ಲಿ ಚಪ್ಪಲಿ ವ್ಯಾಪಾರಿಯೊಬ್ಬರು ಧಮ್ಮಚಕ್ರದ ಚಿಹ್ನೆ ಇರುವ ಚಪ್ಪಲಿಗಳನ್ನು ಮಾರಾಟಕ್ಕೆ ಇಟ್ಟಿರುವುದನ್ನು ಕಂಡು ದಲಿತ ಸಂಘಟನೆ ಮುಖಂಡರು ಆಕ್ರೋಶ ಹೊರಹಾಕಿ, ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ರಂಜಾನ್ ಪ್ರಯುಕ್ತ ಶುಕ್ರವಾರ ಸಂಜೆ ಭಾರಿ ಪ್ರಮಾಣದಲ್ಲಿ ಚಪ್ಪಲಿ ಮಾರಾಟ ನಡೆಯುತ್ತಿತ್ತು.

ಈ ವೇಳೆ ಧಮ್ಮಚಕ್ರದ ಚಿಹ್ನೆ ಇರುವ ಚಪ್ಪಲಿಗಳು ಕಂಡುಬಂದಿವೆ. ದಲಿತ ಸಂಘಟನೆ ಮುಖಂಡರು ದೂರು ನೀಡಿದ ನಂತರ ಕಾರ್ಯಪ್ರವೃತ್ತರಾದ ಪೊಲೀಸರು ಕೂಡಲೇ ಅಂತಹ ಎಲ್ಲಾ ಚಪ್ಪಲಿಗಳನ್ನು ಮುಟ್ಟುಗೋಲು ಹಾಕಿ, ಅಂಗಡಿ ಮಾಲೀಕನಿಗೆ ಎಚ್ಚರಿಕೆ ನೀಡಿದ್ದಾರೆ.

ರೈಲು ಸಂಚಾರದಲ್ಲಿ ವ್ಯತ್ಯಯ

ಬೆಂಗಳೂರು: ಮೈಸೂರು ಮತ್ತು ನಾಗನಹಳ್ಳಿ ನಡುವೆ ಕಾಮಗಾರಿ ನಡೆಯುತ್ತಿರುವುದರಿಂದ ಬೆಂಗಳೂರಿನಿಂದ ಅಶೋಕಪುರ ಕಡೆಗೆ ಹೋಗುವ ಕೆಲವು ರೈಲುಗಳು ಭಾಗಶಃ ರದ್ದಾಗಲಿವೆ. ಕೆಲವು ರೈಲುಗಳು ತಡವಾಗಿ ಸಂಚರಿಸಲಿವೆ.

ಕೆಎಸ್‌ಆರ್ ಬೆಂಗಳೂರು – ಅಶೋಕಪುರಂ ಮೆಮು ರೈಲು ಮಾ.24, ಏ.10 ಮತ್ತು 15ರಂದು ಪಾಂಡವಪುರ ಮತ್ತು ಅಶೋಕಪುರ ನಡುವೆ ಭಾಗಶಃ ರದ್ದಾಗಲಿದೆ. ಮುರ್ಡೇಶ್ವರ – ಎಸ್‌ಎಂವಿಟಿ ಬೆಂಗಳೂರು ಎಕ್ಸ್‌ಪ್ರೆಸ್ ರೈಲನ್ನು ಮಾರ್ಚ್ 24, ಏಪ್ರಿಲ್ 9 ಮತ್ತು 14ರಂದು ಮಾರ್ಗಮಧ್ಯೆ 50 ನಿಮಿಷ ನಿಯಂತ್ರಿಸಲಾಗುವುದು. ಎಸ್‌ಎಂವಿಟಿ ಬೆಂಗಳೂರು – ಮೈಸೂರು ಪ್ಯಾಸೆಂಜರ್ ರೈಲು ಎಸ್‌ಎಂವಿಟಿ ಬೆಂಗಳೂರು ನಿಲ್ದಾಣದಿಂದ ಒಂದು ಗಂಟೆ 40 ನಿಮಿಷ ತಡವಾಗಿ ಹೊರಡಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ವಾರದ ವಿಶೇಷ ರೈಲು ಕಾಯಂ

ಕಲಬುರಗಿ: ಈವರೆಗೆ ವಿಶೇಷ ರೈಲಾಗಿದ್ದ ಬೆಂಗಳೂರು ಕಂಟೋನ್ಮೆಂಟ್–ಕಲಬುರಗಿ ರೈಲನ್ನು (16563/16564) ಕಾಯಂ ಆಗಿ ಓಡಿಸಲು ರೈಲ್ವೆ ಮಂಡಳಿ ಅನುಮೋದನೆ ನೀಡಿದೆ. ಪ್ರತಿ ಶನಿವಾರ ರಾತ್ರಿ 10ಕ್ಕೆ ಬೆಂಗಳೂರು ಕಂಟೋನ್ಮೆಂಟ್‌ನಿಂದ ಹೊರಡುವ ರೈಲು ಭಾನುವಾರ ಬೆಳಿಗ್ಗೆ 10.20ಕ್ಕೆ ಕಲಬುರಗಿ ತಲುಪಲಿದೆ. ಕಲಬುರಗಿಯಿಂದ ಭಾನುವಾರ ಬೆಳಿಗ್ಗೆ 11.20ಕ್ಕೆ ಹೊರಡುವ ರೈಲು (16564) ಅದೇ ದಿನ ರಾತ್ರಿ 11ಕ್ಕೆ ತಲುಪಲಿದೆ.

ವಾರದಲ್ಲಿ ಎರಡು ದಿನ ಸಂಚರಿಸುವ ಬೆಂಗಳೂರು ಎಸ್‌ಎಂವಿಟಿ–ಕಲಬುರಗಿ ರೈಲನ್ನು ಸಹ ಕಾಯಂಗೊಳಿಸಲಾಗಿದೆ. ಪ್ರತಿ ಶುಕ್ರವಾರ ಹಾಗೂ ಭಾನುವಾರ ರಾತ್ರಿ 9.15ಕ್ಕೆ ಬೆಂಗಳೂರಿನಿಂದ ಹೊರಡುವ ರೈಲು (16559) ಮರುದಿನ ಬೆಳಿಗ್ಗೆ 9.10ಕ್ಕೆ ಕಲಬುರಗಿಗೆ ಬರಲಿದೆ. ಮಧ್ಯಾಹ್ನ 12.15ಕ್ಕೆ ಬೀದರ್ ತಲುಪಲಿದೆ. ಬೀದರ್‌ನಿಂದ ಪ್ರತಿ ಶನಿವಾರ ಮತ್ತು ಸೋಮವಾರ ಮಧ್ಯಾಹ್ನ 2ಕ್ಕೆ ಹೊರಡುವ ರೈಲು (16560) ಸಂಜೆ 5.05ಕ್ಕೆ ಕಲಬುರಗಿ ತಲುಪಲಿದೆ. ಭಾನುವಾರ ಮತ್ತು ಮಂಗಳವಾರ ಬೆಳಿಗ್ಗೆ 4ಕ್ಕೆ ಬೆಂಗಳೂರು ತಲುಪಲಿದೆ.

ಅವಿರೋಧ ಆಯ್ಕೆ

ಪೀಣ್ಯ ದಾಸರಹಳ್ಳಿ: ವಿದ್ಯಾನಗರದ ಬಸವಶ್ರೀ ಕ್ರೆಡಿಟ್ ಕೋ- ಆಪರೇಟಿವ್ ಸೊಸೈಟಿಗೆ ಅಧ್ಯಕ್ಷರಾಗಿ ಪಿ.ಎಚ್. ರಾಜು ಮತ್ತು ಉಪಾಧ್ಯಕ್ಷರಾಗಿ ಆರ್. ಪರಮೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನಿರ್ದೇಶಕರಾಗಿ ಕೆ.ಎಂ. ಸೋಮಶೇಖರ್, ಜಿ.ಆರ್. ಮಲ್ಲಯ್ಯ, ಲಕ್ಷ್ಮಯ್ಯ ಜಿ.ಆರ್, ಸಿದ್ದೇಶ್ ಎಲ್, ಬಿ.ಸಿ. ರವಿಕುಮಾರ್, ಮುನಿಯಲ್ಲಪ್ಪ, ಕಟ್ಟೆಬಸವ ಬಿ, ಕಾಂತರಾಜು, ಸುಜಾತಾ ಎಚ್.ಎಸ್, ಪುಷ್ಪಕಲಾ ಜಿ. ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಾಲ್ಕು ದಿನದಿಂದ ಕತ್ತಲಲ್ಲಿ ಮುಳುಗಿದ ಗ್ರಾಮಗಳು

ದೊಡ್ಡಬಳ್ಳಾಪುರ: ಮಳೆಯಿಂದ ಹಾನಿಯಾದ ವಿದ್ಯುತ್ ಕಂಬ ಹಾಗೂ ಪರಿವರ್ತಕ ದುರಸ್ತಿ ಕಾರ್ಯ ಬೆಸ್ಕಾಂ ಸಿಬ್ಬಂದಿ ಕೊರತೆ ಕಾರಣದಿಂದ ನಿಧಾನ ಗತಿಯಲ್ಲಿ ಸಾಗುತ್ತಿದೆ. ಇದರಿಂದ ನಾಲ್ಕು ದಿನಗಳಿಂದ ತಾಲ್ಲೂಕಿನ ಹಲವು ಗ್ರಾಮಗಳು ಕತ್ತಲಲ್ಲೇ ಮುಳುಗಿವೆ.

ಎಸ್‌ಎಸ್‌ಎಲ್ ಸೇರಿದಂತೆ ವಿವಿಧ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳು ರಾತ್ರಿ ಹೊತ್ತು ಓದಲು ಕಷ್ಟವಾಗುತ್ತಿದೆ. ಸೋಲಾರ್, ಮೊಬೈಲ್ ಮತ್ತು ಇತರ ಬ್ಯಾಟರಿ ಬೆಳಕಿನಲ್ಲಿ ಓದುತ್ತಿದ್ದಾರೆ.

ಯುಗಾದಿ ಹಬ್ಬದ ಹಿಂದಿನ ದಿನ ಮಾರ್ಚ್ 18ರಂದು ರಾತ್ರಿ ಬಿರುಗಾಳಿ ಸಹಿತ ಜೋರು ಮಳೆ ಸುರಿಯಿತು. ಇದರಿಂದ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಅನೇಕ ಮರ ಹಾಗೂ 98 ವಿದ್ಯುತ್ ಕಂಬಗಳು ಉರುಳಿ ಬಿದ್ದಿವೆ. 17 ವಿದ್ಯುತ್ ಪರಿವರ್ತಕಗಳು (ಟಿ.ಸಿ) ಸುಟ್ಟು ಹೋಗಿವೆ. ತಾಲ್ಲೂಕಿನ ಹಲವು ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ನೀಡಲು ಇನ್ನೂ ಸಾಧ್ಯವಾಗಿಲ್ಲ.

ಬೆಸ್ಕಾಂನಲ್ಲಿ ಸಿಬ್ಬಂದಿ ಕೊರತೆಯಿಂದ ದುರಸ್ತಿ ಕಾಮಗಾರಿ ಮುಗಿಯದ ಕಾರಣ ನಾಲ್ಕು ದಿನಗಳಿಂದ ತಾಲ್ಲೂಕಿನ ಬಹುತೇಕ ಗ್ರಾಮಗಳು ಕತ್ತಲಲ್ಲಿ ಇವೆ. 26ಕ್ಕೂ ಹೆಚ್ಚು ಗ್ರಾಮಗಳಲ್ಲಿ ಬುಧವಾರದಿಂದ ಹಬ್ಬದ ದಿನವಾದ ಗುರುವಾರ ಮಧ್ಯಾಹ್ನದವರೆಗೂ ವಿದ್ಯುತ್ ಇಲ್ಲದೆ ತೊಂದರೆ ಅನುಭವಿಸಿದರು.

ಮಾರ್ಚ್ 23 ರಂದು ಎಸ್‌ಎಸ್‌ಎಲ್‌ಸಿ ವಿಜ್ಞಾನ ಪರೀಕ್ಷೆ ಇದೆ. ವಿದ್ಯುತ್ ಇಲ್ಲದ ಕಾರಣ ಪರೀಕ್ಷೆ ಮುನ್ನಾ ದಿನ ಅಭ್ಯಾಸ ಮಾಡಿ ಮನದಟ್ಟು ಮಾಡಲು ತೊಂದರೆಯಾಗಿದೆ ಎನ್ನುತ್ತಾರೆ ವಿದ್ಯಾರ್ಥಿಗಳು. 'ಗ್ರಾಮೀಣ ಭಾಗದಲ್ಲಿ ಶೇಕಡ 75ರಷ್ಟು ವಿದ್ಯುತ್ ಸರಬರಾಜು ಸರಿಯಾಗಿದೆ. ಕಾರ್ಮಿಕರ ಕೊರತೆ ಕಾರಣ ದಿಂದ ಕೆಲಸ ವಿಳಂಬವಾಗುತ್ತಿದೆ. ನಗರ ಉಪ ವಿಭಾಗದಲ್ಲಿ ಶೇ 80ರಷ್ಟು ವಿದ್ಯುತ್ ಸರಬರಾಜು ಸರಿಯಾಗಿದ್ದು, ಭಾನುವಾರ ಸಂಜೆ ವೇಳೆಗೆ ಯಥಾಸ್ಥಿತಿಗೆ ಮರಳುವ ನಿರೀಕ್ಷೆ ಇದೆ' ಎಂದು ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

'ಅವಜ್ಞೆಗೆ ಒಳಗಾದ ಸ್ಮಾರಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾಚೀನ ಇತಿಹಾಸವನ್ನು ನಿಖರವಾಗಿ ತಿಳಿಯಲು ಶಾಸನಗಳು ವಿಶ್ವಾಸಾರ್ಹ ಮೂಲವಾಗಿವೆ. ಅವಜ್ಞೆಗೆ ಒಳಗಾಗಿರುವ ಶಾಸನ, ಸ್ಮಾರಕಗಳನ್ನು ನಾಗರಿಕರು ಉಳಿಸಬೇಕು' ಎಂದು ಪುರಾತತ್ತ್ವ ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ನಿರ್ದೇಶಕಿ ಸ್ಮಿತಾ ರೆಡ್ಡಿ ಡಿ. ಅಭಿಪ್ರಾಯಪಟ್ಟರು.

ಜೈನ್ ಮಿಲನ್, ಬೆಂಗಳೂರು ಸೆಂಟ್ರಲ್ ಹಾಗೂ ಜಯನಗರದ ಶ್ರೀ ಚಕ್ರೇಶ್ವರಿ ಮಹಿಳಾ ಸಮಾಜ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಜೈನ ಸಾಹಿತ್ಯ ಸಿರಿ' ಕಾರ್ಯಕ್ರಮದಲ್ಲಿ 'ಪ್ರಾತಿನಿಧಿಕ ಜೈನ ಶಾಸನಗಳು' ವಿಷಯದಮೇಲೆಉಪನ್ಯಾಸನೀಡಿದರು.

'ಶ್ರವಣಬೆಳಗೊಳವೊಂದರಲ್ಲಿಯೇ ಪ್ರಮುಖವಾದ 450 ಶಾಸನಗಳು ಸಿಕ್ಕಿವೆ. ಕವಿರಾಜಮಾರ್ಗಕಾರ ತಿಳಿಸುವಂತೆ ಈ ನಾಡು ಗುಜರಾತಿನವರೆಗೆ ಹರಡಿತ್ತು. ಪಂಪನ ತಮ್ಮ ಜಿನವಲ್ಲಭ ಬರೆದಿರುವ ಶಾಸನವು 1966ರಲ್ಲಿ ತೆಲಂಗಾಣದಲ್ಲಿ ಸಿಕ್ಕಿತು. ತೆಲುಗು, ಕನ್ನಡ ಹಾಗೂ ಸಂಸ್ಕೃತ ಭಾಷೆಯಲ್ಲಿರುವ ಈ ಶಾಸನದಲ್ಲಿ, ಆತ ತನ್ನ ಬಗ್ಗೆ ಹಾಗೂ ತನ್ನ ಅಣ್ಣ ಪಂಪನ ಬಗ್ಗೆ ಸವಿಸ್ತಾರವಾಗಿ ತಿಳಿಸಿದ್ದಾನೆ. ಇದರಿಂದಾಗಿ ಅಲ್ಲಿಯವರೆಗೆ ಪಂಪನ ಬಗ್ಗೆ ಇದ್ದ ಅನೇಕ ಸಂಶಯಗಳು ಈ ಶಾಸನದಿಂದ ದೂರವಾದವು' ಎಂದು ಹೇಳಿದರು.

ಭಾರತೀಯ ಜೈನ್ ಮಿಲನ್ ಕಾರ್ಯಾಧ್ಯಕ್ಷ ಡಿ. ಸುರೇಂದ್ರ ಕುಮಾರ್, 'ಸಾಹಿತ್ಯ ಸಿರಿ ಕಾರ್ಯಕ್ರಮದ ಮೂಲಕ ಕನ್ನಡ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ದಾಟಿಸುವ ಕೆಲಸವಾಗುತ್ತಿದೆ. ಶಾಸನಗಳ ಮೂಲಕ ಯಾವುದೇ ವಿಷಯವನ್ನು ನಿಖರವಾಗಿ ತಿಳಿಯಲು ಸಾಧ್ಯ' ಎಂದರು.

ಜೈನ್ ಮಿಲನ್ ಅಧ್ಯಕ್ಷೆ ಮಮತಾ ಕಾಂತರಾಜ್, ಚಕ್ರೇಶ್ವರಿ ಮಹಿಳಾ ಸಮಾಜದ ಅಧ್ಯಕ್ಷೆ ನಾಗಶ್ರೀ ಮುಪ್ಪಾನೆ ಹಾಗೂ ಸಂಚಾಲಕಿ ಪದ್ಮಿನಿ ನಾಗರಾಜು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮಮತಾ ಕಾಂತರಾಜ್, ಸ್ಮಿತಾ ರೆಡ್ಡಿ ಡಿ., ಡಿ. ಸುರೇಂದ್ರ ಕುಮಾರ್ ಹಾಗೂ ನಾಗಶ್ರೀ ಮುಪ್ಪಾನೆ ಪಾಲ್ಗೊಂಡಿದ್ದರು

ಸುದ್ದಿ 2 ನಿಮಿಷ

ಬೀದಿಬದಿ ವ್ಯಾಪಾರ ನಿಷೇಧ ಹಿಂಪಡೆಯಲು ಆಗ್ರಹ

ಬೆಂಗಳೂರು: ನಗರದ ಮುಖ್ಯ ರಸ್ತೆ ಮತ್ತು ಉಪ ಮುಖ್ಯ ರಸ್ತೆಗಳಲ್ಲಿ ಬೀದಿಬದಿ ವ್ಯಾಪಾರ ನಿಷೇಧಿಸಲು ಜಿಬಿಎ ರೂಪಿಸುತ್ತಿರುವ ನೀತಿಯನ್ನು ಕರ್ನಾಟಕ ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘ ಖಂಡಿಸಿದೆ.

'ಈ ನೀತಿ ಅಕ್ರಮ ಹಾಗೂ ಸಂವಿಧಾನ ವಿರೋಧಿಯಾದುದು. ಬೀದಿಬದಿ ವ್ಯಾಪಾರ ನಿಷೇಧಿಸುವ ಪ್ರಸ್ತಾವವನ್ನು ತಕ್ಷಣ ಹಿಂಪಡೆಯಬೇಕು' ಎಂದು ಸಂಘದ ಅಧ್ಯಕ್ಷ ಬಾಬು ಒತ್ತಾಯಿಸಿದ್ದಾರೆ.

'ಬೀದಿ ಬದಿ ವ್ಯಾಪಾರಿಗಳು (ಜೀವನೋಪಾಯದ ರಕ್ಷಣೆ ಮತ್ತು ನಿಯಂತ್ರಣ) ಕಾಯ್ದೆ ಜಾರಿಗೆ ಬಂದು ದಶಕ ಕಳೆದರೂ ಸಮಗ್ರ ಸಮೀಕ್ಷೆಗಳು ಪೂರ್ಣಗೊಂಡಿಲ್ಲ. ಎಲ್ಲ ವ್ಯಾಪಾರಿಗಳಿಗೆ ಗುರುತಿನ ಚೀಟಿಗಳು ನೀಡಲಾಗಿಲ್ಲ ಮತ್ತು ಸಾವಿರಾರು ಜನರು ಪಟ್ಟಿಯಿಂದ ಹೊರಗಿದ್ದಾರೆ. ಈ ಕಾಯ್ದೆ ಸರಿಯಾಗಿ ಜಾರಿಯಾಗಿಲ್ಲವೆಂದು ಸಂಸದೀಯ ಸ್ಥಾಯಿ ಸಮಿತಿ ಕೂಡ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದೆ. ಸರ್ಕಾರ ತನ್ನ ಕರ್ತವ್ಯವನ್ನು ನಿಭಾಯಿಸದಿದ್ದರೂ ವ್ಯಾಪಾರಿಗಳಿಗೆ ಶಿಕ್ಷೆ ವಿಧಿಸುವುದು ಸಂಪೂರ್ಣ ಅನ್ಯಾಯ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಬೀದಿ ಬದಿ ವ್ಯಾಪಾರಿಗಳ ಕಾಯ್ದೆಯನ್ನು ಸಂಪೂರ್ಣವಾಗಿ ಜಾರಿಗೆ ತರಬೇಕು. ಸಮಗ್ರ ಸಮೀಕ್ಷೆ ನಡೆಸಿ ಎಲ್ಲರಿಗೂ ಗುರುತಿನ ಚೀಟಿಗಳನ್ನು ನೀಡಬೇಕು. ಹೊಸ ನಗರ ಪಾಲಿಕೆಗಳಲ್ಲಿ 'ಟೌನ್ ವೆಂಡಿಂಗ್' ಸಮಿತಿಗಳನ್ನು ರಚಿಸಿ, ವ್ಯಾಪಾರಿಗಳ ನೈಜ ಪ್ರಾತಿನಿಧ್ಯವನ್ನು ಖಚಿತಪಡಿಸಬೇಕು. ಬೀದಿ ಬದಿ ವ್ಯಾಪಾರಿಗಳ ತೆರವು, ಜಪ್ತಿ ಮತ್ತು ಕಿರುಕುಳವನ್ನು ತಕ್ಷಣ ನಿಲ್ಲಿಸಬೇಕು' ಎಂದು ಕಾರ್ಯಕಾರಿ ಸಮಿತಿ ಸದಸ್ಯ ಲೇಖ ಅಡವಿ, ಕಾನೂನು ಸಲಹೆಗಾರ ವಿನಯ್ ಶ್ರೀನಿವಾಸ್ ಆಗ್ರಹಿಸಿದ್ದಾರೆ.

'ಸಿಎಂ ಕಪ್' ಫುಟ್‌ಬಾಲ್ ಟೂರ್ನಿ ಇಂದಿನಿಂದ

ಬೆಂಗಳೂರು: ಎರಡನೇ ಆವೃತ್ತಿಯ 'ಸಿಎಂ ಕಪ್' ಫುಟ್‌ಬಾಲ್ ಟೂರ್ನಿ ಭಾನುವಾರ ಆರಂಭವಾಗಲಿದ್ದು, ಉದ್ಘಾಟನಾ ಪಂದ್ಯದಲ್ಲಿ ಸಿ.ವಿ.ರಾಮನ್ ನಗರ ಹಾಗೂ ಶಿವಾಜಿ ನಗರ ತಂಡಗಳು ಮುಖಾಮುಖಿಯಾಗಲಿವೆ. ಎ ಗುಂಪಿನ ಈ ಪಂದ್ಯವು ಮಧ್ಯಾಹ್ನ 2ಕ್ಕೆ ಆರಂಭವಾಗಲಿದೆ.

ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಮತ್ತು ವೈಷ್ಣವಿ ಗ್ರೂಪ್ ಜಂಟಿ ಆಶ್ರಯದಲ್ಲಿ ಟೂರ್ನಿಯನ್ನು ಆಯೋಜಿಸಲಾಗಿದೆ. ಬೆಂಗಳೂರು ನಗರ ವ್ಯಾಪ್ತಿಯ 16 ವಿಧಾನಸಭಾ ಕ್ಷೇತ್ರಗಳ ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ. ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ. ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಉಪಾಧ್ಯಕ್ಷ ಎನ್.ಎ.ಹ್ಯಾರಿಸ್ ಅವರು ಟೂರ್ನಿಗೆ ಚಾಲನೆ ನೀಡಲಿದ್ದಾರೆ.

ಸಂಜೆ 4.30ಕ್ಕೆ ಆರಂಭವಾಗುವ ದಿನದ ಎರಡನೇ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಶಾಂತಿನಗರ ತಂಡವು ರಾಜರಾಜೇಶ್ವರಿನಗರ ತಂಡದೊಂದಿಗೆ ಸೆಣಸಲಿದೆ.

ವಿಜೇತ ತಂಡ ಟ್ರೋಫಿ ಜೊತೆ ₹2 ಲಕ್ಷ ಬಹುಮಾನ ಪಡೆಯಲಿದೆ. ರನ್ನರ್ಸ್‌ಅಪ್ ತಂಡಕ್ಕೆ ₹1 ಲಕ್ಷ ಸಿಗಲಿದೆ. ಸೆಮಿಫೈನಲ್‌ನಲ್ಲಿ ಸೋತ ತಂಡಗಳು ತಲಾ ₹25 ಸಾವಿರ ಪಡೆಯಲಿವೆ.

ನೀರಿನ ಬಿಲ್: ಅಸಲು ಕಟ್ಟಿದರೆ, ಬಡ್ಡಿ ಮನ್ನಾ; 3 ತಿಂಗಳು ಯೋಜನೆ: ಡಿಸಿಎಂ

ಏಪ್ರಿಲ್‌ನಿಂದ ಒಟಿಎಸ್ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರಿನ ಬಿಲ್ ಬಾಕಿ ಉಳಿಸಿಕೊಂಡಿರುವ ಗ್ರಾಹಕರಿಗೆ 'ಒಂದು ಬಾರಿ ಪರಿಹಾರ' (ಒಟಿಎಸ್) ಯೋಜನೆಯನ್ನು ಏಪ್ರಿಲ್‌ನಿಂದ ಜಾರಿಗೊಳಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಶಿವಕುಮಾರ್

ನಗರದ ಜನರಿಗೆ ಅನುಕೂಲ ಮಾಡಿಕೊಡಲು ಬಾಕಿ ಉಳಿಸಿಕೊಂಡಿರುವ ಬಿಲ್‌ನ ಅಸಲು ಪಾವತಿಸಿದಲ್ಲಿ ಬಡ್ಡಿಯನ್ನು ಮನ್ನಾ ಮಾಡಲಾಗುವುದು ಎಂದು ಅವರು ಪ್ರಕಟಣೆ ನೀಡಿದ್ದಾರೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವ್ಯಾಪ್ತಿಯಲ್ಲಿರುವ ಸುಮಾರು 11 ಲಕ್ಷ ನೀರಿನ ಸಂಪರ್ಕಗಳ ಪೈಕಿ, 5.11 ಲಕ್ಷ ಗ್ರಾಹಕರು ಬಿಲ್ ಬಾಕಿ ಉಳಿಸಿಕೊಂಡಿದ್ದಾರೆ. 2026ರ ಫೆಬ್ರುವರಿ ಕೊನೆಯ ಮಾಹಿತಿಯಂತೆ ₹851.33 ಕೋಟಿ ಬಾಕಿ ಇದೆ. ಇದರಲ್ಲಿ ಅಸಲು ಮೊತ್ತ ₹539.43 ಕೋಟಿ ಹಾಗೂ ಬಡ್ಡಿ ₹311.90 ಕೋಟಿಯಾಗಿದೆ. ಬಾಕಿಯನ್ನು ಸುಲಭವಾಗಿ ಪಾವತಿಸಲು ಹಾಗೂ ಗ್ರಾಹಕರ ಮೇಲಿನ ಆರ್ಥಿಕ ಹೊರೆ ತಗ್ಗಿಸಲು, ಏಪ್ರಿಲ್‌ನಿಂದ ಜೂನ್‌ವರೆಗೆ ಒಟಿಎಸ್ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಮೂರು ತಿಂಗಳ ಯೋಜನೆ ಅವಧಿಯಲ್ಲಿ ಗ್ರಾಹಕರು ತಮ್ಮ ಅಸಲು ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಿದರೆ ಏಪ್ರಿಲ್ 2026ರವರೆಗಿನ ಸಂಪೂರ್ಣ ಬಡ್ಡಿಯನ್ನು ವಿನಾಯಿತಿ ರೂಪದಲ್ಲಿ ಮನ್ನಾ ಮಾಡಲಾಗುವುದು. ಈ ಯೋಜನೆಯು ಗೃಹ, ವಾಣಿಜ್ಯ, ಕೈಗಾರಿಕೆ ಸೇರಿದಂತೆ ಜಲಮಂಡಳಿಯ ಎಲ್ಲ ವರ್ಗದ ಗ್ರಾಹಕರಿಗೂ ಅನ್ವಯವಾಗಲಿದೆ. ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳ ಬಾಕಿಗಳಿಗೂ ಲೆಕ್ಕಪತ್ರ ಸಮನ್ವಯದ ಮೂಲಕ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಹೇಳಿದ್ದಾರೆ.

ಮಾಹಿತಿ ಹಾಗೂ ಪಾವತಿ ಪ್ರಕ್ರಿಯೆಯನ್ನು ಸರಳಗೊಳಿಸಲಾಗಿದೆ. ಪ್ರತಿ ಬಾಕಿದಾರರಿಗೆ ಅವರ ಆರ್.ಆರ್. ಸಂಖ್ಯೆ, ಅಸಲು ಮೊತ್ತ, ಮನ್ನಾ ಆಗುವ ಬಡ್ಡಿ ಮೊತ್ತ ಹಾಗೂ ಪಾವತಿಸಬೇಕಾದ ಅಂತಿಮ ಮೊತ್ತದ ವಿವರಗಳನ್ನು ಒದಗಿಸಲಾಗುವುದು. ಗ್ರಾಹಕರು ಜಲಮಂಡಳಿಯ ಕಿಯೋಸ್ಕ್, ಆನ್‌ಲೈನ್ ಪೋರ್ಟಲ್ ಹಾಗೂ ವಿವಿಧ ಡಿಜಿಟಲ್ ಪಾವತಿ ವಿಧಾನಗಳ ಮೂಲಕ ಸುಲಭವಾಗಿ ಹಣ ಪಾವತಿಸಬಹುದು. ಯುಗಾದಿಯ ಈ ಕೊಡುಗೆಯನ್ನು ಗ್ರಾಹಕರು ಬಳಸಿಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಮುಖ್ಯಾಂಶಗಳು

- ಗ್ರಾಹಕರಿಗೆ ಬಡ್ಡಿ ಉಳಿತಾಯ, ಹೊರೆ ಇಳಿಕೆ
- ಜಲಮಂಡಳಿಯ ಆರ್ಥಿಕ ಸ್ಥಿತಿ ಬಲವರ್ಧನೆ
- ಪಾವತಿಗೆ ಸುಲಭ ವಿಧಾನ

ಅಮಿತ್ ಶಾ ಭೇಟಿಯಾದ ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಯುಗಾದಿ ಶುಭಾಶಯ ಕೋರುವ ನೆಪದಲ್ಲಿ ಕೇಂದ್ರದ ಭಾರಿ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಪುತ್ರ ನಿಖಿಲ್ ಕುಮಾರಸ್ವಾಮಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಶನಿವಾರ ಇಲ್ಲಿ ಭೇಟಿ ಮಾಡಿ ರಾಜ್ಯ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚಿಸಿದರು.

ಕುಮಾರಸ್ವಾಮಿ ಅವರು ಎರಡು ದಿನಗಳ ಹಿಂದೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರನ್ನು ಭೇಟಿ ಮಾಡಿದ್ದರು. ಪಕ್ಷದ ಮಾಜಿ ಅಧ್ಯಕ್ಷರೂ ಆಗಿರುವ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರನ್ನು ಶನಿವಾರ ಭೇಟಿ ಮಾಡಿದರು. ಆ ಬಳಿಕ ಶಾ ಅವರನ್ನು ಭೇಟಿ ಮಾಡಿ ಹಲವು ನಿಮಿಷಗಳ ಕಾಲ ಚರ್ಚಿಸಿದರು. ಇತ್ತೀಚಿನ ದಿನಗಳಲ್ಲಿ ಕರ್ನಾಟಕದ ಬಿಜೆಪಿ ನಾಯಕರು ತೆಗೆದುಕೊಳ್ಳುತ್ತಿರುವ ಏಕಪಕ್ಷೀಯ ತೀರ್ಮಾನಗಳ ಬಗ್ಗೆ ರಾಷ್ಟ್ರೀಯ ನಾಯಕರಲ್ಲಿ ಅಸಮಾಧಾನ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

'ವಿಧಾನ ಪರಿಷತ್‌ನ ನಾಲ್ಕು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಸಂದರ್ಭದಲ್ಲಿ ಬಿಜೆಪಿ ರಾಜ್ಯ ನಾಯಕರು ಸೌಜನ್ಯಕ್ಕೂ ಅಭಿಪ್ರಾಯ ಕೇಳಿಲ್ಲ. ಆಗ್ನೇಯ ಪದವೀಧರರ ಕ್ಷೇತ್ರದಲ್ಲಿ ಜೆಡಿಎಸ್ ಈ ಹಿಂದೆ ಜಯ ಗಳಿಸಿತ್ತು. ಈ ಸಲ ಈ ಕ್ಷೇತ್ರವನ್ನು ಬಿಟ್ಟುಕೊಡುವಂತೆ ಮನವಿ ಮಾಡಿತ್ತು. ಆದರೆ, ಬಿಜೆಪಿ ಪ್ರಮುಖರ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸದೆಯೇ ಸಂಭಾವ್ಯರ ಹೆಸರನ್ನು ವರಿಷ್ಠರಿಗೆ ಕಳುಹಿಸಲಾಗಿತ್ತು. ಬೆಂಗಳೂರು ಶಿಕ್ಷಕರ ಕ್ಷೇತ್ರವನ್ನಷ್ಟೇ ನಮ್ಮ ಪಕ್ಷಕ್ಕೆ ಬಿಟ್ಟುಕೊಡಲಾಗಿದೆ. ಇಂತಹ ಧೋರಣೆ ಸರಿಯಲ್ಲ' ಎಂದೂ ಕುಮಾರಸ್ವಾಮಿ ಅವರು ಶಾ ಗಮನಕ್ಕೆ ತಂದರು ಎಂದು ಮೂಲಗಳು ಹೇಳಿವೆ.

ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ನಾಲ್ವರು ಸದಸ್ಯರ ಅವಧಿ ಜೂನ್‌ನಲ್ಲಿ ಮುಗಿಯಲಿದೆ. ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರ ಸದಸ್ಯತ್ವ ಮುಗಿಯಲಿದೆ. ಮೂರು ಸ್ಥಾನಗಳಲ್ಲಿ ಕಾಂಗ್ರೆಸ್ ನಿರಾಯಾಸವಾಗಿ ಗೆಲ್ಲಲಿದೆ. ಜೆಡಿಎಸ್ ನೆರವಿಲ್ಲದೆ ಇನ್ನೊಂದು ಸ್ಥಾನ ಗೆಲ್ಲುವಷ್ಟು ಮತಗಳನ್ನು ಬಿಜೆಪಿ ಹೊಂದಿದೆ. ಈ ಸ್ಥಾನವನ್ನು ದೇವೇಗೌಡರಿಗೆ ಬಿಟ್ಟುಕೊಡಬೇಕು ಎಂಬುದು ಜೆಡಿಎಸ್ ನಾಯಕರ ಅಪೇಕ್ಷೆ. ಆದರೆ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಅವರನ್ನು ರಾಜ್ಯಸಭೆಗೆ ಕಳುಹಿಸಬೇಕು ಎಂಬುದು ಬಿ.ಎಸ್.ಯಡಿಯೂರಪ್ಪ ಕುಟುಂಬದ ಹಂಬಲ. ಈ ವಿಷಯದ ಬಗ್ಗೆಯೂ ಕುಮಾರಸ್ವಾಮಿ ಅವರು ಶಾ ಅವರಲ್ಲಿ ಪ್ರಸ್ತಾಪಿಸಿದರು ಎಂದು ಮೂಲಗಳು ಹೇಳಿವೆ.

ಅಮಿತ್ ಶಾ ಅವರಿಗೆ ಎಚ್‌.ಡಿ.ಕುಮಾರಸ್ವಾಮಿ ಹೂಗುಚ್ಛ ನೀಡಿದರು. ನಿಖಿಲ್ ಕುಮಾರಸ್ವಾಮಿ ಇದ್ದಾರೆ

ನಗರದಲ್ಲಿ ಇಂದು

ಕಾಕೋಳು ವೇಣುಗೋಪಾಲಸ್ವಾಮಿಯ ಬ್ರಹ್ಮರಥೋತ್ಸವ: ಬೆಳಿಗ್ಗೆ 9ಕ್ಕೆ ನಾಮಸಂಕೀರ್ತನೆ: ವಿಜಯ ವಿಠ್ಠಲ ಭಜನಾ ಮಂಡಳಿ, ಬೆಳಿಗ್ಗೆ 10.30ಕ್ಕೆ ಪ್ರವಚನ: ವೆಂಕಟನರಸಿಂಹಾಚಾರ್ಯ ಗುಡೇಬಲ್ಲೂರು, ಸಂಜೆ 5.30ಕ್ಕೆ ರುಕ್ಮಿಣಿ ಸತ್ಯಭಾಮ ಸಮೇತ ಕೃಷ್ಣನ ಮಹಾ ಕಲ್ಯಾಣೋತ್ಸವ, ರಾತ್ರಿ 8ಕ್ಕೆ ನಾಟಕ ಪ್ರದರ್ಶನ, ಆಯೋಜನೆ ಹಾಗೂ ಸ್ಥಳ: ಕಾಕೋಳು ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ಕಾಕೋಳು ಕ್ಷೇತ್ರ, ರಾಜಾನುಕುಂಟೆ ಸಮೀಪ, ಯಲಹಂಕ

'ಕನ್ನಡ ಸಾಹಿತ್ಯದಲ್ಲಿ ದಲಿತ ಪ್ರಜ್ಞೆ' ವಿಷಯದ ಬಗ್ಗೆ ಉಪನ್ಯಾಸ ಹಾಗೂ ಕವಿಗೋಷ್ಠಿ ಮತ್ತು ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ: ಉದ್ಘಾಟನೆ: ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಉಪನ್ಯಾಸ: ಹಾಜಿರಾ ಖಾನಂ, ಉಪಸ್ಥಿತಿ: ಗೋಪಾಲಕೃಷ್ಣ, ಆಯೋಜನೆ: ದಲಿತ ಸಾಹಿತ್ಯ ಪರಿಷತ್ತು ಬೆಂಗಳೂರು ನಗರ ಜಿಲ್ಲಾ ಸಮಿತಿ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ರಾಮಕೃಷ್ಣ, ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವ ಕಾರ್ಯಕ್ರಮ: ಅಧ್ಯಕ್ಷತೆ: ಸ್ವಾಮಿ ಸೌಖ್ಯಾನಂದಜೀ ಮಹಾರಾಜ್, ಉಪನ್ಯಾಸ: ಪ್ರಭಂಜನ, ನೇತ್ರಾವತಿ ಕೆ.ಎಸ್., ಆಯೋಜನೆ ಹಾಗೂ ಸ್ಥಳ: ಸ್ವಾಮಿ ವಿವೇಕಾನಂದ ಶೈಕ್ಷಣಿಕ ಸಂಸ್ಥೆ, ಬನಶಂಕರಿ 1ನೇ ಹಂತ, ಬೆಳಿಗ್ಗೆ 10

ಶ್ರೀರಾಮನವಮಿ ಸಂಗೀತೋತ್ಸವದ ಅಂಗವಾಗಿ 'ಪ್ರಣವಶ್ರೀ' ಪುರಸ್ಕಾರ ಪ್ರದಾನ ಸಮಾರಂಭ: ಅತಿಥಿ: ಕಡ್ಡಿ ಎಸ್. ಜಯತೀರ್ಥಾಚಾರ್ಯ, ಪ್ರಶಸ್ತಿ ಪುರಸ್ಕೃತರು: ಗುರುರಾಜ ಪೋಶೆಟ್ಟಿಹಳ್ಳಿ, ಮಾಲತಿ ಶಿಂಗ್ಲಾಚಾರ್, ರಾಮಲಿಂಗಂ, ಆಯೋಜನೆ ಹಾಗೂ ಸ್ಥಳ: ಆಂಜನೇಯ ಮತ್ತು ರಾಘವೇಂದ್ರ ಸ್ವಾಮಿಗಳ ದೇವಾಲಯ, 8ನೇ ಕ್ರಾಸ್, ಮಲ್ಲೇಶ್ವರ, ಸಂಜೆ 6.30

ಶ್ರೀರಾಮನವಮಿ ಉತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ: ಅಕ್ಷಯ ರುದ್ರಪಟ್ಟಣಂ ಮತ್ತು ಸಂಗಡಿಗರು, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30

'ಶ್ರೀಮದ್ ರಾಮಾಯಣ' ಉಪನ್ಯಾಸ: ವಿದ್ಯಾಸಿಂಧುಮಾಧವ ತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ಅಭಯ ಲಕ್ಷ್ಮೀ ನರಸಿಂಹ ಚಾರಿಟಬಲ್ ಟ್ರಸ್ಟ್, ತ್ಯಾಗರಾಜನಗರ, ಸಂಜೆ 6



120ನೇ ವರ್ಷದ ಶ್ರೀರಾಮೋತ್ಸವ: ಬೆಳಿಗ್ಗೆ 10.30ಕ್ಕೆ 'ರಾಮಾಯಣದ ಪಾತ್ರಗಳು ಆಧುನಿಕ ಜೀವನದಲ್ಲಿ' ವಿಷಯದ ಬಗ್ಗೆ ಸಂವಾದ: ಮಧುಸೂದನ್ ರಾವ್, ಹರಿದಾಸ ಸಂಪದ, ಕಲ್ಲಾಪುರ ಪವಮಾನಾಚಾರ್, ಗುರುರಾಜದಾಸ, ಕುತ್ಪಾಡಿ ಕೃಷ್ಣರಾಜಾಚಾರ್, ಗುಂಡೂರಾವ್, ಸಂಜೆ 6ಕ್ಕೆ ಮಹಾಗಣಪತಿ ಯಕ್ಷಗಾನ ಮಂಡಳಿಯಿಂದ 'ರತ್ನಾವತಿ ಕಲ್ಯಾಣ' ಯಕ್ಷಗಾನ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಐದನೇ ಅಡ್ಡ ರಸ್ತೆ, ಮಲ್ಲೇಶ್ವರ

'ಹೊನಲು' ಪ್ರಶಸ್ತಿ ಪ್ರದಾನ: ಆರ್. ಸುನಂದಮ್ಮ, ಅತಿಥಿಗಳು: ಆನಂದ ಝುಂಜರವಾಡ, ಜಯಶ್ರೀ ದೇಶಪಾಂಡೆ, ಪ್ರಶಸ್ತಿ ಪುರಸ್ಕೃತರು: ತಾರಿಣಿ ಶುಭದಾಯಿನಿ, ಎಂ. ಮನೋಹರ ಪೈ, ಸಂವಾದ: ಆನಂದ ಕುಂಚನೂರ, ಮಧು ಬಿರಾದಾರ, 'ಯುವ ಬರಹಗಾರರ ಸವಾಲುಗಳು' ಸಂವಾದ: ರಾಜಕುಮಾರ ಮಡಿವಾಳರ, ರಾಜೇಂದ್ರ ಪ್ರಸಾದ್, ಪ್ರವರ ಕೊಟ್ಟೂರು, ಉಪಸ್ಥಿತಿ: ಜಯಲಕ್ಷ್ಮಿ ಪಾಟೀಲ, ಆಯೋಜನೆ: ಈ ಹೊತ್ತಿಗೆ, ಸ್ಥಳ: ಕಪ್ಪಣ್ಣ ಅಂಗಳ, ಟಿಎಂಸಿ ಲೇಔಟ್, ಜೆ.ಪಿ.ನಗರ 1ನೇ ಹಂತ, ಬೆಳಿಗ್ಗೆ 10

ಗಾಯನ, ಹಾಸ್ಯ, ರಸಪ್ರಶ್ನೆ ಮತ್ತು ಕವಿಗೋಷ್ಠಿ: ಅಧ್ಯಕ್ಷತೆ: ಹೇಮಲತಾ ಸದಾನಂದ, ಅತಿಥಿಗಳು: ನಳಿನಿ ನಾಗರಾಜ್, ಶೈಲಜಾ ಹನುಮಂತರಾವ್, ಉಪಸ್ಥಿತಿ: ಬಿ.ಸಿ. ನವ್ಯಾ, ಆಯೋಜನೆ ಹಾಗೂ ಸ್ಥಳ: ಸಹಮತ, 323, ಹೇಮ ಸದನ, 7ನೇ ಮುಖ್ಯರಸ್ತೆಯ ಅಡ್ಡರಸ್ತೆ, ಸಿಕ್ಯುಎಲ್ ಬಡಾವಣೆ, ಸಹಕಾರನಗರ, ಬೆಳಿಗ್ಗೆ 10

ಸಿ. ಚಂದ್ರಶೇಖರ್ ಅವರ ಆತ್ಮಕಥೆ 'ರಿಸನ್ ಪಾಯಿಸನ್ಸ್ ಪ್ಯಾಷನ್' ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ಚಿರಂಜೀವ್ ಸಿಂಘ್, ಪುಸ್ತಕದ ಬಗ್ಗೆ ಮಾತು: ಸುಚಿತ ನಾಗೇಶ್, ಉಪಸ್ಥಿತಿ: ಅಭಿರುಚಿ ಗಣೇಶ್, ಬಿ.ಕೆ. ಶಿವರಾಂ, ಆಯೋಜನೆ: ಅಭಿರುಚಿ ಪ್ರಕಾಶನ, ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಬೆಳಿಗ್ಗೆ 10.30



ಸಿಂಧು ಭೈರವಿ ಕಲಾ ತಂಡದಿಂದ 'ನಿರುದ್ಯೋಗಿಗಳ ಅವಾಂತರ' ನಾಟಕ ಪ್ರದರ್ಶನ: ನಿರ್ದೇಶನ: ಜಿ. ತಿಮ್ಮರಾಜು, ಆಯೋಜನೆ: ಸಿಂಧು ಭೈರವಿ ಕಲಾ ತಂಡ ಟ್ರಸ್ಟ್, ಸ್ಥಳ: ನಗರಕೇಂದ್ರ ಗ್ರಂಥಾಲಯ, ಕುಮಾರಸ್ವಾಮಿ ಬಡಾವಣೆ, ಸಂಜೆ 5.30

'ಜನ ಏನಂತಾರೆ?' ಹಾಸ್ಯ ನಾಟಕ ಪ್ರದರ್ಶನ: ನಿರ್ದೇಶನ: ಚಂದನ್ ಕುಮಾರ್, ಆಯೋಜನೆ: ಸ್ಟೋರಿ ಟೆಲ್ಲಿಂಗ್ ಡಿಸಿಸ್, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 6

ಯುಗಾದಿ ಸಂಭ್ರಮ: ಅತಿಥಿ: ಬಿ. ಕೃಷ್ಣ ಕುಮಾರ್, ಲಯ ಲಾವಣ್ಯ: ಆನೂರು ಅನಂತಕೃಷ್ಣ ಶರ್ಮಾ, ಪಂಚಾಂಗ ಶ್ರಾವಣ: ಸುದರ್ಶನ ಶರ್ಮಾ, ಆಯೋಜನೆ ಹಾಗೂ ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30



ಆನೂರು ಅನಂತಕೃಷ್ಣ

ಸಾಧಕರೊಂದಿಗೆ ಸಂವಾದ: ರಾಜಾ ಶೈಲೇಶಚಂದ್ರ ಗುಪ್ತ, ಸಂವಾದ ನಡೆಸುವವರು: ಅಂಜನ್ ಶೆಟ್ಟಿ, ಆಯೋಜನೆ: ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಭಗವಾನ್ ರಮಣ ಮಹರ್ಷಿಗಳನ್ನು ಕುರಿತು ವಿಶೇಷ ಉಪನ್ಯಾಸ ಹಾಗೂ ರಮಣಾಂಜಲಿ ಸಂಗೀತ: ಉಪನ್ಯಾಸ: ಶಾರದಾ ನಟರಾಜನ್, ಸ್ವಾಮಿ ಆದಿತ್ಯಾನಂದ ಸರಸ್ವತಿ, ಆಯೋಜನೆ: ರಮಣ ಮಹರ್ಷಿ ಸೆಂಟರ್ ಫಾರ್ ಲರ್ನಿಂಗ್, ರಮಣಶ್ರೀ ಪ್ರತಿಷ್ಠಾನ, ಸ್ಥಳ: ರಮಣ ಮಹರ್ಷಿ ದೇವಸ್ಥಾನ, ಮೇಖ್ರಿ ವೃತ್ತ, ಬೆಳಿಗ್ಗೆ 10.30

ಎಸ್.ಜಿ. ಸಿದ್ಧರಾಮಯ್ಯ ಅವರಿಗೆ 'ಬಸವ ಪ್ರಶಸ್ತಿ' ಪ್ರದಾನ: ಮಹಾಂತ ಸ್ವಾಮೀಜಿ, ಉದ್ಘಾಟನೆ: ಬಿ.ಆರ್. ಪಾಟೀಲ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿ: ಜಯಶ್ರೀ ವೀರಣ್ಣ ದಂಡೆ, ಅಭಿನಂದನಾ ನುಡಿ: ರಘುನಾಥ ಚ.ಹ., ವಚನ ಗಾಯನ: ಮೃತ್ಯುಂಜಯ ದೊಡ್ಡವಾಡ, ಪ್ರಶಸ್ತಿ ಫಲಕ ವಾಚನ: ರುದ್ರೇಶ ಅದರಂಗಿ, ಉಪಸ್ಥಿತಿ: ಶರಣಗೌಡ ಪಾಟೀಲ ಪಾಳಾ, ಆಯೋಜನೆ: ಸುಭಾಷ್ಚಂದ್ರ ಪಾಟೀಲ ಸ್ಮಾರಕ ಜನಕಲ್ಯಾಣ ಟ್ರಸ್ಟ್ ಪಾಳಾ–ಕಲಬುರಗಿ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ಎಸ್. ಜಿ.ಸಿದ್ಧರಾಮಯ್ಯ

ದತ್ತಿ ಉಪನ್ಯಾಸಗಳು: 'ಕಲ್ಯಾಣ ಮಾರ್ಗದ ಪಥಿಕ ಸ್ವಾಮಿ ಶ್ರದ್ಧಾನಂದ' ವಿಷಯದ ಬಗ್ಗೆ: ಉಮೇಶ ಹೆಗಡೆ, 'ಭೂತಾರಾಧನೆ–ಒಂದು ವಿಶ್ಲೇಷಣಾತ್ಮಕ ನೋಟ' ವಿಷಯದ ಬಗ್ಗೆ: ಲಕ್ಷ್ಮೀ ಜಿ. ಪ್ರಸಾದ್, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ವಜ್ರ ಮಹೋತ್ಸವದ ಭಾಗವಾಗಿ 'ಮಿಷನ್ ಎವರೆಸ್ಟ್–8848 ಮೀ.' ಕಾರ್ಯಕ್ರಮ: ಅತಿಥಿಗಳು: ಕೃಷ್ಣ ಬೈರೇಗೌಡ, ಮಂಜುನಾಥ್ ಪ್ರಸಾದ್, ನವೀನ್ ರಾಜ್ ಸಿಂಗ್, ಚೇತನ್ ಆರ್., ಕೀರ್ತಿ ಪೈಸ್, ಆಯೋಜನೆ: ಕರ್ನಾಟಕ ಮೌಂಟೇನಿಯರಿಂಗ್ ಅಸೋಸಿಯೇಷನ್, ಸ್ಥಳ: ಯುವನಿಕಾ, ನೃಪತುಂಗ ರಸ್ತೆ, ಮಧ್ಯಾಹ್ನ 1

'ಸ್ತ್ರೀ ಧ್ವನಿಯಾಗಿ ಮುದ್ದಣನ ಮನೋರಮೆ' ವಿಷಯದ ಬಗ್ಗೆ ಉಪನ್ಯಾಸ: ನಾ. ದಾಮೋದರ ಶೆಟ್ಟಿ, ಆರ್. ಸುನಂದಮ್ಮ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ತರಳಬಾಳು ಕೇಂದ್ರ, ಆರ್.ಟಿ.ನಗರ, ಸಂಜೆ 4

ಉದಯೋನ್ಮುಖ ಕಲಾವಿದರಿಗೆ ಪರಮ್ ವಿಹಾರ: ಗಾಯನ: ಮಾನ್ಯ ಮಂಜುನಾಥ್, ಮೃದಂಗ: ಸುಮಧುರ್ ಅನೂರ್, ಪಿಟೀಲು: ಡಿ.ಆರ್. ರಾಘವೇಂದ್ರ ಸಾಥ್, ಭರತನಾಟ್ಯ: ಶ್ರೀನಿಧಿ ರಾಮಸ್ವಾಮಿ, ಸ್ಥಳ: ಪಟ್ಟಾಭಿರಮ ಸೇವಾ ಮಂಡಳಿ, ಜಯನಗರ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..

nagaradalli_indu@prajavani.co.in

'ಮಹಿಳಾ ಸೇವಾ ಪ್ರಶಸ್ತಿ'

ಮಂಡ್ಯ: ಶ್ರೀಮತಿ ಪದ್ಮಾ ಜಿ.ಮಾದೇಗೌಡ ಪ್ರತಿಷ್ಠಾನವು ಅವರ ಹೆಸರಿನಲ್ಲೇ ನೀಡುವ ರಾಜ್ಯಮಟ್ಟದ ಮಹಿಳಾ ಸೇವಾ ಪ್ರಶಸ್ತಿಗೆ ಕಲಬುರಗಿಯ ಕ್ಯಾನ್ಸರ್ ತಜ್ಞೆ ಡಾ.ವಿಜಯಲಕ್ಷ್ಮಿ ದೇಶಮಾನೆ ಆಯ್ಕೆಯಾಗಿದ್ದಾರೆ.



ಡಾ.ವಿಜಯಲಕ್ಷ್ಮಿ ದೇಶಮಾನೆ

12 ವರ್ಷದಿಂದ ಸಾಧಕಿಯರನ್ನು ಗುರುತಿಸುತ್ತಿದ್ದು, ಪ್ರಶಸ್ತಿಯು ₹25 ಸಾವಿರ ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ.ನಂಜೇಗೌಡ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಾರ್ಚ್ 24ರಂದು ಭಾರತೀನಗರದ ಭಾರತೀ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಕರ್ನಾಟಕ ಸಂಘದ ಅಧ್ಯಕ್ಷ ಜಯಪ್ರಕಾಶಗೌಡ ಪ್ರಶಸ್ತಿ ಪ್ರದಾನ ಮಾಡುವರು. ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಪದ್ಮಾ ಜಿ.ಮಾದೇಗೌಡ, ಬಿಇಟಿ ಸಿಇಒ ಜಿ.ಎಂ.ಆಶಯ್ ಭಾಗವಹಿಸುವರು ಎಂದು ಹೇಳಿದರು.

ಡ್ರಗ್ಸ್ ದಂಧೆ: 26 ಪೊಲೀಸರ ವಿರುದ್ಧ ಕ್ರಮ

ಮೂರು ವರ್ಷದಲ್ಲಿ ₹128 ಕೋಟಿ ಮೌಲ್ಯದ ಡ್ರಗ್ಸ್ ನಾಶ
2025ರಲ್ಲಿ ₹104 ಕೋಟಿ ಮೌಲ್ಯದ ವಿವಿಧ ಮಾದಕ ವಸ್ತುಗಳ ನಾಶ

• ಕೆ.ಎಸ್.ಸುನಿಲ್

ವರ್ಷ	ಗಾಂಜಾ ಜಪ್ತಿ (ಕೆ.ಜಿ.)	ಸಿಂಥೆಟಿಕ್ ಡ್ರಗ್ಸ್ ಜಪ್ತಿ (ಕೆ.ಜಿ)	ನಾಶಪಡಿಸಿದ ಡ್ರಗ್ಸ್ ಮೌಲ್ಯ (ಕೋಟಿಗಳಲ್ಲಿ)
2023	12,078	262	₹18.7
2024	6,960	56	₹16.27
2025	7,977	2,107	₹104.17



ಜಪ್ತಿ ಮಾಡಿರುವ ಮಾದಕವಸ್ತು

ಬೆಂಗಳೂರು: ನಗರದಲ್ಲಿ ಮಾದಕ ವಸ್ತುಗಳ ವಿರುದ್ಧ ನಿರಂತರ ಕಾರ್ಯಾಚರಣೆ ನಡೆಸುತ್ತಿರುವ ಪೊಲೀಸರು ಕಳೆದ ವರ್ಷ(2025) ₹104 ಕೋಟಿ ಮೌಲ್ಯದ ವಿವಿಧ ಮಾದಕ ವಸ್ತುಗಳನ್ನು ನಾಶ ಮಾಡಿದ್ದಾರೆ.

ಈ ಸಂಬಂಧ 6,824 ಪ್ರಕರಣಗಳನ್ನು ದಾಖಲಿಸಿ, 10,084 ಕೆ.ಜಿ ವಿವಿಧ ಮಾದಕ ವಸ್ತುಗಳನ್ನು ವಶಪಡಿಸಿಕೊಂಡು, ಆರೋಪಿಗಳನ್ನು ಬಂಧಿಸಿದ್ದಾರೆ.

ಎರಡು ವರ್ಷಗಳಲ್ಲಿ ಡ್ರಗ್ಸ್ ದಂಧೆಕೋರರ ಜೊತೆ ಶಾಮೀಲಾಗಿದ್ದ ಹಾಗೂ ಠಾಣಾ ವ್ಯಾಪ್ತಿಯಲ್ಲಿ ಡ್ರಗ್ಸ್ ಹಾವಳಿ ತಡೆಯಲು ವಿಫಲರಾದ ಆರೋಪದಡಿ 26 ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧವೂ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.

'ಮಾದಕ ವಸ್ತು ಮುಕ್ತ ಕರ್ನಾಟಕ' ಗುರಿ ಸಾಧಿಸಲು ಮುಂದಾಗಿರುವ ಪೊಲೀಸ್ ಇಲಾಖೆ ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದು, ನಾಲ್ಕು ವರ್ಷಗಳಲ್ಲಿ ಡ್ರಗ್ಸ್ ಮಾಫಿಯಾದಲ್ಲಿ ತೊಡಗಿದ್ದ 315 ವಿದೇಶಿ ಪೆಡ್ಲರ್‌ಗಳನ್ನು ಬಂಧಿಸಿದೆ. ಒಂದು ವರ್ಷದ ಅವಧಿಯಲ್ಲಿ ದಂಧೆಯಲ್ಲಿ ಭಾಗಿಯಾಗಿದ್ದ 200 ವಿದೇಶಿ ಪ್ರಜೆಗಳನ್ನು ಗಡಿಪಾರು ಮಾಡಲಾಗಿದೆ.

ಮಾದಕವಸ್ತು (ಡ್ರಗ್ಸ್) ಪೂರೈಕೆ, ಮಾರಾಟ ದಂಧೆಗೆ ಸಂಪೂರ್ಣ ಕಡಿವಾಣ ಹಾಕಲು 'ರಾಷ್ಟ್ರೀಯ ಮಾದಕವಸ್ತು ನಿಯಂತ್ರಣ ಘಟಕ'ದ (ಎನ್‌ಸಿಬಿ) ಮಾದರಿಯಲ್ಲಿಯೇ ರಾಜ್ಯದಲ್ಲೂ 'ಮಾದಕ ದ್ರವ್ಯ ವಿರೋಧಿ ಕಾರ್ಯಪಡೆ' (ಎಎನ್‌ಟಿಎಫ್) ಕಾರ್ಯನಿರ್ವಹಿಸುತ್ತಿದೆ.

ಗಾಂಜಾ, ಕೊಕೇನ್, ಎಂಡಿಎಂಎ ಮಾತ್ರೆ, ಎಕ್ಸ್‌ಟಿಸಿ ಟ್ಯಾಬ್ಲೆಟ್, ಸಿಂಥೆಟಿಕ್ ಡ್ರಗ್ಸ್, ಅಫೀಮು, ಬ್ರೌನ್ ಶುಗರ್ ಮತ್ತಿತರ ನಶೆ ಬರಿಸುವ ಮಾದಕವಸ್ತುಗಳನ್ನು ವಿದೇಶಿ ಪ್ರಜೆಗಳು ಮತ್ತು ಸ್ಥಳೀಯ ಡ್ರಗ್ಸ್ ಪೆಡ್ಲರ್‌ಗಳು ಸಂಗ್ರಹಿಸಿ ಮಾರಾಟ ಮಾಡುವ ವೇಳೆ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಆಫ್ರಿಕಾ ಮೂಲದವರು ಬಹುತೇಕ ಈ ಜಾಲದಲ್ಲಿ ತೊಡಗಿಸಿಕೊಂಡಿದ್ದಾರೆ.

ವಿದ್ಯಾರ್ಥಿ, ವ್ಯಾಪಾರ ಹಾಗೂ ಪ್ರವಾಸಿ ವೀಸಾಗಳಡಿ ನಗರಕ್ಕೆ ಬರುವ ವಿದೇಶಿಯರ ಪೈಕಿ ಕೆಲವರು ಗಡುವು ಮುಗಿದರೂ ತಮ್ಮ ದೇಶಕ್ಕೆ ತೆರಳದೆ ನಗರದಲ್ಲಿ ನೆಲೆಯೂರಿ ಡ್ರಗ್ಸ್ ದಂಧೆಯಲ್ಲಿ ಭಾಗಿಯಾಗುತ್ತಿದ್ದಾರೆ. ಬಂಧಿತರ ಪೈಕಿ ಬಹುತೇಕರು ನೈಜೀರಿಯಾ ಮೂಲದವರು ಎಂಬುದು ಪೊಲೀಸ್ ತನಿಖೆಯಲ್ಲಿ ಗೊತ್ತಾಗಿದೆ. ಹಾಸ್ಟೆಲ್, ಪಿ.ಜಿ, ಸ್ವಯಂ ಉದ್ಯೋಗ ಮಾಡಿಕೊಂಡು ವಾಸವಾಗಿರುವವರನ್ನು ಗುರಿಯಾಗಿಸಿಕೊಂಡು ಕೋಟ್ಯಂತರ ರೂಪಾಯಿ ಗಾಂಜಾ ಮಾರಾಟ ನಡೆಸಲಾಗುತ್ತಿದೆ.

'ಡಾರ್ಕ್ ನೆಟ್ ವೆಬ್‌ಸೈಟ್, ಅಂಚೆ ಪಾರ್ಸೆಲ್, ದೆಹಲಿ ಹಾಗೂ ಮುಂಬೈ ಮೂಲಗಳಿಂದ ಚಾಕೊಲೇಟ್, ಸೋಪು ಹಾಗೂ ಇನ್ನಿತರ ಪಾರ್ಸೆಲ್‌ಗಳಲ್ಲಿ ಡ್ರಗ್ಸ್ ತರಿಸಿಕೊಂಡು ಟೆಕಿಗಳು, ಸಾರ್ವಜನಿಕರು, ವಿದ್ಯಾರ್ಥಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ, ಬಂದ ಹಣದಲ್ಲಿ ವಿಲಾಸಿ ಜೀವನ ನಡೆಸುತ್ತಾರೆ. ಜೈಲಿಗೆ ಹೋಗಿ ಜಾಮೀನು ಪಡೆದು ಮತ್ತೆ ಅದೇ ಕೃತ್ಯದಲ್ಲಿ ಹಲವರು ಭಾಗಿಯಾಗುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

'ಹೊರ ರಾಜ್ಯಗಳಿಂದ ಕಡಿಮೆ ಬೆಲೆಗೆ ಡ್ರಗ್ಸ್ ತರಿಸಿಕೊಂಡು ಸಣ್ಣ ಪೊಟ್ಟಣಗಳಲ್ಲಿ ತುಂಬಿ ಹೆಚ್ಚಿನ ಬೆಲೆಗೆ ಪೆಡ್ಲರ್‌ಗಳು ಮಾರಾಟ ಮಾಡುತ್ತಾರೆ. ತ್ರಿಪುರ, ಬಿಹಾರ, ಆಂಧ್ರ ಪ್ರದೇಶ, ಒಡಿಶಾ ಗಡಿಭಾಗಗಳಲ್ಲಿ ಬೆಳೆದ ಗಾಂಜಾವನ್ನು ರೈಲು ಬಸ್‌ಗಳ ಮೂಲಕ ಪೊಲೀಸರ ಕಣ್ತಪ್ಪಿಸಿ ತರುತ್ತಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ಪೊಲೀಸರ ಕಣ್ಣು ತಪ್ಪಿಸಿ ಮಾದಕ ವಸ್ತು ಸಾಗಣೆ ಮತ್ತು ಮಾರಾಟ ನಡೆಯುತ್ತಿದೆ. ಮಾದಕ ವಸ್ತುಗಳ ಪೂರೈಕೆ ಪ್ರಮಾಣ ಹಾಗೂ ವ್ಯಸನಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ.

'ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ' (ಎನ್‌ಡಿಪಿಎಸ್) ಅಡಿ ದಾಖಲಾಗುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಎನ್‌ಡಿಪಿಎಸ್ ಕಾಯ್ದೆಯ ಅಡಿ 18,393 (2023ರಿಂದ 2026 ಜನವರಿ 15ರ ವರೆಗೆ) ಪ್ರಕರಣಗಳು ದಾಖಲಾಗಿವೆ. 2023ರಲ್ಲಿ 6,767, 2024ರಲ್ಲಿ 4,188, 2025ರಲ್ಲಿ 6,824 ಮತ್ತು 2026 ಜನವರಿ 15ರವರೆಗೆ 614 ಪ್ರಕರಣಗಳು ದಾಖಲಾಗಿವೆ.

ಡ್ರಗ್ಸ್ ದಂಧೆ ಮೇಲೆ ನಿಗಾ ವಹಿಸಲು ಮತ್ತು ಕಾರ್ಯಾಚರಣೆ ನಡೆಸಲು ಸಿಐಡಿಯಲ್ಲಿ ಮಾದಕ ವಸ್ತು ಮತ್ತು ಸಂಘಟಿತ ಅಪರಾಧ ವಿಭಾಗ ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದೆ.

ಜನವರಿಯಲ್ಲಿ ನಗರದ ಹೊರವಲಯದಲ್ಲಿ ಮೂರು ಡ್ರಗ್ಸ್ ತಯಾರಿಕಾ ಘಟಕಗಳನ್ನು ಮಹಾರಾಷ್ಟ್ರ ಪೊಲೀಸರು ಪತ್ತೆ ಹಚ್ಚಿದ್ದರು. ಬಳಿಕ ನಗರ ಪೊಲೀಸರು ಶೆಡ್‌ಗಳು, ಫ್ಯಾಕ್ಟರಿಗಳು, ಗೋದಾಮುಗಳು, ತೋಟದ ಮನೆಗಳಲ್ಲಿ ತಪಾಸಣೆ ನಡೆಸುವ ಕಾರ್ಯಾಚರಣೆಯನ್ನು ಆರಂಭಿಸಿದ್ದಾರೆ. ಆಯಾ ಠಾಣಾ ವ್ಯಾಪ್ತಿಯಲ್ಲಿ ಪ್ರತ್ಯೇಕ ಪೊಲೀಸ್ ತಂಡಗಳು ಕೂಂಬಿಂಗ್ ನಡೆಸುತ್ತಿವೆ.

ನಗರದಲ್ಲಿ ಡ್ರಗ್ಸ್ ಪೂರೈಕೆ ಮಾಡುವ ಪೆಡ್ಲರ್‌ಗಳ ವಿರುದ್ಧ ಪೊಲೀಸರು ನಿಗಾ ವಹಿಸಿದ್ದಾರೆ. ಡ್ರಗ್ಸ್ ಮಾರಾಟದಲ್ಲಿ ಜೈಲು ಸೇರಿ ಜಾಮೀನು ಪಡೆದು ಹೊರ ಬಂದಿರುವ ಪೆಡ್ಲರ್‌ಗಳ ಚಟುವಟಿಕೆ ಪರಿಶೀಲಿಸುತ್ತಿದ್ದಾರೆ. ಜೈಲಿಂದ ಬಂದ ಬಳಿಕ ಎಲ್ಲಿ ವಾಸವಿದ್ದಾರೆ? ಅವರ ಸಂಪರ್ಕದಲ್ಲಿ ಇರುವವರು ಯಾರು? ಎಂಬ ಮಾಹಿತಿ ಕಲೆಹಾಕುತ್ತಿದ್ದಾರೆ.

'ಮಾಹಿತಿ ನೀಡಿದವರ ಹೆಸರು ಗೋಪ್ಯ'

ಮಾದಕ ವಸ್ತು ಮಾರಾಟ ಮತ್ತು ಸೇವನೆ ಮಾಡುವವರ ಬಗ್ಗೆ ಮಾಹಿತಿ ನೀಡಲು ಸಹಾಯವಾಣಿ ಸಂಖ್ಯೆ 1903 ತೆರೆಯಲಾಗಿದೆ. ಮಾಹಿತಿ ನೀಡುವವರ ವಿವರಗಳನ್ನು ಗೋಪ್ಯವಾಗಿ ಇಡಲಾಗುವುದು.

ಎರಡು ವರ್ಷಗಳಲ್ಲಿ ಶಾಲಾ–ಕಾಲೇಜು ಆವರಣದಲ್ಲಿ ಗಾಂಜಾ, ಕೊಕೇನ್ ಮತ್ತಿತರ ಮಾದಕ ವಸ್ತುಗಳ ಮಾರಾಟ ತಡೆಗೆ ದಾಳಿಗಳನ್ನು ನಡೆಸಲಾಗಿದೆ. ಬೆಂಗಳೂರು ಜಿಲ್ಲೆಯಲ್ಲಿ ಎರಡು ಮತ್ತು ಕೊಡಗು ಜಿಲ್ಲೆಯಲ್ಲಿ ಒಂದು ಪ್ರಕರಣ ದಾಖಲಿಸಲಾಗಿದೆ.

ಶಾಲಾ–ಕಾಲೇಜು ಆವರಣದಲ್ಲಿ ನಿಷೇಧಿತ ಪದಾರ್ಥಗಳ ಮಾರಾಟ ತಡೆಯಲು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. 2024ರಲ್ಲಿ 14,716 ಮತ್ತು 2025ರಲ್ಲಿ 23,092 ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ ಎಂದು ಪೊಲೀಸರು ಹೇಳಿದರು.

ಅಪಾಯಕಾರಿ ರೀತಿ ಚಾಲನೆ ಚಾಲಕನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧಿ ರಸ್ತೆಯ ಅನಿಲ್ ಕುಂಬ್ಳೆ ವೃತ್ತದ ಬಳಿ ಶನಿವಾರ ಮುಂಜಾನೆ, ಅಪಾಯಕಾರಿಯಾಗಿ ಚಾಲನೆ ಮಾಡಿದ ಲ್ಯಾಂಬೋರ್ಗಿನಿ ಕಾರು ಚಾಲಕನ ವಿರುದ್ಧ ಪ್ರಕರಣ ದಾಖಲಾಗಿದೆ.

ಲ್ಯಾಂಬೋರ್ಗಿನಿ ಕಾರನ್ನು ಅನಿಲ್ ಕುಂಬ್ಳೆ ವೃತ್ತದ ಬಳಿ ಅಪಾಯಕಾರಿ ರೀತಿಯಲ್ಲಿ ಚಾಲನೆ ಮಾಡಲಾಗಿದೆ. ಇದನ್ನು ಸ್ಥಳೀಯರು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು. ಮಾಹಿತಿ ಆಧರಿಸಿ ಕಬ್ಬನ್ ಪಾರ್ಕ್ ಸಂಚಾರ ಠಾಣೆಯ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಿ.ಸಿ ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳ ಪರಿಶೀಲನೆ ವೇಳೆ ಕೆಎ–05 ಎನ್‌ಆರ್ 0009 ನಂಬರ್‌ನ ಲ್ಯಾಂಬೋರ್ಗಿನಿ ಕಾರು ಎಂಬುದು ಗೊತ್ತಾಗಿದೆ.

ಕಾರಿನ ಮಾಲೀಕರನ್ನು ಪತ್ತೆ ಮಾಡಲಾಗುತ್ತಿದ್ದು, ಅಜಾಗರೂಕತೆ ಹಾಗೂ ಅಪಾಯಕಾರಿ ಚಾಲನೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಬೆಳಗಿನ ಜಾವ 2ರಿಂದ 3ಗಂಟೆ ಸುಮಾರಿಗೆ ಕಾರನ್ನು ಅಪಾಯಕಾರಿ ರೀತಿಯಲ್ಲಿ ಚಾಲನೆ ಮಾಡಲಾಗಿದೆ. ಈ ಪ್ರಕರಣದ ಸಂಬಂಧ ಆರ್.ಸಿ ರದ್ದು ಮಾಡಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆದು ಶಿಫಾರಸು ಮಾಡಲಾಗುವುದು ಎಂದು ಪಶ್ಚಿಮ ವಿಭಾಗದ (ಸಂಚಾರ) ಡಿಸಿಪಿ ಸಾಹಿಲ್ ಬಾಗ್ಲಾ ತಿಳಿಸಿದರು.

ಎರಡು ಎಲ್‌ಪಿಜಿ ಸಿಲಿಂಡರ್ ಕಳ್ಳತನ: ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಗೂರು ಬಳಿಯ ಆರ್.ಸಿ. ಲೇಔಟ್‌ನ ವಿಶ್ವಪ್ರಿಯ ಅಪಾರ್ಟ್‌ಮೆಂಟ್ ಆವರಣದಲ್ಲಿ ಇಡಲಾಗಿದ್ದ ಎಲ್‌ಪಿಜಿ ಸಿಲಿಂಡರ್‌ಗಳ ಪೈಕಿ, ಎರಡು ಸಿಲಿಂಡರ್‌ಗಳನ್ನು ಕಳ್ಳರು ಕದ್ದೊಯ್ದಿದ್ದಾರೆ.

ಹೆಲ್ಮೆಟ್ ಧರಿಸಿಕೊಂಡು ಸ್ಕೂಟಿಯಲ್ಲಿ ಇಬ್ಬರು ಬಂದಿದ್ದರು. ಒಬ್ಬ ಹೊರಗೆ ನಿಂತಿದ್ದ. ಮತ್ತೊಬ್ಬ ಸ್ಕೂಟಿ ಸಹಿತ ಒಳಗೆ ಹೋಗಿ ಎರಡು ಸಿಲಿಂಡರ್‌ಗಳನ್ನು ಹೊರಕ್ಕೆ ತಂದಿದ್ದ. ಬಳಿಕ, ಇಬ್ಬರೂ ಸ್ಕೂಟಿಯಲ್ಲಿ ಸಿಲಿಂಡರ್‌ಗಳನ್ನು ಇಟ್ಟುಕೊಂಡು ಪರಾರಿ ಆಗಿದ್ದಾರೆ. ಕಳ್ಳರ ಕೃತ್ಯ ಅಪಾರ್ಟ್‌ಮೆಂಟ್ ಆವರಣದಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅಪಾರ್ಟ್‌ಮೆಂಟ್‌ನ ಮಾಲೀಕರು ನೀಡಿದ ದೂರಿನ ಮೇರೆಗೆ, ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡ್ರಗ್ಸ್ ಮಾರಾಟ ಬಂಧನ

ಕನಕಪುರ: ನಗರದ ಬೈಪಾಸ್ ರಸ್ತೆ ಮಹಾರಾಜರಕಟ್ಟೆ ರಸ್ತೆ ಬಳಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಮೂವರನ್ನು ಶುಕ್ರವಾರ ಪೊಲೀಸರು ಬಂಧಿಸಿದ್ದಾರೆ.

ನಗರದ ಮುಸ್ಲಿಂ ಬ್ಲಾಕ್ ಮತ್ತು ಕಾಲಕ ನಗರದ ನಿವಾಸಿಗಳಾದ ಮಹಮ್ಮದ್ ಹಸನ್ (20), ಮುಬಾರಕ್ ಪಾಷಾ (19), ಆಕಿಲ್ ಪಾಷಾ (21) ಬಂಧಿತರು.

ನಗರದ ಬೈಪಾಸ್ ರಸ್ತೆಯಲ್ಲಿರುವ ಕೃಷ್ಣಪ್ಪ ಮತ್ತು ನಾರಾಯಣಪ್ಪ ಅವರ ಜಮೀನಿನಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಡಿವೈಎಸ್‌ಪಿ ಗಿರಿ, ಸರ್ಕಲ್ ಇನ್‌ಸ್ಪೆಕ್ಟರ್ ಅನಂತ್ ರಾಮ್ ಮತ್ತು ಸಿಬ್ಬಂದಿ ದಾಳಿ ನಡೆಸಿದರು.

ದಾಳಿ ವೇಳೆ ಆರು ಮಂದಿ ಆರೋಪಿಗಳು ಡ್ರಗ್ಸ್ ಮಾರಾಟ ಮಾಡುತ್ತಿದ್ದು ಮೂವರು ಪರಾರಿಯಾಗಿದ್ದಾರೆ. ಮೂವರು ಸಿಕ್ಕಿಬಿದ್ದಿದ್ದಾರೆ. ಆರೋಪಿಗಳಿಂದ 14 ಗ್ರಾಂ ಮಾದಕ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಲಾರಿ ಚಕ್ರ ಹರಿದು ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಬೆಂಗಳೂರು ಉತ್ತರ ತಾಲ್ಲೂಕಿನ ಮಾದನಾಯಕನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಹನುಮಂತೇಗೌಡನ ಪಾಳ್ಯದಲ್ಲಿ ಲಾರಿಯ ಚಕ್ರ ಹರಿದು ನಾಲ್ಕು ವರ್ಷದ ಬಾಲಕಿ ಮೃತಪಟ್ಟಿದ್ದಾಳೆ.

ನಿಶಿಕಾ ಮೃತ ಬಾಲಕಿ. ತಾಯಿ ಜತೆಗೆ ದೇವಸ್ಥಾನಕ್ಕೆ ತೆರಳುತ್ತಿದ್ದ ವೇಳೆ ದುರ್ಘಟನೆ ಸಂಭವಿಸಿದೆ ಎಂದು ಮೂಲಗಳು ತಿಳಿಸಿವೆ.

ರಾಜೇಂದ್ರ– ಲಾವಣ್ಯಾ ದಂಪತಿ ಪುತ್ರಿ ನಿಶಿಕಾ, ಯುಗಾದಿ ಹಬ್ಬದ ಅಂಗವಾಗಿ ತಾಯಿ ಜತೆಗೆ ದೇವಸ್ಥಾನಕ್ಕೆ ತೆರಳುತ್ತಿದ್ದಳು.

ಲಾವಣ್ಯಾ ಅವರು ಎರಡನೇ ಮಗುವನ್ನು ಕಂಕಳಲ್ಲಿ, ಮೊದಲ ಮಗುವನ್ನು ಕೈಯಲ್ಲಿ ಹಿಡಿದು ತೆರಳುತ್ತಿದ್ದರು. ಹನುಮಂತೇಗೌಡನ ಪಾಳ್ಯದ ಬಳಿ, ವೇಗವಾಗಿ ಬಂದ ಕಂಟೈನರ್ ಲಾರಿ ಮೊದಲು ಬಾಲಕಿಗೆ ಡಿಕ್ಕಿಯಾಗಿದೆ. ಕೆಳಕ್ಕೆ ಬಿದ್ದ ಬಾಲಕಿಯ ಮೇಲೆಯೇ ಲಾರಿಯ ಚಕ್ರಗಳು ಹರಿದ ಪರಿಣಾಮ ಆಕೆ ಸ್ಥಳದಲ್ಲೇ ಮೃತಪಟ್ಟಿದ್ದಾಳೆ ಎಂದು ಪೊಲೀಸರು ಹೇಳಿದರು. ತಾಯಿ ಕಣ್ಣೆದುರೇ ದುರ್ಘಟನೆ ನಡೆದಿದೆ.

ಮಾದನಾಯಕನಹಳ್ಳಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ನೆಲಮಂಗಲ ಸರ್ಕಾರಿ ಆಸ್ಪತ್ರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಯಿತು ಎಂದು ಪೊಲೀಸರು ಹೇಳಿದರು.

ಡಕಾಯಿತಿ: ನಾಲ್ವರ ಸೆರೆ

ಬೆಂಗಳೂರು: ಆಟೊ ಚಾಲಕರನ್ನು ಗುರಿಯಾಗಿಸಿ ಡಕಾಯಿತಿ ನಡೆಸುತ್ತಿದ್ದ ನಾಲ್ವರನ್ನು ಹಲಸೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಲಸೂರಿನ ಎಂ.ವಿ ಗಾರ್ಡನ್ ನಿವಾಸಿಗಳಾದ ಚರಣ್(21), ರಾಜೇಶ್ ಅಲಿಯಾಸ್ ಇಡ್ಲಿ(20), ವಿಷ್ಣು(20) ಸೇರಿ ನಾಲ್ವರನ್ನು ಬಂಧಿಸಲಾಗಿದೆ.

ಮಾರ್ಚ್ 1ರಂದು ಹಲಸೂರು ಹಳೆ ಮದ್ರಾಸ್ ರಸ್ತೆ ಮತ್ತು ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದ ಬಳಿ ಇಬ್ಬರು ಆಟೊ ಚಾಲಕರನ್ನು ದರೋಡೆ ಮಾಡಿ ಹಣ, ಮೊಬೈಲ್, ಬೆಳ್ಳಿ ಸರವನ್ನು ಸುಲಿಗೆ ಮಾಡಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗಿತ್ತು ಎಂದು ಪೊಲೀಸರು ಮಾಹಿತಿ ನೀಡಿದರು.

ಐಷಾರಾಮಿ ಜೀವನ: ಕೆಲವು ತಿಂಗಳಿಂದ ವಾಹನ ಸವಾರರ ಅಡ್ಡಗಟ್ಟಿ ದರೋಡೆ ಮಾಡುತ್ತಿದ್ದರು ಎಂಬುದು ಆರೋಪಿಗಳ ವಿಚಾರಣೆಯಿಂದ ಗೊತ್ತಾಗಿದೆ. ಮಾದಕ ವಸ್ತು ಸೇವನೆ, ಮೋಜು–ಮಸ್ತಿಗಾಗಿ ಕೃತ್ಯ ಎಸಗುತ್ತಿದ್ದಾರೆ ಎಂದು ಪೊಲೀಸರು ಹೇಳಿದರು. ಹಲಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಐಪಿಎಲ್: ಟಿಕೆಟ್ ಖರೀದಿಸುವಾಗ ಎಚ್ಚರ

ಬೆಂಗಳೂರು: ಐಪಿಎಲ್ ಕ್ರಿಕೆಟ್ ಟೂರ್ನಿಯ ಪಂದ್ಯಾವಳಿ ವೀಕ್ಷಣೆಗೆ ಟಿಕೆಟ್ ಖರೀದಿಸುವ ಸಂದರ್ಭದಲ್ಲಿ ನಕಲಿ ಲಿಂಕ್‌ಗಳ ಬಗ್ಗೆ ಕ್ರಿಕೆಟ್ ಪ್ರೇಮಿಗಳು ಎಚ್ಚರ ವಹಿಸುವಂತೆ ಈಶಾನ್ಯ ವಿಭಾಗದ ಪೊಲೀಸರು ಮನವಿ ಮಾಡಿದ್ದಾರೆ.

'ಐಪಿಎಲ್ ಟೂರ್ನಿ ಸದ್ಯದಲ್ಲೇ ಆರಂಭ ಆಗಲಿದೆ. ಈ ಸಂದರ್ಭದಲ್ಲಿ ಟಿಕೆಟ್ ಖರೀದಿಸುವಾಗ ವಂಚನೆಗಳೂ ನಡೆಯುವ ಸಾಧ್ಯತೆಯಿದೆ. ನಕಲಿ ಲಿಂಕ್‌ಗಳು ಅಥವಾ ಕೊನೆ ಕ್ಷಣದ ವ್ಯವಹಾರದ ವಂಚನೆಗಳ ಜಾಲಕ್ಕೆ ಬೀಳದಿರಿ. ಐಪಿಎಲ್ ಟಿಕೆಟ್‌ಗಳನ್ನು ಕೇವಲ ಅಧಿಕೃತ ಸ್ಥಳ ಅಥವಾ ವೆಬ್‌ಸೈಟ್ ಮೂಲಕವೇ ಪಡೆದುಕೊಳ್ಳಿ. ನೀವು ಹಣ ಪಾವತಿಸುವ ಮುನ್ನ ಪರಿಶೀಲಿಸಿಕೊಳ್ಳಿ. ತುರ್ತು ಸಂದರ್ಭಗಳಲ್ಲಿ 112 ಸಂಖ್ಯೆಗೆ ಕರೆ ಮಾಡಿ, ದೂರು ಸಲ್ಲಿಸಿ' ಎಂದು 'ಎಕ್ಸ್' ಖಾತೆಯಲ್ಲಿ ಈಶಾನ್ಯ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ವಾಟ್ಸ್‌ಆ್ಯಪ್ ಡಿಪಿಯಲ್ಲಿ ಡಿ.ಸಿ ಭಾವಚಿತ್ರ ಬಳಕೆ
ಜಿಲ್ಲಾಧಿಕಾರಿ ಹೆಸರಲ್ಲಿ ಹಣಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಜಿಲ್ಲಾಧಿಕಾರಿ ಕೆ.ಎನ್. ಅನುರಾಧಾ ಅವರ ಹೆಸರು ಮತ್ತು ಭಾವಚಿತ್ರವನ್ನು ದುರುಪಯೋಗ ಪಡಿಸಿಕೊಂಡು ವಾಟ್ಸ್‌ಆ್ಯಪ್ ಮೂಲಕ ಹಣ ಕೇಳಿದ ವಂಚನೆ ಪ್ರಕರಣ ಬೆಳಕಿಗೆ ಬಂದಿದೆ.

ನೆಲಮಂಗಲ ತಾಲ್ಲೂಕಿನ ದೊಡ್ಡೇರಿ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯ ಪ್ರಾಂಶುಪಾಲರಿಗೆ ಅಪರಿಚಿತ ವ್ಯಕ್ತಿ, ಜಿಲ್ಲಾಧಿಕಾರಿ ಹೆಸರಿನಲ್ಲಿ, ಅವರ ಭಾವಚಿತ್ರವನ್ನು ಡಿಪಿಯಾಗಿ ಬಳಸಿಕೊಂಡು ಸಂದೇಶ ಕಳುಹಿಸಿ ವೈಯಕ್ತಿಕ ಅಗತ್ಯಕ್ಕಾಗಿ ₹50,000 ಹಣವನ್ನು ವರ್ಗಾವಣೆ ಮಾಡಲು ಕೇಳಿದ್ದಾರೆ.

ತನ್ನ ನೆಟ್ ಬ್ಯಾಂಕಿಂಗ್ ಸೇವೆ ನಿಷ್ಕ್ರಿಯವಾಗಿರುವುದಾಗಿ ತಿಳಿಸಿ, ಬ್ಯಾಂಕ್ ಆಫ್ ಮಹಾರಾಷ್ಟ್ರದ ಖಾತೆಗೆ ಹಣ ಜಮಾ ಮಾಡುವಂತೆ ಮನವಿ ಮಾಡಿದ್ದಾರೆ.

ಈ ಸಂದೇಶದ ಬಗ್ಗೆ ಅನುಮಾನಗೊಂಡ ಪ್ರಾಂಶುಪಾಲರು ಹಣ ಪಾವತಿಸದೆ, ಜಿಲ್ಲಾಧಿಕಾರಿ ಕಚೇರಿಗೆ ಮಾಹಿತಿ ನೀಡಿದ್ದಾರೆ.

ಈ ಕುರಿತು ಜಿಲ್ಲಾಧಿಕಾರಿ ಕಚೇರಿಯ ಸಿಬ್ಬಂದಿ ವಿಶ್ವನಾಥಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ದೂರಿನ ಆಧಾರದ ಮೇಲೆ ಪೊಲೀಸರು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66(ಡಿ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಮೂರು ಮನೆಗಳಲ್ಲಿ ಕಳ್ಳತನ

ಅಪರಾಧ ಸುದ್ದಿ

ದೇವನಹಳ್ಳಿ ತಾಲ್ಲೂಕಿನ ಕಸಬಾ ಹೋಬಳಿಯ ಆವತಿ ಗ್ರಾಮದಲ್ಲಿ ಮಾಸ್ಕ್ ಧರಿಸಿದ ಕಳ್ಳರ ಗ್ಯಾಂಗ್ ಒಂದೇ ದಿನ ಮೂರು ಮನೆಗಳಲ್ಲಿ ಕಳ್ಳತನ ನಡೆಸಿದೆ.

ಕಳ್ಳರು ಮುಖಕ್ಕೆ ಮಾಸ್ಕ್ ಹಾಕಿಕೊಂಡು ಎರಡು ತಂಡಗಳಾಗಿ ಬಂದು, ಮನೆಗಳಿಗೆ ನುಗ್ಗಿ ಕೃತ್ಯ ಎಸಗಿದ್ದಾರೆ.

ಒಂದು ಮನೆಯಲ್ಲಿ ಸುಮಾರು ₹50 ಸಾವಿರ ನಗದು ದೋಚಿರುವುದಲ್ಲದೆ, ಇನ್ನೆರಡು ಮನೆಗಳಲ್ಲಿ ಚಿನ್ನಾಭರಣ ಕಳವು ಮಾಡಿರುವುದು ತಿಳಿದುಬಂದಿದೆ.

ಕೈಯಲ್ಲಿ ಕಬ್ಬಿಣದ ಸಲಾಕೆ ಮತ್ತು ಚಾಕು ಹಿಡಿದು ಗ್ರಾಮದಲ್ಲಿ ಸಂಚರಿಸಿರುವ ಕಳ್ಳರ ಚಟುವಟಿಕೆ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕಳ್ಳರ ದಾಳಿ ಬಳಿಕ ಗ್ರಾಮಸ್ಥರಲ್ಲಿ ಭೀತಿ ಆವರಿಸಿದ್ದು, ರಾತ್ರಿ ವೇಳೆ ಹೊರಗೆ ಹೋಗಲು ಸಹ ಜನರು ಹೆದರುತ್ತಿದ್ದಾರೆ.

ವಿಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಜಾನುವಾರು ಸಾಗಣೆ: ಗಲಾಟೆಯಲ್ಲಿ ಐವರಿಗೆ ಗಾಯ

ಪ್ರಜಾವಾಣಿ ವಾರ್ತೆ

ತಿಪಟೂರು: ತಾಲ್ಲೂಕಿನ ಕೆರೆಗೋಡಿ ರಸ್ತೆ ಬಸವನಪುರದ ಬಳಿ ಶನಿವಾರ ಅಕ್ರಮವಾಗಿ ಜಾನುವಾರು ಸಾಗಾಟದ ವಿಚಾರವಾಗಿ ನಡೆದ ಗಲಾಟೆಯಲ್ಲಿ ಬಜರಂಗದಳದ ಕಾರ್ಯಕರ್ತರು ಗಾಯಗೊಂಡಿದ್ದಾರೆ.

ಹಾಸನ ಜಿಲ್ಲೆಯ ಚನ್ನಾಪುರದಿಂದ ಹಸುಗಳನ್ನು ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಆಧರಿಸಿ ಬಜರಂಗದಳದ ಕಾರ್ಯಕರ್ತರು ವಾಹನ ತಪಾಸಣೆ ಮಾಡಲು ಮುಂದಾದಾಗ ಈ ಘಟನೆ ನಡೆದಿದೆ.

ಗುಂಪೊಂದು ಏಕಾಏಕಿ ಹಲ್ಲೆ ಮಾಡಿದೆ ಎಂದು ಬಜರಂಗದಳದ ಕಾರ್ಯಕರ್ತರು ಆರೋಪಿಸಿದ್ದಾರೆ. ಸಂಘಟನೆಯ ಗೌತಮ್, ಆನಂದ್, ಶ್ರೇಯಸ್, ಸಚಿನ್ ಹಾಗೂ ಪ್ರಜ್ವಲ್ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ.

ನೂರಾರು ಕಾರ್ಯಕರ್ತರು ಆಸ್ಪತ್ರೆ ಬಳಿ ಸೇರಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ನಗರದ ಡಿವೈಎಸ್‌ಪಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

'ದಾಳಿ ನಡೆಸಿದವರು ಯಾರೇ ಆಗಲಿ ಅವರನ್ನು ತಕ್ಷಣ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು. ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಲ್ಲಿದ್ದರೂ ಅಕ್ರಮ ಗೋಸಾಗಣೆ ಹಾಗೂ ಹತ್ಯೆ ನಡೆಯುತ್ತಿದೆ. ತಡೆಯಲು ಹೋದ ಕಾರ್ಯಕರ್ತರ ಮೇಲೆಯೇ ಪ್ರಕರಣ ದಾಖಲಾಗುತ್ತಿದೆ' ಎಂದು ಬಿಜೆಪಿ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಗಂಗರಾಜು, ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತ ಬಾಳೇಕಾಯಿ ನಟರಾಜು, ನಗರಸಭೆ ಮಾಜಿ ಸದಸ್ಯರಾದ ಮಹಾಲಕ್ಷ್ಮಿ, ಆಕ್ರೋಶ ವ್ಯಕ್ತಪಡಿಸಿದರು.

ತಿಪಟೂರಿನ ಡಿವೈಎಸ್‌ಪಿ ಕಚೇರಿ ಎದುರು ಪ್ರತಿಭಟನೆ ನಡೆಯಿತು

ಮಾವಿನತೋಪಿನ ಕಟ್ಟಡ ವಿವಾದ

ನಗರಸಭೆಯ 5ನೇ ವಾರ್ಡ್‌ನ ಮಾವಿನತೋಪಿನಲ್ಲಿ ಅಂಜುಮನ್ ಶಾಲೆಗೆ ನೀಡಲಾಗಿದ್ದ ಸ್ಥಳದಲ್ಲಿ ಅಕ್ರಮವಾಗಿ ಮಸೀದಿ ನಿರ್ಮಿಸಲಾಗಿದೆ ಎಂಬ ಸ್ಥಳೀಯರ ಆರೋಪದ ಮೇರೆಗೆ ಶುಕ್ರವಾರ ರಾತ್ರಿ ಎರಡು ಸಮುದಾಯಗಳ ನಡುವೆ ವಾಗ್ವಾದ ನಡೆಯಿತು.

ಶನಿವಾರ ಬೆಳಿಗ್ಗೆ ಕೆಲ ಸಂಘಟನೆಗಳ ಕಾರ್ಯಕರ್ತರು ಯಾವುದೇ ಕಾರಣಕ್ಕೂ ಇಲ್ಲಿ ಮಸೀದಿ ನಿರ್ಮಾಣವಾಗಬಾರದು ಎಂದು ಪಟ್ಟು ಹಿಡಿದ ಪರಿಣಾಮ ಪರಿಸ್ಥಿತಿ ಬಿಗಡಾಯಿಸಿತು. ಪೊಲೀಸರು ಭೇಟಿ ನೀಡಿ ಪರಿಸ್ಥಿತಿ ತಿಳಿಗೊಳಿಸಿದರು. ಸ್ಥಳದಲ್ಲಿ ಪೊಲೀಸ್ ಭದ್ರತೆ ಒದಗಿಸಲಾಗಿದೆ.

ಮಾವಿನತೋಪಿನಲ್ಲಿರುವ 12x20 ಅಳತೆಯ ಜಾಗವನ್ನು 2004ರಲ್ಲಿ ಅಂಜುಮನ್ ಶಾಲೆಗೆ ನೀಡಲಾಗಿತ್ತು ಎನ್ನುವುದು ಸ್ಥಳೀಯರ ವಾದ.

ಮುಂಬೈ ರೇಸ್
ಮಾರ್ಕೆಟ್ ಕಿಂಗ್ ಗೆಲ್ಲುವ ನಿರೀಕ್ಷೆ

ಸೇಠ್ ರಾಮನಾಥ್ ಡಾಗ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಾರ್ಕೆಟ್ ಕಿಂಗ್ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 5:00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ವಿಲ್ಲಾನೆಲ್ 3, ಅಜೂರ್ 2, ಎನ್‌ಸ್ಕಿ 5
2ನೇ ರೇಸ್: ಎಂಡ್ಯೂರೆನ್ಸ್ 2, ಗೋಲ್ಡನ್ ಡ್ಯಾನ್ಸರ್ 3, ಕಿಮಿಕೊ 4
3ನೇ ರೇಸ್: ಟಾಜಿರಿ 9, ಜುರಾಕನ್ 3, ಜೈಂಟ್ ಗೋಲ್ಡ್ 5
4ನೇ ರೇಸ್: ಮಾರ್ಕೆಟ್ ಕಿಂಗ್ 1, ಐರಿಶ್ ಗೋಲ್ಡ್ 4, ಅಲ್ಟಿಮೊ 5
5ನೇ ರೇಸ್: ಮಿನಿಸ್ಟ್ರಿ ಆಫ್ ಟೈಮ್ 1, ಅಶ್ವ ಅಂಕಾರ 5, ಸಸೆಕಾ 6
6ನೇ ರೇಸ್: ಹೆವೆನ್ಸ್ ರಿದ್ಮ್ 2, ಮುಲಾನ್ 11, ಮೆಷಿಯಾವೆಲ್ಲಿಯನ್ 5

ಉತ್ತಮ ಬೆಟ್: ಎಂಡ್ಯೂರೆನ್ಸ್

ಜಾಕ್‌ಪಾಟ್‌ಗೆ	ಟ್ರಿಬಲ್
2,3,4,5,6	3,4,5

ಜಾಗತಿಕ ಪಟ್ಟಿಯಲ್ಲಿ 48ನೇ ಸ್ಥಾನದಿಂದ 41ನೇ ಸ್ಥಾನಕ್ಕೆ ಏರಿಕೆ
ಕೆಐಎ: ಮೂರನೇ ಬಾರಿ ಜಾಗತಿಕ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎ) ಸತತ ಮೂರನೇ ಬಾರಿಗೆ 'ಭಾರತ ಮತ್ತು ದಕ್ಷಿಣ ಏಷ್ಯಾದ ಅತ್ಯುತ್ತಮ ಪ್ರಾದೇಶಿಕ ವಿಮಾನ ನಿಲ್ದಾಣ' ಪ್ರಶಸ್ತಿಗೆ ಭಾಜನವಾಗಿದೆ.

ಇದರೊಂದಿಗೆ ಜಾಗತಿಕ 50 ಅಗ್ರ ಶ್ರೇಯಾಂಕದ ವಿಮಾನ ನಿಲ್ದಾಣಗಳ ಪಟ್ಟಿಯಲ್ಲಿ 48ನೇ ಸ್ಥಾನದಿಂದ 41ನೇ ಸ್ಥಾನಕ್ಕೆ ಏರಿದೆ.

ಲಂಡನ್‌ನಲ್ಲಿ ನಡೆದ ಸ್ಕೈಟ್ರಾಕ್ಸ್ ವರ್ಲ್ಡ್ ಏರ್‌ಪೋರ್ಟ್ ಅವಾರ್ಡ್ಸ್ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಚೆಕ್ ಇನ್, ಭದ್ರತೆ, ವಲಸೆ, ಆಗಮನ, ನಿರ್ಗಮನ ಸೇರಿದಂತೆ ವಿವಿಧ ಸೇವೆಗಳಲ್ಲಿ ಪ್ರಯಾಣಿಕರಿಗೆ ಉತ್ತಮ ಸೌಲಭ್ಯ ಒದಗಿಸಿರುವುದನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ.

ಸ್ಕೈಟ್ರಾಕ್ಸ್‌ನಿಂದ 'ಫೈವ್ ಸ್ಟಾರ್' ರೇಟಿಂಗ್ ಪಡೆದ ದೇಶದ ಮೊದಲ ಟರ್ಮಿನಲ್ ಎಂಬ ಹೆಗ್ಗಳಿಕೆಗೆ ಕೆಐಎ ಟರ್ಮಿನಲ್–2 ಪಾತ್ರವಾಗಿದೆ. ಜೊತೆಗೆ, 'ವಿಶ್ವದ ಅತ್ಯುತ್ತಮ ಆಗಮನ ಸೌಲಭ್ಯದ ವಿಮಾನ ನಿಲ್ದಾಣ' ಪ್ರಶಸ್ತಿಯನ್ನು ನಾಲ್ಕನೇ ಬಾರಿ ಪಡೆದಿದೆ. ಇಂಗಾಲ ಮಾನ್ಯತೆ ಕಾರ್ಯಕ್ರಮದ ಅಡಿ 5ನೇ ಹಂತ ಮತ್ತು ಪ್ರವೇಶ ಸಾಧ್ಯತೆ ಮಾನ್ಯತೆಯಲ್ಲಿ 3ನೇ ಹಂತ ತಲುಪಿದೆ.

ಲಂಡನ್‌ನಲ್ಲಿ ನಡೆದ ಸ್ಕೈಟ್ರಾಕ್ಸ್ ವರ್ಲ್ಡ್ ಏರ್‌ಪೋರ್ಟ್ ಅವಾರ್ಡ್ಸ್ ಸಮಾರಂಭದಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ತಂಡಕ್ಕೆ 'ಭಾರತ ಮತ್ತು ದಕ್ಷಿಣ ಏಷ್ಯಾದ ಅತ್ಯುತ್ತಮ ಪ್ರಾದೇಶಿಕ ವಿಮಾನ ನಿಲ್ದಾಣ' ಪ್ರಶಸ್ತಿ ನೀಡಲಾಯಿತು.

4.38 ಕೋಟಿ ಪ್ರಯಾಣಿಕರಿಗೆ ಸೇವೆ

ಕೆಐಎ 2025ರಲ್ಲಿ 4.38 ಕೋಟಿ ಪ್ರಯಾಣಿಕರಿಗೆ ಸೇವೆ ನೀಡಿದ್ದು, 5.20 ಲಕ್ಷ ಟನ್ ಸರಕು ಸಾಗಣೆ ನಡೆಸಿದೆ. ದಕ್ಷಿಣ ಭಾರತದ ಪ್ರಮುಖ ವಿಮಾನ ನಿಲ್ದಾಣವಾಗಿರುವ ಕೆಐಎ, ಪ್ರಯಾಣಿಕ ಮತ್ತು ಸರಕು ಸಾಗಣೆಯಲ್ಲಿ ನಿರಂತರ ಬೆಳವಣಿಗೆ ಸಾಧಿಸುತ್ತಿದೆ.

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತದ (ಬಿಐಎಎಲ್) ನಿರ್ವಹಣೆಯಲ್ಲಿರುವ ಈ ವಿಮಾನ ನಿಲ್ದಾಣ, ಮೂಲಸೌಕರ್ಯ ವಿಸ್ತರಣೆ ಮತ್ತು ಸಂಪರ್ಕ ಜಾಲ ಹೆಚ್ಚಿಸುವ ಮೂಲಕ ಭವಿಷ್ಯದಲ್ಲೂ ಪ್ರಮುಖ ಹಬ್ ಆಗಿ ಬೆಳೆದುಬರುವ ನಿರೀಕ್ಷೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

> **ಸತತ ಮೂರನೇ ವರ್ಷ ಈ ಪ್ರಶಸ್ತಿ ಗೆಲ್ಲುವುದು ದೊಡ್ಡ ಸಾಧನೆ. ಟರ್ಮಿನಲ್–2 ಈ ವಿಮಾನ ನಿಲ್ದಾಣದ ಖ್ಯಾತಿಯನ್ನು ಹೆಚ್ಚಿಸಿದೆ**
> **ಎಡ್ವರ್ಡ್ ಪ್ಲಾಸ್ಟೆಡ್**, ಸ್ಕೈಟ್ರಾಕ್ಸ್ ಸಿಇಒ

> **ಈ ಪ್ರಶಸ್ತಿ ನಮ್ಮ ತಂಡದ ಸಾಮೂಹಿಕ ಪ್ರಯತ್ನಕ್ಕೆ ದೊರೆತ ಗೌರವ. ಪ್ರಯಾಣಿಕರಿಗೆ ಉತ್ತಮ ಸೇವೆ ನೀಡುವ ದಿಸೆಯಲ್ಲಿ ನಾವು ಬದ್ಧರಾಗಿದ್ದೇವೆ**
> **ಹರಿ ಮರಾರ್**, ಕೆಐಎ ಸಿಇಒ

ನೀರಾನೆ ದಾಳಿ: ಮೃತ ಪಶುವೈದ್ಯೆ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಬನ್ನೇರುಘಟ್ಟ (ಆನೇಕಲ್): ಶಿವಮೊಗ್ಗದ ತ್ಯಾವರೆಕೊಪ್ಪ ಹುಲಿ, ಸಿಂಹಧಾಮದಲ್ಲಿ ಚಿಕಿತ್ಸೆ ನೀಡಲು ಹೋದಾಗ ನೀರಾನೆ ದಾಳಿಯಿಂದ ಶುಕ್ರವಾರ ಮೃತಪಟ್ಟ ಪಶುವೈದ್ಯೆ ಡಾ.ಸಮೀಕ್ಷಾ ರೆಡ್ಡಿ ಅವರ ಅಂತ್ಯಕ್ರಿಯೆ ಸ್ವಗ್ರಾಮ ತಾಲ್ಲೂಕಿನ ಬನ್ನೇರುಘಟ್ಟ ಸಮೀಪದ ಸಕಲವಾರದಲ್ಲಿ ಶನಿವಾರ ನಡೆಯಿತು.



ಡಾ. ಸಮೀಕ್ಷಾ ರೆಡ್ಡಿ

ಸಮೀಕ್ಷಾ ರೆಡ್ಡಿ ಪಾರ್ಥಿವ ಶರೀರ ಗ್ರಾಮಕ್ಕೆ ಬಂದಾಗ ಪೋಷಕರು ಮತ್ತು ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು.

ಗ್ರಾಮದಲ್ಲಿ ನೀರವ ಮೌನ ಕಂಡು ಬಂದಿತು. ಗ್ರಾಮಸ್ಥರು, ಅರಣ್ಯ ಇಲಾಖೆ ಅಧಿಕಾರಿಗಳು ಅಂತಿಮ ನಮನ ಸಲ್ಲಿಸಿದರು.

ಆನೇಕಲ್ ತಾಲ್ಲೂಕಿನ ಸಕಲವಾರದಲ್ಲಿ ಪಶುವೈದ್ಯೆ ಸಮೀಕ್ಷಾ ರೆಡ್ಡಿ ಅವರ ಮೃತದೇಹಕ್ಕೆ ಅರಣ್ಯ ಇಲಾಖೆಯ ಅಧಿಕಾರಿಯೊಬ್ಬರು ಗೌರವ ಸಲ್ಲಿಸಿದರು

ಏಕೈಕ ಪುತ್ರಿಯನ್ನು ಕಳೆದುಕೊಂಡ ಪೋಷಕರಾದ ಧ್ರುವಕುಮಾರ್ ಮತ್ತು ಶೈಲಜಾ ದಂಪತಿ ಶೋಕಸಾಗರದಲ್ಲಿ ಮುಳಗಿದ್ದರು.

ಪ್ರಾಣಿ, ಪಕ್ಷಿಗಳೆಂದರೆ ಬಾಲ್ಯದಿಂದಲೂ ಅವಳಿಗೆ ಪಂಚಪ್ರಾಣ. ಹಟ ಹಿಡಿದು ಪಶುವೈದ್ಯಳಾಗಿದ್ದಳು. ಅತ್ಯಂತ ಇಷ್ಟಪಟ್ಟು ಪಶು ವೈದ್ಯಕೀಯ ಕೋರ್ಸ್ ಮುಗಿಸಿ ಸಂಭ್ರಮದಿಂದಲೇ ವೃತ್ತಿ ಆರಂಭಿಸಿದ್ದಳು ಎಂದು ಸಂಬಂಧಿಕರು ಕಣ್ಣೀರಾದರು.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ಅರಣ್ಯ ವಲಯ
ನವಿಲುಗಳ ಸಂತತಿ ಕ್ಷೀಣ; ಮೂಡಿದ ಅನುಮಾನ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಜ್ಞಾನ ಭಾರತಿ ಅರಣ್ಯ ವಲಯದಲ್ಲಿ ನವಿಲುಗಳ ಸಂಖ್ಯೆ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ ಎಂದು ವಾಯುವಿಹಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

'ಕೆಲವು ತಿಂಗಳಿಂದ ಬಯೋಪಾರ್ಕ್ ವ್ಯಾಪ್ತಿಯಲ್ಲಿ ನವಿಲುಗಳ ಓಡಾಟ ವಿರಳವಾಗಿದೆ. ಅವುಗಳ ಸಂತತಿ ಕ್ಷೀಣಿಸುತ್ತಿರುವ ಅನುಮಾನ ಮೂಡುತ್ತಿದೆ. ನಾಯಿ ದಾಳಿಗೆ ಸಿಲುಕಿ ನವಿಲುಗಳು ಸತ್ತಿರುವ ಪ್ರಕರಣಗಳೂ ನಡೆದಿವೆ. ಕಳೆದ ಶನಿವಾರ, ನಾಯಿಗಳ ದಾಳಿಗೆ ಗಂಡು ನವಿಲೊಂದು ಅಸು ನೀಗಿತ್ತು. ಯಾವುದೇ ಗಾಯದ ಕುರುಹು ಇಲ್ಲದ ನವಿಲಿನ ಕಳೇಬರ ಕೂಡ ಮಾರ್ಚ್ 16ರಂದು ದೊರಕಿದ್ದು, ಹಲವು ಅನುಮಾನಗಳನ್ನು ಸೃಷ್ಟಿಸಿದೆ' ಎಂದು ಲೋಕೋಪಯೋಗಿ ಇಲಾಖೆಯ ನಿವೃತ್ತ ಎಂಜಿನಿಯರ್ ಡಿ.ಕೆ. ಪುಟ್ಟಸ್ವಾಮಿ ಹೇಳಿದರು.

ನವಿಲಿನ ಮೃತದೇಹ

ಪುಟ್ಟಸ್ವಾಮಿ

'ನಗರದ 'ಆಮ್ಲಜನಕದ ಆಗರ' ಎಂದೇ ಹೆಸರಾಗಿರುವ ಜ್ಞಾನಭಾರತಿ ಜೈವಿಕ ಉದ್ಯಾನ, ನವಿಲುಗಳ ಆವಾಸ ಸ್ಥಾನವಾಗಿದೆ. ನೂರಾರು ನವಿಲುಗಳು ಈ ಅರಣ್ಯ ವಲಯದಲ್ಲಿ ಕಾಣಸಿಗುತ್ತವೆ. ಒಂದು ಅಂದಾಜಿನ ಪ್ರಕಾರ ಜ್ಞಾನಭಾರತಿ ಆವರಣದಲ್ಲಿ 250ಕ್ಕೂ ಹೆಚ್ಚು ನವಿಲುಗಳಿದ್ದವು. ಅವುಗಳ ಸಮರ್ಪಕ ಆಹಾರ ನಿರ್ವಹಣೆಗಾಗಿ ಪ್ರತಿದಿನ 20 ಕೆ. ಜಿ.ಗೋಧಿ ಹಾಗೂ ನೀರಿನ ವ್ಯವಸ್ಥೆ ಕೂಡ ಮಾಡಲಾಗುತ್ತಿದೆ. ವಾಹನ ಓಡಾಟ ನಿರ್ಬಂಧಿಸಲಾಗಿದೆ. ಆದರೂ ನವಿಲುಗಳ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿದೆ. ಈ ಬಗ್ಗೆ ವಿಶ್ವವಿದ್ಯಾಲಯ ಹಾಗೂ ಅರಣ್ಯ ಇಲಾಖೆ ಗಂಭೀರವಾಗಿ ಪರಿಗಣಿಸಬೇಕು' ಎಂದರು.

'ನಗರ ಪಾಲಿಕೆಗಳು ಶಸ್ತ್ರಚಿಕಿತ್ಸೆ ನಡೆಸಿದ ಕೆಲವು ನಾಯಿಗಳನ್ನು ಇಲ್ಲಿ ಬಿಟ್ಟ ಬಳಿಕ ನವಿಲುಗಳ ಸಂಖ್ಯೆಯೇ ಕಡಿಮೆಯಾಗಿದೆ. ನಾಯಿಗಳು ನವಿಲುಗಳನ್ನು ಕೊಂದು ತಿನ್ನುತ್ತಿವೆ' ಎಂದು ವಾಯುವಿಹಾರಿ ವೆಂಕಟೇಶ್ ದೂರಿದರು.



ವೆಂಕಟೇಶ್

ವಿಶ್ವವಿದ್ಯಾಲಯದ ನಿವೃತ್ತ ಉಪನ್ಯಾಸಕ ಪ್ರೊ.ರೇಣುಕಾ ಪ್ರಸಾದ್ ಮಾತನಾಡಿ, 'ನವಿಲುಗಳ ಸಾವು ಹಾಗೂ ಸಂತತಿ ಇಳಿಕೆಗೆ ನಿಖರ ಕಾರಣ ತಿಳಿದುಬಂದಿಲ್ಲ. ನಾಯಿಗಳಿಂದ ಕಾಡಿನಲ್ಲಿರುವ ನರಿ, ಕಾಡು ಮೊಲದ ಸಂತತಿಗೂ ಧಕ್ಕೆ ಬರುವ ಸಾಧ್ಯತೆಯಿದೆ' ಎಂದು ಆತಂಕ ವ್ಯಕ್ತಪಡಿಸಿದರು.

'ವಿ.ವಿ ಆವರಣದಲ್ಲಿ 180ಕ್ಕೂ ಹೆಚ್ಚು ಪಕ್ಷಿ ಸಂಕುಲವಿದೆ. ಸಸ್ಯ ಸಂಕುಲದೊಂದಿಗೆ ಪ್ರಾಣಿ ಪಕ್ಷಿ ಸಂಕುಲದ ರಕ್ಷಣೆಗೂ ಆದ್ಯತೆ ಸಿಗಬೇಕು. ಆಗ ಮಾತ್ರ ಜೀವ ವೈವಿಧ್ಯತೆ ಉಳಿಯಲು ಸಾಧ್ಯ' ಎಂದರು.

ಸಾಯುತ್ತಿರುವ ಜೀವ ನದಿಗಳು!

ಕೊಪ್ಪಳ ಜಿಲ್ಲೆ ಹುಲಿಗಿಯ ಹುಲಿಗೆಮ್ಮ ದೇವಿ ದೇವಸ್ಥಾನದ ತುಂಗಭದ್ರಾ ನದಿಯಲ್ಲಿ ಬಿಸಾಡಿರುವ ವಸ್ತುಗಳಿಂದ ನದಿ ಚರಂಡಿಯಂತಾಗಿರುವುದು

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಒಂದನೇ ಪುಟದಿಂದ...

ಕೈಗಾರಿಕೆ, ಕೃಷಿ ಹಾಗೂ ಮಾನವ ತ್ಯಾಜ್ಯದಿಂದ ಆ ನದಿಗಳಲ್ಲಿನ ಜಲಚರಗಳಿಗೆ ಆಪತ್ತು ಎದುರಾಗಿದೆ ಎಂಬ ಮಂಡಳಿಯ ವರದಿ ಹಿನ್ನೆಲೆಯಲ್ಲಿ ರಾಜ್ಯದ ಜೀವನಾಡಿಗಳ ಸ್ಥಿತಿಗತಿಯ ವಾಸ್ತವ ಚಿತ್ರಣವನ್ನು 'ಪ್ರಜಾವಾಣಿ' ಬಿಚ್ಚಿಟ್ಟಿದೆ.

ನೇರ ನದಿಗೆ ಮಾನವ ತ್ಯಾಜ್ಯ!: 'ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿ.ಬಿ.ಎ) ಸೇರಿದಂತೆ ರಾಜ್ಯದ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಟ್ಟು 184 ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು (ಎಸ್‌ಟಿಪಿ) ಇವೆ. ನಿತ್ಯ 4,158 ದಶಲಕ್ಷ ಲೀಟರ್ ಕೊಳಚೆ ನೀರು (ಎಂಎಲ್‌ಡಿ) ಉತ್ಪತ್ತಿಯಾಗುತ್ತಿದ್ದು, 2,370 ಎಂಎಲ್‌ಡಿಯಷ್ಟು ತ್ಯಾಜ್ಯ ನೀರನ್ನು ಸಂಸ್ಕರಿಸಲಾಗುತ್ತಿದೆ. ಉಳಿದ 1,788 ಎಂಎಲ್‌ಡಿ ಕೊಳಚೆ ನೀರು ಸಂಸ್ಕರಣೆಯಾಗುತ್ತಿಲ್ಲ. ಈ ಕೊಳಚೆ ನೀರು ನೇರ ನದಿಗಳನ್ನು ಸೇರುತ್ತಿದೆ ಎಂದು ಮಂಡಳಿಯ ಅಂಕಿ ಅಂಶ ಹೇಳುತ್ತದೆ.

ಅದಕ್ಕೆ ಪೂರಕ ಎಂಬಂತೆ ಇಲ್ಲಿನ ತಾವರೆ ಚಟ್ನಳ್ಳಿ ಬಳಿ ಶಿವಮೊಗ್ಗ ಮಹಾನಗರ ಪಾಲಿಕೆ ಪ್ರತಿ ದಿನ 34 ದಶಲಕ್ಷ ಲೀಟರ್ ಸಾಮರ್ಥ್ಯದ ಕೊಳಚೆ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ಸ್ಥಾಪಿಸಿದೆ. ಅದಕ್ಕೆ ಒಳಚರಂಡಿ ಸಂಪರ್ಕ ಸರಿಯಾಗಿಲ್ಲದೇ ಕೇವಲ 11 ದಶಲಕ್ಷ ಲೀಟರ್ ತ್ಯಾಜ್ಯ ನೀರು ಮಾತ್ರ ಎಸ್‌ಟಿಪಿಗೆ ಬರುತ್ತಿದೆ. ಉಳಿದ 23 ದಶಲಕ್ಷ ಲೀಟರ್ ಕೊಳಚೆ ತುಂಗಾರ್ಪಣವಾಗುತ್ತಿದೆ.

ಮಲೆನಾಡಿನ ಪ್ರಮುಖ ಧಾರ್ಮಿಕ ಕೇಂದ್ರ ಶೃಂಗೇರಿಗೆ 2024ರಲ್ಲಿ 98 ಲಕ್ಷ ಯಾತ್ರಾರ್ಥಿಗಳು ಭೇಟಿ ನೀಡಿದ್ದಾರೆ. ಅವರು ಉಳಿದುಕೊಂಡಿದ್ದ ಸ್ಥಳದಿಂದ ಮಾನವ ತ್ಯಾಜ್ಯ ನೇರವಾಗಿ ನದಿಯ ಒಡಲು ಸೇರಿದೆ ಎಂದು ಶಿವಮೊಗ್ಗದ ನಿರ್ಮಲ ತುಂಗಭದ್ರಾ ಅಭಿಯಾನದ ಸದಸ್ಯ ತ್ಯಾಗರಾಜ ಮಿತ್ಯಾಂತ ಮಾಲಿನ್ಯದ ಗಂಭೀರತೆಬಿಚ್ಚಿಡುತ್ತಾರೆ.

ಮಾಲಿನ್ಯ; ಅಧ್ಯಯನ ಸಮಿತಿ ನಿಷ್ಕ್ರಿಯ..

ನಟ ಅನಿರುದ್ಧ ಜತಕರ್ ಮನವಿ ಮೇರೆಗೆ ತುಂಗಾ ನದಿಯನ್ನು ಮಾಲಿನ್ಯ ಮುಕ್ತಗೊಳಿಸಲು ಅಧ್ಯಯನಕ್ಕೆಂದು ಐಐಎಂ ಹಾಗೂ ಐಐಎಸ್ಸಿ ತಜ್ಞರನ್ನೊಳಗೊಂಡ ಸಮಿತಿಯನ್ನು ರಾಜ್ಯ ಸರ್ಕಾರ 2024ರ ಆಗಸ್ಟ್ 8ರಂದು ನೇಮಿಸಿದೆ. ಸಮಿತಿ ಎರಡು ಬಾರಿ ಸಭೆ ನಡೆಸಿದ್ದು ಬಿಟ್ಟರೆ ಬೇರೆ ಯಾವುದೇ ಬೆಳವಣಿಗೆ ನಡೆದಿಲ್ಲ. ಅದು ನಿಷ್ಕ್ರಿಯಗೊಂಡಿದೆ.

ಕಲ್ಯಾಣ ಕರ್ನಾಟಕದಲ್ಲಿ ನದಿಗಳ ಒಡಲಿಗೆ ಸಕ್ಕರೆ ಮತ್ತು ಸಿಮೆಂಟ್ ಕಾರ್ಖಾನೆಗಳ ವಿಷಕಾರಿ ತ್ಯಾಜ್ಯ ನೇರವಾಗಿ ಸೇರುತ್ತಿದ್ದರೂ ಅದನ್ನು ತಡೆಯಬೇಕಿದ್ದ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಬರೀ ನೋಟಿಸ್ ಕೊಡಲು ಸೀಮಿತವಾಗಿದೆ.

630 ಕಿ.ಮೀ ಪಾದಯಾತ್ರೆ: ತುಂಗಭದ್ರಾ ನದಿಯ ಮಾಲಿನ್ಯ ತಪ್ಪಿಸಲು ಜನಜಾಗೃತಿಗೆ ಶಿವಮೊಗ್ಗದ ಪರಿಸರಾಸಕ್ತರು ಸೇರಿ ಅಭಿಯಾನ (ನಿರ್ಮಲ ತುಂಗಭದ್ರಾ) ನಡೆಸಿದ್ದಾರೆ. ಈ ತಂಡ ನದಿ ಪಾತ್ರದ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಿಂದ ಮಂತ್ರಾಲಯದವರೆಗೆ 630 ಕಿ.ಮೀ ಹಾದಿಯಲ್ಲಿ ಪಾದಯಾತ್ರೆ ನಡೆಸಿ ವರದಿ ಸಿದ್ಧಪಡಿಸಿದೆ.

'ಒಳಚರಂಡಿ ವ್ಯವಸ್ಥೆ, ಎಸ್‌ಟಿಪಿ ಏನೂ ಇಲ್ಲದ ಶೃಂಗೇರಿಯಿಂದಲೇ ತುಂಗಾ ನದಿಯ ಮಾಲಿನ್ಯ ಶುರುವಾಗುತ್ತದೆ. ಹರಿಹರದ ಬಳಿ ಕೈಗಾರಿಕೆಗಳಿಂದ, ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆ, ಗಂಗಾವತಿ, ಸಿರಗುಪ್ಪ ಬಳಿ ಅಪಾಯಕಾರಿ ಕೀಟನಾಶಕಗಳ ಒಳಗೊಂಡ ಕೃಷಿ ತ್ಯಾಜ್ಯದಿಂದ ತುಂಗಭದ್ರಾ ಮಲಿನವಾಗುತ್ತಿದೆ' ಎಂದು ಅಭಿಯಾನದ ಸಂಚಾಲಕ ಪ್ರೊ.ಬಿ.ಎಂ.ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸುತ್ತಾರೆ.

ಒಳಚರಂಡಿ ನೀರು ಸೇರುತ್ತಿರುವುದರಿಂದ ನೇತ್ರಾವತಿ ನದಿಯ ನೀರಿನಲ್ಲಿ ತುಂಬೆ ಬಳಿ ಪ್ರತಿ 100 ಮಿಲಿ ಗ್ರಾಂ ನೀರಿನಲ್ಲಿ 140 ಎಂಪಿಎನ್ (ಮೋಸ್ಟ್ ಪ್ರೊಟಬಲ್ ನಂಬರ್) ಹಾಗೂ ಉಪ್ಪಿನಂಗಡಿ ಬಳಿ 110 ಎಂಪಿಎನ್‌ಗಳಷ್ಟು ಕೊಲಿಫಾರ್ಮ್ ಬ್ಯಾಕ್ಟೀರಿಯಾ ಕಂಡುಬಂದಿವೆ. ಮಲದಲ್ಲಿ ಕಂಡುಬರುವ ಕೋಲಿಫಾರ್ಮ್‌ಗಳೂ ತುಂಬೆಯ ಬಳಿಯ ನೀರಿನಲ್ಲಿ 13 ಎಂಪಿಎನ್ ಹಾಗೂ ಉಪ್ಪಿನಂಗಡಿ ಬಳಿ 10 ಎಂಪಿಎನ್‌ಗಳಷ್ಟು ಕಂಡುಬಂದಿದೆ. ಇದೇ ಕಾರಣದಿಂದ ನೇತ್ರಾವತಿ ನದಿಯ ನೀರು ಕುಡಿಯಲು ಯೋಗ್ಯವಲ್ಲ ಎಂದು ವರ್ಗೀಕರಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯ ಕೊಳಚೆ ನೀರು ನೇರವಾಗಿ ಕಾಳಿ ನದಿಗೆ ಸೇರುತ್ತಿದೆ. ಕೊಳಚೆ ನೀರು ಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಹೀಗಾಗಿ ನದಿ ನೀರನ್ನು ಶುದ್ಧೀಕರಿಸಿ ಬಳಸಲು ಜನರಿಗೆ ಸೂಚಿಸ ಲಾಗುತ್ತಿದೆ' ಎನ್ನುತ್ತಾರೆ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ಬಿ.ಕೆ.ಸಂತೋಷ್.

ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದ ಕೃಷ್ಣಾ– ಮಲಪ್ರಭಾ ನದಿ ಸಂಗಮ ಸ್ಥಾನದಲ್ಲಿ ಕಂಡುಬಂದ ಹರಕಲು ಬಟ್ಟೆಗಳ ರಾಶಿ

ಬೆಂಗಳೂರಿನಲ್ಲಿ ಹುಟ್ಟುವ ವೃಷಭಾವತಿ ನದಿ ಇಂದು ರಾಜಧಾನಿಯ ಜನರ ಕೊಳಕನ್ನು ಕೊಂಡೊಯ್ಯುವ ದೊಡ್ಡ ಮೋರಿ ಆಗಿದೆ. ಬಸವನಗುಡಿಯ ದೊಡ್ಡ ಬಸವಣ್ಣ ದೇವಸ್ಥಾನ, ಮಲ್ಲೇಶ್ವರದಲ್ಲಿರುವ ಕಾಡು ಮಲ್ಲೇಶ್ವರ ದೇವಸ್ಥಾನದ ನಂದಿ ತೀರ್ಥದ ಕೇಂದ್ರಗಳೇ ವೃಷಭಾವತಿ ನದಿಯ ನೀರಿನ ಮೂಲಗಳು. ವೃಷಭಾವತಿ, ಕನಕಪುರದಲ್ಲಿ ಸುವರ್ಣಮುಖಿ ನದಿ ಜೊತೆಗೂಡಿ ನಂತರ ಅರ್ಕಾವತಿಯನ್ನು ಸೇರುತ್ತದೆ. 52 ಕಿ.ಮೀ ಹರಿಯುವ ವೃಷಭಾವತಿಯಲ್ಲಿ ಇಂತಹ ತ್ಯಾಜ್ಯ ಇಲ್ಲ ಎಂದು ಹೇಳಲು ಸಾಧ್ಯವಿಲ್ಲ. ಎಲ್ಲಾ ರೀತಿಯ ವಿಷಕಾರಕ ಅಂಶಗಳು ಈ ನೀರಿನಲ್ಲಿದೆ.

ಬಿಬಿಎಂಪಿಯ 'ಬ್ರ್ಯಾಂಡ್ ಬೆಂಗಳೂರು' ಉಪ ಕ್ರಮದಲ್ಲಿ ವೃಷಭಾವತಿ ನದಿ ಶುಚಿಗೊಳಿಸುವುದಾಗಿಯೂ ಹೇಳಲಾಗಿತ್ತು. ಅದೆಲ್ಲ ಘೋಷಣೆಯಾಗಿಯೇ ಉಳಿದಿದೆ. ನದಿಯ ನೀರಿನ ಗುಣಮಟ್ಟದ ಮೇಲೆ ನಿಗಾವಹಿಸಿ, ಅದನ್ನು ದಾಖಲು ಮಾಡುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೀಡಿದ್ದ ಆದೇಶವೂ ಕಾಗದದಲ್ಲಿಯೇ ಉಳಿದಿದೆ.

ಕಾರ್ಖಾನೆ ತ್ಯಾಜ್ಯವೂ ನೇರವಾಗಿ ನದಿಗೆ..

ಕಲಬುರಗಿ ಜಿಲ್ಲೆಯ ಸೇಡಂ, ಚಿತ್ತಾಪುರ, ಶಹಾಬಾದ್ ತಾಲ್ಲೂಕುಗಳಲ್ಲಿರುವ ಎಂಟು ಸಿಮೆಂಟ್ ಕಾರ್ಖಾನೆಗಳು ಕಾಗಿಣಾ ನದಿಗೆ ಕಲುಷಿತ ನೀರು ಬಿಡುತ್ತಿವೆ. ಅಫಜಲಪುರ, ಆಳಂದ ತಾಲ್ಲೂಕಿನಲ್ಲಿ ಸಕ್ಕರೆ ಕಾರ್ಖಾನೆಗಳ ತ್ಯಾಜ್ಯ ಭೀಮೆಯ ಒಡಲು ಸೇರುತ್ತಿದ್ದು, ಜನರಿಗೆ ಶುದ್ಧ ಕುಡಿಯುವ ನೀರು ಮರೀಚಿಕೆಯಾಗಿದೆ.

ಬೆಳಗಾವಿ ಜಿಲ್ಲೆಯ ಎಂ.ಕೆ.ಹುಬ್ಬಳ್ಳಿ ಬಳಿ ಮಲಪ್ರಭಾ ನದಿ ದಡದಲ್ಲಿ ಜನ ಎಸೆದುಹೋದ ವ್ಯರ್ಥ ವಸ್ತುಗಳು

'ಮಾಲಿನ್ಯ ನಿಯಂತ್ರಣ ನಿಯಮ ಇಲ್ಲಿ ಪಾಲನೆಯಾಗುವುದೇ ಇಲ್ಲ. ಸಿಮೆಂಟ್ ಕಾರ್ಖಾನೆಗಳ ಹಿತ ಕಾಪಾಡಲು ಪರ್ಯಾಯ ವ್ಯವಸ್ಥೆಯೇ ಬೆಳೆದುನಿಂತಿದೆ. ನಮ್ಮ ಹೋರಾಟ ಅರಣ್ಯರೋದನವಾಗಿದೆ. ಇದರ ಬಗ್ಗೆ ಈಚೆಗೆ ದೆಹಲಿಗೆ ತೆರಳಿ ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರು ನೀಡಿದ್ದೇನೆ' ಎಂದು ಮಳಖೇಡ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಉಮೇಶ ಚವ್ಹಾಣ ಹೇಳುತ್ತಾರೆ.

ಕೊಪ್ಪಳ ಜಿಲ್ಲೆಯಲ್ಲಿ ತುಂಗಭದ್ರಾ ನದಿಯ ಹಿನ್ನೀರು ಭಾಗದಲ್ಲಿ ಕಾರ್ಖಾನೆಗಳ ಕಲುಷಿತ ನೀರು ಸೇರುತ್ತಿದ್ದು, ಜೀವಜಲಕ್ಕೆ ಕಂಟಕವಾಗಿದೆ. ಅಚ್ಚರಿಯ ಸಂಗತಿ ಎಂದರೆ, ಜಿಲ್ಲಾ ಕೇಂದ್ರ ಯಾದಗಿರಿ ನಗರದಲ್ಲಿ ಒಳಚರಂಡಿ ಜಾಲ ಇಲ್ಲದೇ ತ್ಯಾಜ್ಯ ನೀರು ನೇರ ಭೀಮಾ ನದಿ ಒಡಲಿಗೆ ಹೋಗುತ್ತಿದೆ.

ಅರ್ಕಾವತಿ: ನೀರೊಳಗೆ ಕೈ ಇಡಲು ಸಾಧ್ಯವಿಲ್ಲ!

ಅರ್ಕಾವತಿ ನದಿಗೆ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಬೆಟ್ಟ ಉಗಮ ಸ್ಥಾನ. ರಾಜಧಾನಿ ಬೆಂಗಳೂರಿಗೆ ಮೊದಲ ಬಾರಿಗೆ ಕುಡಿಯುವ ನೀರು ಕೊಟ್ಟ ನದಿ ಎಂಬ ಶ್ರೇಯ ಹೊಂದಿರುವ ಅರ್ಕಾವತಿ ನದಿಯ ಹರಿವಿನ ಕೆಲ ಭಾಗಗಳಲ್ಲಿ ಇಂದು ಕೈ ಇಡಲೂ ಸಾಧ್ಯವಿಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ.

ಪೀಣ್ಯ, ದೊಡ್ಡಬಳ್ಳಾಪುರ ಮತ್ತು ಬಿಡದಿ ಕೈಗಾರಿಕಾ ವಲಯಗಳ ರಾಸಾಯನಿಕ ತ್ಯಾಜ್ಯ ಸಂಸ್ಕರಣೆಗೊಳ್ಳದೆ ನೇರವಾಗಿ ನದಿಯ ಒಡಲು ಸೇರುತ್ತಿವೆ. ಹೀಗಾಗಿ ಕ್ರೋಮಿಯಂ, ಪಾದರಸ ಮತ್ತು ಸೀಸದಂತಹ ವಿಷಕಾರಿ ಲೋಹಗಳು ಅಪಾಯಕಾರಿ ಮಟ್ಟದಲ್ಲಿವೆ. ಅರ್ಕಾವತಿ ನದಿ ನೀರನ್ನು ಅವಲಂಬಿಸಿ, ಕನಕಪುರ ಮತ್ತು ರಾಮನಗರ ಭಾಗದಲ್ಲಿ ಬೆಳೆಯಲಾಗುವ ರೇಷ್ಮೆ ಮತ್ತು ತರಕಾರಿಯಲ್ಲಿ ವಿಷ ತುಂಬಿಕೊಳ್ಳುತ್ತಿದೆ. ಇದು ಕೃಷಿಕರ ಆರ್ಥಿಕ ಸ್ಥಿತಿಗೆ ತೀವ್ರ ಹೊಡೆತ ಕೊಟ್ಟಿದೆ. ಈ ಭಾಗದ ತರಕಾರಿಯನ್ನು ಬಳಸುವ ಬೆಂಗಳೂರು ಸೇರಿದಂತೆ ಸ್ಥಳೀಯರ ಆರೋಗ್ಯದ ಮೇಲೂ ಕೆಟ್ಟ ಪರಿಣಾಮ ಬೀರುತ್ತಿದೆ. ಈ ನದಿ ಹರಿಯುವ ದಡದ ಹಳ್ಳಿಗಳ ಕೊಳವೆಬಾವಿಗಳ ನೀರು ಸಹ ಕುಡಿಯಲು ಯೋಗ್ಯವಾಗಿಲ್ಲ. ಅರೆಸಂಸ್ಕರಿತ ಬೆಂಗಳೂರಿನ ಕೊಳಚೆ ನೀರನ್ನೇ ಕೋಲಾರ, ಚಿಕ್ಕಬಳ್ಳಾಪುರದ ಕೆರೆಗಳಿಗೆ ಹರಿಸಲಾಗುತ್ತಿದೆ.

ಪೂರಕ ಮಾಹಿತಿ: ಪ್ರವೀಣ್ ಕುಮಾರ್ ಪಿ.ವಿ., ಮನೋಜ್‌ಕುಮಾರ್ ಗುದ್ದಿ, ಸಿದ್ದು ಆರ್.ಜಿ.ಹಳ್ಳಿ, ಸಂತೋಷ ಚಿನಗುಡಿ, ಆರ್.ಮಂಜುನಾಥ

ನದಿಗಳ ಮಾಲಿನ್ಯಕ್ಕೂ 'ಮಹಾ'ಕೊಡುಗೆ

ಬೆಳಗಾವಿ ಜಿಲ್ಲೆಯಲ್ಲಿ ಹರಿವ ಕೃಷ್ಣಾ ಹಾಗೂ ಉಪನದಿಗಳಾದ ವೇದಗಂಗಾ, ಪಂಚಗಂಗಾ ಕಲುಷಿತವಾಗಲು ಮಹಾರಾಷ್ಟ್ರದ ತ್ಯಾಜ್ಯವೇ ಕಾರಣ. ಮಹಾರಾಷ್ಟ್ರದಲ್ಲಿ ಪಂಚಗಂಗಾ ನದಿ ತೀರದಲ್ಲಿ ನಾಲ್ಕು ಸಕ್ಕರೆ ಕಾರ್ಖಾನೆಗಳಿಗೂ ಹಾಗೂ ಒಂದು ನೂಲಿನ ಕಾರ್ಖಾನೆಗೂ ನದಿ ನೀರನ್ನೇ ಬಳಸಿಕೊಂಡು, ತ್ಯಾಜ್ಯವನ್ನು ಮತ್ತೆ ಅಲ್ಲಿಗೆ ಬಿಡಲಾಗುತ್ತಿದೆ. ಪಂಚಗಂಗಾ ನದಿ ಇಚಲಕರಂಜಿ ಭಾಗದಲ್ಲಿ ಕೃಷ್ಣಾ ನದಿಯನ್ನು ಸಂಧಿಸುತ್ತದೆ. ಅಲ್ಲಿಂದ ಕೃಷ್ಣೆಯ ಒಡಲೂ ಕಲುಷಿತಗೊಂಡಿದೆ.

ಇಚಲಕರಂಜಿ ಪ್ರದೇಶದಲ್ಲಿ ಇರುವ ನೂಲಿನ ಮಿಲ್‌ಗಳಲ್ಲಿ ಬಳಸಲಾಗುವ ಅಪಾಯಕಾರಿ ಬಣ್ಣಗಳ ತ್ಯಾಜ್ಯವು ಕೃಷ್ಣೆ ಹಾಗೂ ದೂಧಗಂಗಾ ನದಿಗೆ ಹರಿದುಬರುತ್ತಿದೆ. ಬೆಳಗಾವಿ ಜಿಲ್ಲೆಯಲ್ಲೇ 30 ಸಕ್ಕರೆ ಕಾರ್ಖಾನೆಗಳಿವೆ. ಎಲ್ಲವೂ ನದಿ ನೀರನ್ನೇ ಅವಲಂಬಿಸಿವೆ. ಕೆಲವು ಕಾರ್ಖಾನೆಗಳು ಕದ್ದು– ಮುಚ್ಚಿ ರಾತ್ರಿ ವೇಳೆ ನದಿಗಳಿಗೆ ತ್ಯಾಜ್ಯ ಹರಿಸುತ್ತಿವೆ.

ಬೆಳಗಾವಿ ಜಿಲ್ಲೆಯ ಖಾನಾಪುರ, ಎಂ.ಕೆ.ಹುಬ್ಬಳ್ಳಿ, ರಾಮದುರ್ಗ ಪಟ್ಟಣಗಳ ತ್ಯಾಜ್ಯವನ್ನು ನೇರವಾಗಿ ಮಲಪ್ರಭಾ ನದಿಗೇ ಬಿಡಲಾಗುತ್ತಿದೆ. ಎಂ.ಕೆ. ಹುಬ್ಬಳ್ಳಿಯಲ್ಲಿ ಪುಣ್ಯಸ್ನಾನ, ಅಂತ್ಯಕ್ರಿಯೆ, ಧಾರ್ಮಿಕ ಕಾರ್ಯಕ್ರಮಗಳ ಕಾರಣ ಮಲಪ್ರಭಾ ನದಿ ದಡದಲ್ಲಿ ಮೂಳೆ ತುಂಡು, ಸುಟ್ಟ ದೇಹಗಳ ಬೂದಿ, ಸ್ನಾನ ಮಾಡಿ ಎಸೆದುಹೋದವರ ಬಟ್ಟೆಗಳು ಕಾಣಸಿಗುತ್ತವೆ.

ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದ ಕೃಷ್ಣಾ ಹಾಗೂ ಮಲಪ್ರಭಾ ನದಿಗಳ ಸಂಗಮ ಸ್ಥಳದಲ್ಲಿ ಪುಣ್ಯಸ್ನಾನಕ್ಕೆ ಬರುವ ಭಕ್ತರು ಹಳೆಯ ಬಟ್ಟೆಗಳನ್ನು ನದಿಯಲ್ಲೇ ಬಿಟ್ಟು ಹೋಗುತ್ತಾರೆ. ವಿಜಯಪುರ ಜಿಲ್ಲೆಯ ಯಲಗೂರ ಆಂಜನೇಯ ಹಾಗೂ ಚಂದ್ರಮ್ಮದೇವಿ ದೇವಸ್ಥಾನಕ್ಕೆ ಪ್ರತಿ ಅಮಾವಾಸ್ಯೆ, ಹುಣ್ಣಿಮೆಯಂದು ಸಾವಿರಾರು ಭಕ್ತರು ಭೇಟಿ ನೀಡಿ, ಮಡಿಸ್ನಾನ ಮಾಡಿ ಬಿಸಾಕುವ ಬಟ್ಟೆಗಳು ಕೃಷ್ಣಾ ನದಿಯ ಒಡಲು ಸೇರುತ್ತಿವೆ.

> **ಕಾವೇರಿ ನದಿ ಒಡಲಿಗೆ ಕೊಳಚೆ ನೀರು ನೇರವಾಗಿ ಸೇರುತ್ತಿದೆ. ಶ್ರೀರಂಗಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ ರೂಪಿಸಿದ್ದರೂ ಮಲಿನ ನೀರು ನದಿಗೆ ಸೇರುವುದು ತಪ್ಪಿಲ್ಲ. ನದಿ ಚರಂಡಿಯಂತಾಗಿದೆ. ನದಿಯಲ್ಲಿ ಸ್ನಾನ ಮಾಡುವುದನ್ನೇ ನಿಲ್ಲಿಸಿದ್ದೇನೆ**
>
> **ಗಣೇಶಸ್ವರೂಪಾನಂದಗಿರಿ,** ಗಂಜಾಂ ಆದಿ ಶಂಕರ ಮಠದ ಸ್ವಾಮಿ, ಶ್ರೀರಂಗಪಟ್ಟಣ

> **ಅರ್ಕಾವತಿ ನದಿ ಪುನಶ್ಚೇತನ ವಿಚಾರದಲ್ಲಿ ಸರ್ಕಾರಕ್ಕೆ ಇಚ್ಛಾಶಕ್ತಿಯೇ ಇಲ್ಲ. ಕೈಗಾರಿಕೆಗಳ ತ್ಯಾಜ್ಯ ನದಿಗೆ ಕಣ್ಣೆದುರೇ ಸೇರುತ್ತಿದ್ದರೂ ಅದನ್ನು ತಡೆಯಲು ಸ್ಥಳೀಯ ಸಂಸ್ಥೆಗಳು ಮುಂದಾಗುತ್ತಿಲ್ಲ. ನದಿಯನ್ನು ಮಾಲಿನ್ಯ ಮುಕ್ತಗೊಳಿಸುವ ಬದ್ಧತೆ ಯಾರಲ್ಲೂ ಕಾಣಿಸುತ್ತಿಲ್ಲ**
>
> **ಆರ್.ಆಂಜನೇಯರೆಡ್ಡಿ,** ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ

> **ಶೃಂಗೇರಿಯಿಂದ ಮಂತ್ರಾಲಯದವರೆಗಿನ 630 ಕಿ.ಮೀ ವ್ಯಾಪ್ತಿಯಲ್ಲಿ ಎಲ್ಲಿಯೂ ಚರಂಡಿ ನೀರನ್ನು ಸ್ವಚ್ಛಗೊಳಿಸಿ ತುಂಗಭದ್ರಾ ನದಿಗೆ ಬಿಡುವ ಸಾಮಾನ್ಯ ಕೆಲಸವೂ ಆಗಿಲ್ಲ. ಇದು ನದಿಯ ಅವಸ್ಥೆಗೆ ಹಿಡಿದ ಕೈಗನ್ನಡಿ**
>
> **ಪ್ರೊ.ಬಿ.ಎಂ.ಕುಮಾರಸ್ವಾಮಿ,** ನಿರ್ಮಲ ತುಂಗಭದ್ರಾ ಅಭಿಯಾನದ ಸಂಚಾಲಕ, ಶಿವಮೊಗ್ಗ

> **ಕಲಬುರಗಿ ಜಿಲ್ಲೆಯಲ್ಲಿರುವ ಎಂಟೂ ಸಿಮೆಂಟ್ ಕಾರ್ಖಾನೆಗಳು ಸುರಕ್ಷಾ ನಿಯಮಗಳನ್ನು ಪಾಲಿಸಲು ವಿಫಲವಾಗಿವೆ. ಪರಿಶೀಲನೆ ನಡೆಸಿ ಅಷ್ಟೂ ಕಾರ್ಖಾನೆಗಳನ್ನು ಮುಚ್ಚಲು ಶಿಫಾರಸು ಮಾಡಿ ಕೇಂದ್ರ ಕಚೇರಿಗೆ ವರದಿ ಸಲ್ಲಿಸಿದ್ದು, ಅಲ್ಲಿಯೇ ಅಂತಿಮ ತೀರ್ಮಾನ ಕೈಗೊಳ್ಳಬೇಕು**
>
> **ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿ,** ಕಲಬುರಗಿ

> **ರಾಜ್ಯದಲ್ಲಿರುವ ನದಿಗಳಿಗೆ ಯಾವ ರೀತಿಯ ಮಾಲಿನ್ಯ ಸೇರುತ್ತಿದೆ ಎಂಬುದನ್ನು ಪರಿಗಣಿಸಿ, ಆಯ್ದ ಸ್ಥಳಗಳಲ್ಲಿ ನದಿ ನೀರು ಗುಣಮಟ್ಟ ತಪಾಸಣೆ ಘಟಕಗಳನ್ನು ಅಳವಡಿಸಲಾಗುತ್ತದೆ. ಅದರ ವರದಿಯನ್ವಯ ಮಾಲಿನ್ಯ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲು ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲಾಗುತ್ತದೆ**
>
> **ಪಿ.ಎಂ. ನರೇಂದ್ರಸ್ವಾಮಿ,** ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ

ಅಸ್ಥಿ ವಿಸರ್ಜನೆಯಿಂದ ಕಾವೇರಿ ಕಲುಷಿತ!

ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಬ್ರಿಡ್ಜ್ ಬಳಿ ಕಾವೇರಿ ನದಿಯ ಒಡಲು ಸೇರುತ್ತಿರುವ ಒಳಚರಂಡಿಯ ಕೊಳಚೆ ನೀರು

ಅವೈಜ್ಞಾನಿಕವಾಗಿ ಅಸ್ಥಿ ವಿಸರ್ಜನೆ ಮಾಡುವುದರಿಂದ ನದಿಗಳು ಕಲುಷಿತಗೊಳ್ಳುತ್ತಿವೆ. ಹೀಗಾಗಿ ಕಾವೇರಿ ನದಿ ಪಾತ್ರದಲ್ಲಿ ವೈಜ್ಞಾನಿಕ ರೀತಿಯಲ್ಲಿ ಧಾರ್ಮಿಕ ವಿಧಿ ವಿಧಾನಗಳ ಆಚರಣೆ ಹಾಗೂ ಅಸ್ಥಿಯ ಜೊತೆಗೆ ಬಟ್ಟೆ ಮತ್ತು ಪೂಜಾ ಸಾಮಗ್ರಿಗಳನ್ನು ನದಿಗೆ ಎಸೆಯುವುದು ತಡೆಯಲು ಕಟ್ಟುನಿಟ್ಟಿನ ಕ್ರಮಕ್ಕೆ ಜಿಲ್ಲಾಧಿಕಾರಿ ಕುಮಾರ ಸ್ಥಳೀಯ ಸಂಸ್ಥೆ ಮುಖ್ಯಸ್ಥರಿಗೆ ಸೂಚನೆ ನೀಡಿದ್ದಾರೆ.

ಕಾವೇರಿ ನದಿಯಲ್ಲಿ ಅಸ್ಥಿ ವಿಸರ್ಜನೆಗೆ ಪಶ್ಚಿಮವಾಹಿನಿ, ಸ್ನಾನಘಟ್ಟ, ಗೋಸಾಯಿ ಘಾಟ್ ಮತ್ತು ಸಂಗಮ ಸ್ಥಳಗಳಲ್ಲಿ ಅಸ್ಥಿ ವಿಸರ್ಜನೆ ಪ್ರಕ್ರಿಯೆ ವ್ಯವಸ್ಥಿತವಾಗಿ ನಡೆಸಲು ಪುರೋಹಿತರಿಗೆ ನಿರ್ದಿಷ್ಟ ದರ ನಿಗದಿಪಡಿಸಲು, ಆ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸುವಂತೆ ತಿಳಿಸಿದ್ದಾರೆ.

ದೇವರ ಅಭಿಷೇಕಕ್ಕೂ ಬಳಕೆ ಸಾಧ್ಯವಿಲ್ಲ!

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದಲ್ಲಿ ಕೊಳಚೆ ನೀರನ್ನು ಸಂಸ್ಕರಿಸದೇ ನೇರವಾಗಿ ಕಾವೇರಿ ನದಿಗೆ ಬಿಡಲಾಗುತ್ತಿದೆ. ನದಿಯ ನೀರು ತೀವ್ರವಾಗಿ ಮಲಿನಗೊಂಡು ಪಟ್ಟಣ ಹಾಗೂ ಆಸುಪಾಸಿನ ದೇವಾಲಯಗಳಲ್ಲಿ ದೇವರ ಅಭಿಷೇಕಕ್ಕೆ ಈ ನೀರು ಬಳಕೆ ನಿಲ್ಲಿಸಲಾಗಿದೆ. 'ಗಂಜಾಂ ನಿಮಿಷಾಂಬ ದೇವಾಲಯದಲ್ಲಿರುವ ನಿಮಿಷಾಂಬ ದೇವಿ, ಮೌಕ್ತಿಕೇಶ್ವರ ದೇವರ ಮೂರ್ತಿಗಳ ಅಭಿಷೇಕಕ್ಕೆ ಕಾವೇರಿ ನದಿಯ ನೀರನ್ನು ನೇರವಾಗಿ ಬಳಸುತ್ತಿಲ್ಲ. ನದಿಯಿಂದ ಒಂದು ಚೆಂಬು ನೀರು ತಂದು ಅದನ್ನು ಒಂದು ಬಿಂದಿಗೆ ಶುದ್ಧ ನೀರಿನೊಂದಿಗೆ ಬೆರೆಸಿ ನಂತರ ದೇವರಿಗೆ ಅಭಿಷೇಕ ಮಾಡಲಾಗುತ್ತಿದೆ' ಎಂದು ದೇವಾಲಯದ ಅರ್ಚಕ ಸೂರ್ಯನಾರಾಯಣ ಭಟ್ ಹೇಳುತ್ತಾರೆ.

ಶ್ರೀರಂಗಪಟ್ಟಣದ ಕಾವೇರಿ ನದಿಯ ದಂಡೆಯಿಂದ 15 ಅಡಿ ದೂರದಲ್ಲಿದ್ದರೂ ದೇವರ ಅಭಿಷೇಕಕ್ಕೆ ಅದರ ನೀರು ಬಳಸುತ್ತಿಲ್ಲ.

ಕೊಳಚೆ ನೀರನ್ನು ದೇವರ ಅಭಿಷೇಕಕ್ಕೆ ಬಳಸುವುದಾದರೂ ಹೇಗೆ? ಎಂದು ಅರ್ಚಕ ಸುಬ್ರಹ್ಮಣ್ಯ ಪ್ರಶ್ನಿಸುತ್ತಾರೆ. ಜನರಿಂದ ಬಂದ ದೂರು ಆಧರಿಸಿ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು 8 ಅಧಿಕಾರಿಗಳ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 22-3-2001

• ರಾಜ್ಯದ ವಿವಿಧೆಡೆ ಅಪಘಾತ: 23 ಮಂದಿ ಸಾವು

ಬೆಂಗಳೂರು, ಮಾರ್ಚ್ 21– ರಾಜಧಾನಿಯ ಸಮೀಪದಲ್ಲಿ ಹೆಲಿಕಾಪ್ಟರ್ ದುರಂತ, ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಲಾರಿ–ಸರಕು ಸಾಗಣೆ ಟೆಂಪೊ ಡಿಕ್ಕಿ, ಚನ್ನಪಟ್ಟಣದಲ್ಲಿ 60ಕ್ಕೂ ಹೆಚ್ಚು ಗುಡಿಸಲುಗಳಿಗೆ ಬೆಂಕಿ, ದೇವನಹಳ್ಳಿ ಬಳಿ ಟೆಂಪೊ ಮಗುಚಿದ ಘಟನೆ... ರಾಜ್ಯದ ವಿವಿಧ ಭಾಗಗಳಲ್ಲಿ ಇಂದು ಸಂಭವಿಸಿರುವ ಪ್ರತ್ಯೇಕ ಅಪಘಾತಗಳಲ್ಲಿ ಹಸುಳೆಗಳೆರಡು ಸೇರಿದಂತೆ ಒಟ್ಟು 23 ಜನರು ಸತ್ತಿದ್ದು, 42ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

75 ವರ್ಷಗಳ ಹಿಂದೆ

ಗುರುವಾರ, 22-3-1971

• 38ನೇ ಅಕ್ಷಾಂಶವನ್ನು ದಾಟುವ ಬಗ್ಗೆ ಜಾಗರೂಕ ನೀತಿ

ನ್ಯೂಯಾರ್ಕ್, ಮಾರ್ಚ್ 21– ಕೊರಿಯಾ ಯುದ್ಧದಲ್ಲಿ ಭಾಗ ವಹಿಸುತ್ತಿರುವ ಅನೇಕ ರಾಷ್ಟ್ರಗಳ ರಾಜತಂತ್ರಜ್ಞರು 38ನೇ ಅಕ್ಷಾಂಶವನ್ನು ದಾಟುವ ವಿಷಯದಲ್ಲಿ ವಿಶ್ವಸಂಸ್ಥೆಯ 'ಜಾಗರೂಕ' ನೀತಿಯನ್ನು ತಳೆಯಬೇಕೆಂದು ವಾದಿಸುತ್ತಿದ್ದಾರೆಂದು ತಿಳಿದುಬಂದಿದೆ.

ನಿನ್ನೆ ಹನ್ನೆರಡು 'ಯುದ್ಧಭಾಗಿ' ರಾಷ್ಟ್ರಗಳ ಪ್ರತಿನಿಧಿಗಳು ಅಮೆರಿಕಾದ ಉಪಸ್ಟೇಟ್ ಕಾರ್ಯದರ್ಶಿ ಡೀನ್ ರಷ್ಕ್ ಅವರನ್ನು ಭೇಟಿ ಮಾಡಿದ್ದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

22 ಮಾರ್ಚ್ 2026 ಭಾನುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು, ತಿಥಿ: ಚೈತ್ರ ಶುಕ್ಲ ಚತುರ್ಥಿ ಗಂ. 21-17, **ನಕ್ಷತ್ರ:** ಭರಣಿ ಗಂ. 22-43, **ಯೋಗ:** ವೈಧೃತಿ ಗಂ. 15-42, **ಕರಣ:** ವಣಿಜ ಗಂ. 10-37 ಮೀನ ಮಾಸದ 08 ನೇ ದಿನ. **ಮಳೆ ನಕ್ಷತ್ರ:** ಉತ್ತರಾಭಾದ್ರ 2 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 - 06-00, **ಸೂರ್ಯೋದಯ:** 06-37, **ಸೂರ್ಯಾಸ್ತ:** 06-38, **ಮುಸ್ಲಿಂ ದಿನಾಂಕ:** 2 ಶವ್ವಾಲ್, **ಅದೃಷ್ಟ ಸಂಖ್ಯೆ:** 12, 4.

ಮೇಷ: ಬೇರೆಯವರ ಮಾತಿಗೆ ಚಿಂತಿಸದೆ ನಿಗದಿತ ಸಮಯದಲ್ಲಿ ಕೆಲಸ ಮುಗಿಸಲು ಪ್ರಯತ್ನವಿರಲಿ. ಸಮಾಜದ ಹಿತಕ್ಕಾಗಿ ನೀವು ಮಾಡುತ್ತಿರುವ ಕೆಲಸದಲ್ಲಿ ನಿಮಗೆ ಜಯ ದೊರೆಯುತ್ತದೆ.

ವೃಷಭ: ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸಿಕೊಂಡು ಸಂಸಾರದ ಜವಾಬ್ದಾರಿಯನ್ನು ಉತ್ತಮವಾಗಿ ನೋಡಿಕೊಳ್ಳುವಂತೆ ಆಗಲಿದೆ. ಉದ್ಯೋಗಕ್ಕೆ ಸೇರಲು ಸಿದ್ಧತೆ ನಡೆಸುವಿರಿ. ಖರ್ಚು ಕಡಿಮೆ ಮಾಡುವುದನ್ನು ಅಭ್ಯಸಿಸಿ.

ಮಿಥುನ: ಅಂದುಕೊಂಡಷ್ಟು ನಿಮ್ಮ ಪರಿಸ್ಥಿತಿ ಕೆಟ್ಟದಾಗಿ ಇಲ್ಲದ ಕಾರಣ ಹೆಚ್ಚಿನ ಲಾಭಗಳಿಸುವ ಉದ್ದೇಶವಿದ್ದಲ್ಲಿ ಸ್ವಲ್ಪ ಸಮಯ ತಾಳ್ಮೆಯಿಂದ ಕಾಯಬೇಕಾಗುವುದು. ಕೌಟುಂಬಿಕ ವಿಚಾರಗಳತ್ತ ಸಂಪೂರ್ಣ ಗಮನ ನೀಡಿ.

ಕರ್ಕಾಟಕ: ಅಧಿಕ ಕೋಪದಿಂದ ಕೆಲವೊಂದು ವಿಚಾರದಲ್ಲಿ ನಷ್ಟ ಅನುಭವಿಸುವಿರಿ. ಪ್ರಭಾವಿ ವ್ಯಕ್ತಿಯೊಬ್ಬರಿಂದ ನಿಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವಲ್ಲಿ ಸಫಲರಾಗುವಿರಿ. ಒಬ್ಬ ಜ್ಞಾನಿಯ ಅನುಗ್ರಹಕ್ಕೆ ಪಾತ್ರರಾಗುವಿರಿ.

ಸಿಂಹ: ಬೆಟ್ಟದಂತೆ ಕಂಡುಬಂದ ಒಂದು ಸಮಸ್ಯೆಯು ನಿಮ್ಮ ಬುದ್ಧಿವಂತಿಕೆಯಿಂದ ಮಂಜಿನಂತೆ ಕರಗುವುದು. ಆಲಸ್ಯತನವನ್ನು ದೂರಮಾಡಿಕೊಳ್ಳುವುದರಿಂದ ಅಭಿವೃದ್ಧಿ. ಪಿತ್ರಾರ್ಜಿತ ಆಸ್ತಿಯು ನಿಮ್ಮ ಪಾಲಾಗಲಿದೆ.

ಕನ್ಯಾ: ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭ ಬರಲಿದೆ. ನಿಮ್ಮ ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಈ ದಿನ ನಿಮಗೆ ಹೆಚ್ಚು ಆನಂದ ಸಿಗಬಹುದು.

ತುಲಾ: ಬೇರೆಯವರನ್ನು ಮರುಳುಗೊಳಿಸುವ ಮಾತಿನ ಕೌಶಲ ನಿಮ್ಮಲ್ಲಿದೆ, ಅದು ಈ ದಿನ ನಿಮಗೆ ಮುಳ್ಳಾಗಬಹುದು. ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿವಹಿಸಿ. ಹಿಡಿದ ಕೆಲಸದಲ್ಲಿ ಯಶಸ್ಸು ಕಾಣುವಿರಿ.

ವೃಶ್ಚಿಕ: ಇಂದು ನೆಮ್ಮದಿಯ ಜೊತೆಯಲ್ಲಿ ಕುಟುಂಬದ ಸದಸ್ಯರೊಂದಿಗೆ ಕಾಲಕಳೆಯುವಿರಿ. ವೃತ್ತಿರಂಗದಲ್ಲಿ ಹೊಸ ವಿಚಾರಗಳ ಅನ್ವೇಷಣೆಯಿಂದ ಆರ್ಥಿಕವಾಗಿ ತೊಂದರೆಯಾದರೂ ಮುಂದಿನ ದಿನದಲ್ಲಿ ಲಾಭವನ್ನು ತರಲಿದೆ.

ಧನು: ವೃತ್ತಿ ಬದಲಾಯಿಸುವ ಅಥವಾ ಆಸ್ತಿ ಖರೀದಿಸುವ ಯೋಚನೆಯನ್ನು ಮುಂದೂಡುವುದು ಉತ್ತಮ. ವೈಯಕ್ತಿಕ ಜೀವನದ ಬೆಳವಣಿಗೆ ಬಗ್ಗೆ ಗಮನ ಹರಿಸಿ. ಲಕ್ಷ್ಮಿಯನ್ನು ಪೂಜಿಸಿದಲ್ಲಿ ಏಳಿಗೆ ಹೊಂದಲು ಸಾಧ್ಯ.

ಮಕರ: ಪೊಲೀಸ್ ಅಧಿಕಾರಿಗಳಿಗೆ ಸಿಬ್ಬಂದಿ ವರ್ಗದವರಿಂದ ಮತ್ತು ಸಾರ್ವಜನಿಕರಿಂದ ಸಹಕಾರ ದೊರೆಯಲಿದೆ. ಹಿಂಜರಿಕೆಮತ್ತು ಭಯದ ಸ್ವಭಾವ ನಿಮ್ಮ ಹಿನ್ನಡೆಗೆ ಕಾರಣವಾಗಿದೆ. ಅವಿವಾಹಿತರಿಗೆ ವಿವಾಹ ಯೋಗ.

ಕುಂಭ: ನಿಮ್ಮ ಕರ್ತವ್ಯ ಮತ್ತು ಸಮಯ ಪ್ರಜ್ಞೆಯಿಂದಾಗಿ ನೀವು ದುಡಿಯುವ ಸಂಸ್ಥೆಗೆ ನಿಮ್ಮಿಂದ ಲಾಭ ಉಂಟಾಗುವುದು. ಶೈಕ್ಷಣಿಕ ರಂಗದಲ್ಲಿನ ನಿಮ್ಮ ಚಟುವಟಿಕೆಗಳಿಂದ ಉತ್ತಮ ಹೆಸರನ್ನು ಸಂಪಾದಿಸಿಕೊಳ್ಳುವಿರಿ.

ಮೀನ: ಗೃಹೋಪಕರಣಗಳ ಖರೀದಿ ಮಾಡುವ ಯೋಗವಿದೆ. ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ಮಾನಹಾನಿಯ ಸಾಧ್ಯತೆಗಳೂ ಇರಬಹುದು.

ಪದಬಂಧ 6350

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಗತಿಸಿದ ಪತಿಯೊಡನೆ ಚಿತೆಯೇರುವುದು (5)
4.ಪತ್ತೇದಾರನ ವೇತನ (3)
5.ಗುರುಗುಟ್ಟುತ್ತಿರುವ ಗಂಡು ಕುರಿ (3)
8.ಆ ಮನೆ ಮುಂದಿರುವ ಗಜ (2)
9.ಬಿಡಲು ಯೋಗ್ಯವಾದುದು (2)
10.ಅಡುಗೆಯವನು ಇಲ್ಲಿದ್ದಾನೆ (3)
11.ದೋಣಿಯಿಲ್ಲಿ ಉಲ್ಟಾ ಪಲ್ಟಾ ಆಗಿದೆ (2)
12.ಸಂತತಿಯಲ್ಲಿರುವ ಸಾಧು (2)
13.ಬೆಳಗಿನ ಜಾವವಿದು (3)
14.ಆತಂಕ ಹುಟ್ಟಿಸುತ್ತಿರುವ ಯಮ (3)
15.ರಾಮನ ಮಗನಿಂದ ಬಂದಿರುವ ಹುರುಪು (5)

ಮೇಲಿಂದ ಕೆಳಕ್ಕೆ

1.ಜಾಗರೂಕತೆಯಿಂದ ವೀಕ್ಷಿಸಿದ ಸ್ಥಳ (2)
2.ಸರಕ್ಕನೆ ಧರಿಸಿಕೊಂಡಿರುವ ಹಾರ (2)
3.ಅಭಿನಯವನ್ನು ಹೀಗೆನ್ನಿ (3)
4.ಅಂತ್ಯ ಅಥವಾ ಕೊನೆ (5)
6.ದುರಂತ ನಾಟಕವಿದು (5)
7.ಕಡಿದಾದ ಕೊರಕಲು (3)
8.ಆಳು ಕರೆದುಕೊಂಡು ಬಂದಿರುವ ಹಸು (3)
12.ಕುಲ ನೋಡುತ್ತಿರುವ ಸಮೂಹ (3)
14.ಈ ಹತೋಟಿ ಇಲ್ಲದ ಕಪಿ ಲಂಕೆಗೆ ಹಾರಿತಂತೆ! (2)
16.ಬಾಲಬಡಿಕ ಹಿಡಿದಿರುವ ದಾರದ ಉಂಡೆ (2)



6349ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕದ 3.ನವನಟಿ 6.ನರಕ 8.ಬಡಿವಾರ 9.ಅಧ್ವಾನ 10.ಸಂಧಾನ 11.ಸಮಾವೇಶ 13.ಪರಮ 15.ಕುಂಭದ್ರೋಣ 16.ವೆಚ್ಚ

ಮೇಲಿಂದ ಕೆಳಕ್ಕೆ: 2.ದರ್ಶನ 3.ನರ್ತಕ 4.ನವಾಬ 5.ವರಮಾನ 7.ರಸನ 9.ಅವಸರ 10.ಸಂಸಾರ 12.ಶಲಭ 13.ಪಯಣ 14.ಮರೆವೆ

ಸುಡೊಕು 6734

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3	2			8		9		1
	9	8		2				4
	4		9			3		8
6								9
	5		7	6	9		8	
8						6		
			2			7		6
	6			9	7			
						4		5

6733ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎಲ್ಲಾ ಭಾಷೆಗಳಿಗೆ ತೀರ್ಪು ಅನುವಾದ

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ತೀರ್ಪುಗಳನ್ನು 16 ಭಾಷೆಗಳಿಗೆ ಅನುವಾದ ಮಾಡಲಾಗಿದೆ. ಎಲ್ಲಾ ಪ್ರಾದೇಶಿಕ ಭಾಷೆಗಳಿಗೂ ಅನುವಾದ ಮಾಡುವ ಪ್ರಯತ್ನಗಳು ನಡೆಯುತ್ತಿವೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು.

ಬಾರ್ ಅಸೋಸಿಯೇಷನ್ ಆಫ್ ಇಂಡಿಯಾ, ಅಂತರರಾಷ್ಟ್ರೀಯ ವಕೀಲರ ಒಕ್ಕೂಟ (ಯುಐಎ) ಮತ್ತು ಕರ್ನಾಟಕ ನ್ಯಾಯಾಂಗ ಅಕಾಡೆಮಿ ಸಹಯೋಗದಲ್ಲಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ಕೃತಕ ಬುದ್ಧಿಮತ್ತೆ: ವ್ಯಾಜ್ಯಗಳ ನಿಯಂತ್ರಣ ಮತ್ತು ಪರಿಹಾರ’ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಪ್ರಸ್ತುತ ತೀರ್ಪುಗಳು ಆಂಗ್ಲ ಭಾಷೆಯಲ್ಲಿ ಪ್ರಕಟವಾಗುತ್ತಿದ್ದು, ಪ್ರಾದೇಶಿಕ ಭಾಷೆಗಳಿಗೆ ಅನುವಾದಗೊಂಡರೆ ಸಾಮಾನ್ಯ ಜನರಿಗೂ ತೀರ್ಪುಗಳ ಬಗ್ಗೆ ಮಾಹಿತಿ ದೊರೆಯಲಿದೆ ಎಂದರು.

ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ನ್ಯಾಯದಾನದಲ್ಲಿ ಪ್ರಮುಖ ಪಾತ್ರ ವಹಿಸಲಿದ್ದು, ಕಕ್ಷಿದಾರರಿಗೆ ಅರ್ಜಿ

> ಎ.ಐ ಸಾಧನಗಳಿಗೆ ಹಿಡಿತ ಸಾಧಿಸಲು ಆಸ್ಪದ ಮಾಡಿಕೊಟ್ಟರೆ ಪಾರದರ್ಶಕವಲ್ಲದ ಹಾಗೂ ಉತ್ತರದಾಯಿಯಲ್ಲದ ವ್ಯವಸ್ಥೆ ನಿರ್ಮಾಣವಾಗಲು ಅವಕಾಶ ಮಾಡಿಕೊಟ್ಟಂತಾಗುತ್ತದೆ
> **ಸೂರ್ಯ ಕಾಂತ್,** ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ

> ಎ.ಐ ತಂತ್ರಜ್ಞಾನ ವಕೀಲರನ್ನು ಬದಲಿಸಲು ಸಾಧ್ಯವಿಲ್ಲ. ನ್ಯಾಯಾಧೀಶರ ಮುಂದೆ ವಾದ ಮಂಡಿಸಿ, ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಲು ಆಗುವುದಿಲ್ಲ. ವಕೀಲರಿಗೆ ಹಾಗೂ ನ್ಯಾಯದಾನ ಪ್ರಕ್ರಿಯೆಯಲ್ಲಿ ನೆರವಾಗಬಹುದು
> **ಕೆ. ಶಶಿಕಿರಣ ಶೆಟ್ಟಿ,** ಅಡ್ವೊಕೇಟ್ ಜನರಲ್

ಸಲ್ಲಿಸಿದ ದಿನದಿಂದ ಅಂತಿಮ ಆದೇಶ ಹೊರ ಬೀಳುವವರೆಗೂ ಎಲ್ಲಾ ಹಂತದ ಪ್ರಕ್ರಿಯೆಗಳ ಕುರಿತು ವಿವರ ನೀಡಲಿದೆ. ಕೃತಕ ಬುದ್ಧಿಮತ್ತೆ ನ್ಯಾಯ ವ್ಯವಸ್ಥೆಯನ್ನು ಬೆಂಬಲಿಸಬಹುದು. ಆದರೆ, ಕಾನೂನನ್ನು ಅರ್ಥೈಸುವ ಮತ್ತು ನ್ಯಾಯವನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿ ನ್ಯಾಯಮೂರ್ತಿಗಳದ್ದಾಗಿದೆ ಎಂದು ತಿಳಿಸಿದರು.

ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮಾತನಾಡಿ, ನ್ಯಾಯಾಂಗ ವ್ಯವಸ್ಥೆಯನ್ನು ಎ.ಐ ಪ್ರವೇಶಿಸುವ ಸಂದರ್ಭದಲ್ಲಿ ಮನುಷ್ಯನ ನಿರ್ಧಾರ ತಳೆಯುವ ಶಕ್ತಿಗೆ ಎ.ಐ ಸಹಾಯಕನಂತೆ ವರ್ತಿಸುತ್ತದೆಯೇ ಅಥವಾ ಮನುಷ್ಯನ ಉಪಸ್ಥಿತಿಯ ಅಗತ್ಯವೇ ಇಲ್ಲದ ಪರ್ಯಾಯದಂತೆ ಗೋಚರಿಸುತ್ತದೆಯೇ? ಇದು ಜನರಿಗೆ ನ್ಯಾಯಿಕ ವ್ಯವಸ್ಥೆಯನ್ನು ಇನ್ನಷ್ಟು ಸುಲಭವಾಗಿ ಲಭ್ಯವಾಗುವಂತೆ ಮಾಡುತ್ತದೆಯೇ ಎಂಬಂತಹ ಪ್ರಮುಖ ಪ್ರಶ್ನೆಗಳು ಈಗ ಎದುರಾಗಿವೆ ಎಂದು ಹೇಳಿದರು.

ರಾಜಿ ಸಂಧಾನಗಳ ಮೂಲಕ ವ್ಯಾಜ್ಯಗಳನ್ನು ಇತ್ಯರ್ಥಗೊಳಿಸುವುದಕ್ಕೂ ಎ.ಐ ಸಹಾಯಕವಾಗಲಿದೆ ಎಂದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಬಾರ್ ಅಸೋಸಿಯೇಷನ್ ಆಫ್ ಇಂಡಿಯಾ ಅಧ್ಯಕ್ಷ ಪ್ರಶಾಂತ್ ಕುಮಾರ್, ಯುಐಎ ‘ಇಂಡಿಯಾ ಚಾಪ್ಟರ್’ ಅಧ್ಯಕ್ಷ ಎ.ಕೆ. ಗಂಗೂಲಿ, ಹಿರಿಯ ವಕೀಲ ಕೃಷ್ಣನ್ ವೇಣುಗೋಪಾಲ್, ವಕೀಲ ಮಮತಾ ತಿವಾರಿ, ಸುಪ್ರೀಂ ಕೋರ್ಟ್, ಹೈಕೋರ್ಟ್ ನ್ಯಾಯಮೂರ್ತಿಗಳು ಹಾಗೂ ಕಾನೂನು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕರ್ನಾಟಕ ನ್ಯಾಯಾಂಗ ಅಕಾಡೆಮಿಯಲ್ಲಿ ಶನಿವಾರ ಆಯೋಜಿಸಿದ್ದ ವಿಚಾರ ಸಂಕಿರಣದ ಉದ್ಘಾಟನಾ ಕಾರ್ಯಕ್ರಮದಲ್ಲಿ ಕರ್ನಾಟಕ ಹೈಕೋರ್ಟ್ ಮುಖ್ಯ ಮೂರ್ತಿ ವಿಭು ಬಖ್ರು (ಎಡ ಬದಿ), ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಪಾಲ್ಗೊಂಡಿದ್ದರು
ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

‘ಎಐ ಸವಾರಿ ಮಾಡದಂತೆ ಎಚ್ಚರ ಅಗತ್ಯ’

‘ನ್ಯಾಯಾಂಗ ವ್ಯವಸ್ಥೆಗೆ ಎಐ ತಂತ್ರಜ್ಞಾನವನ್ನು ಸಂಯೋಜಿಸುವಾಗ ಅದು ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸುವಂತೆ ಇರಬೇಕೇ ಹೊರತು, ಅದರ ಮೇಲೆಯೇ ಸವಾರಿ ಮಾಡುವಂತೆ ಇರಬಾರದು’ ಎಂದು ನ್ಯಾಯಮೂರ್ತಿ ಸೂರ್ಯ ಕಾಂತ್ ಹೇಳಿದರು. ಅಗಾಧ ಪ್ರಮಾಣದ ದತ್ತಾಂಶ, ದಾಖಲಾತಿ ನಿರ್ವಹಿಸಲು, ಮಾದರಿಗಳನ್ನು ಗುರುತಿಸಲು, ಪ್ರಕ್ರಿಯೆಗಳ ವಿಳಂಬ ತಗ್ಗಿಸಲು ತಂತ್ರಜ್ಞಾನ ಸಹಾಯಕವಾಗಬೇಕು. ತೀರ್ಪು ಪ್ರಕಟಿಸುವಿಕೆಯನ್ನೇ ಅದು ಅತಿಕ್രಮಿಸಬಾರದು ಎಂದು ಎಚ್ಚರಿಸಿದರು.

ಸಾಮೂಹಿಕ ಪ್ರಾರ್ಥನೆ

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಶನಿವಾರ ರಂಜಾನ್ ಅಂಗವಾಗಿ ಮುಸ್ಲಿಮರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು

ಧ್ವಜ ತುಳಿದು ಮುಸ್ಲಿಮರ ಪ್ರತಿಭಟನೆ

ಖಮೇನಿ ಹತ್ಯೆಗೆ ಅಮೆರಿಕ, ಇಸ್ರೇಲ್ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ಗೌರಿಬಿದನೂರು: ಶಿಯಾ ಮುಸ್ಲಿಮರ ಪ್ರಾಬಲ್ಯವಿರುವ ತಾಲ್ಲೂಕಿನ ಅಲೀಪುರ ಗ್ರಾಮದಲ್ಲಿ ಶನಿವಾರ ಈದ್ ಉಲ್ ಫಿತ್ರ್ ಸಾಮೂಹಿಕ ಪ್ರಾರ್ಥನೆ ವೇಳೆ ಅಮೆರಿಕ ಮತ್ತು ಇಸ್ರೇಲ್ ಧ್ವಜಗಳನ್ನು ಚಪ್ಪಲಿಯಿಂದ ತುಳಿಯಲಾಯಿತು.

ಕಪ್ಪುಪಟ್ಟಿ ಧರಿಸಿ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದ ಶಿಯಾ ಮುಸ್ಲಿಮರು ಅಮೆರಿಕ ಮತ್ತು ಇಸ್ರೇಲ್ ಧ್ವಜಗಳನ್ನು ನೆಲದಲ್ಲಿ ಹಾಸಿ ಚಪ್ಪಲಿಯಿಂದ ತುಳಿದು ಆಕ್ರೋಶ ವ್ಯಕ್ತಪಡಿಸಿದರು.

‘ನಾವು ಪ್ರತಿ ವರ್ಷವೂ ರಂಜಾನ್ ಹಬ್ಬವನ್ನು ಅದ್ದೂರಿಯಾಗಿ ಆಚರಿಸುತ್ತಿದ್ದೆವು. ಜೈನಭಿಯಾ ಮಸೀದಿವರೆಗೆ ಮೆರವಣಿಗೆ ಬರುತ್ತಿದ್ದೆವು. ಆದರೆ ಈ ಬಾರಿ ನಮ್ಮ ಧಾರ್ಮಿಕ ಗುರು ಅಯಾತೊಲ್ಲಾ ಅಲಿ ಖಮೇನಿ ಹತ್ಯೆ ಆಗಿದ್ದಾರೆ. ಅವರ ನಿಧನದ ಪ್ರಯುಕ್ತ ಮೆರವಣಿಗೆ ಇಲ್ಲದೆ ಕೇವಲ ಪ್ರಾರ್ಥನೆ, ನಮಾಜ್‌ಗೆ ಸೀಮಿತವಾಗಿ ಹಬ್ಬ ಆಚರಿಸಲಾಗುತ್ತಿದೆ’ ಎಂದು ಅಲೀಪುರದ ಅಂಜುಮಾನ್ ಜಾಫ್ರಿಯಾ ಸಂಘದ ಅಧ್ಯಕ್ಷ ಮೀರ ಅಲಿ ಅಬ್ಬಾಸ್ ಹೇಳಿದರು.

ದಕ್ಷಿಣ ಭಾರತದಲ್ಲೇ ಅತಿ ಹೆಚ್ಚು ಶಿಯಾ ಮುಸ್ಲಿಮರು ವಾಸಿಸುತ್ತಿರುವ ಪಟ್ಟಣ ಅಲೀಪುರ.

ಖಮೇನಿ ಹತ್ಯೆಯಾದ ಸಂದರ್ಭದಲ್ಲಿ ಅಲೀಪುರದ ಶಿಯಾ ಮುಸ್ಲಿಮರು ಕಣ್ಣೀರು ಹಾಕಿದ್ದರು. ಪಟ್ಟಣದಲ್ಲಿ ಅಘೋಷಿತ ಬಂದ್ ಸ್ಥಿತಿ ಇತ್ತು. ಮೂರು ದಿನ ಶೋಕಾಚರಣೆ ಸಹ ನಡೆಸಿದ್ದರು.

ಸಾಮೂಹಿಕ ಪ್ರಾರ್ಥನೆ ವೇಳೆ ಹೆಜ್ಜೇನು ದಾಳಿ

ದಾವಣಗೆರೆ: ತಾಲ್ಲೂಕಿನ ಆನಗೋಡು ಗ್ರಾಮದ ಈದ್ಗಾ ಮೈದಾನದಲ್ಲಿ ಶುಕ್ರವಾರ ಬೆಳಿಗ್ಗೆ ‘ಈದ್ ಉಲ್ ಫಿತ್ರ್’ ಅಂಗವಾಗಿ ಸಾಮೂಹಿಕ ಪ್ರಾರ್ಥನೆಯಲ್ಲಿ ತೊಡಗಿದ್ದವರ ಮೇಲೆ ಹೆಜ್ಜೇನು ದಾಳಿ ನಡೆಸಿದೆ. 25ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಗಂಭೀರವಾಗಿ ಗಾಯಗೊಂಡಿದ್ದ 11 ಜನರನ್ನು ಇಲ್ಲಿನ ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

‘ಆಸ್ಪತ್ರೆಗೆ ದಾಖಲಾಗಿರುವ ಮೂರು ಮಕ್ಕಳು ಸೇರಿದಂತೆ 11 ಜನರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ವೃದ್ಧರೊಬ್ಬರನ್ನು ತೀವ್ರ ನಿಗಾ ಘಟಕದಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಎಲ್ಲರ ಆರೋಗ್ಯವೂ ಸ್ಥಿರವಾಗಿದೆ’ ಎಂದು ಜಿಲ್ಲಾ ಆಸ್ಪತ್ರೆಯ ಅಧೀಕ್ಷಕ ಎಂ.ಬಿ.ನಾಗೇಂದ್ರಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

ಶಾಸಕ ಕೆ.ಎಸ್. ಬಸವಂತಪ್ಪ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ಕೆಐಎಡಿಬಿ: ₹16.17 ಕೋಟಿ ವಂಚನೆ: ದೂರು

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) ಬಳ್ಳಾರಿ ವಲಯ ಕಚೇರಿಯಲ್ಲಿ ಹಣಕಾಸಿನ ಅವ್ಯವಹಾರ ನಡೆದಿದ್ದು, ಗುತ್ತಿಗೆ ನೌಕರ ಸಂತೋಷ್ ಕುಮಾರ್ ಎಂಬುವರಿಂದ ₹16.17 ಕೋಟಿ ದುರ್ಬಳಕೆ ಆಗಿದೆ ಎಂದು ಆರೋಪಿಸಲಾಗಿದೆ.

ಕೆಐಎಡಿಬಿ ವಲಯ ಕಚೇರಿ ಕಾರ್ಯ ನಿರ್ವಾಹಕ ಎಂಜಿನಿಯರ್ ಎಸ್.ಎಂ. ಕೊಳಲಗಿ ದೂರು ನೀಡಿದ್ದು, ಸಂತೋಷ್ ಕುಮಾರ್, ನಿವೃತ್ತ ನೌಕರ ನಜೀರ್ ಅಹಮದ್, ಖಾಸಗಿ ಬ್ಯಾಂಕ್‌ನ ವ್ಯವಸ್ಥಾಪಕ ಮತ್ತು ಸಿಬ್ಬಂದಿ ಸೇರಿ ಒಟ್ಟು 7 ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

‘2022ರ ಅಕ್ಟೋಬರ್ 15ರಿಂದ 2026ರ ಫೆಬ್ರುವರಿ 20ರವರೆಗೆ ವಲಯ ಕಚೇರಿಯ ಚೆಕ್‌ಗಳನ್ನು ಕಾರ್ಯನಿರ್ವಾಹಕ ಎಂಜಿನಿಯರ್‌ಗಳ ನಕಲಿ ಸಹಿ ಮಾಡಿರುವ ಸಂತೋಷ್ ಕುಮಾರ್ ಹಣ ಡ್ರಾ ಮಾಡಿದ್ದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪ್ರಕರಣವನ್ನು ಸಿಐಡಿಗೆ ನೀಡಲಾಗುವುದು’ ಎಂದು ಪೊಲೀಸ್ ವರಿಷ್ಠಾಧಿಕಾರ ಡಾ. ಸುಮನ್ ಪನ್ನೇಕರ್ ತಿಳಿಸಿದ್ದಾರೆ.

ಬೆಳೆ ವಿಮೆ: ₹30 ಕೋಟಿ ವಂಚನೆ ದೂರು

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಬೆಳೆ ಬೆಳೆಯದೇ ಅಥವಾ ಜಮೀನಿನಲ್ಲಿ ಕಡಿಮೆ ಬೆಳೆ ಇದ್ದರೂ ಹೆಚ್ಚಿನ ಕ್ಷೇತ್ರ ತೋರಿಸಿ ಸರ್ಕಾರಕ್ಕೆ ₹30 ಕೋಟಿ ವಂಚಿಸಿದ ಕುರಿತು ಮುಧೋಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಂಚನೆಯ ವ್ಯಾಪ್ತಿಯು ಮುಧೋಳ ಅಲ್ಲದೇ ಬೀಳಗಿ, ಹುನಗುಂದ ತಾಲ್ಲೂಕಿನಲ್ಲೂ ವ್ಯಾಪಿಸಿದೆ. ಈ ಕಾರಣ ಪೊಲೀಸ್ ಇಲಾಖೆಯು ವಿಶೇಷ ತನಿಖಾ ತಂಡ ರಚಿಸಿದೆ.

2020 ರಿಂದ 2024ರವರೆಗೆ ರಾಜ್ಯ ಸರ್ಕಾರಕ್ಕೆ ₹30 ಕೋಟಿಗೂ ಹೆಚ್ಚು ವಂಚನೆ ಮಾಡಲಾಗಿದೆ. ವಿಮಾ ಕಂಪನಿಯ ನಾಲ್ವರು ಸೇರಿ 11 ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

ಮುಧೋಳ ತಾಲ್ಲೂಕಿನ ಮೆಟಗುಡ್ಡ ಗ್ರಾಮದ ಕಲ್ಲಪ್ಪ ಹುಣಸಿಕಟ್ಟಿ, ಶ್ರೀನಿವಾಸ ಪಾಟೀಲ, ಕಲ್ಮೇಶ ಜುನ್ನೂರ, ಶ್ರೀನಿವಾಸ ಹುಣಸಿಕಟ್ಟಿ, ರಮೇಶ ಹುಣಸಿಕಟ್ಟಿ, ಪ್ರಶಾಂತ ಕೋಮಾರ, ಶ್ರೀಕಾಂತ ಹಲಗಲಿ ಹಾಗೂ ಮುಧೋಳ ತಾಲ್ಲೂಕಿನ ಯುನಿವರ್ಸಲ್ ಸೊಂಪು ಬೆಳೆ ವಿಮಾ ಕಂಪನಿಯ ಅಧಿಕಾರಿಗಳಾದ ಯಶವಂತ, ರಾಕೇಶ, ಪ್ರಕಾಶ ಮತ್ತು ಅನೀಲ ಬೀಳಗಿ ವಿರುದ್ಧ ಮುಧೋಳ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಸಿದ್ಧಲಿಂಗೇಶ ದೊಡಮನಿ ದೂರು ಕೊಟ್ಟಿದ್ದಾರೆ.

ರಾಕೇಶ, ಅನಿಲ್ ಬೀಳಗಿ, ಬಾಲರಾಜು ಪಾಳೆಗಾರ ಗಂಗಪ್ಪ ಇಟ್ನಾಳ ಎಂಬುವವರನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠ ಸಿದ್ಧಾರ್ಥ ಗೋಯಲ್ ತಿಳಿಸಿದ್ದಾರೆ.

ಮುಧೋಳ ತಾಲ್ಲೂಕಿನ ಮೆಟಗುಡ್ಡ ಹಾಗೂ ಗುಲಗಾಲಜಂಬಗಿ ಗ್ರಾಮದ ರೈತರು ಐದು ತಿಂಗಳ ಹಿಂದೆ ಬಾಗಲಕೋಟೆ ಜಿಲ್ಲಾಧಿಕಾರಿ ಸಂಗಪ್ಪ ಅವರಿಗೆ ದೂರು ನಿಡಿದ್ದರು.

ಸರಿಯಾದ ಸಮೀಕ್ಷೆ ನೀಡಿ ವರದಿ ನೀಡಲು ಜಿಲ್ಲಾಧಿಕಾರಿ ಸೂಚಿಸಿದ್ದರು. ಕೃಷಿ, ತೋಟಗಾರಿಕೆ, ಕಂದಾಯ ಇಲಾಖೆ ಹಾಗೂ ವಿಮಾ ಕಂಪನಿ ಅಧಿಕಾರಿಗಳೊಂದಿಗೆ ಸರ್ವೆ ಮಾಡಿದಾಗ ವ್ಯತ್ಯಾಸ ಕಂಡು ಬಂದಿದೆ ಎಂದು ವರದಿ ನೀಡಲಾಗಿದೆ. ಪೊಲೀಸರು ಈ ಬಗ್ಗೆ ತನಿಖೆ ಆರಂಭಿಸಿದ್ದಾರೆ.

ಕುಟುಂಬ ನಿರ್ವಹಣೆಗೆ ಸರ್ಕಾರಿ ಸಹಾಯಕ ಅಭಿಯೋಜಕರ ಪರದಾಟ

3 ತಿಂಗಳಿಂದ ಎಪಿಪಿಗಳಿಗಿಲ್ಲ ವೇತನ

● ಟಿ.ನಾಗೇಂದ್ರ

ಶಹಾಪುರ (ಯಾದಗಿರಿ ಜಿಲ್ಲೆ): ರಾಜ್ಯದ ವಿವಿಧ ಜಿಲ್ಲಾ, ತಾಲ್ಲೂಕಿನ ನ್ಯಾಯಾಲಯಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಸರ್ಕಾರಿ ಸಹಾಯಕ ಅಭಿಯೋಜಕರಾಗಿ (ಎಪಿಪಿ) ಕೆಲಸ ನಿರ್ವಹಿಸುತ್ತಿರುವ ಸುಮಾರು 350 ಮಂದಿಗೆ ಮೂರು ತಿಂಗಳಿಂದ ಸಂಬಳ ಪಾವತಿಯಾಗಿಲ್ಲ.

ರಾಜ್ಯ ಸರ್ಕಾರವು 2020ರಲ್ಲಿ ಖಾಲಿ ಇರುವ ಎಪಿಪಿ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ಮಾಸಿಕ ವೇತನ ₹35 ಸಾವಿರ ನಿಗದಿ ಮಾಡಿ ಸುಮಾರು 350 ಮಂದಿಯನ್ನು ನೇಮಕ ಮಾಡಿಕೊಂಡಿತ್ತು. ಕಳೆದ ಡಿಸೆಂಬರ್, ಜನವರಿ ಹಾಗೂ ಫೆಬ್ರುವರಿ ತಿಂಗಳ ಸಂಬಳವನ್ನು ಬಾಕಿ ಉಳಿಸಿಕೊಂಡಿದೆ.

ಮುಖ್ಯಾಂಶಗಳು
- ಜಿಲ್ಲಾ, ತಾಲ್ಲೂಕು ಹಂತದ ನ್ಯಾಯಾಲಯಗಳಲ್ಲಿ ಕೆಲಸ
- 2020ರಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕ
- ಶಾಲಾ ಶುಲ್ಕ ಕಟ್ಟಲು ಎಪಿಪಿಗಳ ಪರದಾಟ

ಮಾರ್ಚ್ ತಿಂಗಳು ಅರ್ಧ ಕಳೆದರೂ ಸಂಬಳ ಕೊಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸುತ್ತಾರೆ ಸರ್ಕಾರಿ ಸಹಾಯಕ ಅಭಿಯೋಜಕರು.

‘ಪ್ರಸಕ್ತ ವರ್ಷದ ಶೈಕ್ಷಣಿಕ ಅವಧಿ ಮುಗಿಯುತ್ತಿದೆ. ಮಕ್ಕಳ ಕೊನೆಯ

> ಗುತ್ತಿಗೆ ಆಧಾರದಲ್ಲಿ ಮುಂದುವರಿಸಲು ಪರವಾನಗಿ ಪಡೆಯಬೇಕು. ಪ್ರಾಸಿಕ್ಯೂಟರ್ ಇಲಾಖೆಯವರು ಈಗ ಪರವಾನಗಿ ಪಡೆದಿದ್ದು, ಮಾಸಾಂತ್ಯಕ್ಕೆ ಸಂಬಳ ಪಾವತಿಯಾಗಲಿದೆ
> **ಅಂಜನಾ ಚವ್ಹಾಣ,** ಪ್ರಭಾರ ನಿರ್ದೇಶಕಿ, ರಾಜ್ಯ ಪ್ರಾಸಿಕ್ಯೂಟರ್

ಕಂತಿನ ಶಾಲಾ ಶುಲ್ಕ ಕಟ್ಟುವಂತೆ ಶಿಕ್ಷಣ ಸಂಸ್ಥೆಯವರು ಒತ್ತಡ ಹಾಕುತ್ತಿದ್ದಾರೆ. ಕುಟುಂಬದ ಹಿರಿಯ ಸದಸ್ಯರಿಗೆ ಔಷಧಿಯಂತಹ ಇನ್ನಿತರೆ ತುರ್ತು ಸೇವೆಗೆ ಹಣ ಹೊಂದಿಸಲು ಪರದಾಡುವಂತೆ ಆಗಿದೆ’ ಎಂದು ಎಪಿಪಿ ಒಬ್ಬರು ‘ಪ್ರಜಾವಾಣಿ’ ಬಳಿ ತಮ್ಮ ಅಳಲು ತೊಡಿಕೊಂಡರು.

‘ವೇತನ ಇಲ್ಲದೆ ಮನೆ ಬಾಡಿಗೆ ಕಟ್ಟಲು ಆಗುತ್ತಿಲ್ಲ. ಮನೆಯ ಮಾಲೀಕರು ಖಾಲಿ ಮಾಡುವಂತೆ ಎಚ್ಚರಿಕೆ ಕೊಟ್ಟಿದ್ದಾರೆ. ಇಎಂಐ ಮೇಲೆ ಖರೀದಿಸಿದ್ದ ಗೃಹ ಬಳಕೆಯ ವಸ್ತುಗಳ ಸಾಲದ ಕಂತುಗಳ ಪಾವತಿಗೆ ಬ್ಯಾಂಕ್‌ನವರು ದುಂಬಾಲು ಬಿದ್ದಿದ್ದಾರೆ. ವೇತನ ಇಲ್ಲದೆ ನಿತ್ಯದ ಖರ್ಚಿಗೆ ಹಣ ಹೊಂದಿಸುವುದು ಹೇಗೆ ಎಂಬ ಚಿಂತೆ ಕಾಡುತ್ತಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ಮಾರ್ಚ್ ತಿಂಗಳಲ್ಲಿ ಸಂಬಳ ಬಾರದಿದ್ದರೆ ಇನ್ನಷ್ಟು ಕಷ್ಟವಾಗಲಿದೆ. ಸರ್ಕಾರ ತಕ್ಷಣವೇ ಬಾಕಿ ಸಂಬಳವನ್ನು ತಕ್ಷಣವೇ ಬಿಡುಗಡೆ ಮಾಡಬೇಕು’ ಎಂಬುದು ಎಪಿಪಿಗಳ ಮನವಿ.

‘ಅಕ್ಕ’ ರಜತ ಮಹೋತ್ಸವ: ರಿಷಬ್ ಶೆಟ್ಟಿ ರಾಯಭಾರಿ

ಬೆಂಗಳೂರು: ಅಮೆರಿಕ ಕನ್ನಡ ಕೂಟಗಳ ಆಗರವು (ಅಕ್ಕ) ಸೆ. 4ರಿಂದ 6ರವರೆಗೆ ಅಮೆರಿಕದ ಫಿಲಡೆಲ್ಫಿಯಾದಲ್ಲಿ ಹಮ್ಮಿಕೊಂಡಿರುವ ರಜತ ಮಹೋತ್ಸವ ಸಮಾರಂಭಕ್ಕೆ ನಟ ರಿಷಬ್ ಶೆಟ್ಟಿ ಅವರನ್ನು ಸಾಂಸ್ಕೃತಿಕ ರಾಯಭಾರಿಯನ್ನಾಗಿ ಘೋಷಿಸಿದೆ.

‘ರಜತ ಮಹೋತ್ಸವವು ವಿಶ್ವದ ಕನ್ನಡಿಗರ ಏಕತೆಯ ಪ್ರತೀಕವಾಗಿದ್ದು, ಅಮೆರಿಕದ ವಿವಿಧ ರಾಜ್ಯಗಳು ಹಾಗೂ ಕರ್ನಾಟಕ ಸೇರಿದಂತೆ ವಿವಿಧೆಡೆಯಿಂದ ಕನ್ನಡಾಭಿಮಾನಿಗಳು ಭಾಗವಹಿಸಲಿದ್ದಾರೆ. 3 ದಿನಗಳ ಕಾರ್ಯಕ್ರಮದಲ್ಲಿ ಕನ್ನಡ ನಾಡು–ನುಡಿಗೆ ಸಂಬಂಧಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು, ಉದ್ಯಮಿಗಳ ಸಮ್ಮೇಳನ, ಕನ್ನಡ ಸಿನಿಮಾ ಹಾಗೂ ನಾಟಕಗಳ ಪ್ರದರ್ಶನವಿರುತ್ತದೆ’ ಎಂದು ಅಕ್ಕದ ಅಧ್ಯಕ್ಷ ಮಧು ರಂಗಯ್ಯ ತಿಳಿಸಿದ್ದಾರೆ.

ಕಚೇರಿಯಲ್ಲೇ ಅಧಿಕಾರಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಪಾವಗಡ (ತುಮಕೂರು): ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನಯ್ಯ (60) ಶುಕ್ರವಾರ ರಾತ್ರಿ ಇಲ್ಲಿನ ತಮ್ಮ ಕಚೇರಿಯಲ್ಲಿಯೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಲ್ಲಿಕಾರ್ಜುನಯ್ಯ

ಪಾವಗಡ ತಾಲ್ಲೂಕು ಗುಂಡಾರ್ಲಹಳ್ಳಿಯ ಅವರು 31ರಂದು ಸೇವೆಯಿಂದ ನಿವೃತ್ತಿ ಆಗಬೇಕಿತ್ತು. ಶುಕ್ರವಾರ ಆತ್ಮಹತ್ಯೆಗೂ ಮುನ್ನ ಅವರು ಮಧುಗಿರಿ ಡಿವೈಎಸ್‌ಪಿ, ಪಾವಗಡ ಪೊಲೀಸ್ ಠಾಣೆಗೆ ತೆರಳಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಕೃಷ್ಣಪ್ಪ ವಿರುದ್ಧ ದೂರು ಸಲ್ಲಿಸಿದ್ದರು. ಕಚೇರಿಗೆ ಹಿಂದಿರುಗಿ ವಿಡಿಯೊ ಮಾಡಿ, ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾಗಿದ್ದಾರೆ. ವಿಡಿಯೊವನ್ನು ಕೆಲವು ಸಹೋದ್ಯೋಗಿಗಳಿಗೂ ಕಳಿಸಿದ್ದರು.

‘ಮೇಲಧಿಕಾರಿ ಕೃಷ್ಣಪ್ಪ ತೊಂದರೆ ಕೊಡುತ್ತಿದ್ದರು. ತಡೆಯಲಾಗದೆ ಈ ನಿರ್ಧಾರ ಕೈಗೊಂಡಿದ್ದೇನೆ. ಅವರು ತರಲೆ ಇರುವುದರಿಂದ ದೇವರೇ ಶಿಕ್ಷೆ ಕೊಡುತ್ತಾನೆ. ಕುಟುಂಬದವರು ಸೇಡು ತೀರಿಸಿಕೊಳ್ಳುವ ಅವಶ್ಯಕತೆ ಇಲ್ಲ. ಕಾನೂನು ಶಿಕ್ಷೆ ಕೊಟ್ಟೇ ಕೊಡುತ್ತದೆ’ ಎಂದು ಅವರು ವಿಡಿಯೊದಲ್ಲಿ ಹೇಳಿದ್ದಾರೆ.

ಮೃತರ ಪತ್ನಿ ಕೆ.ಎಂ. ಜಯಲಕ್ಷ್ಮಿ ನೀಡಿದ ದೂರಿನ ಮೇರೆಗೆ ಕೃಷ್ಣಪ್ಪ ವಿರುದ್ಧ ಪಾವಗಡ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ನನ್ನ ಪತಿ ಇಲಾಖೆಯಲ್ಲಿ ಉತ್ತಮ ಗೌರವ ಹೊಂದಿದ್ದರು. ನಿವೃತ್ತಿಗೆ ಕೆಲವೇ ದಿನ ಇರುವಾಗಲೇ ಕೃಷ್ಣಪ್ಪ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಫೋನ್ ಮಾಡಿ ಹಣ ಕೇಳುತ್ತಿದ್ದರು. ಒತ್ತಡ ತಾಳದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

1ರಂದು ಸಿದ್ಧಗಂಗಾ ಮಠಕ್ಕೆ ರಾಷ್ಟ್ರಪತಿ

ತುಮಕೂರು: ಸಿದ್ಧಗಂಗಾ ಮಠದಲ್ಲಿ ಏ.1ರಂದು ನಡೆಯುವ ಶಿವಕುಮಾರ ಸ್ವಾಮೀಜಿ 119ನೇ ಜನ್ಮ ದಿನೋತ್ಸವದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಗವಹಿಸಲಿದ್ದಾರೆ.

ಶನಿವಾರ ನಡೆದ ಜನ್ಮದಿನ ಆಚರಣೆ ಪೂರ್ವಭಾವಿ ಸಭೆಯ ನಂತರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಈ ವಿಷಯ ತಿಳಿಸಿದರು. ಏ.1ರಂದು ಹೆಲಿಕಾಪ್ಟರ್ ಮೂಲಕ ಮಠಕ್ಕೆ ಆಗಮಿಸುವ ಅವರು, ಶಿವಕುಮಾರ ಸ್ವಾಮೀಜಿ ಗದ್ದುಗೆಗೆ ನಮಿಸಿ, ಮಕ್ಕಳ ಜತೆಗೆ ಸಂವಾದ ನಡೆಸುವರು. ನಂತರ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

‘ವಿದ್ಯಾರ್ಥಿಗಳ ಕೂಡಿಹಾಕಿ ಹಲ್ಲೆ’

ತರುವೆ ಏಕಲವ್ಯ ವಸತಿ ಶಾಲೆಯಲ್ಲಿ ಘಟನೆ, ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮೂಡಿಗೆರೆ (ಚಿಕ್ಕಮಗಳೂರು ಜಿಲ್ಲೆ): ತಾಲ್ಲೂಕಿನ ಕೊಟ್ಟಿಗೆಹಾರದಲ್ಲಿರುವ ತರುವೆ ಏಕಲವ್ಯ ವಸತಿ ಶಾಲೆಯಲ್ಲಿ 8 ವಿದ್ಯಾರ್ಥಿಗಳನ್ನು ಕೊಠಡಿಯಲ್ಲಿ ಕೂಡಿ ಹಾಕಿ ಪ್ರಾಂಶುಪಾಲರು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

ಅನುಮತಿ ಪಡೆಯದೇ ಶನಿವಾರ ಬೆಳಿಗ್ಗೆ ಕ್ರೀಡಾಂಗಣದಲ್ಲಿ ಆಟವಾಡುತ್ತಿದ್ದರು ಎಂಬ ಕಾರಣಕ್ಕೆ ಪ್ರಾಂಶುಪಾಲ ಸತೀಶ್ ಹಾಗೂ ಸಿಬ್ಬಂದಿ ಬೆಲ್ಟ್, ಪೈಪ್‌ನಿಂದ ಹಲ್ಲೆ ಮಾಡಿದ್ದಾರೆ ಎಂದು 9ನೇ ತರಗತಿ ವಿದ್ಯಾರ್ಥಿಗಳು ದೂರಿದ್ದಾರೆ.

ಶಾಲೆಯ ಸಮೀಪದ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದವರು ಕಿರುಚಾಟ ಕೇಳಿ ಬಣಕಲ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಸಬ್ ಇನ್‌ಸ್ಪೆಕ್ಟರ್ ರೇಣುಕಾ, ಸಿಬ್ಬಂದಿ ವಿದ್ಯಾರ್ಥಿಗಳನ್ನು ರಕ್ಷಿಸಿದ್ದಾರೆ. ಗಾಯಾಳುಗಳನ್ನು ಪಟ್ಟಣದ ಎಂಜಿಎಂ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದಾರೆ.

6ನೇ ತರಗತಿಯಿಂದ ಪದವಿಪೂರ್ವ ಕಾಲೇಜಿನವರೆಗೆ ರಾಜ್ಯದ ವಿವಿಧ ಭಾಗಗಳ ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಘಟನೆಯ ಮಾಹಿತಿ ತಿಳಿದಂತೆ ಸ್ಥಳೀಯರು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಶಾಲೆ ಬಳಿ ಸೇರಿ ಪ್ರಾಂಶುಪಾಲರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮೂಡಿಗೆರೆ ತಾಲ್ಲೂಕಿನ ತರುವೆ ಏಕಲವ್ಯ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಹಲ್ಲೆ ನಡೆಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಮಾಹಿತಿ ಪಡೆದರು

ಮುಖ್ಯಾಂಶಗಳು
- ಅನುಮತಿ ಪಡೆಯದೇ ಆಟವಾಡುತ್ತಿದ್ದರು ಎಂಬುದೇ ಕಾರಣ
- ಬೆಲ್ಟ್, ಪೈಪ್‌ನಿಂದ ಹಲ್ಲೆ ಆರೋಪ
- ಅಧಿಕಾರಿಗಳ ಭೇಟಿ ವಿಚಾರಣೆ

ಸ್ಥಳಕ್ಕೆ ಉಪವಿಭಾಗಾಧಿಕಾರಿ ನಟೇಶ್ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತೇಶ್ ಭಜಂತ್ರಿ, ತಹಶೀಲ್ದಾರ್ ಅಶ್ವಿನಿ, ಪೊಲೀಸ್ ಸರ್ಕಲ್ ಇನ್ ಸ್ಪೆಕ್ಟರ್ ರಾಜಶೇಖರ್ ಭೇಟಿ ನೀಡಿ ಮಕ್ಕಳಿಂದ ಮಾಹಿತಿ ಪಡೆದರು.

ಸಂಜೆಯ ವೇಳೆಗೆ ವಿವಿಧೆಡೆಯಿಂದ ಪೋಷಕರು ಸಹ ಶಾಲಾ ಆವರಣಕ್ಕೆ ಬಂದಿದ್ದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ಉಂಟಾಗಿತ್ತು. ಪ್ರಾಂಶುಪಾಲರನ್ನು ಅಮಾನತುಗೊಳಿಸಬೇಕು ಎಂದು ಪೋಷಕರು ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸಿದರು.

ಬೋಧಕೇತರ ಹುದ್ದೆ: ಶಿಕ್ಷಕರಿಗೆ ನಿಷೇಧ

ಒಂದನೇ ಪುಟದಿಂದ...

ಪರಸ್ಪರ ವರ್ಗಾವಣೆಗೆ ಸಮ್ಮತಿ ಸೂಚಿಸುವ ಜತೆಗೆ ಕೆಲಸಕ್ಕೆ ಸೇರಿದ ಮೊದಲ ಐದು ವರ್ಷ ಹಾಗೂ ನಿವೃತ್ತಿಗೆ ಮೊದಲಿನ ಐದು ವರ್ಷ ವರ್ಗಾವಣೆಗೆ ವಿನಾಯಿತಿ ನೀಡಲಾಗಿತ್ತು. ವರ್ಗಾವಣೆ ಕೋರಿ ಪ್ರತಿ ಮೂರು ವರ್ಷಗಳಿಗೆ ಒಮ್ಮೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳು (371 ಜೆ ಅನ್ವಯ), ಮಲೆನಾಡು ವಲಯ ಹಾಗೂ ನಂಜುಂಡಪ್ಪ ವರದಿಯ ಅನ್ವಯ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶ ಎಂದು ಗುರುತಿಸಲಾಗಿರುವ ತಾಲ್ಲೂಕುಗಳಿಗೆ ವರ್ಗಾವಣೆ ಕೋರುವವರಿಗೆ ವಿಶೇಷ ಆದ್ಯತೆ ನೀಡಲಾಗಿತ್ತು. ಈ ಎಲ್ಲ ಅಂಶಗಳನ್ನೂ ಉಳಿಸಿಕೊಂಡಿರುವ ಮಸೂದೆ, ಮತ್ತಷ್ಟು ಬದಲಾವಣೆಗೆ ದಾರಿ ಮಾಡಿಕೊಡಲಿದೆ.

ಶಾಲೆ, ಕಾಲೇಜುಗಳನ್ನು ತುರ್ತು ಸೇವೆ ಹಾಗೂ ಇತರೆ ಎಂದು ವಿಂಗಡಿಸಿದ್ದು, ವರ್ಗಾವಣೆಯಲ್ಲಿ ಮೊದಲ ವರ್ಗದ ಶಾಲೆಗಳಿಗೆ ಆದ್ಯತೆ ನೀಡಲಾಗುತ್ತಿದೆ. ಮೊದಲ ವರ್ಗದ ಹುದ್ದೆಗಳು ಭರ್ತಿಯಾದ ನಂತರವೇ ಎರಡನೇ ವರ್ಗದ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುತ್ತದೆ. ಮುಖ್ಯಶಿಕ್ಷಕರು, ಉಪ ಪ್ರಾಂಶುಪಾಲರು ಮತ್ತು ಪ್ರಾಂಶುಪಾಲರ ಹುದ್ದೆಗಳನ್ನು ತುರ್ತು ಸೇವೆಯಲ್ಲದ ಮೂರನೇ ವರ್ಗಕ್ಕೆ ಸೇರಿಸಲಾಗಿದೆ.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (ಸಿಟಿಇ) ಹಾಗೂ ರಾಜ್ಯ ಮಟ್ಟದ ಆಡಳಿತ ಕಚೇರಿಗಳ ಬೋಧನಾ ಹುದ್ದೆಗಳಿಗೆ ಕೌನ್ಸೆಲಿಂಗ್ ರಹಿತವಾಗಿ ವರ್ಗಾವಣೆ ಪಡೆಯಲು ಅವಕಾಶ ಮಾಡಿಕೊಡಲಾಗಿದೆ. ಈ ಹುದ್ದೆಗಳಿಗೆ ವರ್ಗಾವಣೆ ಬಯಸುವವರು ಸಾಮಾನ್ಯ ಶಾಲೆಗಳಲ್ಲಿ ಕನಿಷ್ಠ 10 ವರ್ಷಗಳ ನಿರಂತರ ಸೇವೆ ಸಲ್ಲಿಸಿರಬೇಕು ಎಂಬ ನಿರ್ಬಂಧ ವಿಧಿಸಲಾಗುತ್ತಿದೆ. ಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಕನಿಷ್ಠ ಸೇವಾ ಅವಧಿ ಪೂರ್ಣಗೊಳಿಸಿದ ಶಿಕ್ಷಕರು ಅಥವಾ ಉಪನ್ಯಾಸಕರಿಗೆ ಮೊದಲ ವರ್ಗದ ಹುದ್ದೆಗಳ ಲಭ್ಯತೆ ಆಧಾರದಲ್ಲಿ ವರ್ಗಾವಣೆ ಕೋರಲು ಅವಕಾಶ ನೀಡಲಾಗುತ್ತಿದೆ.

‘ಕಲ್ಯಾಣ’ಕ್ಕೆ ಒಂದು ದಶಕ ಕಡ್ಡಾಯ

ಕಲ್ಯಾಣ ಕರ್ನಾಟಕ ಭಾಗದ ಶಿಕ್ಷಣ ಸುಧಾರಣೆಗೂ ಹೊಸ ಮಸೂದೆಯಲ್ಲಿ ಆದ್ಯತೆ ನೀಡಲಾಗಿದ್ದು, ಆ ಭಾಗದ ಜಿಲ್ಲೆಗಳಲ್ಲಿ ಶಿಕ್ಷಕರಾಗಿ ನೇಮಕವಾದವರಿಗೆ ಕನಿಷ್ಠ ಒಂದು ದಶಕ ಕೆಲಸ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ.

ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಶಿಕ್ಷಕರಾಗಿ ನೇಮಕವಾದ ಅಭ್ಯರ್ಥಿಗಳು ಕನಿಷ್ಠ 10 ವರ್ಷಗಳ ಸೇವೆ ಸಲ್ಲಿಸಿದ ನಂತರವೇ ಕಲ್ಯಾಣ ಕರ್ನಾಟಕದ ಹೊರಗಿನ ಜಿಲ್ಲೆಗಳಿಗೆ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಬಹುದು.

ಗರ್ಭಿಣಿ ಅಥವಾ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವಿರುವ ಶಿಕ್ಷಕಿಯರು ತಾವು ಬಯಸಿದ ಸ್ಥಳ ಆಯ್ಕೆ ಮಾಡಿಕೊಳ್ಳಲು ಮೊದಲ ಪ್ರಾಶಸ್ತ್ಯ ನೀಡಲಾಗಿದೆ. ಎರಡು ಮಕ್ಕಳಿಗೆ ಈ ವಿನಾಯಿತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಪ್ರಧಾನಿಯ ಆಕ್ಷೇಪಾರ್ಹ ಎ.ಐ ಚಿತ್ರ: ಸೆರೆ

ನವದೆಹಲಿ (ಪಿಟಿಐ): ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಆಕ್ಷೇಪಾರ್ಹ ಕೃತಕ ಬುದ್ಧಿಮತ್ತೆ (ಎ.ಐ) ಚಿತ್ರವನ್ನು ಪೋಸ್ಟ್ ಮಾಡಿದ ಆರೋಪದಡಿ ಬಿಹಾರದ ಅರ್ವಾಲ್ ಜಿಲ್ಲೆಯ ವ್ಯಕ್ತಿಯನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ.

ಸಿದ್ಧನಾಥ ಕುಮಾರ್ ಬಂಧಿತ. ದೆಹಲಿ ಮತ್ತು ಸ್ಥಳೀಯ ಪೊಲೀಸರ ಜಂಟಿ ತಂಡವು ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಬಿಐ ಹೆಸರಿನಲ್ಲಿ ನಕಲಿ ಎಫ್‌ಐಆರ್ ಸೃಷ್ಟಿ ● 94 ವರ್ಷದ ವ್ಯಕ್ತಿಗೆ ಹಲವು ರೀತಿ ಬೆದರಿಕೆ

ಸಂಶೋಧಕಗೆ ₹4.91 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಯೋವೃದ್ಧರನ್ನು ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಬೆದರಿಸಿ ಸುಲಿಗೆ ಮಾಡುತ್ತಿರುವ ಪ್ರಕರಣಗಳು ಮುಂದುವರಿದಿದ್ದು, 94 ವರ್ಷದ ಸಂಶೋಧಕರೊಬ್ಬರಿಂದ ಸೈಬರ್ ವಂಚಕರು ₹4.91 ಕೋಟಿ ದೋಚಿದ್ದಾರೆ.

ಹಣದ ಕಳೆದುಕೊಂಡಿರುವ ಸಂಶೋಧಕರು ಮಾ. 8ರಂದು ದೂರು ನೀಡಿದ್ದರು. ಇದನ್ನು ಆಧರಿಸಿ ಕೇಂದ್ರ ವಿಭಾಗದ ಸೈಬರ್ ಅಪರಾಧ ಠಾಣೆಯ ಪೊಲೀಸರು, ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ. ವಂಚಕರು ನಾನಾ ರೀತಿಯಲ್ಲಿ ಬೆದರಿಸಿದ್ದು, ಅದರಿಂದ ಆತಂಕಗೊಂಡ ದೂರುದಾರರು ಹಣ ಕಳೆದುಕೊಂಡಿದ್ದಾರೆ ಎಂದು ಸೈಬರ್ ಠಾಣೆಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ವಿದ್ಯುನ್ಮಾನ, ಮುದ್ರಣ ಮಾಧ್ಯಮ ಹಾಗೂ ಸಾಮಾಜಿಕ ಜಾಲಗಳಲ್ಲಿ ‘ಡಿಜಿಟಲ್ ಅರೆಸ್ಟ್’ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಆ ರೀತಿಯ ಅರೆಸ್ಟ್ ಪೊಲೀಸ್ ಇಲಾಖೆಯಲ್ಲಿ ಇಲ್ಲ ಎಂದೂ ತಿಳಿಸಲಾಗುತ್ತಿದೆ. ಜಾಗೃತಿಯ ಬಳಿಕ ಯುವಜನಾಂಗ ಸ್ವಲ್ಪ ಎಚ್ಚರಿಕೆ ವಹಿಸಿದೆ. ಆದರೆ, ವಯೋವೃದ್ಧರನ್ನು ವಂಚಕರು ಸುಲಭವಾಗಿ ಬೆದರಿಸಿ ಸುಲಿಗೆ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಕಳೆದ ಎರಡು ತಿಂಗಳಲ್ಲಿ ಈ ರೀತಿಯ 10ಕ್ಕೂ ಹೆಚ್ಚು ಪ್ರಕರಣಗಳು ನಡೆದಿವೆ’ ಎಂದರು.

‘ಠಾಣಾ ವ್ಯಾಪ್ತಿಯ ವಿಕ್ಟೋರಿಯಾ ರಸ್ತೆಯ ವಿಜಯ್ ಕಿರಣ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ವೊಂದರಲ್ಲಿ ಕಳೆದ ಕೆಲವು ವರ್ಷದಿಂದ ದೂರುದಾರ ಸಂಶೋಧಕರು, ಪತ್ನಿಯ ಜತೆಗೆ ನೆಲಸಿದ್ದಾರೆ. ಕಳೆದ ಡಿಸೆಂಬರ್ 2ರಂದು ದೂರುದಾರರ ಮನೆಯಲ್ಲಿದ್ದ ಸ್ಥಿರ ದೂರವಾಣಿಗೆ ಕರೆ ಮಾಡಿದ್ದ ಅಪರಿಚಿತ ವ್ಯಕ್ತಿ, ‘ನಿಮ್ಮ ವಿರುದ್ಧ ಬಳ್ಳಾರಿ ಪೊಲೀಸ್ ಠಾಣೆಯಲ್ಲಿ ಮಾನವ ಕಳ್ಳ ಸಾಗಣೆ ಸಂಬಂಧ ಪ್ರಕರಣ ದಾಖಲಾಗಿದ್ದು, ಇನ್‌ಸ್ಪೆಕ್ಟರ್ ಕರೆ ಮಾಡುತ್ತಾರೆ’ ಎಂದು ಹೇಳಿ ಕರೆ ಸ್ಥಗಿತಗೊಳಿಸಿದ್ದ. ನಂತರ, ಸಂದೀಪ್ ರಾವ್ ಹೆಸರಿನ ವ್ಯಕ್ತಿ, ದೂರುದಾರರಿಗೆ ಕರೆ ಮಾಡಿ,

ಏಳು ಖಾತೆಯಿಂದ ಹಣ ವರ್ಗ

‘ಜಂಟಿ ಖಾತೆಯೂ ಸೇರಿದಂತೆ ಬೇರೆ ಬೇರೆ ಬ್ಯಾಂಕ್‌ನ ಏಳು ಖಾತೆಗಳಿಂದ 2025ರ ಡಿಸೆಂಬರ್ 17ರಿಂದ 2026ರ ಫೆಬ್ರುವರಿ 23ರ ನಡುವೆ ದೂರುದಾರರು ₹ 4.91 ಕೋಟಿ ವರ್ಗಾವಣೆ ಮಾಡಿದ್ದಾರೆ. ಅದಾದ ಮೇಲೂ ವಂಚಕರು ಇನ್ನೂ ಹೆಚ್ಚಿನ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಆಗ ದೂರು ನೀಡಿದ್ದಾರೆ. ಠಾಣೆಗೆ ಬಂದ ದೂರುದಾರರಿಗೆ ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಹೆದರಿಸಿ ಸುಲಿಗೆ ಮಾಡಲಾಗಿದೆ ಎಂದು ತಿಳಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಆರ್‌ಟಿಜಿಎಸ್ ಮೂಲಕ ಹಣ ವರ್ಗಾವಣೆ ಮಾಡಿರುವುದು ಪತ್ತೆಯಾಗಿದೆ. ಹಣ ವರ್ಗಾವಣೆ ಆಗಿರುವುದು ನಕಲಿ ಖಾತೆಗಳಿಗೆ (ಮ್ಯೂಲ್ ಅಕೌಂಟ್) ಎಂಬುದು ಗೊತ್ತಾಗಿದೆ.

‘ಈ ಪ್ರಕರಣದಲ್ಲಿ ಖಾಸಗಿ ಬ್ಯಾಂಕ್ ಅಧಿಕಾರಿಗಳ ಪಾತ್ರ ಇದೆಯೇ ಎಂಬುದನ್ನೂ ಪತ್ತೆ ಮಾಡಲಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ನಾನು ಸಿಬಿಐ ಅಧಿಕಾರಿ’ಯೆಂದು ಹೇಳಿಕೊಂಡಿದ್ದ. ಅಲ್ಲದೇ ದೂರನ್ನು ಸಿಬಿಐಗೆ ವರ್ಗಾವಣೆ ಮಾಡುವುದಾಗಿ ಬೆದರಿಸಿ, ಆಧಾರ್ ಕಾರ್ಡ್ ಪ್ರತಿಯನ್ನು ವಾಟ್ಸ್‌ಆ್ಯಪ್‌ನಲ್ಲಿ ಕಳುಹಿಸುವಂತೆ ಸೂಚಿಸಿದ್ದ’ ಎಂದು ತನಿಖಾಧಿಕಾರಿ ಮಾಹಿತಿ ನೀಡಿದರು.

ಹಲವು ಸಂಖ್ಯೆಯಿಂದ ಕರೆ: ‘ದೂರುದಾರರ ವಿರುದ್ಧ ಸಿಬಿಐನಲ್ಲಿ ಪ್ರಕರಣ ದಾಖಲಾಗಿರುವಂತೆಯೇ ನಕಲಿ ಎಫ್‌ಐಆರ್ ಪ್ರತಿ ಸೃಷ್ಟಿಸಿ ವಾಟ್ಸ್‌ಆ್ಯಪ್‌ನಲ್ಲಿ ವಂಚಕರು ಕಳುಹಿಸಿದ್ದರು. ಅದಾದ ಮೇಲೆ ಬೇರೆ ಬೇರೆ ಮೊಬೈಲ್ ಸಂಖ್ಯೆಗಳಿಂದ ವಂಚಕರು ವಿಡಿಯೊ ಕರೆ ಮಾಡಿದ್ದರು. ವಿಡಿಯೊ ಕರೆ ಮಾಡಿದ್ದ ವಂಚಕರು, ಸಿಬಿಐ ಪೊಲೀಸರ ರೀತಿಯಲ್ಲೇ ಸಮವಸ್ತ್ರ ಧರಿಸಿದ್ದರಿಂದ ದೂರುದಾರು ನಂಬಿದ್ದರು’ ಎಂದು ಸೈಬರ್ ಪೊಲೀಸರು ಹೇಳಿದರು.

ಸುಪ್ರೀಂ ಕೋರ್ಟ್‌ನಲ್ಲೂ ವಿಚಾರಣೆ ಭೀತಿ

‘ಡಿಜಿಟಲ್ ಅರೆಸ್ಟ್’ ಮಾಡುವುದಾಗಿ ದೂರುದಾರರನ್ನು ಬೆದರಿಸಲಾಗಿತ್ತು .ಯಾರೊಂದಿಗೂ ಮಾತನಾಡದಂತೆ ತಾಕೀತು ಮಾಡಲಾಗಿತ್ತು. ವಾಟ್ಸ್ ಆ್ಯಪ್‌ನಲ್ಲಿ ಪ್ರತಿ ಮೂರು ಗಂಟೆಗೊಮ್ಮೆ ಸಂದೇಶ ಕಳುಹಿಸಲಾಗುವುದು. ಅದಕ್ಕೆ ಪ್ರತಿಕ್ರಿಯೆ ನೀಡಬೇಕೆಂದೂ ಸೈಬರ್ ವಂಚಕರು ಬೆದರಿಸಿದ್ದರು. ವಂಚಕರು ಹೇಳಿದಂತೆಯೇ ಸಂಶೋಧಕ ನಡೆದುಕೊಂಡಿದ್ದರು. ‘ನಿಮ್ಮ ವಿರುದ್ಧ ದಾಖಲಾದ ಪ್ರಕರಣವು ತುಂಬಾ ಗಂಭೀರವಾದದ್ದು. ಈ ಪ್ರಕರಣವು ಸುಪ್ರೀಂ ಕೋರ್ಟ್‌ನಲ್ಲೂ ವಿಚಾರಣೆಗೆ ಬರಲಿದೆ ಎಂಬುದಾಗಿಯೂ ಆತಂಕ ಸೃಷ್ಟಿಸಲಾಗಿತ್ತು. ಪ್ರಕರಣದಿಂದ ಕೈಬಿಡಬೇಕಾದರೆ ಹಣ ನೀಡಬೇಕು’ ಎಂಬುದಾಗಿ ಬೆದರಿಸಿದ್ದರಿಂದ ಕೋಟ್ಯಂತರ ರೂಪಾಯಿ ವರ್ಗಾವಣೆ ಮಾಡಿ ಹಣ ಕಳೆದುಕೊಂಡಿದ್ದಾರೆ.

GTTC
ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ
ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು-560010 ದೂರವಾಣಿ: 080-23157189,
ಫ್ಯಾಕ್ಸ್:080-23301683 ವೆಬ್‌ಸೈಟ್:www.karnataka.gov.in/gttc
ಇ-ಮೇಲ್:gttc.projects@karnataka.gov.in
ಸಂ: ಜಿಟಿಟಿಸಿ/ಪ್ರಾಯೋಜನೆ/ನಿರ್ಮಾಣ/ಪಿಎಂಸಿ/ಬಿಡ್-159/2025-26 ದಿನಾಂಕ: 21.03.2026

ಅವಧಿ ವಿಸ್ತರಣೆ

ಜಿಟಿಟಿಸಿಯ **ಹೊಸ ಯೋಜನೆಗಳ ಮೇಲ್ವಿಚಾರಣೆ, ಅನುಷ್ಠಾನ ಮತ್ತು ಗುಣಮಟ್ಟ ನಿಯಂತ್ರಣ ಕಾರ್ಯಕ್ಕಾಗಿ ಮೂರನೇ ವ್ಯಕ್ತಿ ಪರಿಶೀಲನೆ ಒಳಗೊಂಡಂತೆ ಅರ್ಹ ಯೋಜನಾ ನಿರ್ವಹಣಾ ಸಲಹೆಗಾರರಿಂದ (PMC)** ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು. ಇ-ಪೋರ್ಟಲ್‌ನಲ್ಲಿ ದಾಖಲೆಗಳನ್ನು ಅಪ್‌ಲೋಡ್ ಮಾಡಲು ನಿಗದಿಪಡಿಸಿದ್ದ ಕೊನೆಯ **ದಿನಾಂಕ: 20.03.2026** ರ ಬದಲು **30.03.2026 ಸಂಜೆ 5:30** ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್: **https://kppp.karnataka.gov.in** ಮೂಲಕ ಅಥವಾ ಕಚೇರಿ ವೇಳೆಯಲ್ಲಿ ಸಹಾಯವಾಣಿ ಸಂಖ್ಯೆ: +91 80 23010900 / +91 80 23010901 ಅನ್ನು ಸಂಪರ್ಕಿಸಿ ಪಡೆಯಬಹುದು.
ಸಹಿ/- ವ್ಯವಸ್ಥಾಪಕ ನಿರ್ದೇಶಕರು

ಜೆರುಸಲೇಂ ಮೇಲೆ ಇರಾನ್ ಕ್ಷಿಪಣಿ ಪ್ರಹಾರ

ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಯಹೂದಿಗಳ ಪವಿತ್ರ ಸ್ಥಳಗಳ ಗುರಿ ● ನಾಲ್ಕನೇ ವಾರವೂ ಮುಂದುವರಿದ ಸಂಘರ್ಷ

ದುಬೈ/ಜೆರುಸಲೇಂ: ಈದ್ ಉಲ್ ಫಿತ್ರ್ ಹಬ್ಬದ ದಿನವಾದ ಶನಿವಾರ ಜೆರುಸಲೇಂ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ಅಲ್ಲಿನ ಅಲ್‌- ಅಕ್ಸಾ ಮಸೀದಿಗೆ ಕೇವಲ ನೂರು ಮೀಟರ್ ಅಂತರದಲ್ಲಿ ಈ ದಾಳಿ ನಡೆದಿದೆ.

ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಯಹೂದಿಗಳ ಪವಿತ್ರ ಸ್ಥಳಗಳಿಂದ ಕೆಲವೇ ಮೀಟರ್ ದೂರದಲ್ಲಿ ಇರಾನ್ ಕ್ಷಿಪಣಿ ದಾಳಿ ನಡೆಸಿದೆ ಎಂದು ಇಸ್ರೇಲ್ ಶನಿವಾರ ಹೇಳಿದೆ.

ಇರಾಕ್ ಗುಪ್ತಚರ ಅಧಿಕಾರಿ ಹತ: ಇರಾಕ್ ರಾಜಧಾನಿ ಬಾಗ್ದಾದ್‌ನ ಗುಪ್ತಚರ ಸೇವೆಗಳ ಕಟ್ಟಡವನ್ನು ಗುರಿಯಾಗಿಸಿ ನಡೆದ ಡ್ರೋನ್ ದಾಳಿಯಲ್ಲಿ ಇರಾಕ್‌ನ ಗುಪ್ತಚರ ಅಧಿಕಾರಿಯೊಬ್ಬರು ಹತರಾಗಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ. ಇನ್ನೊಂದು ಡ್ರೋನ್ ಇಲ್ಲಿನ ಪ್ರಸಿದ್ಧ ಖಾಸಗಿ ಕ್ರೀಡಾ ಕ್ಲಬ್‌ಗೆ ಅಪ್ಪಳಿಸಿದೆ. ಆದರೆ ಈ ದಾಳಿಗಳ ಜವಾಬ್ದಾರಿಯನ್ನು ಯಾವುದೇ ಗುಂಪು ಅಥವಾ ದೇಶ ವಹಿಸಿಕೊಂಡಿಲ್ಲ.

ಬೈರೂತ್ ದಕ್ಷಿಣ ಉಪ ನಗರಗಳಲ್ಲಿ ಇರಾನ್ ಬೆಂಬಲಿತ ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿ ಇಸ್ರೇಲ್ ಶನಿವಾರ ಮುಂಜಾನೆ ದಾಳಿ ನಡೆಸಿದ್ದು, ಭಾರಿ ಸ್ಫೋಟ, ಬೆಂಕಿ, ಹೊಗೆ ಕಾಣಿಸಿಕೊಂಡಿದೆ.

‘ಪ್ರವಾಸಿ ತಾಣಗಳನ್ನು ಗುರಿಯಾಗಿಸುತ್ತೇವೆ’: ‘ವಿಶ್ವದಾದ್ಯಂತ ಇರುವ ಪ್ರಮುಖ ಉದ್ಯಾನಗಳು, ಮನರಂಜನಾ ಪ್ರದೇಶಗಳು ಮತ್ತು ಪ್ರವಾಸಿ ತಾಣಗಳನ್ನು ಗುರಿಯಾಗಿಸುತ್ತೇವೆ. ಅಲ್ಲಿ ದೇಶದ ಶತ್ರುಗಳು ಸುರಕ್ಷಿತವಾಗಿರಲು ಬಿಡುವುದಿಲ್ಲ’ ಎಂದು ಇರಾನ್ ಸೇನೆಯ ಹಿರಿಯ ವಕ್ತಾರ ಜನರಲ್ ಅಬೋಲ್‌ಫಾಜ್ಲ್ ಶೇಕಾರ್ಚಿ ಎಚ್ಚರಿಕೆ ನೀಡಿದ್ದಾರೆ.

ಪಶ್ಚಿಮ ಏಷ್ಯಾದ ಆಚೆಗೆ ಭಯೋತ್ಪಾದಕ ದಾಳಿ ನಡೆಸುವ ಮೂಲಕ ಒತ್ತಡ ತಂತ್ರವನ್ನು ಇರಾನ್ ಬಳಸಬಹುದು ಎಂಬ ಕಳವಳ ಇದರಿಂದ ವ್ಯಕ್ತವಾಗಿದೆ ಎಂದು ವಿಶ್ಲೇಷಿಸಲಾಗಿದೆ.

ದಿನದ ಮಹತ್ವದ ಬೆಳವಣಿಗೆಗಳು

- ವಿವಾದಿತ ದ್ವೀಪಗಳಾದ ಅಬು ಮೂಸಾ ಮತ್ತು ಗ್ರೇಟರ್ ಟನ್ಬ್ ಮೇಲೆ ಯುಎಇ ತನ್ನ ನೆಲೆಗಳಿಂದ ದಾಳಿ ಮಾಡಲು ಅವಕಾಶ ಕಲ್ಪಿಸಿದರೆ ಕೆಟ್ಟ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಇರಾನ್ ಯುಎಇಗೆ ಎಚ್ಚರಿಸಿದೆ
- ಇರಾನ್ ನಾಯಕರು ಮತ್ತು ಜನರಿಗೆ ಹೊಸ ವರ್ಷವಾದ ನೌರುಜ್‌ನ ಶುಭಾಶಯವನ್ನು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ತಿಳಿಸಿದ್ದಾರೆ. ಅಲ್ಲದೆ ಟೆಹರಾನ್‌ಗೆ ಮಾಸ್ಕೊದ ಬೆಂಬಲವನ್ನೂ ವ್ಯಕ್ತಪಡಿಸಿದ್ದಾರೆ
- ಸಿರಿಯಾದ ಸೇನಾ ಶಿಬಿರಗಳ ಮೇಲಿನ ಇಸ್ರೇಲ್ ದಾಳಿಯನ್ನು ಸೌದಿ ಅರೇಬಿಯಾದ ವಿದೇಶಾಂಗ ಸಚಿವಾಲಯ ತೀವ್ರವಾಗಿ ಖಂಡಿಸಿದೆ. ಅರಬ್‌ನ ಇತರ ದೇಶಗಳು, ಟರ್ಕಿ ಜತೆಗೂಡಿ ಅಂತರರಾಷ್ಟ್ರೀಯ ಸಮುದಾಯದ ಮಧ್ಯ ಪ್ರವೇಶಕ್ಕೆ ಕರೆ ನೀಡಿವೆ
- ಟೆಹರಾನ್ ಮೇಲೆ ಇಸ್ರೇಲ್ ಕೆಲವು ಸಾರಿ ಕ್ಷಿಪಣಿ ದಾಳಿ ನಡೆಸಿದೆ. ಲೆಬನಾನ್ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದಾರೆ
- ಸೌದಿ ಮತ್ತು ಕುವೈತ್ ಮೇಲೆ ಇರಾನ್ ಡ್ರೋನ್ ದಾಳಿಗಳನ್ನು ನಡೆಸಿದೆ. ಆದರೆ ಈ ದಾಳಿಗಳನ್ನು ತಮ್ಮ ರಕ್ಷಣಾ ವ್ಯವಸ್ಥೆಗಳು ಸಮರ್ಥವಾಗಿ ತಡೆದಿವೆ ಎಂದು ಅಲ್ಲಿನ ಸೇನೆಗಳು ಹೇಳಿಕೊಂಡಿವೆ
- ಇಂಧನ ಮಾರ್ಗಗಳನ್ನು ಸುರಕ್ಷಿತಗೊಳಿಸುವ ಕುರಿತು ಟೆಹರಾನ್ ಜತೆ ಮಾತನಾಡುತ್ತಿರುವುದಾಗಿ ದಕ್ಷಿಣ ಕೊರಿಯಾ ಹೇಳಿದೆ

‘ಗುರಿ ತಲುಪುವ ಹಂತದಲ್ಲಿದ್ದೇವೆ’

‘ನಾವು ನಮ್ಮ ಗುರಿಗಳನ್ನು ತಲುಪುವ ಹಂತದಲ್ಲಿದ್ದೇವೆ. ಹೀಗಾಗಿ ಇರಾನ್ ಮೇಲಿನ ಸೇನಾ ಕಾರ್ಯಾಚರಣೆ ಕೊನೆಗೊಳಿಸುವ ಕುರಿತು ಪರಿಶೀಲಿಸುತ್ತಿದ್ದೇವೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಹೇಳಿದ್ದಾರೆ.

ಇರಾನ್‌ಗೆ ಭೂಸೇನೆಯನ್ನು ಕಳುಹಿಸುವ ಯಾವುದೇ ಯೋಜನೆ ಸದ್ಯಕ್ಕಿಲ್ಲ ಎಂದಿರುವ ಟ್ರಂಪ್, ‘ಎಲ್ಲ ಆಯ್ಕೆಗಳು ನಮ್ಮ ಮುಂದಿವೆ’ ಎಂದೂ ಪ್ರತಿಪಾದಿಸಿದ್ದಾರೆ.

ಇನ್ನೊಂದೆಡೆ, ಇದಕ್ಕೆ ವ್ಯತಿರಿಕ್ತ ಎಂಬಂತೆ ಅಮೆರಿಕವು ಭೂಮಿ ಮತ್ತು ಜಲದಲ್ಲಿ ಚಲಿಸಬಹುದಾದ ಮೂರು ಯುದ್ಧವಾಹನಗಳನ್ನು ಮತ್ತು 2,500ಕ್ಕೂ ಹೆಚ್ಚು ಸಿಬ್ಬಂದಿಯನ್ನು ಪಶ್ಚಿಮ ಏಷ್ಯಾಕ್ಕೆ ನಿಯೋಜಿಸುತ್ತಿದೆ ಎಂದು ಅಮೆರಿಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಲೆಬನಾನ್‌ನ ರಾಜಧಾನಿ ಬೈರೂತ್ ನಗರವನ್ನು ಗುರಿಯಾಗಿಸಿ ಇಸ್ರೇಲ್ ಶನಿವಾರ ನಡೆಸಿದ ವೈಮಾನಿಕ ದಾಳಿಯಲ್ಲಿ ವಸತಿ ಕಟ್ಟಡಗಳು ಹಾನಿಗೊಂಡಿವೆ —ಎಎಫ್‌ಪಿ ಚಿತ್ರ

ಇರಾನ್ ತೈಲದ ಮೇಲಿನ ನಿರ್ಬಂಧ ಸಡಿಲಿಕೆ

ವಾಷಿಂಗ್ಟನ್ (ಪಿಟಿಐ): ಇರಾನ್ ಕಚ್ಚಾ ತೈಲವು ಹಡಗುಗಳಿಗೆ ಭರ್ತಿಯಾಗಿ, ಸಮುದ್ರ ಮಾರ್ಗದಲ್ಲಿ ಇದ್ದರೆ ಆ ಕಚ್ಚಾ ತೈಲಕ್ಕೆ ತಾತ್ಕಾಲಿಕ ಅವಧಿಗೆ ನಿರ್ಬಂಧಗಳು ಅನ್ವಯವಾಗುವುದಿಲ್ಲ ಎಂದು ಅಮೆರಿಕವು ಶನಿವಾರ ಹೇಳಿದೆ.

ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯನ್ನು ತಡೆಯುವ ಯತ್ನವಾಗಿ ಅದು ಈ ಕ್ರಮ ಕೈಗೊಂಡಿದೆ.

ತಾತ್ಕಾಲಿಕವಾದ ಈ ಕ್ರಮದ ಪರಿಣಾಮವಾಗಿ ಜಾಗತಿಕ ಕಚ್ಚಾ ತೈಲ ಮಾರುಕಟ್ಟೆಗೆ ಇರಾನ್ 14 ಕೋಟಿ ಬ್ಯಾರಲ್‌ನಷ್ಟು ತೈಲ ಲಭ್ಯವಾಗಲಿದೆ ಎಂದು ಅಮೆರಿಕದ ವಾಣಿಜ್ಯ ಸಚಿವ ಸ್ಕಾಟ್ ಬೆಸೆಂಟ್ ಹೇಳಿದ್ದಾರೆ.

‘ತಾತ್ಕಾಲಿಕವಾದ, ಅಲ್ಪಾವಧಿಯ ಈ ಕ್ರಮವು ಈಗಾಗಲೇ ಹಡಗಿಗೆ ಭರ್ತಿಯಾಗಿ, ಸಮುದ್ರ ಮಾರ್ಗದಲ್ಲಿ ಇರುವ ಕಚ್ಚಾ ತೈಲಕ್ಕೆ ಅನ್ವಯವಾಗುತ್ತದೆ. ಇದು ಹೊಸ ಖರೀದಿಗಳಿಗೆ, ಹೊಸ ಉತ್ಪಾದನೆಗೆ ಅವಕಾಶ ಮಾಡಿಕೊಡುವುದಿಲ್ಲ’ ಎಂದು ಅವರು ಎಕ್ಸ್ ಮೂಲಕ ತಿಳಿಸಿದ್ದಾರೆ. ಯುದ್ಧ ಶುರುವಾಗುವುದಕ್ಕೂ ಮೊದಲು ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರಲ್‌ಗೆ 70 ಡಾಲರ್ ಇದ್ದಿದ್ದು, 119 ಡಾಲರ್‌ವರೆಗೂ ಹೆಚ್ಚಳ ಆಗಿದೆ.

ನಿರ್ಬಂಧ ಸಡಿಲಿಕೆಯ ತಾತ್ಕಾಲಿಕ ಕ್ರಮವು ಶುಕ್ರವಾರದಿಂದ ಜಾರಿಗೆ ಬಂದಿದ್ದು, ಏ. 19ರವರೆಗೆ ಜಾರಿಯಲ್ಲಿರಲಿದೆ.

ಹೊರ್ಮುಜ್ ಮುಕ್ತಗೊಳಿಸಲು 22 ರಾಷ್ಟ್ರಗಳ ಒತ್ತಾಯ

ದುಬೈ (ಎಪಿ): ದಾಳಿಯನ್ನು ನಿಲ್ಲಿಸುವಂತೆ ಹಾಗೂ ಹೊರ್ಮುಜ್ ಜಲಸಂಧಿಯನ್ನು ತೆರೆಯುವಂತೆ, 22 ರಾಷ್ಟ್ರಗಳು ಇರಾನ್ ಅನ್ನು ಶನಿವಾರ ಒತ್ತಾಯಿಸಿವೆ.

ಯುನೈಟೆಡ್ ಅರಬ್ ಎಮಿರೇಟ್ಸ್, ಬಹರೇನ್, ಬ್ರಿಟನ್, ಜರ್ಮನಿ, ಫ್ರಾನ್ಸ್, ಜಪಾನ್, ದಕ್ಷಿಣ ಕೊರಿಯಾ ಹಾಗೂ ಆಸ್ಟ್ರೇಲಿಯಾ ಸೇರಿದಂತೆ 22 ರಾಷ್ಟ್ರಗಳು, ಹೊರ್ಮುಜ್ ಜಲಸಂಧಿಯನ್ನು ಬಂದ್ ಮಾಡಿರುವ ಇರಾನ್‌ನ ನಡೆಯನ್ನು ಖಂಡಿಸಿವೆ. ವಾಣಿಜ್ಯ ಹಡಗುಗಳು, ತೈಲ ಹಾಗೂ ಅನಿಲ ಸೌಲಭ್ಯದ ಮೇಲಿನ ದಾಳಿಗೂ ಆಕ್ರೋಶ ವ್ಯಕ್ತಪಡಿಸಿವೆ.

‘ಪ್ರಪಂಚದ ಎಲ್ಲಾ ಭಾಗದ ಜನರು, ಅದರಲ್ಲೂ ದುರ್ಬಲ ವರ್ಗದವರು, ಇರಾನ್ ಕೈಗೊಂಡಿರುವ ಕ್ರಮಗಳ ಪರಿಣಾಮಗಳನ್ನು ಎದುರಿಸುತ್ತಿದ್ದಾರೆ’ ಎಂದು ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

ಸುದ್ದಿ 2 ನಿಮಿಷ

‘ನಾನು ಸಂಘರ್ಷ ನಿಲ್ಲಿಸುವ ಶಾಂತಿದೂತ ಪಾರಿವಾಳಗಳ ಪರ’

ನವದೆಹಲಿ (ಪಿಟಿಐ): ‘ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆಯ ಪರವಾಗಿ ನಾನಿದ್ದೇನೆ. ಇದೊಂದೇ ಅಲ್ಲ, ಎಲ್ಲ ಸಂಘರ್ಷಗಳಲ್ಲೂ ನನ್ನ ನಿಲುವು ಇದೇ ಆಗಿದೆ’ ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ಹೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಪಶ್ಚಿಮ ಏಷ್ಯಾದ ಸಂಘರ್ಷವು ಯೋಧರು, ಅಕ್ಕಪಕ್ಕದ ದೇಶಗಳು, ಭಾರತ ಸೇರಿದಂತೆ ಬಹುತೇಕ ಪ್ರಾಂತ್ಯಗಳಿಗೆ ಹಾನಿ ಉಂಟುಮಾಡಿದೆ. ಗಿಡುಗನಂತೆ ಎರಗುವ (ಆಕ್ರಮಣ) ಪರಿಸ್ಥಿತಿಯ ಶಮನಕ್ಕೆ ಕದನ ವಿರಾಮ ಬಯಸುವ ಶಾಂತಿದೂತ ಪಾರಿವಾಳಗಳ ಅಗತ್ಯವಿದೆ’ ಎಂದರು.

‘ಈ ಸಂಘರ್ಷ ಎಲ್ಲ ಮಿತಿಗಳನ್ನೂ ಮೀರಿದೆ. ತೈಲ ಬೆಲೆ ಏರಿದಂತೆ, ಅನಿಲ ಪೂರೈಕೆ ತಗ್ಗಿದಂತೆ ಜಗತ್ತಿನ ಎಲ್ಲರೂ ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಕೂಡಲೇ ಸಂಘರ್ಷವನ್ನು ನಿಲ್ಲಿಸಬೇಕಿದೆ’ ಎಂದು ಅವರು ಹೇಳಿದರು.

‘ಸಂಘರ್ಷ ಮುಂದುವರಿಯುವುದು ಯಾರಿಗೂ ಬೇಕಿಲ್ಲ. ಯುದ್ಧ ಅಂತ್ಯಕ್ಕೆ ಅಂತರರಾಷ್ಟ್ರೀಯ ಪ್ರಯತ್ನಗಳು ಆಗಬೇಕು. ನಾವು (ಭಾರತ) ಇದರ ನೇತೃತ್ವ ವಹಿಸಬೇಕು. ನಮ್ಮ ಜೊತೆಗೂಡುವ ಅನೇಕ ರಾಷ್ಟ್ರಗಳಿವೆ. ಎರಡೂ ಕಡೆಯವರು (ಇಸ್ರೇಲ್–ಅಮೆರಿಕ ಮತ್ತು ಇರಾನ್) ಹಿಂದಕ್ಕೆ ಸರಿಯುವ ಸಮಯ ಬಂದಿದೆ. ಅವರಿಗೆ ನಮ್ಮ ನೆರವು ಮತ್ತು ಉತ್ತೇಜನ ಬೇಕಷ್ಟೆ. ಭಾರತ ಈ ಪಾತ್ರ ವಹಿಸುವ ವಿಶ್ವಾಸ ನನಗಿದೆ’ ಎಂದು ಮಾಜಿ ವಿದೇಶಾಂಗ ರಾಜ್ಯ ಸಚಿವರೂ ಆದ ತರೂರ್ ತಿಳಿಸಿದರು.

‘ಸರ್ಕಾರದ ನಡೆ: ಭಾರತದ ನೈತಿಕ ಪುಕ್ಕಲುತನದ ದ್ಯೋತಕ’

ನವದೆಹಲಿ (ಪಿಟಿಐ): ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯನ್ನು ಖಂಡಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ವಿಫಲವಾಗಿರುವುದು, ಭಾರತದ ನಾಗರಿಕ ಮೌಲ್ಯಗಳ ಪತನ ಮತ್ತು ನೈತಿಕ ಪುಕ್ಕಲುತನದ ದ್ಯೋತಕವಾಗಿದೆ ಎಂದು ಕಾಂಗ್ರೆಸ್ ಶನಿವಾರ ಆರೋಪಿಸಿದೆ.

‘ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಜೊತೆ ಒಳ್ಳೆ ಸ್ನೇಹವಿರುವುದಾಗಿ ಹೇಳುವ ಮೋದಿ ಅವರು, ಅದನ್ನು ಕದನವಿರಾಮ ಜಾರಿಗೆ ಬಳಸಿಕೊಳ್ಳುತ್ತಿಲ್ಲ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ‘ಎಕ್ಸ್’ನಲ್ಲಿ ಟೀಕಿಸಿದರು.

‘ಅಮೆರಿಕ ಮತ್ತು ಇಸ್ರೇಲ್ ದಾಳಿಯಿಂದಾಗಿ ಭಾರತ ಸೇರಿದಂತೆ ಜಗತ್ತಿನೆಲ್ಲೆಡೆ ಆರ್ಥಿಕ ತಲ್ಲಣ ಉಂಟಾಗಿದೆ. ಈ ದಾಳಿಯನ್ನು ಮೋದಿ ಸರ್ಕಾರ ಟೀಕಿಸಿದೆಯೇ ಅಥವಾ ಖಂಡಿಸಿದೆಯೇ? ಇಲ್ಲ ಎಂಬುವುದು ಅದಕ್ಕೆ ಉತ್ತರ’ ಎಂದರು.

ಬ್ರಿಟನ್ ನೆಲೆ ಮೇಲೆ ದಾಳಿ

ಒಂದನೇ ಪುಟದಿಂದ...

ಡಿಯೆಗೊ ಗಾರ್ಸಿಯಾ ವಾಯುನೆಲೆಯು ಹಿಂದೂ ಮಹಾಸಾಗರದಲ್ಲಿ ಇರುವ ಚಾಗೋಸ್ ದ್ವೀಪ ಸಮೂಹದ ಭಾಗ. ಈ ದ್ವೀಪಗಳು 1814ರಿಂದ ಬ್ರಿಟಿಷ್ ನಿಯಂತ್ರಣದಲ್ಲಿದ್ದು, ಅಮೆರಿಕದ 2,500 ಸಿಬ್ಬಂದಿಗೆ ನೆಲೆಯಾಗಿದೆ. ಅಮೆರಿಕದ ಹಲವು ಕಾರ್ಯಾಚರಣೆಗಳಲ್ಲಿ ಇದು ಬಳಕೆಯಾಗಿದೆ.

ಬ್ರಿಟನ್ ಖಂಡನೆ: ಇರಾನ್‌ನ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿಯನ್ನು ಬ್ರಿಟನ್ ತೀವ್ರವಾಗಿ ಖಂಡಿಸಿದೆ. ಈ ದಾಳಿ ಮೂಲಕ ಇರಾನ್ ಅಜಾಗರೂಕವಾಗಿ ವರ್ತಿಸಿದೆ ಎಂದು ಅದು ಟೀಕಿಸಿದೆ. ಅಲ್ಲದೆ, ಹೊರ್ಮುಜ್ ಜಲಸಂಧಿಯ ಮೇಲೆ ನಿಯಂತ್ರಣ ಸಾಧಿಸುವ ಯತ್ನ, ಬ್ರಿಟನ್ ಹಿತಾಸಕ್ತಿ ಮತ್ತು ಮಿತ್ರರಾಷ್ಟ್ರ ಭದ್ರತೆಗೆ ಬೆದರಿಕೆಯಾಗಿದೆ ಎಂದು ಬ್ರಿಟನ್‌ನ ರಕ್ಷಣಾ ಸಚಿವಾಲಯ ಆಕ್ರೋಶ ವ್ಯಕ್ತಪಡಿಸಿದೆ.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಲ್ಲಿ ಇಲ್ಲಿಯವರೆಗೆ ಬ್ರಿಟನ್ ನೇರವಾಗಿ ಭಾಗಿಯಾಗಿಲ್ಲ. ಆದರೆ, ಅಮೆರಿಕಕ್ಕೆ ತನ್ನ ನೆಲೆಗಳನ್ನು ಬಳಸಲು ಅವಕಾಶ ಮಾಡಿಕೊಟ್ಟಿದೆ. ಇದೀಗ ಇರಾನ್ ಕ್ಷಿಪಣಿ ದಾಳಿಯಿಂದ ಅದು ಕುಪಿತಗೊಂಡಿದೆ.

ಟ್ರಂಪ್, ಕಾಟ್ಜ್ ವ್ಯತಿರಿಕ್ತ ಹೇಳಿಕೆ: ‘ಪಶ್ಚಿಮ ಏಷ್ಯಾದಲ್ಲಿ ಸೇನಾ ಕಾರ್ಯಾಚರಣೆಗಳನ್ನು ಕಡಿಮೆ ಮಾಡುವ ಬಗ್ಗೆ ಯೋಚಿಸುತ್ತಿರುವುದಾಗಿ’ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಹೇಳಿದ್ದಾರೆ. ಆದರೆ ಇದಕ್ಕೆ ವ್ಯತಿರಿಕ್ತ ಎಂಬಂತೆ, ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಅವರು, ‘ಇರಾನ್ ಮೇಲಿನ ದಾಳಿಗಳು ಮುಂದಿನ ವಾರಗಳಲ್ಲಿ ಗಮನಾರ್ಹವಾಗಿ ಹೆಚ್ಚಾಗಲಿವೆ’ ಎಂದಿದ್ದಾರೆ. ಹೀಗಾಗಿ ಸದ್ಯಕ್ಕೆ ಯುದ್ಧ ನಿಲ್ಲುವ ಲಕ್ಷಣಗಳು ಗೋಚರಿಸುತ್ತಿಲ್ಲ.

ಇರಾನ್ ತನ್ನ ಮೇಲೆ ಕ್ಷಿಪಣಿಗಳನ್ನು ಹಾರಿಸುವುದನ್ನು ಮುಂದುವರಿಸಿದೆ ಎಂದು ಇಸ್ರೇಲ್ ಹೇಳಿದೆ. ಸೌದಿ ಅರೇಬಿಯಾವು ಪೂರ್ವ ಭಾಗದಲ್ಲಿ ಒಂದೆರಡು ಗಂಟೆಗಳಲ್ಲಿ ಬಂದ 20 ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ತಿಳಿಸಿದೆ. ಇನ್ನೊಂದೆಡೆ, ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆಯಲ್ಲಿ ಏರಿಕೆ ದಾಖಲಾದ ಬಳಿಕ ಷೇರು ಮಾರುಕಟ್ಟೆಯಲ್ಲಿ ಇನ್ನಷ್ಟು ಕುಸಿತ ಕಂಡಿದೆ. ಇದರ ಬೆನ್ನಲ್ಲೇ ಟ್ರಂಪ್ ಆಡಳಿತವು, ಈಗಾಗಲೇ ಹಡಗುಗಳಲ್ಲಿ ತುಂಬಿರುವ ಇರಾನ್ ತೈಲದ ಮೇಲಿನ ನಿರ್ಬಂಧಗಳನ್ನು ತೆಗೆದಿರುವುದಾಗಿ ಘೋಷಿಸಿದೆ.

ಇದರ ನಡುವೆಯೇ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರು, ‘ಇಸ್ರೇಲ್ ಹೊರತುಪಡಿಸಿ ನೆರೆಹೊರೆಯ ದೇಶಗಳ ಜತೆ ನಮಗೆ ಯಾವುದೇ ವಿವಾದ ಇಲ್ಲ’ ಎಂದು ತಿಳಿಸಿದ್ದಾರೆ.

ಇಸ್ರೇಲ್‌ನ ರಿಶಾನ್ ಲೆಜಿಯಾನ್ ಮೇಲೆ ಇರಾನ್ ಶನಿವಾರ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಅಲ್ಲಿನ ಶಿಶುವಿಹಾರ ಕಟ್ಟಡ ಧ್ವಂಸಗೊಂಡಿದೆ —ಎಪಿ ಚಿತ್ರ

ನಟಾಂಜ್ ಪರಮಾಣು ಸ್ಥಾವರಕ್ಕೆ ಹಾನಿ

ಅಮೆರಿಕ ಮತ್ತು ಇಸ್ರೇಲ್ ಶನಿವಾರ ನಡೆಸಿದ ವೈಮಾನಿಕ ದಾಳಿಯಲ್ಲಿ ಇರಾನ್‌ನ ನಟಾಂಜ್ ಪರಮಾಣು ಸ್ಥಾವರಕ್ಕೆ ಹಾನಿಯಾಗಿದೆ, ಆದರೆ ಯಾವುದೇ ವಿಕಿರಣ ಸೋರಿಕೆಯಾಗಿಲ್ಲ ಎಂದು ಇರಾನ್ ತಿಳಿಸಿದೆ.

ಪಶ್ಚಿಮ ಏಷ್ಯಾದಲ್ಲಿ ಸೇನಾ ಕಾರ್ಯಾಚರಣೆಗಳನ್ನು ಕಡಿಮೆಗೊಳಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ ಮರುದಿನವೇ ಈ ದಾಳಿ ನಡೆದಿದೆ.

ಯುದ್ಧ ಆರಂಭದ ಮೊದಲ ವಾರದಲ್ಲಿಯೇ ನಟಾಂಜ್ ಪರಮಾಣು ಸ್ಥಾವರದ ಮೇಲೆ ದಾಳಿ ನಡೆದಿತ್ತು. ಆಗ ಕೆಲ ಕಟ್ಟಡಗಳಿಗೆ ಹಾನಿಯಾಗಿತ್ತು. ಆದರೆ ವಿಕಿರಣ ಸೋರಿಕೆ ಆಗುವ ಸಾಧ್ಯತೆಗಳು ಕಡಿಮೆ ಎಂದು ಅಂತರರಾಷ್ಟ್ರೀಯ ಅಣುಶಕ್ತಿ ಏಜೆನ್ಸಿ (ಐಎಇಎ) ಹೇಳಿತ್ತು. ಇದೀಗ ನಟಾಂಜ್ ಮೇಲೆ ಎರಡನೇ ಬಾರಿ ದಾಳಿಗಳಾಗಿವೆ.

‘ಅಮೆರಿಕದ ‘ಎಫ್–35’ಕ್ಕೆ ಹಾನಿ’

ಒಂದನೇ ಪುಟದಿಂದ...

‘ಅತ್ಯಾಧುನಿಕವಾದ ಎಫ್–35 ಅನ್ನು ಗುರಿಯಾಗಿಸಿ ದಾಳಿ ನಡೆಸಿ ಯಶಸ್ವಿಯಾಗಿರುವುದು ವಿಶ್ವದಲ್ಲಿಯೇ ಮೊದಲು. ಅದು ಇರಾನ್ ಹೆಸರಿನಲ್ಲಿ ದಾಖಲಾಗಿದೆ’ ಎಂದು ಮುಂಬೈನಲ್ಲಿರುವ ಇರಾನ್ ಕಾನ್ಸುಲೇಟ್ ಜನರಲ್ ಕಚೇರಿ ‘ಎಕ್ಸ್’ನಲ್ಲಿ ಉಲ್ಲೇಖಿಸಿದೆ.

ದೃಢಪಡಿಸದ ಅಮೆರಿಕ: ಎಫ್–35ರ ಮೇಲಿನ ಇರಾನ್ ದಾಳಿಯನ್ನು ಅಮೆರಿಕ ದೃಢಪಡಿಸಿಲ್ಲ. ಆದರೆ, ಅಮೆರಿಕದ ಅತ್ಯಂತ ಮುಂದುವರಿದ ಯುದ್ಧ ವಿಮಾನಗಳಲ್ಲಿ ಒಂದು ಇರಾನ್ ಮೇಲಿನ ಯುದ್ಧ ಕಾರ್ಯಾಚರಣೆ ಬಳಿಕ ತುರ್ತು ಭೂಸ್ಪರ್ಶ ಮಾಡಿದ್ದು, ಪೈಲಟ್ ಆರೋಗ್ಯ ಸ್ಥಿರವಾಗಿದೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ಹೇಳಿದೆ.

ಇರಾನ್ ಅಧ್ಯಕ್ಷರ ಜತೆ ಮೋದಿ ಚರ್ಚೆ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷವು ಪ್ರಾದೇಶಿಕ ಸ್ಥಿರತೆಗೆ ಬೆದರಿಕೆ ಹಾಕುತ್ತಿದ್ದು, ಜಾಗತಿಕ ಪೂರೈಕೆ ಸರಪಳಿಗಳಿಗೆ ಅಡ್ಡಿ ಉಂಟುಮಾಡುತ್ತಿದೆ ಎಂದಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಈ ಪ್ರದೇಶದಲ್ಲಿನ ನಿರ್ಣಾಯಕ ಮೂಲ ಸೌಕರ್ಯಗಳ ಮೇಲಿನ ದಾಳಿಯನ್ನು ಖಂಡಿಸಿದ್ದಾರೆ.

ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರಿಗೆ ಶನಿವಾರ ದೂರವಾಣಿ ಕರೆ ಮಾಡಿ, ಈದ್ ಮತ್ತು ನೌರುಜ್ ಹಬ್ಬದ ಶುಭಾಶಯ ತಿಳಿಸಿದ ಮೋದಿ ಅವರು, ‘ಈ ಹಬ್ಬದ ಋತುವು ಪಶ್ಚಿಮ ಏಷ್ಯಾಕ್ಕೆ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿ ತರಲಿದೆ’ ಎಂದು ಆಶಿಸಿದ್ದಾರೆ.

ನೌಕಾಯಾನದ ಸ್ವಾತಂತ್ರ್ಯವನ್ನು ಕಾಪಾಡುವ, ಹಡಗು ಮಾರ್ಗಗಳನ್ನು ಮುಕ್ತ ಮತ್ತು ಸುರಕ್ಷಿತವಾಗಿ ಇರಿಸುವುದನ್ನು ಖಚಿಪಡಿಸಿಕೊಳ್ಳುವ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದಾಗಿ ಮೋದಿ ಅವರು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.



ನರೇಂದ್ರ ಮೋದಿ

ಟ್ರಂಪ್ ಬೆದರಿಕೆ: ‘ವಿಮಾನ ನಿಲ್ದಾಣದ ಸುರಕ್ಷತೆಗೆ ಹಣಕಾಸು ಒದಗಿಸಲು ಕಾಂಗ್ರೆಸ್ ಸಂಸದರು ಒಪ್ಪದಿದ್ದರೆ, ತಕ್ಷಣದಿಂದ ಜಾರಿಗೆ ಬರುವಂತೆ ಅಮೆರಿಕದ ವಿಮಾನ ನಿಲ್ದಾಣಗಳಲ್ಲಿ ವಲಸೆ ಮತ್ತು ಕಸ್ಟಮ್ಸ್ ಜಾರಿ ಅಧಿಕಾರಿಗಳನ್ನು ನಿಯೋಜಿಸಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ್ದಾರೆ.

ಕೇರಳದ ವ್ಯಕ್ತಿ ಸಾವು: ಕೇಂದ್ರಕ್ಕೆ ಮನವಿ

ತಿರುವನಂತಪುರ (ಪಿಟಿಐ): ‘ಇಸ್ರೇಲ್ ಮೇಲೆ ಇರಾನ್ ನಡೆಸಿದ ವೈಮಾನಿಕ ದಾಳಿಯಲ್ಲಿ ಕೇರಳದ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಮಾಹಿತಿ ಇದ್ದು, ಇದನ್ನು ಪರಿಶೀಲಿಸಿ, ಖಚಿತಪಡಿಸಬೇಕು’ ಎಂದು ಕೇರಳ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

‘ಇರಾನ್ ನಡೆಸಿದ ದಾಳಿಯಲ್ಲಿ ಕೇರಳದ ವ್ಯಕ್ತಿಯೊಬ್ಬರು ಮೃತಪಟ್ಟಿರುವುದಾಗಿ ಇಸ್ರೇಲ್‌ನಲ್ಲಿ ಕೆಲಸ ಮಾಡುತ್ತಿರುವ ಕೇರಳ ಕಾರ್ಮಿಕರ ಸಮುದಾಯವು ಮಾಹಿತಿ ನೀಡಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲಿಸಬೇಕು’ ಎಂದು ಅನಿವಾಸಿ ಕೇರಳಿಗರ ಸಂಸ್ಥೆ ‘ನೋರ್ಕಾ’ದ ಅಧಿಕಾರಿ ಹೇಳಿರುವುದಾಗಿ ಸುದ್ದಿಸಂಸ್ಥೆ ವರದಿ ಮಾಡಿದೆ.

‘ಬಿಜೆಪಿ ಸರ್ಕಾರಕ್ಕೆ ಗುರಿ ಇಲ್ಲ’

ನವದೆಹಲಿ (ಪಿಟಿಐ): ‘ದೇಶ ಎದುರಿಸುತ್ತಿರುವ ಪ್ರಸ್ತುತ ಆರ್ಥಿಕ ಬಿಕ್ಕಟ್ಟಿಗೆ ಉತ್ತರಿಸಲು ಮೋದಿ ಸರ್ಕಾರವು ಯಾವುದೇ ಕಾರ್ಯತಂತ್ರ ಹೊಂದಿಲ್ಲ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.



ರಾಹುಲ್

‘ಕೇಂದ್ರ ಸರ್ಕಾರಕ್ಕೆ ಯಾವುದೇ ಗುರಿಯಿಲ್ಲ. ದಿನಬಳಕೆಯ ವಸ್ತುಗಳ ಬೆಲೆ ಏರಿಕೆಯಾಗಿದ್ದು, ಪ್ರತಿಯೊಬ್ಬರ ಮನೆ ಮೇಲೂ ಪರಿಣಾಮ ಬೀರುತ್ತಿದೆ’ ಎಂದು ಅವರು ಹೇಳಿದ್ದಾರೆ.

‘ಡಾಲರ್ ಎದುರು ರೂಪಾಯಿ ಮೌಲ್ಯದ ₹100ರತ್ತ ದಾಪುಗಾಲಿಡುತ್ತಿದೆ. ಇಂಧನ ಕೈಗಾರಿಕೆ ಬೆಲೆ ಏರಿಕೆಯಾಗಿದ್ದು, ಇದು ಹಣದುಬ್ಬರದ ಸ್ಪಷ್ಟ ಮುನ್ಸೂಚನೆಯಾಗಿದೆ’ ಎಂದು ತಿಳಿಸಿದ್ದಾರೆ.

‘ಸೈಪ್ರಸ್ ವಾಯುನೆಲೆ ಬಳಸುವುದಿಲ್ಲ’

‘ಸೈಪ್ರಸ್‌ನಲ್ಲಿರುವ ತನ್ನ ವಾಯುನೆಲೆಯನ್ನು ಇರಾನ್ ವಿರುದ್ಧದ ಆಕ್ರಮಣಕಾರಿ ಕಾರ್ಯಾಚರಣೆಗೆ ಬ್ರಿಟನ್ ಬಳಸುವುದಿಲ್ಲ’ ಎಂದು ಸೈಪ್ರಸ್ ಸರ್ಕಾರದ ವಕ್ತಾರ ಹೇಳಿದ್ದಾರೆ.

ಪ್ರಧಾನಿ ಕಿಯರ್ ಸ್ಟಾರ್ಮರ್ ಮತ್ತು ಸೈಪ್ರಸ್ ಅಧ್ಯಕ್ಷ ನಿಕೊಸ್ ಕ್ರಿಸ್ಟೊಡೌಲೈಡ್ಸ್ ನಡುವಿನ ದೂರವಾಣಿ ಸಂಭಾಷಣೆಯನ್ನು ಉಲ್ಲೇಖಿಸಿರುವ ಅವರು, ‘ಅಂತಿಮವಾಗಿ ಸೈಪ್ರಸ್‌ನಲ್ಲಿರುವ ಬ್ರಿಟಿಷ್ ವಾಯುನೆಲೆಯನ್ನು ಯಾವುದೇ ಕಾರ್ಯಾಚರಣೆಗೆ ಬಳಸುವುದಿಲ್ಲ’ ಎಂದು ಬ್ರಿಟನ್ ಪ್ರಧಾನಿ ಪುನರುಚ್ಚರಿಸಿದ್ದಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇರಾನ್ ಮಾರ್ಚ್ 2ರಂದು ನಡೆಸಿದ ಡ್ರೋನ್ ದಾಳಿಯಲ್ಲಿ ಸೈಪ್ರಸ್‌ನಲ್ಲಿರುವ ಬ್ರಿಟನ್ ವಾಯುನೆಲೆ ಸಮೀಪ ಅಲ್ಪ ಪ್ರಮಾಣದ ಹಾನಿಯಾಗಿತ್ತು.

ವೈದ್ಯೆಯ ಹತ್ಯೆ: ಶಿಕ್ಷಕನಿಗೆ ಜೀವಾವಧಿ ಶಿಕ್ಷೆ

ಕೊಲ್ಲಂ (ಪಿಟಿಐ): ಕರ್ತವ್ಯನಿರತ ವೈದ್ಯೆಯನ್ನು ಕ್ರೂರವಾಗಿ ಹತ್ಯೆ ಮಾಡಿದ್ದ ಶಿಕ್ಷಕನಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಜೀವಾವಧಿ ಶಿಕ್ಷೆಯನ್ನು ವಿಧಿಸಿದೆ.

ಡಾ. ವಂದನಾ ದಾಸ್ ಕೊಲೆಯಾದ ವೈದ್ಯೆ. ಜಿ. ಸಂದೀಪ್ ಶಿಕ್ಷೆಗೊಳಗಾದ ಅಪರಾಧಿ. ತಾಲ್ಲೂಕು ಆಸ್ಪತ್ರೆಯ ಒಳಗೆ 2023ರ ಮೇ ತಿಂಗಳಿನಲ್ಲಿ ವೈದ್ಯೆಯನ್ನು ಭೀಕರವಾಗಿ ಹತ್ಯೆ ಮಾಡಲಾಗಿತ್ತು.

ಅಪರಾಧಿಗೆ ಗರಿಷ್ಠ ಶಿಕ್ಷೆ ವಿಧಿಸಬೇಕು ಎಂದು ಸಂತ್ರಸ್ತೆಯ ಕುಟುಂಬ ಆಗ್ರಹಿಸಿದೆ. ಗಲ್ಲು ಶಿಕ್ಷೆ ವಿಧಿಸುವಂತೆ ಮನವಿ ಸಲ್ಲಿಸುವುದಾಗಿ ಪ್ರಾಸಿಕ್ಯೂಷನ್ ಶನಿವಾರ ತಿಳಿಸಿದೆ.

ಹತ್ಯೆ ನಡೆದ ಸಂದರ್ಭ ಅಸ್ತಿತ್ವದಲ್ಲಿದ್ದ ಭಾರತೀಯ ದಂಡ ಸಂಹಿತೆ (ಐಪಿಸಿ) ಅಡಿಯಲ್ಲಿ ವಿವಿಧ ಅಪರಾಧಗಳಿಗಾಗಿ ಶಿಕ್ಷಕ ಸಂದೀಪನಿಗೆ ನ್ಯಾಯಾಲಯವು 30 ವರ್ಷ ಶಿಕ್ಷೆ ವಿಧಿಸಿದೆ. ಈ ಶಿಕ್ಷೆಯ ಅವಧಿ ಮುಗಿದ ನಂತರ ವಂದನಾ ಅವರ ಹತ್ಯೆ ಪ್ರಕರಣದ ಜೀವಾವಧಿ ಶಿಕ್ಷೆ ಶುರುವಾಗಲಿದೆ ಎಂದು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ (ಎಸ್‌ಪಿಪಿ) ಪ್ರತಾಪ್ ಜಿ. ಪಡಿಕ್ಕಲ್ ಪತ್ರಕರ್ತರಿಗೆ ತಿಳಿಸಿದ್ದಾರೆ.

‘ಶಿಕ್ಷಕ ಸಂದೀಪ್‌ಗೆ ಗರಿಷ್ಠ ಶಿಕ್ಷೆ ವಿಧಿಸುವಂತೆ ಪ್ರಾಸಿಕ್ಯೂಷನ್ ಮನವಿ ಮಾಡಿಕೊಂಡಿತ್ತು. ಆದರೆ ಇದು ಅಪರೂಪದ ಪ್ರಕರಣವಲ್ಲ ಎಂದು ನ್ಯಾಯಾಲಯ ಭಾವಿಸಿರುವಂತಿದೆ. ಅದಕ್ಕಾಗಿಯೇ ಮರಣದಂಡನೆ ವಿಧಿಸಿಲ್ಲ. ತೀರ್ಪಿನ ವಿವರಕ್ಕಾಗಿ ಕಾಯಲಾಗುತ್ತಿದೆ. ಜೀವಾವಧಿ ಶಿಕ್ಷೆಯನ್ನು ಮರಣದಂಡನೆಗೆ ಹೆಚ್ಚಿಸುವಂತೆ ಕೋರಿ ಮೇಲ್ಮನವಿ ಸಲ್ಲಿಸಲು ಪ್ರಾಸಿಕ್ಯೂಷನ್‌ಗೆ ಶಿಫಾರಸು ಮಾಡುವುದಾಗಿ’ ಎಸ್‌ಪಿಪಿ ಹೇಳಿದ್ದಾರೆ.

‘ನ್ಯಾಯಾಲಯದ ಆದೇಶವು ಕುಟುಂಬಕ್ಕೆ ಒಂದಷ್ಟು ಸಮಾಧಾನ ನೀಡಿದೆ. ಆದರೆ, ನನ್ನ ಮಗಳ ಸಾವಿಗೆ ನ್ಯಾಯ ಸಿಕ್ಕಿದೆ ಎಂದು ಹೇಳಲು ಸಾಧ್ಯವಿಲ್ಲ. ಪಬ್ಲಿಕ್ ಪ್ರಾಸಿಕ್ಯೂಟರ್‌ನೊಂದಿಗೆ ಚರ್ಚಿಸಿದ ನಂತರ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು’ ಎಂದು ಸಂತ್ರಸ್ತೆಯ ತಂದೆ ತಿಳಿಸಿದ್ದಾರೆ.

‘ನಾವು ಅಪರಾಧಿಗೆ ಗರಿಷ್ಠ ಶಿಕ್ಷೆ ವಿಧಿಸಿ ಎಂದು ಕೋರಬಹುದು. ಆದರೆ ಯಾವ ಶಿಕ್ಷೆ ನೀಡಬೇಕು ಎಂಬುದನ್ನು ನ್ಯಾಯಾಲಯ ನಿರ್ಧರಿಸಲಿದೆ. ಈ ನಿರ್ಧಾರದ ವಿರುದ್ಧ ಕುಟುಂಬ ಮೇಲ್ಮನವಿ ಹೋಗಲಿದೆ. ನನ್ನ ಮಗಳನ್ನು 27 ಬಾರಿ ಇರಿದು ಕೊಂದಿದ್ದಾನೆ. ಆಕೆ ಅನುಭವಿಸಿದ ನೋವನ್ನೇ ಆತನೂ ಅನುಭವಿಸಬೇಕು’ ಎಂದು ವಂದನಾ ಅವರ ತಾಯಿ ಕಣ್ಣೀರಿಟ್ಟರು.

ಕೊಲೆ, ಸಾಕ್ಷ್ಯ ನಾಶ ಸೇರಿದಂತೆ ಐಪಿಸಿ ಅಡಿಯಲ್ಲಿ ನ್ಯಾಯಾಲಯವು ಮಾರ್ಚ್ 17ರಂದು ವಿವಿಧ ಅಪರಾಧಗಳಿಗಾಗಿ ಸಂದೀಪ್‌ಗೆ ಶಿಕ್ಷೆ ವಿಧಿಸಿತ್ತು.

ತಿರುಮಲ: ಆಹಾರ ಪರೀಕ್ಷಾ ಪ್ರಯೋಗಾಲಯ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರ ಪ್ರದೇಶದ ತಿರುಮಲದಲ್ಲಿ ನಿರ್ಮಾಣವಾಗಿರುವ ಆಹಾರ ಪರೀಕ್ಷಾ ಪ್ರಯೋಗಾಲಯವನ್ನು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಶನಿವಾರ ಉದ್ಘಾಟಿಸಿದರು. ದೇಶದಲ್ಲಿ ಇದೇ ಮೊದಲ ಬಾರಿಗೆ ದೇವಸ್ಥಾನವೊಂದರ ಬಳಿ ಇಂಥ ಪ್ರಯೋಗಾಲಯ ನಿರ್ಮಾಣವಾಗಿದೆ.

ತಿರುಮಲ ತಿರುಪತಿ ದೇವಸ್ಥಾನದ ಬಳಿ ಇರುವ ಈ ಪ್ರಯೋಗಾಲಯಕ್ಕೆ ₹25 ಕೋಟಿ ವೆಚ್ಚವಾಗಿದೆ. ದೇಗುಲದಲ್ಲಿ ನೀಡಲಾಗುವ ಶ್ರೀವಾರಿ ಪ್ರಸಾದ ಮತ್ತು ಅನ್ನಪ್ರಸಾದಕ್ಕೆ ಬಳಸಲಾಗುವ ವಸ್ತುಗಳನ್ನೂ ಕೂಡ ಇಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ.

ಖಮೇನಿ ಹತ್ಯೆಗೆ ಅಮೆರಿಕ, ಇಸ್ರೇಲ್ ವಿರುದ್ಧ ಆಕ್ರೋಶ

ಧ್ವಜ ತುಳಿದು ಮುಸ್ಲಿಮರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಗೌರಿಬಿದನೂರು: ಶಿಯಾ ಮುಸ್ಲಿಮರ ಪ್ರಾಬಲ್ಯವಿರುವ ತಾಲ್ಲೂಕಿನ ಅಲೀಪುರ ಗ್ರಾಮದಲ್ಲಿ ಶನಿವಾರ ಈದ್ ಉಲ್ ಫಿತ್ರ್ ಸಾಮೂಹಿಕ ಪ್ರಾರ್ಥನೆ ವೇಳೆ ಅಮೆರಿಕ ಮತ್ತು ಇಸ್ರೇಲ್ ಧ್ವಜಗಳನ್ನು ಚಪ್ಪಲಿಯಿಂದ ತುಳಿಯಲಾಯಿತು.

ಕಪ್ಪುಪಟ್ಟಿ ಧರಿಸಿ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದ ಶಿಯಾ ಮುಸ್ಲಿಮರು ಅಮೆರಿಕ ಮತ್ತು ಇಸ್ರೇಲ್ ಧ್ವಜಗಳನ್ನು ನೆಲದಲ್ಲಿ ಹಾಸಿ ಚಪ್ಪಲಿಯಿಂದ ತುಳಿದು ಆಕ್ರೋಶ ವ್ಯಕ್ತಪಡಿಸಿದರು.

‘ನಾವು ಪ್ರತಿ ವರ್ಷವೂ ರಂಜಾನ್ ಹಬ್ಬವನ್ನು ಅದ್ದೂರಿಯಾಗಿ ಆಚರಿಸುತ್ತಿದ್ದೆವು. ಜೈನಭಿಯಾ ಮಸೀದಿವರೆಗೆ ಮೆರವಣಿಗೆ ಬರುತ್ತಿದ್ದೆವು. ಆದರೆ ಈ ಬಾರಿ ನಮ್ಮ ಧಾರ್ಮಿಕ ಗುರು ಅಯಾತೊಲ್ಲಾ ಅಲಿ ಖಮೇನಿ ಹತ್ಯೆ ಆಗಿದ್ದಾರೆ. ಅವರ ನಿಧನದ ಪ್ರಯುಕ್ತ ಮೆರವಣಿಗೆ ಇಲ್ಲದೆ ಕೇವಲ ಪ್ರಾರ್ಥನೆ, ನಮಾಜ್‌ಗೆ ಸೀಮಿತವಾಗಿ ಹಬ್ಬ ಆಚರಿಸಲಾಗುತ್ತಿದೆ’ ಎಂದು ಅಲೀಪುರದ ಅಂಜುಮಾನ್ ಜಾಫ್ರಿಯಾ ಸಂಘದ ಅಧ್ಯಕ್ಷ ಮೀರ ಅಲಿ ಅಬ್ಬಾಸ್ ಹೇಳಿದರು.

ದಕ್ಷಿಣ ಭಾರತದಲ್ಲೇ ಅತಿ ಹೆಚ್ಚು ಶಿಯಾ ಮುಸ್ಲಿಮರು ವಾಸಿಸುತ್ತಿರುವ ಪಟ್ಟಣ ಅಲೀಪುರ.

ಖಮೇನಿ ಹತ್ಯೆಯಾದ ಸಂದರ್ಭದಲ್ಲಿ ಅಲೀಪುರದ ಶಿಯಾ ಮುಸ್ಲಿಮರು ಕಣ್ಣೀರು ಹಾಕಿದ್ದರು. ಪಟ್ಟಣದಲ್ಲಿ ಅಘೋಷಿತ ಬಂದ್ ಸ್ಥಿತಿ ಇತ್ತು. ಮೂರು ದಿನ ಶೋಕಾಚರಣೆ ಸಹ ನಡೆಸಿದ್ದರು.

ಮುಖ್ಯಾಂಶಗಳು

- ಈದ್ ಉಲ್ ಫಿತ್ರ್ ಸಾಮೂಹಿಕ ಪ್ರಾರ್ಥನೆ ವೇಳೆ ಘಟನೆ
- ಕಪ್ಪುಪಟ್ಟಿ ಧರಿಸಿ ಭಾಗವಹಿಸಿದ್ದ ಶಿಯಾ ಮುಸ್ಲಿಮರು
- ಮೆರವಣಿಗೆ ನಡೆಸದೆ ಹಬ್ಬ ಆಚರಣೆ

ಸಾಮೂಹಿಕ ಪ್ರಾರ್ಥನೆ ವೇಳೆ ಹೆಜ್ಜೇನು ದಾಳಿ

ದಾವಣಗೆರೆ: ತಾಲ್ಲೂಕಿನ ಆನಗೋಡು ಗ್ರಾಮದ ಈದ್ಗಾ ಮೈದಾನದಲ್ಲಿ ಶುಕ್ರವಾರ ಬೆಳಿಗ್ಗೆ ‘ಈದ್ ಉಲ್ ಫಿತ್ರ್’ ಅಂಗವಾಗಿ ಸಾಮೂಹಿಕ ಪ್ರಾರ್ಥನೆಯಲ್ಲಿ ತೊಡಗಿದ್ದವರ ಮೇಲೆ ಹೆಜ್ಜೇನು ದಾಳಿ ನಡೆಸಿದೆ. 25ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಗಂಭೀರವಾಗಿ ಗಾಯಗೊಂಡಿದ್ದ 11 ಜನರನ್ನು ಇಲ್ಲಿನ ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

‘ಆಸ್ಪತ್ರೆಗೆ ದಾಖಲಾಗಿರುವ ಮೂವರು ಮಕ್ಕಳು ಸೇರಿದಂತೆ 11 ಜನರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ವ್ಯಕ್ತಿ ಯೊಬ್ಬರನ್ನು ತೀವ್ರ ನಿಗಾ ಘಟಕದಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಎಲ್ಲರ ಆರೋಗ್ಯವೂ ಸ್ಥಿರವಾಗಿದೆ’ ಎಂದು ಜಿಲ್ಲಾ ಆಸ್ಪತ್ರೆಯ ಅಧೀಕ್ಷಕ ಎಂ.ಬಿ.ನಾಗೇಂದ್ರಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

ಶಾಸಕ ಕೆ.ಎಸ್. ಬಸವಂತಪ್ಪ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

‘ಪೊಲೀಸರ ವಿಡಿಯೊ ಹಾಕುವ ಚಾಳಿ: ವಿಚಾರಣೆಗೆ ಅಪಾಯ’

ನವದೆಹಲಿ (ಪಿಟಿಐ): ಜನರು ಮೊಬೈಲ್ ಫೋನ್‌ಗಳಲ್ಲಿ ಚಿತ್ರೀಕರಿಸಿದ ವಿಡಿಯೊಗಳನ್ನು ತಕ್ಷಣವೇ ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವ ಪ್ರವೃತ್ತಿಯ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಇಂತಹ ಚಟುವಟಿಕೆಗಳಿಂದ ನ್ಯಾಯಯುತ ವಿಚಾರಣೆ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ ಎಂದು ಹೇಳಿದೆ.

ಭಾರತದ ಮುಖ್ಯನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ ಮತ್ತು ವಿಪುಲ್ ಎಂ ಪಂಚೋಲಿ ಅವರನ್ನೊಳಗೊಂಡ ಪೀಠ ಶುಕ್ರವಾರ ಈ ಹೇಳಿಕೆ ನೀಡಿದೆ.

‘ಪೊಲೀಸರು ಸಾಮಾಜಿಕ ಮಾಧ್ಯಮಗಳಲ್ಲಿ ಆರೋಪಿಗಳ ವಿಡಿಯೊ ಮತ್ತು ಫೋಟೊಗಳನ್ನು ಅಪ್‌ಲೋಡ್ ಮಾಡುತ್ತಾ, ಜನರ ಮನಸ್ಸಿನಲ್ಲಿ ಪಕ್ಷಪಾತದ ಭಾವನೆಯನ್ನು ಸೃಷ್ಟಿಸುತ್ತಾರೆ’ ಎಂದು ಆರೋಪಿಸಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸಿತು.

ಮತ್ತೊಂದು ಪ್ರಕರಣದಲ್ಲಿ, ‘ಪೊಲೀಸರು ಮಾಧ್ಯಮದವರಿಗೆ ಮಾಹಿತಿ ನೀಡುವ ವಿಚಾರದಲ್ಲೂ ಮಾರ್ಗಸೂಚಿಗಳನ್ನು ರೂಪಿಸುವಂತೆ ನ್ಯಾಯಾಲಯವು ಈಗಾಗಲೇ ರಾಜ್ಯಗಳನ್ನು ಕೇಳಿದೆ. ಇದರಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚುವಂತಹ ಪೋಸ್ಟ್‌ಗಳೂ ಸೇರುತ್ತವೆ’ ಎಂದು ಪಿಐಎಲ್ ವಾದಿಸಿದೆ.

ಈ ಮಾರ್ಗಸೂಚಿಗಳಿಂದ ಬದಲಾವಣೆ ಆಗಲಿರುವುದನ್ನು ನಿರೀಕ್ಷಿಸುವಂತೆ ಪೀಠ ಅರ್ಜಿದಾರ ಹೇಮೇಂದ್ರ ಪಟೇಲ್ ಅವರಿಗೆ ಹೇಳಿತು.

‘ಇತ್ತೀಚಿನ ದಿನಗಳಲ್ಲಿ ಮೊಬೈಲ್ ಫೋನ್ ಹೊಂದಿರುವ ಪ್ರತಿಯೊಬ್ಬರೂ ಮಾಧ್ಯಮವರಾಗಿದ್ದಾರೆ’ ಎಂಬ ಪಟೇಲ್ ಪರ ಹಾಜರಾಗಿದ್ದ ಹಿರಿಯ ವಕೀಲ ಗೋಪಾಲ್ ಶಂಕರನಾರಾಯಣನ್ ಅವರ ಮಾತನ್ನು ಪೀಠ ಸಮ್ಮತಿಸಿತು.

ಐಪಿಒಗೆ ದಾಖಲೆ ಸಲ್ಲಿಸಿದ ಎಸ್‌ಬಿಐ ಮ್ಯೂಚುವಲ್ ಫಂಡ್

ಪ್ರಜಾವಾಣಿ ವಾರ್ತೆ/ಪಿಟಿಐ

ಬೆಂಗಳೂರು: ಸಾರ್ವಜನಿಕರಿಗೆ ಷೇರು ಮಾರಾಟ (ಐಪಿಒ) ಮಾಡುವ ಮೂಲಕ ಬಂಡವಾಳ ಸಂಗ್ರಹಿಸಲು ಎಸ್‌ಬಿಐ ಮ್ಯೂಚುವಲ್ ಫಂಡ್ ಮುಂದಾಗಿದೆ. ಇದು ಭಾರತದ ಅತಿದೊಡ್ಡ ಆಸ್ತಿ ನಿರ್ವಹಣಾ ಕಂಪನಿಯಾಗಿದೆ.

ಐಪಿಒ ಕುರಿತ ಕರಡು ದಾಖಲೆ ಪತ್ರಗಳನ್ನು (ಡಿಆರ್‌ಎಚ್‌ಪಿ) ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಸಲ್ಲಿಸಲಾಗಿದೆ. ಆಫರ್ ಫಾರ್ ಸೇಲ್ (ಒಎಫ್‌ಎಸ್) ಮೂಲಕ 20.37 ಕೋಟಿ ಈಕ್ವಿಟಿ ಷೇರುಗಳನ್ನು ಮಾರಾಟ ಮಾಡಲಾಗುವುದು ಎಂದು ಎಸ್‌ಬಿಐ ಮ್ಯೂಚುವಲ್ ಫಂಡ್ ತಿಳಿಸಿದೆ.

ಎಸ್‌ಬಿಐ ಫಂಡ್ಸ್ ಮ್ಯಾನೇಜ್‌ಮೆಂಟ್ ಲಿಮಿಟೆಡ್, ಎಸ್‌ಬಿಐ ಮತ್ತು ಫ್ರಾನ್ಸ್‌ನ ಅಮುಂಡಿ ಕಂಪನಿಯ ಜಂಟಿ ಪಾಲುದಾರಿಕೆಯನ್ನು ಹೊಂದಿದೆ. ಇದರಲ್ಲಿ ಈ ಎರಡು ಕಂಪನಿಗಳು ಕ್ರಮವಾಗಿ ಶೇ 61.98 ಮತ್ತು ಶೇ 36.40ರಷ್ಟು ಷೇರನ್ನು ಹೊಂದಿವೆ.

ಎಸ್‌ಬಿಐ ಮ್ಯೂಚುವಲ್ ಫಂಡ್ ಎಸ್‌ಬಿಐ ಪ್ರಾಯೋಜಕತ್ವ ಹೊಂದಿದ್ದು, 1987ರಲ್ಲಿ ಸ್ಥಾಪನೆಯಾಗಿದೆ.

'ಹುಂಡೈ ಎಕ್ಸ್‌ಟರ್‌'ನ ಹೊಸ ಆವೃತ್ತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ತಯಾರಿಕಾ ಕಂಪನಿ ಹುಂಡೈ ಮೋಟರ್ ಇಂಡಿಯಾ, ಸಣ್ಣ ಎಸ್‌ಯುವಿ 'ಹುಂಡೈ ಎಕ್ಸ್‌ಟರ್‌'ನ ಹೊಸ ಆವೃತ್ತಿಯನ್ನು ಬಿಡುಗಡೆ ಮಾಡಿದೆ.

ಈ ವಾಹನದ ಬುಕಿಂಗ್ ಪ್ರಕ್ರಿಯೆ ಆರಂಭವಾಗಿದೆ. ಗ್ರಾಹಕರು ಹುಂಡೈನ ಅಧಿಕೃತ ಮಾರಾಟ ಮಳಿಗೆಗಳಲ್ಲಿ ಅಥವಾ ಸಂಸ್ಥೆಯ ವೆಬ್‌ಸೈಟ್ ಮೂಲಕ ₹11 ಸಾವಿರ ಪಾವತಿಸಿ ತಮ್ಮ ವಾಹನ ಕಾಯ್ದಿರಿಸಬಹುದಾಗಿದೆ. ವಾಹನದ ಆರಂಭಿಕ ಬೆಲೆ (ಎಕ್ಸ್ ಶೋರೂಂ) ₹5,79,900.

ವಿನ್ಯಾಸ, ತಂತ್ರಜ್ಞಾನ ಮತ್ತು ಸೌಕರ್ಯದ ವಿಚಾರವಾಗಿ ಈ ಬಾರಿ 25ಕ್ಕೂ ಹೆಚ್ಚು ಮಹತ್ವದ ಬದಲಾವಣೆಗಳನ್ನು ಮಾಡಲಾಗಿದೆ. ವಾಹನದ ಒಳಾಂಗಣ ಆಕರ್ಷಣೀಯವಾಗಿದೆ. 45ಕ್ಕೂ ಹೆಚ್ಚು ಸುಧಾರಿತ ಸುರಕ್ಷತಾ ವೈಶಿಷ್ಟ್ಯಗಳು, ಎಲೆಕ್ಟ್ರಾನಿಕ್ ಸ್ಟೆಬಿಲಿಟಿ ಕಂಟ್ರೋಲ್ ಮತ್ತು ಹಿಲ್ ಸ್ಟಾರ್ಟ್ ಅಸಿಸ್ಟ್ ಕಂಟ್ರೋಲ್ ಈಗ ಎಲ್ಲಾ ಮಾದರಿಗಳಲ್ಲೂ ಲಭ್ಯವಿವೆ ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.

ಜೆನ್ ಝೀ, ಸ್ತ್ರೀಯರು ಮುಂದು

ಮಹಾನಗರಗಳ ಆಚೆಗಿನವರಲ್ಲಿ ಉತ್ತಮ ಕ್ರೆಡಿಟ್ ಅಂಕ: ಸಿಬಿಲ್ ವರದಿ

• ವಿಜಯ್ ಜೋಷಿ

ಬೆಂಗಳೂರು: ಕ್ರೆಡಿಟ್ ಅಂಕಗಳನ್ನು ಪರಿಶೀಲಿಸುವುದು ಈಗ ಸಾಲ ಪಡೆಯುವ ಅಥವಾ ಕ್ರೆಡಿಟ್ ಕಾರ್ಡ್‌ಗೆ ಅರ್ಜಿ ಸಲ್ಲಿಸುವ ಮೊದಲು ಮಾಡುವ ಕೆಲಸವಾಗಿ ಮಾತ್ರವೇ ಉಳಿದಿಲ್ಲ, ಈ ಅಂಕವನ್ನು ಪರಿಶೀಲಿಸುವುದು ಆರ್ಥಿಕ ಆರೋಗ್ಯವನ್ನು ಚೆನ್ನಾಗಿ ಇರಿಸಿಕೊಳ್ಳುವ ಪ್ರಕ್ರಿಯೆಯ ಭಾಗವೂ ಆಗಿದೆ. ವಿಶೇಷವಾಗಿ ಮಹಿಳೆಯರು ಹಾಗೂ ಜೆನ್ ಝೀ ತಲೆಮಾರಿನವರು ಈ ಕೆಲಸ ಮಾಡುತ್ತಿದ್ದಾರೆ.

ಕ್ರೆಡಿಟ್ ಅಂಕವನ್ನು ಕಾಲಕಾಲಕ್ಕೆ ಪರಿಶೀಲಿಸುತ್ತ ಇರುವವರಲ್ಲಿ ಈಗ ದೇಶದ ಮಹಾನಗರಗಳ ಆಚೆಗಿನವರ ಪಾಲು ಜಾಸ್ತಿ ಆಗಿದೆ ಎಂದು ಟ್ರಾನ್ಸ್‌ಯೂನಿಯನ್ ಸಿಬಿಲ್ ಸಂಸ್ಥೆಯು ಸಿದ್ಧಪಡಿಸಿರುವ ವರದಿ ಹೇಳಿದೆ. ಸಂಸ್ಥೆಯು ಸಾಲಗಾರರಿಗೆ ಕ್ರೆಡಿಟ್ ಅಂಕಗಳನ್ನು ನೀಡುತ್ತದೆ. ಆ ಮಾಹಿತಿಗೆ ಕ್ರೆಡಿಟ್ ಅಂಕಗಳನ್ನು 'ಸಿಬಿಲ್ ಸ್ಕೋರ್' ಎಂದೂ ಕರೆಯುವುದಿದೆ.

2025ರ ಡಿಸೆಂಬರ್‌ವರೆಗಿನ ದತ್ತಾಂಶಗಳ ಪ್ರಕಾರ ದೇಶದಲ್ಲಿ ಒಟ್ಟು 18.30 ಕೋಟಿ ಮಂದಿ ತಮ್ಮ ಕ್ರೆಡಿಟ್ ಅಂಕವನ್ನು ಪರಿಶೀಲಿಸಿದ್ದಾರೆ. ಈ ಪೈಕಿ 12.9 ಕೋಟಿ ಮಂದಿ 2025ರಲ್ಲಿ ತಮ್ಮ ಕ್ರೆಡಿಟ್ ಅಂಕದ ಬಗ್ಗೆ ಗಮನ ಹರಿಸಿದ್ದಾರೆ. ಮೊದಲ ಬಾರಿಗೆ ಕ್ರೆಡಿಟ್ ಅಂಕವನ್ನು ಪರಿಶೀಲನೆ ಮಾಡಿದವರ ಪ್ರಮಾಣವು ಒಂದು ವರ್ಷದ ಅವಧಿಯಲ್ಲಿ ಶೇಕಡ 27ರಷ್ಟು ಹೆಚ್ಚಳ ಕಂಡಿದೆ.

ಕ್ರೆಡಿಟ್ ಅಂಕವನ್ನು ಸಕ್ರಿಯವಾಗಿ ಪರಿಶೀಲನೆ ನಡೆಸುವವರ ಪೈಕಿ ಜೆನ್ ಝೀ ಹಾಗೂ ಮಿಲೆನಿಯಲ್ ತಲೆಮಾರಿನವರ ಪಾಲು ಶೇ 77ರಷ್ಟಾಗಿದೆ.

ಕ್ರೆಡಿಟ್ ಅಂಕವನ್ನು ಪರಿಶೀಲಿಸುವುದು ಈಗ ಹಿಂದಿನಂತೆ ಇಲ್ಲ. ಸಾಲ ಬೇಕಿದ್ದಾಗಷ್ಟೇ ಅದರ ಪರಿಶೀಲನೆ ನಡೆಸುವ ಪರಿಪಾಠ ಉಳಿದಿಲ್ಲ ಎಂಬುದನ್ನು ವರದಿ ಗುರುತಿಸಿದೆ. 'ಹಿಂದೆಲ್ಲ ಹೆಚ್ಚಿನ ಗ್ರಾಹಕರು ವೈಯಕ್ತಿಕ ಸಾಲ ಅಥವಾ ಕ್ರೆಡಿಟ್ ಕಾರ್ಡ್‌ನ ಅಗತ್ಯವಿದ್ದಾಗ ಮಾತ್ರ ತಮ್ಮ ಕ್ರೆಡಿಟ್ ವಿವರಗಳನ್ನು ಪಡೆಯುತ್ತಿದ್ದರು.

ಈಗ ಕ್ರೆಡಿಟ್ ವಿವರಗಳ ಮೇಲೆ ಗಮನ ಇರಿಸುವುದು ಹಣಕಾಸಿನ ಹಿತಕ್ಕೆ ಸಂಬಂಧಿಸಿದ ನಿರಂತರ ಪ್ರಕ್ರಿಯೆಯಾಗಿ ಆಗಿದೆ' ಎಂದು ವರದಿಯು ಹೇಳಿದೆ.

'ಈಗ ಗ್ರಾಹಕರು ತಮ್ಮ ಕ್ರೆಡಿಟ್ ಅಂಕವನ್ನು ಸುಧಾರಿಸಿಕೊಂಡು, ಚಾಲ್ತಿ ಸಾಲವನ್ನು ಮರುಪಾವತಿಸಿ ಅಥವಾ ಅದನ್ನು ಮರುಹೊಂದಾಣಿಕೆ ಮಾಡಿಕೊಂಡು, ಹೆಚ್ಚು ಸೂಕ್ತವಾದ ಸಂದರ್ಭದಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ. ಸಾಲದ ಬಗ್ಗೆ ಹೆಚ್ಚು ಅರಿವು ಹೊಂದಿರುವ ಗ್ರಾಹಕರ ಜೊತೆ ಹಣಕಾಸು ಸಂಸ್ಥೆಗಳು ವ್ಯವಹರಿಸುತ್ತವೆ' ಎಂದು ಕೂಡ ವರದಿಯಲ್ಲಿ ಗುರುತಿಸಲಾಗಿದೆ.

ಮಹಾನಗರಗಳ ಆಚೆ...

ದೇಶದಲ್ಲಿ ಸಾಲದ ಕುರಿತಾದ ಅರಿವು ಮಹಾನಗರಗಳ ಆಚೆಗಿನವರಲ್ಲಿ ಜಾಸ್ತಿ ಇದೆ. 2025ರ ಡಿಸೆಂಬರ್‌ವರೆಗಿನ ಮಾಹಿತಿ ಅನ್ವಯ, ಕ್ರೆಡಿಟ್ ಅಂಕವನ್ನು ಪರಿಶೀಲಿಸಿದವರಲ್ಲಿ ಶೇ 75ರಷ್ಟು ಮಂದಿ, ಅಂದರೆ 13.7 ಕೋಟಿ ಜನ, ದೇಶದ ಮಹಾನಗರಗಳ ಹೊರಗೆ ವಾಸ ಮಾಡುವವರಾಗಿದ್ದಾರೆ. 2018ರಲ್ಲಿ ಇವರ ಪ್ರಮಾಣವು ಶೇ 57ರಷ್ಟು ಮಾತ್ರ ಆಗಿತ್ತು.

ಮಹಾನಗರಗಳ ಆಚೆ ಇದ್ದು, ಕ್ರೆಡಿಟ್ ಅಂಕದ ಮೇಲೆ ನಿಗಾ ಇರಿಸುವವರ ಪ್ರಮಾಣವು ವರ್ಷದಿಂದ ವರ್ಷಕ್ಕೆ ಶೇ 28ರಷ್ಟು ಬೆಳವಣಿಗೆ ದಾಖಲಿಸಿದೆ.

ಬಹಳ ಒಳ್ಳೆಯ ಕ್ರೆಡಿಟ್ ಅಂಕ ಹೊಂದಿರುವವರ ಪ್ರಮಾಣ ಕೂಡ ಮಹಾನಗರಗಳ ಆಚೆಯೇ ಹೆಚ್ಚಾಗಿದೆ. ಮಹಾನಗರಗಳ ಹೊರಗೆ ಇರುವವರಲ್ಲಿ ಶೇ 73ರಷ್ಟು ಮಂದಿ ಉತ್ತಮ ಕ್ರೆಡಿಟ್ ಅಂಕ (731ಕ್ಕಿಂತ ಹೆಚ್ಚು) ಸಂಪಾದಿಸಿದ್ದಾರೆ. 'ಅಂದರೆ, ಅಲ್ಲಿನವರ ಸಾಲ ಪಡೆಯುವ ಸಾಮರ್ಥ್ಯ ಚೆನ್ನಾಗಿದೆ. ಹೀಗಾಗಿ, ಸಾಲ ನೀಡಿಕೆ ವಹಿವಾಟುಗಳ ಪ್ರಮುಖ ಚಾಲಕ ಶಕ್ತಿಯ ಸ್ಥಾನದಲ್ಲಿ ಮಹಾನಗರಗಳಲ್ಲದ ಊರುಗಳು ಇವೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಪ್ರಮುಖಾಂಶಗಳು

- ಕ್ರೆಡಿಟ್ ಅಂಕವನ್ನು ಪರಿಶೀಲನೆ ನಡೆಸುತ್ತಿರುವವರಲ್ಲಿ ಜೆನ್ ಝೀ ತಲೆಮಾರಿನವರ ಪಾಲು ಶೇ 29ರಷ್ಟಾಗಿದೆ
- ಕ್ರೆಡಿಟ್ ಅಂಕ ಪರಿಶೀಲನೆ ನಡೆಸುವವರಲ್ಲಿ ಮಹಿಳೆಯರ ಪಾಲು ಶೇ 21ಕ್ಕೆ ಹೆಚ್ಚಳ ಕಂಡಿದೆ. ಮೊದಲು ಇದು ಶೇ 19ರಷ್ಟಿತ್ತು
- ಕ್ರೆಡಿಟ್ ಅಂಕವನ್ನು ಪರಿಶೀಲನೆ ಮಾಡಿಕೊಳ್ಳುತ್ತಿರುವ ಮಹಿಳೆಯರ ಪೈಕಿ ಶೇ 63ರಷ್ಟು ಮಂದಿ ಉತ್ತಮ (731ಕ್ಕಿಂತ ಹೆಚ್ಚು) ಕ್ರೆಡಿಟ್ ಅಂಕ ಸಂಪಾದಿಸಿದ್ದಾರೆ.

ವಿಶಾಖಪಟ್ಟಣದಲ್ಲಿ ನೌಕಾಪಡೆ ಸೇರಲು ಸಜ್ಜಾಗಿರುವ 'ತಾರಾಗಿರಿ' ಸಮರ ನೌಕೆ – ಪಿಟಿಐ ಚಿತ್ರ

ಏಪ್ರಿಲ್ 3ರಂದು ನೌಕಾಪಡೆ ಸೇರಲಿದೆ 'ತಾರಾಗಿರಿ' ಸಮರ ನೌಕೆ

ನವದೆಹಲಿ (ಪಿಟಿಐ): 'ಶಬ್ದಕ್ಕಿಂತ ಹೆಚ್ಚಿನ ವೇಗದಲ್ಲಿ ಸಾಗುವ ಕ್ಷಿಪಣಿಗಳು ಸೇರಿದಂತೆ ಅತ್ಯಾಧುನಿಕ ಶಸ್ತ್ರಾಸ್ತ್ರ ವ್ಯವಸ್ಥೆ ಇರುವ, ಭಾರತದ ಸ್ವದೇಶಿ ನಿರ್ಮಿತ ಸುಧಾರಿತ ಯುದ್ಧನೌಕೆ 'ತಾರಾಗಿರಿ' ಏಪ್ರಿಲ್ 3ರಂದು ನೌಕಾಪಡೆಗೆ ನಿಯೋಜನೆಗೊಳ್ಳಲಿದೆ' ಎಂದು ಶನಿವಾರ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ವಿಶಾಖಪಟ್ಟಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ನೌಕೆಯ ಸೇರ್ಪಡೆಗೆ ನಿಶಾನೆ ತೋರಲಿದ್ದಾರೆ. ದೇಶವು ಸಂಪೂರ್ಣವಾಗಿ ಸ್ವಾವಲಂಬಿ ನೌಕಾಶಕ್ತಿಯಾಗುವ ಪಯಣದಲ್ಲಿ ಇದೊಂದು ಶಕ್ತಿಶಾಲಿ ಹೆಜ್ಜೆ' ಎಂದು ನೌಕಾಪಡೆಯ ವಕ್ತಾರರು ಹೇಳಿದ್ದಾರೆ.

'ತಾರಾಗಿರಿ'ಯು 'ಮೇಕ್ ಇನ್ ಇಂಡಿಯಾ' ಸ್ಫೂರ್ತಿಯೊಂದಿಗೆ ನಿರ್ಮಾಣವಾಗಿರುವ 6,670 ಟನ್ ತೂಕದ ಚತುರ ಕಾರ್ಯಕ್ಷಮತೆಯ ತಾಂತ್ರಿಕ ಸಾಮರ್ಥ್ಯಗಳನ್ನು ಹೊಂದಿರುವ ದೈತ್ಯ ರೂಪದ ನೌಕಾಶಕ್ತಿ' ಎಂದು ಅವರು ಬಣ್ಣಿಸಿದ್ದಾರೆ.

ಮುಂಬೈನ 'ಮಝಗಾಂವ್ ಡಾಕ್ ಶಿಪ್ಪಿಂಗ್ ಲಿಮಿಟೆಡ್' ನಿರ್ಮಿಸಿರುವ ಮೂರನೇ ಬೃಹತ್ ನೌಕೆ ಇದು. ಕಳೆದ ವರ್ಷ ನವೆಂಬರ್ 28ರಂದೆ ನೌಕೆಯನ್ನು ನೌಕಾಪಡೆಯ ವಶಕ್ಕೆ ನೀಡಲಾಗಿತ್ತು.

'ಈ ನೌಕೆ ರಹಸ್ಯ ಕಾರ್ಯಾಚರಣೆ, ಶಸ್ತ್ರಾಸ್ತ್ರ ಉಡಾವಣೆ, ಸ್ವಯಂಚಾಲಿತ ವ್ಯವಸ್ಥೆ ಮತ್ತು ದೀರ್ಘಾವಧಿ ಬಳಕೆಗೆ ಬರುವ ಸಾಮರ್ಥ್ಯ ಹೊಂದಿದೆ. ಸಮರನೌಕೆ ನಿರ್ಮಾಣದಲ್ಲಿ 'ಆತ್ಮನಿರ್ಭರ ಭಾರತ'ದ ಹೆಗ್ಗುರುತಾಗಿದೆ' ಎಂದರು.

'ಭೂಮಿಯಿಂದ ಭೂಮಿಗೆ, ಭೂ ಮೇಲ್ಮೈನಿಂದ ಆಗಸದ ಗುರಿಯತ್ತ ಚಿಮ್ಮುವ ಕ್ಷಿಪಣಿ, ಜಲಾಂತರ್ಗಾಮಿ ಪ್ರತಿರೋಧಕ ಸೇರಿದಂತೆ ವಿಶ್ವ ದರ್ಜೆಯ ಶಸ್ತ್ರಾಸ್ತ್ರ ವ್ಯವಸ್ಥೆಯನ್ನು 'ತಾರಾಗಿರಿ' ಹೊಂದಿದೆ. ಇದರ ಯುದ್ಧ ನಿರ್ವಹಣಾ ವ್ಯವಸ್ಥೆಯಿಂದ ಸಿಬ್ಬಂದಿ ಕ್ಷಣಾರ್ಧದಲ್ಲಿ ದಾಳಿಗಳಿಗೆ ಪ್ರತಿರೋಧ ಒಡ್ಡಲು ಸಾಧ್ಯವಿದೆ' ಎಂದು ತಿಳಿಸಿದರು.

ಮುದ್ರೆಮನೆ ಕಾಫಿ (50 ಕೆಜಿಗೆ)	
ಎಪಿ	₹23750
ಎಸಿ	₹13580
ಆರ್‌ಪಿ	₹18650
ಆರ್‌ಸಿ	₹10100

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹485
	12 ಕ್ಕೆ	₹72
ಮೈಸೂರು:	100 ಕ್ಕೆ	₹490

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹422-700
ದ್ವಿತಳಿ (ಬಿ.ವಿ)	₹353-823

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹212
ಆರ್‌ಎಸ್‌ಎಸ್-5	₹206
ಗುಡ್ ಲಾಟ್	₹188

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1760 (1760)
ಸೋಯಾ (ರಿಫೈನ್ಡ್)	₹1505 (1500)
ಸೂರ್ಯಕಾಂತಿ (ರಿಫೈನ್ಡ್)	₹1735 (1730)
ಪಾಮೋಲಿನ್	₹1445 (1440)

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಜನುಮದಿನದ ಸಾರ್ಥಕ ನೆನಕೆಗಳು.
ವಿಶ್ವ ಜಲ ದಿನದಂದೇ ಜನಿಸಿದ್ದು ಕಾಕತಾಳೀಯವಾದರೂ ಬರ ಸೀಮೆಯ ಶಾಶ್ವತ ನೀರಾವರಿಗಾಗಿ ಹೋರಾಡಿದ್ದು ಅರ್ಥಪೂರ್ಣ.
ನಿನ್ನ ಹೋರಾಟ ಸ್ಮರಣೀಯ.
ನಮ್ಮ ನೆನಪುಗಳಲ್ಲಿ ನೀನು ಸದಾ ಜೀವಂತ.
ಡಾ. ಮಧು ಸೀತಪ್ಪ
–ವಿ.ಸೀತಪ್ಪ ಕುಟುಂಬದವರು

ಮುಂಬೈ ಧಾರಣೆ (ಶೇಂಗಾ)	
21-03-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1770 (1770)
ಒಂದು ವಾರದ ಡೆಲಿವರಿ	1765 (1765)
ಪಾಮ್ ವಾರದ ಡೆಲಿವರಿ	1443 (1438)
ಸೂರ್ಯಕಾಂತಿ ಎಣ್ಣೆ ಕಚ್ಚಾ	1605 (1600)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,43,500 (1,46,400)
ಬೆಳ್ಳಿ ಕೆ.ಜಿಗೆ	2,25,000 (2,32,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ವಾಣಿಜ್ಯ ಎಲ್‌ಪಿಜಿ ಹಂಚಿಕೆ ಹೆಚ್ಚಳ

ಹೆಚ್ಚುವರಿ ಶೇಕಡ 20ರಷ್ಟು ಹಂಚಿಕೆಗೆ ಕೇಂದ್ರ ಒಪ್ಪಿಗೆ



ನವದೆಹಲಿ (ಪಿಟಿಐ): ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಹೆಚ್ಚುವರಿಯಾಗಿ ಶೇಕಡ 20ರಷ್ಟು ವಾಣಿಜ್ಯ ಎಲ್‌ಪಿಜಿ ಹಂಚಿಕೆ ಮಾಡಲು ಕೇಂದ್ರ ಸರ್ಕಾರ ಶನಿವಾರ ಒಪ್ಪಿಗೆ ನೀಡಿದೆ. ಇದರಿಂದಾಗಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹಂಚಿಕೆಯಾಗುವ ವಾಣಿಜ್ಯ ಬಳಕೆ ಎಲ್‌ಪಿಜಿ ಪ್ರಮಾಣವು ಶೇ 50ಕ್ಕೆ ಏರಿಕೆ ಆಗಿದೆ.

ದೇಶದಲ್ಲಿ ಎಲ್‌ಪಿಜಿ ಉತ್ಪಾದನೆ ಹೆಚ್ಚಳ ಕಂಡಿರುವುದು ಪರಿಸ್ಥಿತಿ ಒಂದಿಷ್ಟು ತಿಳಿಯಾಗುವುದಕ್ಕೆ ಸಹಕಾರಿ ಆಗಿದೆ. ಪಶ್ಚಿಮ ಏಷ್ಯಾದಲ್ಲಿ ಮೂರು ವಾರಗಳಿಂದ ನಡೆಯುತ್ತಿರುವ ಯುದ್ಧವು ಭಾರತದಲ್ಲಿ ಎಲ್‌ಪಿಜಿ ಪೂರೈಕೆಯ ಮೇಲೆ ಕೆಟ್ಟ ಪರಿಣಾಮ ಬೀರಿದೆ.

ಮನೆಗಳಿಗೆ ಎಲ್‌ಪಿಜಿ ಪೂರೈಕೆಗೆ ಅಡಚಣೆ ಆಗಬಾರದು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರವು ಆರಂಭದಲ್ಲಿ ವಾಣಿಜ್ಯ ಘಟಕಗಳಿಗೆ ಎಲ್‌ಪಿಜಿ ಪೂರೈಕೆ ನಿಲ್ಲಿಸಿತು. ನಂತರ ಅವುಗಳಿಗೆ ಬೇಡಿಕೆಯ ಶೇ 20ರಷ್ಟನ್ನು ಪೂರೈಸಲಾಯಿತು.

ಇದಾದ ನಂತರದಲ್ಲಿ, ಪಿಎನ್‌ಜಿ ಯೋಜನೆಗಳಿಗೆ ವೇಗ ನೀಡುವ ರಾಜ್ಯಗಳಿಗೆ ಹೆಚ್ಚುವರಿಯಾಗಿ ಶೇ 10ರಷ್ಟು ವಾಣಿಜ್ಯ ಎಲ್‌ಪಿಜಿ ಕೊಡುವುದಾಗಿ ಕೇಂದ್ರ ಪ್ರಕಟಿಸಿತು.

ಈಗ, ಆದ್ಯತಾ ವಲಯಗಳಾದ ರೆಸ್ಟಾರೆಂಟ್, ಹೋಟೆಲ್, ಕೈಗಾರಿಕಾ ಕ್ಯಾಂಟೀನ್‌ಗಳು, ಆಹಾರ ಸಂಸ್ಕರಣಾ ಘಟಕಗಳು, ಸಮುದಾಯ ಅಡುಗೆಮನೆಗಳು ಮತ್ತು ಸಬ್ಸಿಡಿ ದರದಲ್ಲಿ ಆಹಾರ ಪೂರೈಕೆ ಮಾಡುವ ಘಟಕಗಳಿಗೆ ಎಲ್‌ಪಿಜಿ ಪೂರೈಕೆಯನ್ನು ಶೇ 20ರಷ್ಟು ಹೆಚ್ಚಿಸಲಾಗುತ್ತದೆ ಎಂದು ಕೇಂದ್ರವು ಶನಿವಾರ ತಿಳಿಸಿದೆ.

ಆದರೆ, ತೈಲೋತ್ಪನ್ನಗಳ ಮಾರಾಟ ಕಂಪನಿಗಳ ಜೊತೆ ನೋಂದಣಿ ಮಾಡಿಸಿಕೊಂಡಿರುವ ಹಾಗೂ ಪಿಎನ್‌ಜಿ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿರುವ ವಾಣಿಜ್ಯ ಘಟಕಗಳಿಗೆ ಹೆಚ್ಚಿನ ಎಲ್‌ಪಿಜಿ ಹಂಚಿಕೆಯ ಪ್ರಯೋಜನ ಲಭ್ಯವಾಗಲಿದೆ.

ಮನೆಬಳಕೆ ಎಲ್‌ಪಿಜಿ ಸಿಲಿಂಡರ್ ಪೂರೈಕೆಗೆ ಅಡ್ಡಿ ಉಂಟಾಗಿಲ್ಲ, ವಿತರಕರ ಹಂತದಲ್ಲಿ ಕೊರತೆ ಇಲ್ಲ ಎಂದು ಕೇಂದ್ರ ಸರ್ಕಾರದ ಹೇಳಿಕೆಯೊಂದು ತಿಳಿಸಿದೆ. ಜನರು ಭೀತಿಗೆ ಒಳಗಾಗಿ ಎಲ್‌ಪಿಜಿ ಬುಕ್ ಮಾಡುವುದು ತಗ್ಗಿದೆ ಎಂದು ತಿಳಿಸಿದೆ.

ಮೆರಿಲ್ ಕಂಪನಿಯ ಆರೋಗ್ಯ ಆಂದೋಲನಕ್ಕೆ ಧೋನಿ ಬೆಂಬಲ

ಪ್ರಜಾವಾಣಿ ವಾರ್ತೆ

ಎಂ.ಎಸ್ ಧೋನಿ

ಬೆಂಗಳೂರು: ಗುಜರಾತ್‌ನ ವಾಪಿಯಲ್ಲಿರುವ ವೈದ್ಯಕೀಯ ತಂತ್ರಜ್ಞಾನ ಕಂಪನಿ ಮೆರಿಲ್‌ನ ಜಾಗತಿಕ ಪ್ರಧಾನ ಕಚೇರಿಗೆ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಎಂ.ಎಸ್. ಧೋನಿ ಅವರು ಭೇಟಿ ನೀಡಿ, ಹಿರಿಯ ನಾಗರಿಕರ ಆರೋಗ್ಯಕ್ಕಾಗಿ ಮೆರಿಲ್ ಆರಂಭಿಸಿರುವ 'ಟ್ರೀಟ್‌ಮೆಂಟ್ ಜರೂರಿ ಹೈ ಆಂದೋಲನ'ಕ್ಕೆ ಬೆಂಬಲ ನೀಡಿದ್ದಾರೆ.

ಈ ವೇಳೆ ಧೋನಿ ಅವರು, 'ಬಚ್ಚನ್ ಶುಡ್ ನಾಟ್ ರಿಟೈರ್' ವಿಷಯದ ಕುರಿತು ಸ್ಫೂರ್ತಿದಾಯಕವಾದ ಮಾತುಗಳನ್ನು ಆಡಿದ್ದಾರೆ ಎಂದು ಕಂಪನಿ ತಿಳಿಸಿದೆ.

'ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ನಿಮ್ಮ ಪ್ರಮುಖ ಕೆಲಸಗಳಲ್ಲಿ ಒಂದಾಗಿದೆ. ಟ್ರೀಟ್‌ಮೆಂಟ್ ಜರೂರಿ ಹೈ ನಂತಹ ಆಂದೋಲನವು ಈ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿದೆ ಎಂದು ಧೋನಿ ಅವರು ಅಭಿಪ್ರಾಯಪಟ್ಟಿದ್ದಾರೆ' ಎಂದು ತಿಳಿಸಿದೆ.

ಈ ಆಂದೋಲನವನ್ನು ಸಕಾಲಿಕ ರೋಗನಿರ್ಣಯ ಮತ್ತು ಸುಧಾರಿತ ವೈದ್ಯಕೀಯ ಚಿಕಿತ್ಸೆಗಳ ಬಗ್ಗೆ ಜಾಗೃತಿ ಮೂಡಿಸಲು ಪ್ರಾರಂಭಿಸಲಾಗಿದೆ. ಆರಂಭಿಕ ಹಂತ ದಲ್ಲೇ ರೋಗದ ಪತ್ತೆ, ತಪಾಸಣೆ ಮತ್ತು ಹೊಸ ಚಿಕಿತ್ಸಾ ಆಯ್ಕೆಗಳ ಮೂಲಕ ಹಿರಿಯ ನಾಗರಿಕರ ಜೀವನದ ಗುಣಮಟ್ಟವನ್ನು ಇದು ಕಾಪಾಡುತ್ತದೆ ಎಂದಿದೆ.

ಪಂಜಾಬ್‌ನ ಸಚಿವ ಲಾಲಜಿತ್ ಭುಲ್ಲಾರ್ ರಾಜೀನಾಮೆ

ಲಾಲಜಿತ್ ಭುಲ್ಲಾರ್

ಚಂಡೀಗಢ (ಪಿಟಿಐ): ಅಮೃತಸರದ ರಾಜ್ಯ ಉಗ್ರಾಣ ನಿಗಮದ ಅಧಿಕಾರಿಯ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದ ಮೇಲೆ ಪಂಜಾಬ್‌ನ ಸಚಿವ ಲಾಲಜಿತ್ ಸಿಂಹ ಭುಲ್ಲಾರ್ ಅವರು ಶನಿವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ತರನ್ ತಾರನ್ ಜಿಲ್ಲೆಯ ಪಟ್ಟಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿರುವ ಲಾಲಜಿತ್ ಅವರು ಭಗವಂತ್ ಮಾನ್ ಸರ್ಕಾರದಲ್ಲಿ ಸಾರಿಗೆ ಸಚಿವರಾಗಿ ಜವಾಬ್ದಾರಿ ನಿರ್ವಹಿಸುತ್ತಿದ್ದರು.

'ತಮ್ಮ ಮೇಲೆ ಆಧಾರರಹಿತ ಆರೋಪ ಮಾಡಲಾಗಿದೆ' ಎಂದು ಭುಲ್ಲಾರ್ ತಿರುಗೇಟು ನೀಡಿದ್ದಾರೆ.

ಆರೋಪ ಬಂದ ಬೆನ್ನಲ್ಲೇ, ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಭುಲ್ಲಾರ್ ಅವರಿಗೆ ಸೂಚನೆ ನೀಡಿದ್ದರು. ಪ್ರಕರಣದ ತನಿಖೆ ನಡೆಸುವಂತೆ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿದ್ದರು.

'ಪ್ರಕರಣದ ಹಿಂದಿನ ಕಾರಣಗಳು ತನಿಖೆಯಿಂದ ಪತ್ತೆಯಾಗಲಿವೆ. ತನಿಖೆ ಆರಂಭಿಸುವ ಮೊದಲು ಸಚಿವರಿಂದ ರಾಜೀನಾಮೆ ಪಡೆಯುವ ಮೂಲಕ ಯಾರೂ ಒತ್ತಡಕ್ಕೆ ಒಳಗಾಗದಂತೆ ಕ್ರಮ ವಹಿಸಲಾಗಿದೆ' ಎಂದು ಮಾನ್ ತಿಳಿಸಿದ್ದಾರೆ.

'ಈ ವಿಚಾರದಲ್ಲಿ ಯಾವುದೇ ನಿರ್ಲಕ್ಷ್ಯವನ್ನು ಸಹಿಸುವುದಿಲ್ಲ. ಭುಲ್ಲಾರ್ ಅವರ ಖಾತೆಯನ್ನು ಬೇರೆಯವರಿಗೆ ವಹಿಸಲಾಗುವುದು' ಎಂದು ಹೇಳಿದ್ದಾರೆ.

ಲಾಲಜಿತ್ ಸಿಂಹ ಭುಲ್ಲಾರ್ ಅವರ ಕಿರುಕುಳದಿಂದ ಬೇಸತ್ತು ತಾನು ವಿಷ ಸೇವಿಸಿ, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ರಾಜ್ಯ ಉಗ್ರಾಣ ನಿಗಮದ ವ್ಯವಸ್ಥಾಪಕರಾದ ಗಗನ್‌ದೀಪ್ ಸಿಂಗ್ ರಾಂಧವ ಅವರು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದರು.

ಇದರ ಬೆನ್ನಲ್ಲೇ, ಬಿಜೆಪಿ, ಕಾಂಗ್ರೆಸ್ ಹಾಗೂ ಶಿರೋಮಣಿ ಅಕಾಲಿದಳದ ಮುಖಂಡರು ಸಚಿವರು ರಾಜೀನಾಮೆಗೆ ಆಗ್ರಹಿಸಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್ ಸೆಲ್ಲಿಂಗ್

Kengeri

LUXURY APARTMENT Booking Started Call Kirti 9341218992 By Landmark, Next To Kingeri Metro Station 4 Tower Of 69-798999 Floor, Payment In 36 Months 3 Bhk- 2,250 To 2,601 Sft 3.6 cr To 4.16 cr+

General

South

ಹಾವೇರಿ ಸ್ಟೇಷನ್ ರಸ್ತೆಯಲ್ಲಿ ಕಾಂಪೌಂಡ್ ಮತ್ತು ಗೇಟ್ ಹೊಂದಿರುವ 14 ಗುಂಟಾ ಪ್ರೈಮ್ ಪ್ಲಾಟ್. ಸಂಪರ್ಕಿಸಿ 9881061424 / 9242182359

Residential/ Commercial

Mangaluru

ಕೈಗೆಟುವ ದರದಲ್ಲಿ ನಿಮ್ಮ ಕನಸಿನ ಮನೆ ನಿರ್ಮಿಸಲು ಸೂಕ್ತವಾದ ಪ್ರೀಮಿಯಂ ವಸತಿ ಜಾಗಗಳು, ಮಂಗಳೂರಿನಲ್ಲಿ ಲಭ್ಯವಿದೆ. Ph: 9845607725

AFFORDABLE PREMIUM residential plots suitable for building your dream home are available in Mangalore. Ph:9845607725

ಪ್ರವಾಸ

Travel

ನೇಪಾಳ ಮುಕ್ತಿನಾಥ ಯಾತ್ರಾ ಮೇನಲ್ಲಿ 8 ದಿನಗಳು. ಅಮರನಾಥಯಾತ್ರಾ ಜುಲೈನಲ್ಲಿ 11ದಿನಗಳು. ನವಶಕ್ತಿಪೀಠ ಯಾತ್ರಾ ಅಗಸ್ಟ್ ನಲ್ಲಿ 10ದಿನಗಳು.ಚಾರ್ ಧಾಮ್ ಮತ್ತು ದೋಧಾಮ್ ಯಾತ್ರಾಸಂಪರ್ಕಿಸಿ: ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು-03, 9448294477

ಉದ್ಯೋಗಾವಕಾಶ

Part-Time Jobs

ತಕ್ಷಣ ಬೇಕಾಗಿದ್ದಾರೆ ಕಂಪನಿಗಳಿಗೆ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ 19,000-25,000 ಸಂಪಾದಿಸಿ ಕೊರಿಯರ್ ಸೌಲಭ್ಯವಿದೆ. 9964322833.

Drivers

ಡ್ರೈವರ್: ಬೆಂಗಳೂರು ಎಲ್ಲಾ ತಿಳಿದಿರುವ ಹಿಂದೂ 35ವರ್ಷ ಒಳಗಿನ ಉತ್ತಮ ಗುಣ ನಡತೆಯ, High End ಗಾಡಿಗಳು ಗೊತ್ತಿರುವ, ಸ್ವಲ್ಪ ಇಂಗ್ಲೀಷ್ ಬರುವ, ಮನೆಯಲ್ಲಿ ಇರಬಯಸುವವರು ಬೇಕಾಗಿದ್ದಾರೆ. ಉತ್ತಮ ವೇತನ, ವಸತಿ ನೀಡಲಾಗುವುದು. Ph: 8861145911

Wanted

SP ಸೆಲೆಬ್ರಿಟಿ ವೆಲ್ನೆಸ್ಸ್ ಕರ್ನಾಟಕದಾದ್ಯಂತ ಉಚಿತ ಚಿಕಿತ್ಸೆ, ಮಂಡಿನೋವು,, ಬೆನ್ನುನೋವು, ಲಕ್ವ, ಕೀಲುನೋವು ಇತರೆ ನೋವುಗಳಿಗೆ ಶಸ್ತ್ರ ಚಿಕಿತ್ಸೆ, ಔಷಧಿ ಇಲ್ಲದೆ ವಿಶೇಷ ಥೆರಪಿ ಮಾಡಲು work from Home ಹೆಲ್ಪರ್ ಕೆಲಸ ಖಾಲಿ ಇದೆ, ಈ ಕೆಲಸ ಮಾಡಲು ನಿಮ್ಮಲ್ಲಿ ಒಂದು ರೂಮಿನಷ್ಟು ಜಾಗದ ವ್ಯವಸ್ಥೆ ಇರಬೇಕು. ತಿಂಗಳಿಗೆ ವೇತನ 25,000/- ರಿಂದ 30,000 /- ವರೆಗೆ ವಿದ್ಯಾರ್ಹತೆ S.S.L.C, P.U.C, Degree ಆಗಿರಬೇಕು. ಶೇಷಾದ್ರಿಪುರಂ ಬೆಂಗಳೂರು 9036316959

ಭವಿಷ್ಯ

Astrology

ಮಲಯಾಳಂ ಜ್ಯೋತಿಷ್ಯ. ಕೇರಳದ ಅತೀಪುರಾತನ ಕುಟ್ಟಿಚಾತನ್ ಶಕ್ತಿಯಿಂದ ನಿಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರ. (ವ್ಯಾಪಾರ, ಮದುವೆ, ಜಾಗಮಾರಾಟ ವಶೀಕರಣ ಶತ್ರುದೋಷ) ಕೇರಳ 9539594367

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಿಕ್ಕಿಂ: ಹಿಮಪಾತ ಸಾಧ್ಯತೆ

ಗ್ಯಾಂಗ್ಟಕ್ (ಪಿಟಿಐ): ಸಿಕ್ಕಿಂನ ಗ್ಯಾಂಗ್ಟಕ್ ಹಾಗೂ ಪಾಕ್ಯೋಂಗ್ ಜಿಲ್ಲೆಗಳ ಎತ್ತರದ ಪ್ರದೇಶಗಳಲ್ಲಿ ಹಿಮಪಾತವಾಗುವ ಸಾಧ್ಯತೆಗಳಿದ್ದು, ಈ ಕುರಿತಂತೆ ಈಗಾಗಲೇ ಎಚ್ಚರಿಕೆ ನೀಡಲಾಗಿದೆ ಎಂದು ಅಧಿಕಾರಿಗಳು ಶನಿವಾರ ಹೇಳಿದ್ದಾರೆ.

ಸಿಕ್ಕಿಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ನೀಡಿರುವ ಮುನ್ಸೂಚನೆಯ ಪ್ರಕಾರ, ಈ ಎರಡೂ ಜಿಲ್ಲೆಗಳಲ್ಲಿ ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಯಿಂದಾಗಿ 3500 ಮೀಟರ್‌ಗಿಂತ ಎತ್ತರದ ಪ್ರದೇಶಗಳಲ್ಲಿ ಮುಂದಿನ 24 ಗಂಟೆಯಲ್ಲಿ ಹಿಮಪಾತವಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಹೀಗಾಗಿ ಪರಿಸ್ಥಿತಿಯನ್ನು ಅವಲೋಕಿಸಲಾಗುತ್ತಿದ್ದು, ಎಚ್ಚರವಹಿಸುವಂತೆ ಜನರಿಗೆ ತಿಳಿಸಲಾಗಿದೆ.

ಹಿಮಾಲಯದ ತಪ್ಪಲಿನಲ್ಲಿರುವ ರಾಜ್ಯಗಳಲ್ಲಿ ಶುಕ್ರವಾರದಿಂದಲೂ ತೀವ್ರ ಮಳೆಯಾಗುತ್ತಿದ್ದು, ಗ್ಯಾಂಗ್ಟಕ್‌ನಿಂದ ತ್ಸೋಮ್ಗೊ ಸರೋವರ ಹಾಗೂ ನಾಥುಲಾಗೆ ತೆರಳುವ ರಸ್ತೆಯನ್ನೂ ಹಿಮವರ್ಷದಿಂದಾಗಿ ಮುಚ್ಚಲಾಗಿದೆ.

ಮಂಜಿನ ಹೊದಿಕೆ

ಪಿಟಿಐ ಚಿತ್ರ

ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯ ಸಂದಕ್‌ಫೂ ಪ್ರದೇಶದಲ್ಲಿ ಕೆಫೆಯೊಂದರ ಹೊರಭಾಗದಲ್ಲಿ ಶನಿವಾರ ಆವರಿಸಿದ್ದ ಮಂಜಿನ ಹೊದಿಕೆ

ಮುಂದುವರಿದ ರಷ್ಯಾ–ಉಕ್ರೇನ್ ಡ್ರೋನ್ ದಾಳಿ

ಕೀವ್/ ಮಾಸ್ಕೊ (ಎಪಿ/ಎಎಫ್‌ಪಿ): ರಷ್ಯಾ ಮತ್ತು ಉಕ್ರೇನ್ ನಡುವಿನ ಡ್ರೋನ್ ದಾಳಿ ಶನಿವಾರವೂ ಮುಂದುವರಿದಿದೆ.

ಉಕ್ರೇನ್‌ನ ಝಪೋರಿಝಿಯಾ ನಗರದ ಮೇಲೆ ರಷ್ಯಾ ಶನಿವಾರ ನಡೆಸಿದ ಡ್ರೋನ್ ದಾಳಿಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಮನೆಯೊಂದರ ಮೇಲೆ ರಷ್ಯಾ ಡ್ರೋನ್ ಅಪ್ಪಳಿಸಿದ್ದು, ಪುರುಷ ಮತ್ತು ಮಹಿಳೆ ಮೃತಪಟ್ಟಿದ್ದಾರೆ. ಇಬ್ಬರು ಮಕ್ಕಳು ಗಾಯಗೊಂಡಿದ್ದಾರೆ ಎಂದು ಝಪೋರಿಝಿಯಾ ಪ್ರದೇಶ ಮುಖ್ಯಸ್ಥ ಐವನ್ ಫೆಡೋರೊವ್ ಅವರು ತಿಳಿಸಿದ್ದಾರೆ.

ರಷ್ಯಾದ ಮೇಲೆ ಉಕ್ರೇನ್ 280ಕ್ಕೂ ಅಧಿಕ ಡ್ರೋನ್‌ಗಳ ಮೂಲಕ ದಾಳಿ ಮಾಡಿದೆ.

ಉಭಯ ದೇಶಗಳ ನಡುವೆ ಯುದ್ಧ ಆರಂಭಗೊಂಡ ಬಳಿಕ ಉಕ್ರೇನ್ ನಡೆಸಿದ ಅತಿದೊಡ್ಡ ದಾಳಿ ಇದಾಗಿದೆ ಎಂದು ರಷ್ಯಾದ ಸರ್ಕಾರಿ ಸ್ವಾಮ್ಯದ ಸುದ್ದಿ ಸಂಸ್ಥೆಯು ರಕ್ಷಣಾ ಸಚಿವಾಲಯ ಮಾಹಿತಿ ಆಧರಿಸಿ ವರದಿ ಮಾಡಿದೆ.

ರಷ್ಯಾದ ಸರಟೋವ್‌ನಲ್ಲಿರುವ ತೈಲ ಸಂಸ್ಕರಣಾ ಘಟಕವೊಂದರ ಮೇಲೆ ದಾಳಿ ಮಾಡಿ, ಹಾನಿಗೊಳಿಸಲಾಗಿದೆ ಎಂದು ಉಕ್ರೇನ್ ಸೇನೆ ತಿಳಿಸಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ.

ಸರಟೋವ್ ಪ್ರದೇಶದಲ್ಲಿ ಇಬ್ಬರಿಗೆ ಗಾಯಗಳಾಗಿದ್ದು, ಹಲವಾರು ಮನೆಗಳು ಧ್ವಂಸಗೊಂಡಿವೆ.

ದಕ್ಷಿಣ ರೋಸ್ಟೊವ್ ಪ್ರದೇಶದಲ್ಲಿ 90 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಅಲ್ಲಿನ ಗವರ್ನರ್ ತಿಳಿಸಿದ್ದಾರೆ. ರಾಜಧಾನಿ ಮಾಸ್ಕೊ ಕಡೆಗೆ ಬರುತ್ತಿದ್ದ 27 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಅಲ್ಲಿನ ಮೇಯರ್ ತಿಳಿಸಿದ್ದಾರೆ.

ಅಮೆರಿಕ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ವರದಿಗೆ ಟೀಕೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು (ಆರ್‌ಎಸ್‌ಎಸ್) ನಿಷೇಧಿಸುವಂತೆ ಶಿಫಾರಸು ಮಾಡಿದ ಅಮೆರಿಕ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ವರದಿಯನ್ನು (ಯುಎಸ್‌ಸಿಐಆರ್‌ಎಫ್) ಭಾರತದ ನಿವೃತ್ತ ನ್ಯಾಯಾಧೀಶರು, ನಿವೃತ್ತ ಸರ್ಕಾರಿ ಹಿರಿಯ ಅಧಿಕಾರಿಗಳು ಹಾಗೂ ನಿವೃತ್ತ ಸೇನಾಧಿಕಾರಿಗಳು ಸೇರಿದಂತೆ 275ಕ್ಕೂ ಅಧಿಕ ಮಂದಿ ಟೀಕಿಸಿದ್ದಾರೆ.

'ಇದು ಬೌದ್ಧಿಕ ದಿವಾಳಿತನ ಹಾಗೂ ಗೊಂದಲಮಯ ಲೆಕ್ಕಾಚಾರಗಳನ್ನು ಪ್ರದರ್ಶಿಸುತ್ತದೆ' ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಕುರಿತಂತೆ ಜಂಟಿ ಹೇಳಿಕೆಯನ್ನು ಶನಿವಾರ ಬಿಡುಗಡೆಗೊಳಿಸಿದ್ದು, 'ತೀವ್ರ ಪೂರ್ವಾಗ್ರಹಪೀಡಿತ ಹಾಗೂ ಅಸಮರ್ಥನೀಯ ವರದಿಗೆ ಕೊಡುಗೆ ನೀಡಿದ ಎಲ್ಲರ ಕುರಿತಂತೆ ಅಮೆರಿಕವು ತೀವ್ರ ಪರಿಶೀಲನೆ ನಡೆಸಬೇಕು. ದೇಶದ ಜನರೊಂದಿಗಿನ ಸೌಹಾರ್ದ ಹಾಳುಮಾಡುವ ಗುರಿ ಹೊಂದಿರುವ ಸ್ಥಾಪಿತ ಹಿತಾಸಕ್ತಿಗಳು ವರದಿ ತಯಾರಿಸಿವೆ' ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಆರ್‌ಎಸ್‌ಎಸ್ ಜೊತೆಗೆ ನಂಟು ಹೊಂದಿರುವ ಭಾರತೀಯರ ಆಸ್ತಿಗಳನ್ನು ಮುಟ್ಟುಗೋಲು ಹಾಕಿ, ಅವರ ಚಲನವಲನದ ಮೇಲೆ ನಿರ್ಬಂಧ ವಿಧಿಸಲು ಯುಎಸ್‌ಸಿಐಆರ್‌ಎಫ್ ಶಿಫಾರಸು ಮಾಡಿರುವುದು ದಿವಾಳಿತನದ ಪ್ರದರ್ಶನವಾಗಿದೆ. ಇದುವರೆಗೂ ಸಮಿತಿಗೆ ಆರು ಆಯುಕ್ತರನ್ನು ನೇಮಿಸಲಾಗಿದ್ದು, ಅಮೆರಿಕದ ತೆರಿಗೆ ಹಣದಿಂದ ಅಮೆರಿಕ ಕಾಂಗ್ರೆಸ್‌ನಿಂದ ನೇಮಿಸಲಾಗಿದೆ. ಈ ವರದಿಗೆ ಕೊಡುಗೆ ನೀಡಿದ ಎಲ್ಲರ ಹಿನ್ನೆಲೆಯನ್ನೂ ಅಮೆರಿಕ ಸರ್ಕಾರವು ಸಮಗ್ರವಾಗಿ ಪರಿಶೀಲನೆ ಮಾಡಬೇಕು' ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಪತ್ರಕ್ಕೆ 275 ಮಂದಿ ಸಹಿ ಹಾಕಿದ್ದು, ಇದರಲ್ಲಿ 25 ಮಂದಿ ನಿವೃತ್ತ ನ್ಯಾಯಾಧೀಶರು, 119 ಮಂದಿ ನಿವೃತ್ತ ಅಧಿಕಾರಿಗಳು, 10 ಮಂದಿ ನಿವೃತ್ತ ರಾಯಭಾರಿಗಳು, 131 ಮಂದಿ ಸೇನೆಯ ನಿವೃತ್ತ ಅಧಿಕಾರಿಗಳು ಇದ್ದಾರೆ.

ಹೆದ್ದಾರಿ ನಿರ್ವಹಣೆ: ಎ.ಐ ನಿಗಾ

ನವದೆಹಲಿ: ರಸ್ತೆ ಸುರಕ್ಷತೆ ಮತ್ತು ನಿರ್ವಹಣೆ ಮೇಲೆ ನಿರಂತರ ನಿಗಾ ವಹಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಡ್ಯಾಶ್‌ಕ್ಯಾಮ್‌ಗಳನ್ನು ಬಳಸಿಕೊಳ್ಳಲಿದೆ.

ಡ್ಯಾಶ್ ಕ್ಯಾಮ್ ಅನಾಲಿಟಿಕ್ಸ್ ಸರ್ವೀಸಸ್ (ಡಿಎಎಸ್) ಹೆಸರಿನ ಈ ಯೋಜನೆಯಲ್ಲಿ ಎ.ಐ ಆಧಾರಿತ ಎಚ್‌ಡಿ ಡ್ಯಾಶ್ ಕ್ಯಾಮ್‌ಗಳನ್ನು ಹೆದ್ದಾರಿ ಪ್ರಾಧಿಕಾರದ ಗಸ್ತು ವಾಹನಗಳಿಗೆ ಅಳವಡಿಸಲಾಗುವುದು. ಈ ವಾಹನಗಳು ವಾರಕ್ಕೊಮ್ಮೆ ನಿಗದಿಪಡಿಸಿದ ಹೆದ್ದಾರಿ ವ್ಯಾಪ್ತಿಯಲ್ಲಿ ಸಂಚರಿಸುವ ಮೂಲಕ ರಸ್ತೆ ಗುಣಮಟ್ಟ, ಸುರಕ್ಷತೆ ಮತ್ತಿತರೆ ಅಂಶಗಳ ಬಗ್ಗೆ ಪರಿಶೀಲನೆ ನಡೆಸಲಿದೆ' ಎಂದು ಎನ್‌ಎಚ್‌ಎಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಸ್ತೆ ಗುಂಡಿ ಬಿದ್ದಿರುವುದು, ಬಿರುಕು ಮೂಡಿರುವುದು, ಡಾಂಬರು ಕಿತ್ತುಬಂದಿರು ವುದು, ಹೆದ್ದಾರಿ ಅಂಚು ಗುರುತಿಸುವ ಪಟ್ಟಿ ಮಾಸಿರುವುದು, ಕಾರ್ಯನಿರ್ವಹಿಸದ ಬೀದಿ ದೀಪಗಳು, ರಸ್ತೆ ಒತ್ತುವರಿ, ಸೂಚನಾ ಫಲಕಗಳ ಅಳವಡಿಕೆ ಸೇರಿದಂತೆ ರಸ್ತೆ ನಿರ್ವಹಣೆಗೆ ಸಂಬಂಧಿಸಿದ 30ಕ್ಕೂ ಹೆಚ್ಚು ಲೋಪಗಳನ್ನು ಎ.ಐ ತಂತ್ರಜ್ಞಾನ ಗುರುತಿಸಲಿದೆ. ದೇಶದಾದ್ಯಂತ ಸುಮಾರು 40 ಸಾವಿರ ಕಿ.ಮೀ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ ಜಾಲದುದ್ದಕ್ಕೂ ಎ.ಐ ಆಧಾರಿತ ಡ್ಯಾಶ್ ಕ್ಯಾಮ್‌ಗಳು ನಿಗಾ ವಹಿಸಲಿವೆ.

ಕಾಶ್ಮೀರ: ಅಫ್ಗನ್ ಮೇಲಿನ ಪಾಕ್ ದಾಳಿಗೆ ಖಂಡನೆ

ಶ್ರೀನಗರ: ಅಫ್ಗಾನಿಸ್ತಾನದ ಕಾಬೂಲ್ ನಲ್ಲಿರುವ ಆಸ್ಪತ್ರೆಯೊಂದರ ಮೇಲೆ ಪಾಕಿಸ್ತಾನ ನಡೆಸಿದ ವೈಮಾನಿಕ ದಾಳಿಯಲ್ಲಿ 400ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ ಘಟನೆ ವಿರೋಧಿಸಿ ಕಾಶ್ಮೀರದಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆ.

ಫೇಸ್‌ಬುಕ್ ಹಾಗೂ 'ಎಕ್ಸ್' ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ದಾಳಿಯ ದೃಶ್ಯಗಳು ಹಾಗೂ ಆ ಕುರಿತು ಪೋಸ್ಟ್‌ಗಳು ಹರಿದಾಡುತ್ತಿದ್ದು, ಆಸ್ಪತ್ರೆ ಮೇಲೆ ದಾಳಿ ನಡೆಸಿದ ಪಾಕಿಸ್ತಾನದ ನಡೆಯು 'ಅನಾಗರಿಕ'ವಾಗಿದೆ ಎಂದು ವ್ಯಾಪಕವಾಗಿ ಖಂಡಿಸಲಾಗಿದೆ. ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ಹಾಗೂ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಅವರನ್ನು ಟೀಕಿಸಲಾಗಿದೆ.

ಸಿಎಪಿಎಫ್ ಐಜಿ ಹುದ್ದೆ: ಶೇ 50ರಷ್ಟು ಐಪಿಎಸ್‌ಗೆ ಮೀಸಲು

ನವದೆಹಲಿ (ಪಿಟಿಐ): ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳಿಗೆ (ಸಿಎಪಿಎಫ್) ಅಧಿಕಾರಿಗಳ ನೇಮಕಾತಿ, ನಿಯೋಜನೆ, ಬಡ್ತಿ ಮತ್ತು ಇತರ ಸೇವಾ ಷರತ್ತುಗಳನ್ನು ನಿಯಂತ್ರಿಸುವ ಕಾನೂನನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯಸಭೆಯಲ್ಲಿ ಸೋಮವಾರ ಮಂಡಿಸುವ ನಿರೀಕ್ಷೆಯಿದೆ.

ಸಿಎಪಿಎಫ್‌ಗಳಲ್ಲಿ ಐಪಿಎಸ್ ಅಧಿಕಾರಿಗಳ ನಿಯೋಜನೆಗಾಗಿ ಐಜಿ ಹುದ್ದೆಗಳಲ್ಲಿ ಶೇ 50ರಷ್ಟು ಹಾಗೂ ಎಡಿಜಿ ಹುದ್ದೆಯಲ್ಲಿ ಶೇ 67ರಷ್ಟು ಹುದ್ದೆಗಳನ್ನು ಮೀಸಲಿಡುವ ಪ್ರಸ್ತಾವ ಕೇಂದ್ರ ಸಶಸ್ತ್ರ ಪೊಲೀಸ್ ಪಡೆ (ಸಾಮಾನ್ಯ ಆಡಳಿತ) ಮಸೂದೆ–2026ರಲ್ಲಿದೆ. ವಿಶೇಷ ಮಹಾನಿರ್ದೇಶಕ ಮತ್ತು ಮಹಾನಿರ್ದೇಶಕ ಹುದ್ದೆಗಳನ್ನು ನಿಯೋಗ ಮೂಲಕ ಮಾತ್ರ ಭರ್ತಿ ಮಾಡಲಾಗುವುದು ಎಂದಿದೆ.

ಪ್ರಸ್ತುತ ಎಲ್ಲ ಸಿಎಪಿಎಫ್‌ಗಳು–ಸಿಆರ್‌ಪಿಎಫ್, ಬಿಎಸ್‌ಎಫ್, ಐಟಿಬಿಪಿ ಮತ್ತು ಎಸ್‌ಎಸ್‌ಬಿ ಆಯಾ ಕಾನೂನುಗಳಿಂದ ನಿಯಂತ್ರಿಸಲ್ಪಡುತ್ತಿವೆ.

ಪರಿಶಿಷ್ಟರ ಮೇಲೆ ಗುಂಪು ಹಲ್ಲೆ

ಒಂದನೇ ಪುಟದಿಂದ...

'ಅಲ್ಲಿ ಬಿಸಿಲಿದೆ ಎರಡು ನಿಮಿಷ ನೆರಳಲ್ಲಿ ಕುಳಿತು ಎದ್ದು ಹೋಗುವುದಾಗಿ ಹೇಳಿದರೂ ಪೂಜಾರಿ ಕೇಳಲಿಲ್ಲ. ಅಲ್ಲಿ ಇದ್ದ ನಾಲ್ಕೈದು ಜನರನ್ನು ಕರೆದ ಪೂಜಾರಿ, 'ಪರಿಶಿಷ್ಟರು ಬಂದು ಕಟ್ಟೆಯ ಮೇಲೆ ಕುಳಿತಿದ್ದಾರೆ' ಎಂದು ನನ್ನ ಮೇಲೆ ಹಲ್ಲೆಗೆ ಪ್ರಚೋದಿಸಿದರು' ಎಂದು ಗಾಯಾಳು ಅನಿಲ್‌ಕುಮಾರ್ ಆರೋಪಿಸಿದ್ದಾರೆ.

'ಪ್ರಕರಣ ಸಂಬಂಧ ಪೂಜಾರಿಯನ್ನು ವಶಕ್ಕೆ ಪಡೆಯಲಾಗಿದೆ. ಲಕ್ಷ್ಮಣ, ಅನಂತಪ್ಪ, ರಮೇಶ ಸೇರಿ ಇತರರು ಹಲ್ಲೆ ಮಾಡಿದ್ದಾಗಿ ಸಂತ್ರಸ್ತರು ಹೇಳಿದ್ದಾರೆ. ಅನಿಲ್‌ಕುಮಾರ್ ಕಳ್ಳತನಕ್ಕೆ ಎರಡು ಬಾರಿ ದೇವಸ್ಥಾನದ ಒಳಗೆ ಹೋಗಿದ್ದಾರೆ ಎಂಬುದು ಪೂಜಾರಿಯ ಆರೋಪ. ಹೀಗಾಗಿ, ಪ್ರಕರಣ ದಾಖಲಿಸಿ ತನಿಖೆ ಮಾಡಲಾಗುವುದು' ಎಂದು ಎಸ್‌ಪಿ ಪೃಥ್ವಿಕ್ ಶಂಕರ್ 'ಪ್ರಜಾವಾಣಿ'ಗೆ ತಿಳಿಸಿದರು.

ಗುರುಮಠಕಲ್ ಪಟ್ಟಣದ ಸಿಎಚ್‌ಸಿಯಲ್ಲಿ ಚಿಕಿತ್ಸೆ ಪಡೆದ ಗಾಯಾಳು ಅನಿಲ್‌ಕುಮಾರ್

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Marketing & Sales

TECHNICAL SALES OFFICER (Experienced), age 45-50, required by a 50-year-old Bangalore-based Engineering sales company dealing in imported products such as fuel, oil transfer and AdBlue pumps, dispensers, meters, railway brake cables, and earthmoving spares. Candidate must have strong technical and commercial experience, ability to meet senior OEM officials and dealers, make presentations, close and generate business, and prepare targets. Proficiency in Word, Excel, and PowerPoint required. Position reports to Chief Executive and involves travel. Salary Rs.35,000-40,000 per month. Apply with details to officestaffblr@gmail.com

General

REQUIRED COMPUTER operator well versed with MS Office with good typing speed. Also wanted court attender. Work area Jalahalli near HMT. Contact 8123066607.

WANTED MALE Office Assistant with computer knowledge, PUC above, Balija Sangha Vijayanagar, Bengaluru. Contact: 8088384110

THE MYSORE EDUCATION SOCIETY

"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003. Website: : https://mesinstitutions.in.

(All the post are for self-financed (un-aided) Programs)

Invites applications for the teaching faculty for the following Departments in MES College of Arts Commerce & Science and MES Institute of Management

Post Title	Subject	Essential Qualification	Desirable Qualification
Research Associate	Biotechnology / Microbiology	Ph.D. in Biotechnology / Microbiology or a relevant discipline from a recognized university Completion of mandatory coursework as per UGC norms	Proven experience in conducting in-depth scientific investigations Experience in executing and managing funded research projects Demonstrated research output (publications, patents, project reports, etc.)
Professor / Associate Professor (Full Time)	Computer Science/ Commerce/ Management	(i) Post-graduate in relevant discipline from a recognized university with a minimum of 55% marks or equivalent grade (ii) Should have Ph.D. degree from a recognized university by UGC in the relevant subject (with course work included as part of doctoral program).	NET/SLET qualification, Research Publications, Funded Projects, Post-doctoral experience, knowledge of computer applications, usage of ICT in teaching. Teaching experience: Professor: Minimum 12 years Associate Professor: Minimum 8 years
Assistant Professor (Full Time)	Kannada/English/Hindi/ Journalism/Psychology/ Physics/Chemistry/ Commerce / Computer Science / Management / Political Science/Botany/ Micro Biology	(i) post-graduate in relevant discipline from a recognized university with a minimum of 55% marks or equivalent grade (ii) with NET/SLET examination or Ph.D. degree from a recognized university by UGC in the relevant subject. (with course work included as part of doctoral program).	(i) 3 years of teaching experience (ii) Knowledge of Computers. Usage of ICT in teaching
Assistant Professor (Part-Time)	English/Sanskrit/ Journalism/History/ Political Science/Forensic Science/Bio-Technology		

1. Attractive salary commemorates with qualification & experience.
2. Applications with BIO-DATA and copies of certificates of qualifications and experience etc., should reach the Chief Executive Officer, MES at the above address on or before **31.03.2026** duly superscribing the envelope with **"Application for the post of ____________________".**
3. Decision of the selection committee is final.
4. Resorting to any sort of influence will be deemed as a disqualification of the candidature.
5. Download the application form from the MES website: https://mesinstitutions.in

Advt. No. MES/19-4/ADM-1/2026 Dated 18.03.2026 **CHIEF EXECUTIVE OFFICER**

WANTED MALE RECEPTIONIST AND RECORD MAINTAINANCE MALE CANDIDATE. QUALIFICATION: GRADUATES AGED BETWEEN 35 TO 40 YEARS WELL ACQUAINTED IN KANNADA, ENGLISH and REGIONAL LANGUAGES WITH COMPUTER KNOWLEDGE. SHOULD HAVE MINIMUM TWO YEARS EXPERIENCE. INTERESTED MAY PLEASE APPLY WITH BIODATA AND RECENT PHOTO TO EMAIL : karnatakafilmhouse@yahoo.com before 28th MARCH 2026

Teachers/ Professors

ST.CHARLES HIGH SCHOOL#1086 1st Block,3rd Stage Adarsha Layout Basaveshwaranagar Bangalore-79. Phone:080-23235220/ 9449150749. Invites the Applications from Trained and Experienced English Medium-Teachers for Nursery,Primary,and High School to teach all the Subjects including-Computer,CP.Ed and Drawing.Qualification required:NTT,TCH D.Ed,B.Sc B.Ed,BA B.Ed.

REQUIRED EXPERIENCED Primary and High School Teachers with B.A / B.Sc, B.Ed / M.A / M.Sc, M.Ed to teach Science, Social Science, Mathematics, English, Hindi & PE Teacher. Required Librarian, Lab Assistant & Drivers. Walk-in-interview. Contact: Lalith Castle International School, Rajarajeshwari Nagar, Blore-98. Mob: 9620464800 Email: lcis.rrnagar@gmail.com

PRINCIPAL REQUIRED for Sri Annapurna Vidyaaniketan (1-10th Std). Veerabhadranagar, Near PES University, Bangalore-8095235632, 9449834541

REQUIRES EXPERIENCED Primary and High School Teachers with B.A / B.Sc., B.Ed / M.A / M.Sc., M.Ed to teach Science, English, Mathematics and Sanskrit. English fluency is must. Walk-in-Interview. Contact Max Muller Public School, Mahalakshmi Layout, B'lore-96. Ph: 23376050. E-mail-maxmullerpublicschool.mlayout@gmail.com

PREMIER HIGH SCHOOL, SRIRAMPURAM requires Headmistress & Teachers for Primary (English, Social) and High School (Maths, Science) (Ladies Preferred). Contact: 9538836721.

THE MYSORE EDUCATION SOCIETY

"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003. Website: : https://mesinstitutions.in.

Invites applications for the following posts:

Post Title	Subject	Essential Qualification	Desirable Qualification
Principal for PU Colleges	Academics & Administration	Postgraduate in relevant discipline and B.Ed. with minimum 55% marks. Knowledge of ICT, computer applications, Kannada & English.	Ph.D., teaching and administrative experience. Minimum 10 years in similar capacity
Teachers – High School (ICSE)	English & Social (Leave Vacancy)/Hindi	Master's degree with minimum 55% marks and B.Ed. in relevant subject(s).	Teaching experience and ICT usage.
Teachers – Primary & High School (State Board)	EVS & Kannada/Mathematics (Primary) English (High School)	Bachelor's degree with minimum 55% marks and B.Ed. in relevant subject(s).	Teaching experience and ICT usage.
Teacher	Art & Craft	Bachelor's in Fine Arts & Crafts or Visual Arts with 55% marks and Diploma in Arts & Crafts.	Teaching experience and ICT usage.
Teacher	Dance	Bachelor's in Performing Arts.	Teaching experience.
Teacher	Music	Bachelor's in Music/Vidwath/ Diploma in Music.	Teaching experience.
Lecturers – PU Colleges	Kannada/English/Hindi/ Sanskrit/Physics/Chemistry/ Mathematics/Biology/Computer Science/Commerce/Statistics/ Sociology	Master's in relevant subject with 55% marks and B.Ed.	Teaching experience and ICT usage.
Librarian – School	Librarian	Bachelor's in Library/Information/ Documentation Science with 55% marks.	Experience, computer skills, web content management.
Counsellor	Counsellor Schools & PU Colleges	Master's in Psychology or PG Diploma in Counselling.	3-5 years experience.
Teacher	Rangashale	Any Bachelor's Degree with a minimum of 55% marks with one-year Theatre Teaching experience	Theatre Diploma, Stage Music (Rangasangeetha)

1. Applications with BIO-DATA and copies of certificates of their qualifications and experience etc., should reach the Chief Executive Officer, MES, at the above address on or before **31.03.2026** duly superscribing the envelope with **"Application for the post of ____________________".**
2. Candidates with experience are preferred.
3. Competency in ICT enabled teaching is desirable.
4. All posts are tenable in any of the MES Institutions and are transferable.
5. The decision of the selection committee is final.
6. Resorting to any sort of influence will be deemed as a disqualification of the candidature.
7. Download the application form from the MES website: https://mesinstitutions.in

Advt. No. MES/19-5/ADM-1/2026 Dated 18.03.2026 **CHIEF EXECUTIVE OFFICER**

CAMLIN ENGLISH School State Board 6th 'C' Main, 4th Cross, Hampinagar Bengaluru-560104 080-23301363 REQUIRES TEACHERS for High, Middle and Primary School. English, Kannada, Maths, Science, Social Computer, Physical Education. WALK-IN INTERVIEW or Resume to Email: camlinschool84@gmail.com

BHARATH EDUCATION SOCIETY®

Sahakara Rathna B.L.Lakke Gowda Road, No.27, 16th Main, 4th Block, Jayanagar, Bengaluru-560011. Phone: 8123522820
E-Mail: besinstitution@yahoo.in; Website: www.besinstitutions.com

B.E.S. INSTITUTE OF PHARMACY

Applications are invited for the post of
LAB TECHNICIAN: With Diploma in Pharmacy.
Salary Commensurate with Qualification & Experience.
Apply within Seven days.
S/d
Prof N.S. Vijaya, Secretary

BES-25620

Cook

SOUTH INDIAN COOK/ HOUSEKEEPER (Females) WANTED VIDYARANYAPURA Near BEL Factory, BANGALORE. Accommodation, Food Provided 15000 PM. 8884488887/ 9035813667

Wanted

WANTED BILLING Clerk with Knowledge of Kannada Typing for Publishing Company near Majestic: 9448670282/ 9448467728

Accounts & Finance

AFPRO A NATIONAL LEVEL NGO requires ACCOUNTANT, 3-years experience with Tally knowledge for Bangalore office. Mail to-aro.blr@afpro.org.

Multiple Vacancy

ಬೇಕಾಗಿದ್ದಾರೆ

MSRIT Boys Hostel ಗೆ ಕೆಳಗಿನ ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ:

- ಹಾಸ್ಟೆಲ್ ಮೇಲ್ವಿಚಾರಕ
- ಮೆಸ್ ಮೇಲ್ವಿಚಾರಕ
- ಅಡುಗೆಗಾರ
- ಸಹಾಯಕ ಅಡುಗೆಗಾರ

ಹಾಸ್ಟೆಲ್ ನಿರ್ವಹಣೆ ಹಾಗೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಅಡುಗೆ ಮಾಡುವ ಅನುಭವ ಹೊಂದಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುತ್ತದೆ. ವೇತನ: ಸಂಸ್ಥೆಯ ನಿಯಮಾನುಸಾರ. ಆಸಕ್ತ ಅಭ್ಯರ್ಥಿಗಳು ತಮ್ಮ ವಿವರಗಳೊಂದಿಗೆ 7 ದಿನಗಳೊಳಗೆ ಅರ್ಜಿ ಸಲ್ಲಿಸಬೇಕು.

The Warden, MSRIT Boys Hostels
M. S. Ramaiah Institute of Technology,
ಎಂ.ಎಸ್.ಆರ್ ನಗರ, ಬೆಂಗಳೂರು–54
ದೂರವಾಣಿ: 080-23600003
ಇಮೇಲ್: hostel@msrit.edu
Mob No. 78291 34223

PERSONAL

Change of Name

CHANGE OF NAME
I, **BINOD MADATHIPARAMBIL @ BINOD M @ BINOD MENON @ BINOD MADATHIPARAMBIL MENON** Residing at No. 4/A, Chik Bazar Road, 1st Cross Road, Shivajinagar, Bengaluru- 560051 have changed my name to **BINOD MENON M** vide affidavit dated 18.3.2026 before Notary Meer Hassan, Bengaluru.

I, NIMMY Samuel, D/o Late P S Samuel (W/o George Moothedan) residing at 2668, 36A Cross, 9th Block, Jayanagar, Bangalore-69, change my name from Nimmy Samuel to Nimmy George

CHANGE OF NAME
I, **Sandhya Kulkarni,** residing at # 138/7, 12th Cross, Teachers Colony Road, Venkatapura, Koramangala, Bengaluru-560034, have changed our minor Son's name from **CHINMAY** to **CHINMAY BIJAPUR** vide affidavit dated 20-03-2026 before notary A.S. Narayana Reddy, Reg. No. 10685, Bengaluru.

I, CHANDRIKA Mohan, have changed my name to Aarav Krishnan, and gender to Male

CHANGE OF NAME
I, PRIYANKA G, residing at No. 35, 2nd Chavara Church Cross Road, Ejipura, Bengaluru-560047, have changed my name to **PRIYANKA GEORGE** vide affidavit dated 17-03-2026 before notary B.M. Chandrashekar, Bengaluru. Henceforth I shall be called **PRIYANKA GEORGE** only

AUTOMOTIVE

Four Wheelers Selling

BUS

5 BUSES BELONGING TO EDUCATIONAL INSTITUTE FOR SALE. CONTACT - 9738199809

Maruti

MARUTHI S-PRESSO VXI + (O) AGS Automatic 2024 Model Single Owner 10496 kms Driven No Brokers: 9341273990

RASHTREEYA SIKSHANA SAMITHI TRUST® RV INSTITUTIONS

RV Learning Hub®

VVN PU College
(A Unit of Vasavi Vidyanikethan Trust)

ಆರ್ ವಿ ಈಗ ವಿ.ವಿ.ಎನ್ ಪಿಯು ಕಾಲೇಜಿನಲ್ಲಿ ಪ್ರವೇಶಾತಿ ಪ್ರಾರಂಭವಾಗಿದೆ

ನೀಟ್ ಯುಜಿ, ಜೆಇಇ ಮತ್ತು ಕೆಸಿಇಟಿ ಪಿಯು ಬೋರ್ಡ್ ತರಬೇತಿಯೊಂದಿಗೆ

ಸಂಯೋಜನೆಗಳು

Science: PCMB, PCMCs
Commerce: SEBA, GEBA, CEBA, MSBA

ನಮ್ಮ ಕ್ಯಾಂಪಸ್‌ಗಳು

Bengaluru
NMKRVPU | SSMRVPU | RVPU South | RVPU North | RVPU Harohalli
RVPU E-City | VVN PU College
Other Cities
RVPU Mysuru

ಈಗಲೇ ಸಂಪರ್ಕಿಸಿ

+91 8317346585
+91 9035030390
VVN PU College Campus, V. V. Puram, Basavanagudi, Bengaluru – 560004
www.vvn.rvlearninghub.com

Scan to Apply

Go, change the world®

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Commerical

Basaveshwaranagar

BASAVESHWAR NAGAR 100 Feet Road Commercial 40X60 BDA Property For Sale Call: 9341260828

Yeshwanthpur

YESHWANTHPURA MAIN ROAD 56,000 Sqft, Dabaspete 1 To 100 Acres, Doddaballapura 100 Acres Land: 9845057822

Commercial Building

Out-Station

FOR RENT / SALE
FULLY FURNISHED OFFICE 3rd Floor
ON OLD AIRPORT ROAD
VDB TOUCHDOWN
Next to HAL Museum
7447 Sqft
96 Workstations
3 Meeting Rooms
1 MD Cabin || 5 Cabins
1 Board || 1 Cafeteria
6 Car Parks
NO PHONE CALLS
WHATSAPP MESSAGE ONLY TO 98450 31550

ಅದ್ಧೂರಿ ಉದ್ಘಾಟನೆ
ನಮ್ಮ 3ನೇ ಮಳಿಗೆ
Opening Offer 60% off
ON PURE MYSORE CREPE SILK SAREE

ಸೀರೆ ಉತ್ಸವ-3 ನಮ್ಮೊಂದಿಗೆ ಸೇರಿ ಆಚರಿಸಿ
ನಮ್ಮ ಹೊಸ ಮಳಿಗೆಯಲ್ಲಿ 16 ರಿಂದ 31ನೇ ಮಾರ್ಚ್ 2026 ರ ವರೆಗೆ
SULAKSHMI SILKS
ಕರ್ನಾಟಕದ ಅತಿದೊಡ್ಡ ಸೀರೆ ಉತ್ಸವ
ಸಂಪರ್ಕಿಸಿ: 99727 18898 | 93531 38343 | 9886306643 | 96631 27606
ಸ್ಥಳ: ನಂ.119/1, ಶ್ರೀನಿಧಿ ಕಾಂಪ್ಲೆಕ್ಸ್, 11ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

PRM/KA/RERA/1251/310/PR/151223/006489
DS MAX SISTA GRAND
LUXURIOUS 3 & 4-BHK APARTMENTS
DS MAX®
BANASHANKARI
OPP. NATIONAL PUBLIC SCHOOL
CREDAI BENGALURU
3-BHK HOMES STARTS @ JUST
₹ 1.45 Cr.*
BBMP APPROVED | 3 & 4 BHK | G+3 FLOORS
*T & C Apply

8880 003 003
www.dsmaxproperties.com

HSR Layout

RELIABLE LAKE DEW Haraluru BDA khata 40×70 South East Corner plot for sale. Owner: 9845067070

Multiple Locations

BANASHANKARI 6TH Stage, Nadaprabhu Kempegowda Layout, Vishweshwariah, BDA Site, Houses are available. Contact: 9900999919.

Nagarabhavi

"NAGARABHAVI DEEPA-COMPLEX 40x60 North East Corner, 30x48 West 40 feet Road Immediate Registration. 9448432633"

Rajarajeshwari Nagar

RR.NAGAR BEML 5th Stage, 6560 Sqft, West Facing, Vastu Site Sale, Suitable: House/ Apartment. 9448121223

Sadashiva Nagar

RMV 1ST BLOCK Sadashivanagar, R.R.Nagar 40x60 Bangalow, Kumarpark Malleshwaram Vijayanagar Basavanagudi Jayanagara Any Measurements: 9845057822

Sanjaynagar

SANJAYNAGAR KEB LAYOUT BDA 1050 sft North West corner 40 feet Road E-Khatha, Call: 7829203369

Vishweshwariah Layout

BDA SITE SALE VISHWESHWARAIAH LAYOUT 2nd Block 40X60 NORTH FACE NEAR 100FT ROAD GOOD LOCATION CONTACT: 8892901567

Prime Commercial Building
Sale / Lease at Belagavi
Subhash Photo Plaza, Ramdev Galli, Belgaum, Karnataka

✓ Ideal for showrooms, offices, institutes, training centers
✓ Basement + Ground +3 Floors +Terrace
✓ Total built-Up area approx 15000 sq ft
✓ Frontage 44 feet
✓ High footfall area surrounded by leading Jewellery brands and Textile market
Scan for More Details
✓ Lift facility
✓ Granite flooring
✓ 24 hours water
✓ Basement parking
Enquiries: Mr.Sagar 7899377310

Sites

Anjanapura

ANJANAPURA BDA N/E CORNER SITE FOR SALE 45X80, 60' ROAD, CALL OWNER RAJESH 98451 67755

ANJANAPURA 2ND Block 30x40 Site for Sale West Facing Good_Location Developed area Owner Meeting Ph:9880812364.

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH Stage 1st Block. 30x40 Site For Sale Near NPS School. Brokers Excuse. 9686026739.

Bannerghatta Road

SITE FOR sale: 40/60ft, NF, @Raja Iris Residencial layout,1.5 cr. ,Begur koppa road, Cont: 9035917223

J P Nagar

JP-NAGAR 7TH PHASE 30X50 EF Old House, Jagruthi Colony, Puttenahalli Good Location Contact: 9448045601/ 9535811626

Kempegowda Layout

ARKAVATI ALATRNENT Site Sale SF,BDA 30ft,Road Rs.1Cr 15Lac Negotiable Nada,Prbhu Kempegowda Layout 8th,Block D'Sector Near Mysore Road: 9611577666

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Vidyaranyapura

SAMBRAM COLLEGE Near Amba Bhavani Temple Back Side 30x40, 37.5x40, 40x60 WF, BBMP B/E Katha: 8296895858

BDA SITE For Sale @ Vishweshwaraiah Layout 30x40, 40x60, 50x80 Contact: 6363496142 9845555666

House

Banashankari

BANASHANKARI 3RD Stage, HOUSE SALE 3 Floors, East, 32x54, 30 Feet Road, 4.50.cr. 9945443877, 9845135208.

Kanakapura Road

"FOR RENT 2BHK close to Forum South Mall, Konanakunte Metro Station, Kumaran School, 9845286505"

Nandini Layout

NEW BUILDING G+3.5 floors, Lift, Interiors, BDA- 33x40 East, Final Price- 5 Crores, Contact: 9103283380/ 9845729728

Rajajinagar

HOUSE FOR sale size 30x30, Rs: 27000/- psft west Facing at Rajajinagar No. 1763, 6th main Road D Block contact: 9845603348

RAJAJINGAR FOR Sale 30X60 East 2 stage A block Rs. 26000/- Cheque payment FINEHOME Realtors: 8884255563, 2% service charges

Flat

Manyata Tech Park

MANYATHA RESIDENCE
Luxurious Apartment
2 BHK Flats For Sale
Near Manyatha Tech Park
Site No. 12-13, Defense Enclve Phase - II
(Near Kensri School)
H A Farm Post, Mariyannapalya, BENGALURU
98443 45334

Marathahalli

NEAR MARTHALLI Metro Centreo, Acacia tower 1454 sft ReadyFlat for sale Contact 9962372203.

Nagarabhavi

FLATS FOR-SALE @ Nagarabhavi Chandra Layout 2 & 3 BHK Ready to Move In Good Location Call:9538472420 9845066608

Whitefield

SALE: PRESTIGE Park View, Whitefield, 3BHK, 1839 SBUA, Semi-Furnished, 15th Floor, West Facing, Price- 2.75 CR, Call- 9108253029, 9108045702

Agricultural Land

Out-Station

11KM FROM Bangalore. 30000sft only 1350/- and 8acre Land Sale Suitable for Multiple Development 9535151616

HIGHWAY PROPERTY (Nagamangala-Magadi Road) 5acre Land Suitable for Multiple Development only 2,75000 Per Guntas 9535151616

Industrial & Factory

Bommasandra

BOMMASANDRA 5 ACRES KIADB Land, Hoskote, Devanahalli, Mysore Road, Peenya 5000 To 5 Acres: 9845057822

Jigani

ANEKAL INDUSTRIAL PARK, 7Acres Land, 2MNC's Tenanted, 8Years Locking Period, 35Lakhs Rent getting 70Cr.: 9845057822

Kanakapura Road

HAROHALLI INDUSTRIAL AREA 3.6Acres Industrial Conversion Land Getting Rent 12Lakhs PM, Locking Period 8Years, 30Cr.: 9845057822

Tumkur Road

SALE, 30 Acres Land Suitable for Warehouse, Industry, Residential. Wide Road, Dabaspet Industrial Area. 9141326819

General

Out-Station

MUMBAI SEA FACE JOINT DEVELOPMENT PROPERTIES AVAILABLE SRADEVELOPMENTS, REDEVELOPMENTS. GOA SALE CASINO 5STAR HOTEL. 9702932709

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

BHARATH EDUCATION SOCIETY®
BES Pre-University College of Science, Commerce & Arts
27, Sahakara Rathna B.L. Lakke Gowda Road, 16th Main, Jayanagar 4th Block, Bengaluru-560011
Email: principalas018@gmail.com
Website: www.besinstitutions.com
080-26637018 / 98863 52466
Free Integrated Course
NEET, JEE, K-CET, COMED-K
Affordable Fee for I & II PUC Science



Sahakara Rathna B.L. Lakke Gowda
Founder
B.E.S Institutions

Sri S.T. Somashekhar
Hon. President, Bharath Education Society
MLA, Yeshwanthpura Constituency,
Former Minister, Govt of Karnataka
COURSES OFFERED FOR : 2026-27
PUC PCMB PCMC HEBA SEBA CEBA HEPS
Languages Offered: English, Kannada, Hindi & Sanskrit
BES EVENING PU COLLEGE OF COMMERCE & ARTS
080-26533736 / 95387 98956 Email: beseveningpucollege@gmail.com
PUC HEBA HEPS
Sri Nirmal Kumar K.R. President Bharath Education Society
Prof N.S. Vijaya Secretary Bharath Education Society
Sri Srinivasa C. Principal BES PU College
Sri Suresh Principal BES Evening PU College
BES-25616

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Banashankari

BDA SITES WANTED ARKAVATI, ANJANAPURA, BANASHANKARI 6TH STAGE, VISHWESHWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA Sites Arkavathi, Nadaprabhu Kempegowda & BDA other Layouts. Contact: SAPTHAGIRI (Opposite BDA Head Office):: 9036360366

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Available

Commercial

COMMERCIAL OFFICE Space for Rent 1000sqft, 3rd Floor, HBR layout, opposite to HBR BDA Complex, Contact: 9845753489

RENTAL AVAILABLE Commercial Space Jayanagar 3rd Block Indoor space 1400 sft Outdoor space 650 sft Contact: 9591243838

COMMERCIAL SPACE available for Rent at WOC Rajajinagar Opp NPS School Corner property Ground Floor 2200 Sqft, 1st floor 2200 sqft suitable for Showrooms, Banks, jewellery, vehicle Showrooms. Contact: 9845432456.

Flats

TO-LET: PREMIUM 1276 sq-ft 2-BHK Flat on Club Road, Belagavi Prime-Central Location Contact 7259010047

2 BHK flat rent 3rd floor JPNagar 1st phase carpark, lift, 35k - 9886425997

Industrial And Factory

AVAILABLE INDUSTRIAL Warehouse 160000 sqft Vijipura, Hoskote. Contact: 9341234288/ 9663224353/ 9845417487.

House

BTM LAYOUT, House Rent 2 BHK 36000/-, 3 BHK Rs.47000/-, 1 Room Rs.8000/-. BTM Layout Call-9480255422

TOURS & TRAVEL

Travel Agencies

BHUTAN GROUP TOUR, MAY 10th, 8 DAYS, 69000/- ALL INCLUSIVE PACKAGE. SARAKKI TOURS: 9663676464

BUSINESS

Business to Business

Events And Exhibitions

GR.EVENTS ATOZ Events Management, BANGALORE. Birthday`Party Weddings Naming Ceremony House`Warming Baby`Shower Flower Decoration Engagements Mehandi/Sangeet Ceremony Corporate Events. CALL:7411112565

Business Offers

Business For Sale

SALE AYURVEDA college near Bangalore with Hospital, Hostel, International wellness and Research centre. Arun 9845077299.

MATRIMONIAL

Brides Wanted

Hindu

IIT-IIM, BRAHMIN, 40 years/ 6'-3', divorced, wkg in MNC Bangalore. 7021391897/ 9867274292

DH Classifieds DECCAN HERALD More value, more impact
REAL ESTATE
ಪ್ರಜಾವಾಣಿ
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY - ON SATURDAY + SUNDAY
@ 2481/-*
FOR 15 WORDS

www.dhclassifieds.com BOOK NOW
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164
*Conditions apply

ಗಾಂಧಾರ ಬುದ್ಧನೊಂದಿಗೆ...
ಅಮೆರಿಕದ ಸಾಂತಾ ಬಾರ್ಬರಾ ಕಲಾಸಂಗ್ರಹಾಲಯದಲ್ಲಿ ಗಾಂಧಾರ ಬುದ್ಧನೊಡನೆ ಒಡನಾಡಿದ ಅನುಭವ

11

ಶರೀಫರ ಉಚಿತ ತರಕಾರಿ ಸೇವೆಯೂ...

• ಈರಣ್ಣ ಬೆಂಗಾಲಿ

ಸರ್ಕಾರಿ ಶಾಲೆಯ ಶಿಕ್ಷಕಿಯ ಮನವಿಗೆ ಸ್ಪಂದಿಸಿದ್ದು ತರಕಾರಿ ವ್ಯಾಪಾರಿ ಶರೀಫ್. ಅದರ ಪರಿಣಾಮವಾಗಿ ಕಳೆದ ಹತ್ತು ವರ್ಷಗಳಿಂದ ನೂರಾರು ಮಕ್ಕಳ ಬಿಸಿಯೂಟದ ತಟ್ಟೆಯಲ್ಲಿ ತರಕಾರಿ ತುಂಡುಗಳು ಹೆಚ್ಚಾಗಿವೆ. ಇದು ಹೇಗೆ ಸಾಧ್ಯವಾಯಿತು?

ಅದು ಮಧ್ಯಾಹ್ನ. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದ ಮಜಿ ವೀರಕಂಭ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅಡುಗೆಮನೆ ಚಟುವಟಿಕೆಯಿಂದ ಕೂಡಿತ್ತು. ದೊಡ್ಡ ಪಾತ್ರೆಯಲ್ಲಿ ಸಾಂಬಾರ್ ಕುದಿಯುತ್ತಿತ್ತು. ಅಡುಗೆಮನೆಯು ಹೊಗೆ ಮತ್ತು ಗದ್ದಲದಲ್ಲಿ ಬೆರೆತುಹೋಗಿತ್ತು. ಹೊರಗೆ ಮಕ್ಕಳು ತಟ್ಟೆ ಹಿಡಿದು ಸಾಲಾಗಿ ಕುಳಿತಿದ್ದರು. ಅವರ ಕಣ್ಣುಗಳಲ್ಲಿ ಹಸಿವಿನ ಜೊತೆಗೆ ಒಂದು ನಿರೀಕ್ಷೆಯ ಮಿನುಗು.

ಆದರೆ ಶಿಕ್ಷಕಿ ಸಂಗೀತಾ ಅವರ ಮನಸ್ಸಿನಲ್ಲಿ ಕೊರತೆವೊಂದು ಕಾಡುತ್ತಿತ್ತು. ಪಾತ್ರೆಯೊಳಗೆ ನೋಡಿದಾಗ ಸಾಂಬಾರಿದ್ದರೂ, ಅದರೊಳಗೆ ತರಕಾರಿ ತುಂಡುಗಳು ತುಂಬಾ ಕಡಿಮೆ ಕಾಣಿಸುತ್ತಿದ್ದವು. ಆದರೆ ಬರುವ ತರಕಾರಿ ಪ್ರಮಾಣ ಅದೇ ಇದ್ದಿತ್ತು.

‘ಮಕ್ಕಳಿಗೆ ಸಾಕಾಗುತ್ತದೆಯೇ?’ ಎಂಬ ಪ್ರಶ್ನೆ ಅವರ ಮನಸ್ಸಿನಲ್ಲಿ ಎದ್ದಿತು.

ಆ ಕಳವಳವೇ ಅವರನ್ನು ಒಂದು ದಿನ ಬಂಟ್ವಾಳದ ತರಕಾರಿ ಅಂಗಡಿಯ ಕಡೆಗೆ ಕರೆದೊಯ್ದಿತು.

ಅಂಗಡಿಯಲ್ಲಿ ಕೆಲಸದಲ್ಲಿ ತಲ್ಲೀನವಾಗಿದ್ದ ಯುವಕನ ಮುಂದೆ ಅವರು ಕ್ಷಣಕಾಲ ನಿಂತರು. ಮಾತು ಪ್ರಾರಂಭಿಸಲು ಸ್ವಲ್ಪ ಹಿಂಜರಿದರು. ನಂತರ ಧೈರ್ಯ ಮಾಡಿ ಕೇಳಿದರು:

‘ಸರ್... ನಮ್ಮ ಶಾಲೆಯ ಮಕ್ಕಳಿಗೆ ಬಿಸಿಯೂಟಕ್ಕೆ ತರಕಾರಿ ಸಾಲುತ್ತಿಲ್ಲ. ಸ್ವಲ್ಪ ಸಹಾಯ ಮಾಡ್ತೀರಾ?’

ಅದು ಸಾಮಾನ್ಯ ವಿನಂತಿಯಂತಿದ್ದರೂ, ಅದರ ಹಿಂದೆ ಮಕ್ಕಳ ಹಸಿವಿನ ಕಳಕಳಿ ಅಡಗಿತ್ತು.

ಆ ಮಾತನ್ನು ಕೇಳಿದ ಯುವಕ ಕ್ಷಣಕಾಲವೂ ಯೋಚಿಸಲಿಲ್ಲ.

ಅಂಗಡಿಯಲ್ಲಿ ಮಹಮ್ಮದ್ ಶರೀಫ್

‘ಖಂಡಿತಾ ಕೊಡ್ತೇನೆ. ಆದರೆ ಶಾಲೆಯವರು ಬಂದು ತೆಗೆದುಕೊಂಡು ಹೋಗಬೇಕು’ ಎಂದು ಉತ್ತರಿಸಿದ.

ಆ ಯುವಕನೇ ಮಹಮ್ಮದ್ ಶರೀಫ್.

ಒಬ್ಬ ಶಿಕ್ಷಕಿಯ ಕಳವಳ ಮತ್ತು ಒಬ್ಬ ಯುವಕನ ‘ಹೌದು’ ಎನ್ನುವ ಸ್ಪಂದನೆಯಿಂದ ಆರಂಭವಾದ ಈ ಸಣ್ಣ ಸಹಾಯ ಇಂದು ಹಲವು ಶಾಲೆಗಳ ಮಕ್ಕಳ ತಟ್ಟೆಗೆ ತರಕಾರಿ ತಲುಪುವ ಸೇವೆಯಾಗಿ ಬೆಳೆದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದ ಯುವಕ ಮಹಮ್ಮದ್ ಶರೀಫ್ ತಮ್ಮ ತರಕಾರಿ ವ್ಯಾಪಾರವನ್ನು ನಡೆಸುತ್ತಲೇ ಸಮಾಜಸೇವೆಯನ್ನೂ ಜೀವನದ ಭಾಗವನ್ನಾಗಿಸಿಕೊಂಡಿದ್ದಾರೆ. ಆರಂಭದಲ್ಲಿ ಒಂದೇ ಶಾಲೆಗೆ ತರಕಾರಿ ನೀಡುತ್ತಿದ್ದ ಅವರು, ಕ್ರಮೇಣ ಇನ್ನಿತರ ಶಾಲೆಗಳಿಗೂ ಸಹಾಯ ಮಾಡತೊಡಗಿದರು. ಹೀಗೆ ಹತ್ತು ವರ್ಷಗಳ ಪಯಣದಲ್ಲಿ ಇಂದು ಅವರು ಆರು ಸರ್ಕಾರಿ ಶಾಲೆಗಳ ಬಿಸಿಯೂಟಕ್ಕೆ ಉಚಿತವಾಗಿ ತರಕಾರಿ ನೀಡುತ್ತಿದ್ದಾರೆ.

ಪ್ರಸ್ತುತ ಮಜಿ ವೀರಕಂಭ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಪ್ರತಿದಿನ ಸುಮಾರು 18 ರಿಂದ 20 ಕೆ.ಜಿ. ತರಕಾರಿ ನೀಡಲಾಗುತ್ತಿದೆ. ನಂದಾವರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಪ್ರತಿದಿನ ಸುಮಾರು 5 ರಿಂದ 6 ಕೆ.ಜಿ. ತರಕಾರಿ ಪೂರೈಸಲಾಗುತ್ತದೆ. ಇದರ ಜೊತೆಗೆ ವಾರಕ್ಕೊಮ್ಮೆ ಕೆಲಿಂಜ ಶಾಲೆಗೆ 10 ರಿಂದ 12 ಕೆ.ಜಿ., ಬಾಯಿಲಾ ಶಾಲೆಗೆ 8 ರಿಂದ 10 ಕೆ.ಜಿ., ನಗ್ರಿ ಬೊಳ್ಳಾಯಿ ಶಾಲೆಗೆ 10 ರಿಂದ 12 ಕೆ.ಜಿ., ಹಾಗೂ ಕಂಚಿನಡ್ಕ ಪದವು ಸಜೀಪ ಶಾಲೆಗೆ 12 ರಿಂದ 14 ಕೆ.ಜಿ. ತರಕಾರಿ ಪೂರೈಸಲಾಗುತ್ತದೆ.

ತರಕಾರಿಗಳು ಶಾಲೆಗೆ ತಲುಪುವಲ್ಲಿ ಸ್ಥಳೀಯರ ಸಹಕಾರವೂ ಮಹತ್ವದ ಪಾತ್ರವಹಿಸಿದೆ. ಮಜಿ ವೀರಕಂಭ, ಕೆಲಿಂಜ ಮತ್ತು ಬಾಯಿಲಾ ಶಾಲೆಗಳಿಗೆ ಹಳೆಯ ವಿದ್ಯಾರ್ಥಿ ಚಿನ್ನು ಕಲ್ಲಡ್ಕ ದ್ವಿಚಕ್ರ ವಾಹನದಲ್ಲಿ ತರಕಾರಿಗಳನ್ನು ತಲುಪಿಸುತ್ತಾರೆ. ನಂದಾವರ ಶಾಲೆಗೆ ಸ್ವತಃ ಶರೀಫ್ ಅವರೇ ತರಕಾರಿಗಳನ್ನು ಒಯ್ಯುತ್ತಾರೆ. ನಗ್ರಿ ಬೊಳ್ಳಾಯಿ ಶಾಲೆಗೆ ಶಿಕ್ಷಕರು ಆಟೊರಿಕ್ಷಾ ಕಳುಹಿಸಿ ತರಕಾರಿಗಳನ್ನು ತೆಗೆದುಕೊಂಡು ಹೋಗುತ್ತಾರೆ. ಕಂಚಿನಡ್ಕ ಪದವು ಸಜೀಪ ಶಾಲೆಗೆ ಶಿಕ್ಷಕರೇ ಬಂದು ತರಕಾರಿಗಳನ್ನು ಪಡೆದುಕೊಂಡು ಹೋಗುತ್ತಾರೆ.

ಬಿಸಿಯೂಟಕ್ಕಾಗಿ ದೇಣಿಗೆ ನೀಡಿದ ಹರೇಕಳ ಹಾಜಬ್ಬ

ಮಕ್ಕಳ ಬಿಸಿಯೂಟದಲ್ಲಿ ಪೌಷ್ಟಿಕಾಂಶ ಹೆಚ್ಚಾಗಲೆಂದು ಕ್ಯಾರೆಟ್, ಕ್ಯಾಬೇಜ್, ಬೀನ್ಸ್, ಅಲಸಂದೆ, ತೊಂಡೆಕಾಯಿ ಮುಂತಾದ ತರಕಾರಿಗಳನ್ನು ನೀಡಲಾಗುತ್ತದೆ. ಪ್ರತಿದಿನ ಸರಾಸರಿ ಸಾವಿರ ರೂಪಾಯಿ ಮೌಲ್ಯದ ತರಕಾರಿ ಈ ಸೇವೆಯ ಮೂಲಕ ಶಾಲೆಗಳ ಅಡುಗೆಮನೆಗಳಿಗೆ ತಲುಪುತ್ತದೆ. ತರಕಾರಿ ಬೆಲೆ ಏರಿದರೂ ಶರೀಫರ ಸೇವೆಯಲ್ಲಿ ಏರುಪೇರು ಆಗುವುದಿಲ್ಲ ಎನ್ನುವುದು ವಿಶೇಷ.

ಇದೇ ವೇಳೆ ಖಾಸಗಿ ಶಾಲೆಗಳಿಗೂ ಶರೀಫ್ ವಿಶೇಷ ರಿಯಾಯಿತಿ ನೀಡುತ್ತಿದ್ದಾರೆ. ತಮ್ಮ ಅಂಗಡಿಯಿಂದ ತರಕಾರಿ ಖರೀದಿಸುವ ಒಂದು ಖಾಸಗಿ ಶಾಲೆಗೆ ಅವರು ಶೇಕಡಾ 30 ರಷ್ಟು ರಿಯಾಯಿತಿ ನೀಡುತ್ತಿದ್ದಾರೆ.

ಸೇವೆಯಲ್ಲಿ ಇನ್ನಷ್ಟು ಜನರ ಪಾಲ್ಗೊಳ್ಳುವಿಕೆ ಇರಲಿ ಎಂಬ ಉದ್ದೇಶದಿಂದ ಶರೀಫ್ ತಮ್ಮ ಅಂಗಡಿಯಲ್ಲಿ ‘ಸರಕಾರಿ ಶಾಲೆಗೆ ನನ್ನ ಕಾಣಿಕೆ’ ಎಂಬ ಪುಟ್ಟ ದೇಣಿಗೆ ಡಬ್ಬಿಯನ್ನು ಇಟ್ಟಿದ್ದಾರೆ. ಆ ಡಬ್ಬಿಗೆ ಮೊದಲ ಕಾಣಿಕೆ ಹಾಕಿ ಪ್ರೋತ್ಸಾಹಿಸಿದವರು ಅಕ್ಷರ ಸಂತ, ಪದ್ಮಶ್ರೀ ಪುರಸ್ಕೃತರಾದ ಹರೇಕಳ ಹಾಜಬ್ಬ.

9ನೇ ಪುಟಕ್ಕೆ...

ಶೇಗುಣಸಿ ದೇಹದಾನಿಗಳ ಗ್ರಾಮ!

• ಚಂದ್ರಶೇಖರ ಎಸ್ ಚಿನಕೇಕರ

ಎಂಬತ್ತೈದು ವರ್ಷಗಳ ತುಂಬು ಜೀವನ ಸಾಗಿಸಿದ್ದ ಭಾಗವ್ವ ಬಿ. ಪಾಟೀಲ ಇನ್ನಿಲ್ಲ ಎಂಬ ಸುದ್ದಿ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಶೇಗುಣಸಿ ಗ್ರಾಮದಲ್ಲಿ ಹರಡುತ್ತಿದ್ದಂತೆ ಬಂಧು-ಬಳಗ ಮತ್ತು ಗ್ರಾಮಸ್ಥರು ಅಪಾರ ಸಂಖ್ಯೆಯಲ್ಲಿ ಸೇರಿದರು. ಆದರೆ ಸಾಮಾನ್ಯವಾಗಿ ಅಂತ್ಯಕ್ರಿಯೆಯ ಸಂದರ್ಭಗಳಲ್ಲಿ ಕಾಣುವ ಗಡಿಬಿಡಿ ಅಲ್ಲಿ ಕಾಣಿಸಲಿಲ್ಲ. ಸಮಾಧಿಗಾಗಿ ಗುಂಡಿ ತೋಡಬೇಕೆಂಬ ಸಿದ್ಧತೆ ಇರಲಿಲ್ಲ. ಸ್ಮಶಾನಕ್ಕೆ ಶವ ತೆಗೆದುಕೊಂಡು ಹೋಗಬೇಕೆಂಬ ಧಾವಂತ ಇರಲಿಲ್ಲ. ಎಲ್ಲವೂ ಸಾವಧಾನವಾಗಿ, ಶಾಂತವಾಗಿ ನಡೆಯುತ್ತಿತ್ತು.

ಮನೆ ಎದುರು ಆಂಬುಲೆನ್ಸ್ ಬಂದು ನಿಂತಿತು. ಅದನ್ನು ಹೂಗಳಿಂದ ಅಲಂಕರಿಸಲಾಯಿತು. ಭಾಗವ್ವ ದೇಹದಾನ ಮಾಡಿದ ಗ್ರಾಮದ ಮೊದಲಿಗರು ಎಂಬ ಹೆಮ್ಮೆ ಎಲ್ಲರ ಮುಖದಲ್ಲೂ ಹೊಳೆಯುತ್ತಿತ್ತು. ಮಡಿ-ಮೈಲಿಗೆ, ಅದೂ-ಇದೂ ಎಂಬ ಕಂದಾಚಾರಗಳಿಗೆ ಅಲ್ಲಿ ಅವಕಾಶವೇ ಇರಲಿಲ್ಲ. ಬಸವ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡ ಈ ಗ್ರಾಮದಲ್ಲಿ ಆ ಕ್ಷಣದಲ್ಲಿ ಒಂದೇ ಮಾತು ಅನುರಣಿಸುತ್ತಿತ್ತು– ‘ಮರಣವೇ ಮಹಾನವಮಿ.’

ಶವಕ್ಕೆ ವಿಧಿ ವಿಧಾನಗಳನ್ನು ನೆರವೇರಿಸಿದ ಬಳಿಕ ಪಾರ್ಥಿವ ಶರೀರವನ್ನು ಆಂಬುಲೆನ್ಸ್‌ನಲ್ಲಿ ಇರಿಸಲಾಯಿತು. ಸಂಬಂಧಿಕರ ಕಣ್ಣಲ್ಲಿ ಹನಿಗಳು ಜಿನುಗುತ್ತಿದ್ದರೂ ಮನೆಯ ಹಿರಿಯ ಜೀವ ದೇಹದಾನ ಮಾಡಿರುವ ಹೆಮ್ಮೆ ಅವರ ಮುಖದಲ್ಲಿ ಸ್ಪಷ್ಟವಾಗಿತ್ತು.

‘ಜೈ ಬಸವ... ಶ್ರೀ ಬಸವ...’ ಎಂಬ ಘೋಷಣೆಗಳ ನಡುವೆ ಪಾರ್ಥಿವ ಶರೀರದ ಮೆರವಣಿಗೆ ಗ್ರಾಮದ ಬೀದಿಗಳಲ್ಲಿ ಸಾಗಿತು. ‘ಭಾಗವ್ವಳ ಭಾಗ್ಯ ಎಂತಹದು!’ ಎಂದು ಇಡೀ ಊರು ಹೆಮ್ಮೆಪಟ್ಟಿತು. ಊರ ಹೊರಗೂ ಆಂಬುಲೆನ್ಸ್ ಹಿಂದೆ ನಡೆದುಕೊಂಡು ಬಂದ ಜನಸ್ತೋಮ ಕೈಮುಗಿದು ‘ಹೋಗಿ ಬಾ... ತಾಯಿ... ಹೋಗಿ ಬಾ...’ ಎಂದು ವಿದಾಯ ಹೇಳಿದ ದೃಶ್ಯ ಮನಮುಟ್ಟುವಂತಿತ್ತು.

ಈ ಮನಮಿಡಿಯುವ ಚಿತ್ರಣಕ್ಕೆ ಸಾಕ್ಷಿಯಾಗಿದ್ದು ಶೇಗುಣಸಿ ಗ್ರಾಮ. ವಿಶೇಷವೆಂದರೆ ಇದೇ ಗ್ರಾಮ ಇಂದು ಒಂದು ವಿಶಿಷ್ಟ ಸಾಮಾಜಿಕ ಸಂದೇಶಕ್ಕಾಗಿ ಹೆಸರಾಗಿದೆ. ಇಲ್ಲಿ ಈಗಾಗಲೇ 187 ಜನರು ದೇಹದಾನಕ್ಕೆ ವಾಗ್ದಾನ ಮಾಡಿದ್ದಾರೆ. ಈ ಕಾರಣಕ್ಕೇ ಸುತ್ತ-ಮುತ್ತಲಿನ ಹಳ್ಳಿಗರು ಶೇಗುಣಸಿಯನ್ನು ‘ದೇಹದಾನಿಗಳ ಗ್ರಾಮ’ ಎಂದು ಕರೆಯುತ್ತಾರೆ.

ಕೃಷ್ಣಾನದಿಯ ತೀರದಲ್ಲಿರುವ ಈ ಗ್ರಾಮದಲ್ಲಿ ಐದು ಸಾವಿರಕ್ಕೂ ಹೆಚ್ಚು ಜನರು ವಾಸಿಸುತ್ತಾರೆ. ನದಿ ಹತ್ತಿರದಲ್ಲೇ ಹರಿಯುವುದರಿಂದ ಕೃಷಿ ಸಮೃದ್ಧವಾಗಿದೆ. ಜೋಳ, ಕಬ್ಬು, ಕಡಲೆ ಸೇರಿದಂತೆ ವಿವಿಧ ಬೆಳೆಗಳು ಇಲ್ಲಿ ಚೆನ್ನಾಗಿ ಬೆಳೆಯುತ್ತವೆ. ಕೃಷಿಯೊಂದಿಗೆ ಹೈನುಗಾರಿಕೆ ಸೇರಿದಂತೆ ಹಲವು ಉಪಕಸುಬು-ಗಳಲ್ಲಿ ಗ್ರಾಮಸ್ಥರು ತೊಡಗಿಸಿಕೊಂಡಿದ್ದಾರೆ. ಆದರೆ ಶೇಗುಣಸಿಯ ವೈಶಿಷ್ಟ್ಯ ಕೇವಲ ಕೃಷಿ ಸಮೃದ್ಧಿಯಲ್ಲ. ಇಲ್ಲಿನ ಜನರ ಜೀವನ ಶೈಲಿಯಲ್ಲಿ ಒಂದು ವಿಶಿಷ್ಟ ಸಂಸ್ಕೃತಿ ಬೆಳೆದಿದೆ. ಬಿಡುವಿನ ವೇಳೆಯಲ್ಲಿ ಪುರಾಣ, ಪ್ರವಚನ, ಯೋಗ ಮತ್ತು ಧ್ಯಾನಗಳಲ್ಲಿ ತೊಡಗಿಕೊ-ಳ್ಳುವುದು ಇಲ್ಲಿ ಸಾಮಾನ್ಯ. ಬಸವ ತತ್ವಗಳ ಪ್ರಭಾವದಿಂದ ಸರಳತೆ, ಸಮಾನತೆ ಮತ್ತು ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ.

ಗ್ರಾಮದಲ್ಲಿ ರಾಷ್ಟ್ರೀಯ ಬಸವ ದಳದ ನೇತೃತ್ವದಲ್ಲಿ ಆಗಾಗ ಯೋಗ ಶಿಬಿರಗಳು, ಪ್ರವಚನಗಳು ಮತ್ತು ಭಜನೆ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಇದೇ ಕಾರ್ಯಕ್ರಮಗಳಲ್ಲಿ ಒಂದಾದ 2014ರ ಯೋಗ ಶಿಬಿರ ಶೇಗುಣಸಿಯ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭಿಸಿತು.

ಯೋಗ ಶಿಬಿರದಿಂದ ಹುಟ್ಟಿದ ಚಳವಳಿ

ಹದಿನೈದು ದಿನ ನಡೆದ ಆ ಯೋಗ ಶಿಬಿರದಲ್ಲಿ ಅಥಣಿಯ ಪತಂಜಲಿ ಯೋಗ ಕೇಂದ್ರದ ಆಯುರ್ವೇದ ವೈದ್ಯ ಹಾಗೂ ಯೋಗಪಟು ಶಿವಕುಮಾರ ಕಲ್ಯಾಣಮಠ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿ-ಸಿದ್ದರು. ನೂರಾರು ಜನರು ಶಿಬಿರದಲ್ಲಿ ಪಾಲ್ಗೊಂಡು ಯೋಗಾಸನ ಮತ್ತು ಪ್ರಾಣಾಯಾಮಗಳನ್ನು ಅಭ್ಯಾಸಿಸಿದರು. ಆದರೆ ಆ ಶಿಬಿರದಲ್ಲಿ ಕೇವಲ ಯೋಗಾಭ್ಯಾಸ ಮಾತ್ರ ನಡೆಯಲಿಲ್ಲ. ಬದುಕಿನ ಅರ್ಥ, ಮರಣದ ಅರ್ಥ ಮತ್ತು ಸಮಾಜಸೇವೆಯ ಮಹತ್ವದ ಬಗ್ಗೆ ಚರ್ಚೆಗಳು ನಡೆದವು.

ಅದೇ ಸಂದರ್ಭದಲ್ಲಿ ಒಂದು ಮಹತ್ವದ ಸಂದೇಶ ಜನರ ಮುಂದೆ ಇಡಲಾಯಿತು. ‘ಸತ್ತ ಮೇಲೆಯೂ ಸಮಾಜಕ್ಕೆ ಉಪಕಾರ ಮಾಡುವ ಒಂದು ಮಾರ್ಗ ದೇಹದಾನ.’–ಈ ವಿಚಾರ ಶೇಗುಣಸಿಯ ಜನರ ಮನಸ್ಸಿನಲ್ಲಿ ಆಳವಾಗಿ ನೆಲೆಯೂರಿತು.

ಶಿಬಿರದ ಕೊನೆಯ ದಿನ ಬೆಳಗಾವಿಯ ಕೆಎಲ್ಇ ಸಂಸ್ಥೆಯ ಬಿ.ಎಂ. ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯದ ಡಾ.ಮಹಾಂತೇಶ ರಾಮಣ್ಣವರ ಅವರನ್ನು ಆಹ್ವಾನಿಸಲಾಗಿತ್ತು. ತಮ್ಮ ತಂದೆಯ ಮೃತದೇಹವನ್ನು ವೈದ್ಯಕೀಯ ಅಧ್ಯಯನಕ್ಕಾಗಿ ತಾವೇ ಛೇದಿಸಿದ ಅನುಭವವನ್ನು ಅವರು ಶಿಬಿರಾರ್ಥಿಗಳೊಂದಿಗೆ ಹಂಚಿಕೊಂಡರು.

ಮೃತದೇಹ ವೈದ್ಯಕೀಯ ವಿದ್ಯಾರ್ಥಿಗಳಿಗೆ ಎಷ್ಟು ಅಮೂಲ್ಯವಾದ ಪಠ್ಯಪುಸ್ತಕವಾಗುತ್ತದೆ ಎಂಬುದನ್ನು ಅವರು ವಿವರಿಸಿದರು. ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆಗೆ ದೇಹದಾನದ ಮಹತ್ವವನ್ನು ಅವರು ಮನದಟ್ಟು ಮಾಡಿದರು. ಆ ಮಾತುಗಳು ಜನರ ಮನಸ್ಸಿಗೆ ತಟ್ಟಿದವು.

ಬಸವಣ್ಣನ ‘ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ’ ಎಂಬ ವಚನದ ಅರ್ಥವನ್ನು ಗ್ರಾಮಸ್ಥರು ಹೊಸ ದೃಷ್ಟಿಯಿಂದ ಅರ್ಥ ಮಾಡಿಕೊಂಡರು. ದೇಹ ಕ್ಷಣಿಕವಾದದ್ದು; ಆದರೆ ಅದರಿಂದ ಸಮಾಜಕ್ಕೆ ಉಪಕಾರ ಮಾಡಬಹುದು ಎಂಬ ಅರಿವು ಅವರಲ್ಲಿ ಮೂಡಿತು. ‘ಇಂದೋ, ನಾಳೆಯೋ ಮಣ್ಣಾಗುವ ಈ ದೇಹ ಮತ್ತೊಬ್ಬರ ಬಾಳಿಗೆ ಬೆಳಕಾಗಲಿ’ ಎಂಬ ಸದಾಶಯ ಗ್ರಾಮಸ್ಥರ ಮನಸ್ಸಿನಲ್ಲಿ ಬೆಳೆಯತೊಡಗಿತು.

ಹೋಗಿ ಬಾ ತಾಯಿ, ನಿನಗಿದೋ ವಿದಾಯ...

ಮರಣಾನಂತರವೂ ಸಮಾಜಕ್ಕೆ ಬೆಳಕು ನೀಡಬಹುದು ಎಂಬ ಅರಿವಿನಿಂದ ಬೆಳಗಾವಿ ಜಿಲ್ಲೆಯ ಶೇಗುಣಸಿ ಗ್ರಾಮ ಹೊಸ ಸಂಸ್ಕೃತಿಗೆ ದಾರಿ ತೆರೆದಿದೆ. ದೇಹದಾನವನ್ನು ಜೀವನದ ಕೊನೆಯ ಸೇವೆಯಾಗಿ ಸ್ವೀಕರಿಸಿದ ಈ ಗ್ರಾಮ ಇಂದು ‘ದೇಹದಾನಿಗಳ ಗ್ರಾಮ’ವಾಗಿ ಮಾದರಿಯಾಗಿದೆ.

ಮೌನದಲ್ಲೇ ವಿದಾಯದ ದೃಶ್ಯ

ಒಂದೇ ದಿನ 108 ದೇಹದಾನ ವಾಗ್ದಾನ

ಯೋಗ ಶಿಬಿರದ ಕೊನೆಯ ದಿನ ಒಂದು ಐತಿಹಾಸಿಕ ಘಟನೆ ನಡೆಯಿತು. ಮಹಿಳೆಯರು, ಯುವಕರು, ವಯೋವೃದ್ಧರು ಸೇರಿದಂತೆ 108 ಜನರು ಒಂದೇ ದಿನ ದೇಹದಾನಕ್ಕೆ ಒಪ್ಪಿಗೆ ನೀಡಿದರು. ಅವರು ಬೈಲಹೊಂಗಲದ ಡಾ.ರಾಮಣ್ಣವರ ಚಾರಿಟೆಬಲ್ ಟ್ರಸ್ಟ್‌ಗೆ ತಮ್ಮ ಒಪ್ಪಿಗೆ ಪತ್ರಗಳನ್ನು ಸಲ್ಲಿಸಿದರು.

ಇದಕ್ಕೂ ಒಂದು ಸಾಂಕೇತಿಕ ಕಾರಣವಿತ್ತು. ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಬಸವೇಶ್ವರರ 108 ಅಡಿ ಎತ್ತರದ ಪ್ರತಿಮೆ ನಿರ್ಮಾಣವಾಗುತ್ತಿರುವ ಹಿನ್ನೆಲೆಯಲ್ಲಿ 108 ಜನರು ದೇಹದಾನ ಮಾಡುವ ನಿರ್ಧಾರ ಕೈಗೊಂಡಿದ್ದರು.

ಆ ದಿನದಿಂದಲೇ ಶೇಗುಣಸಿ ಗ್ರಾಮ ‘ದೇಹದಾನಿಗಳ ಗ್ರಾಮ’ವಾಗಿ ಗುರುತಿಸಲ್ಪಡತೊಡಗಿತು. ಇಂದು ಆ ಸಂಖ್ಯೆ 187ಕ್ಕೆ ತಲುಪಿದೆ. ವರ್ಷದಿಂದ ವರ್ಷಕ್ಕೆ ದೇಹದಾನಕ್ಕೆ ಮುಂದಾಗುವವರ ಸಂಖ್ಯೆ ಹೆಚ್ಚುತ್ತಲೇ ಇದೆ.

‘ಮೊದಲ ದೇಹದಾನ ಮಾಡಿದ ಭಾಗವ್ವ ಬಿ. ಪಾಟೀಲ ಅವರ ನಡೆ ಇಡೀ ಕುಟುಂಬಕ್ಕೇ ಮಾದರಿಯಾಯಿತು. ನಮ್ಮ ಕುಟುಂಬದ 24 ಸದಸ್ಯರು ದೇಹದಾನಕ್ಕೆ ವಾಗ್ದಾನ ಮಾಡಿದ್ದಾರೆ. ಇತರ ಕುಟುಂಬಗಳೂ ಇದನ್ನು ಅನುಸರಿಸಿವೆ’ ಎಂದು ಭಾಗವ್ವ ಅವರ ಕುಟುಂಬದ ಸದಸ್ಯ ಸತ್ಯಪ್ಪ ಬಿ. ಪಾಟೀಲ ಹೆಮ್ಮೆಯಿಂದ ಹೇಳುತ್ತಾರೆ.

ಕೆಲವು ಕುಟುಂಬಗಳಲ್ಲಿ ಐದು, ಆರು, ಎಂಟು ಜನರು ದೇಹದಾನಕ್ಕೆ ಮುಂದಾಗಿದ್ದಾರೆ. ಇದರಿಂದ ಗ್ರಾಮದಲ್ಲಿ ದೇಹದಾನದ ಬಗ್ಗೆ ಒಂದು ಸಕಾರಾತ್ಮಕ ಸಂಸ್ಕೃತಿ ಬೆಳೆದಿದೆ.

ಈ ಚಳವಳಿಗೆ ಯುವಕರೂ ಕೈಜೋಡಿಸಿದ್ದಾರೆ. ‘ಒಬ್ಬ ವ್ಯಕ್ತಿಯ ದೇಹದಾನ ಅಥವಾ ಅಂಗಾಂಗ ದಾನದಿಂದ ಏಳು ಜನರ ಪ್ರಾಣ ಉಳಿಸಬಹುದು. ಜೊತೆಗೆ ವೈದ್ಯಕೀಯ ವಿದ್ಯಾರ್ಥಿಗಳ ಅಧ್ಯಯನಕ್ಕೂ ನೆರವಾಗುತ್ತದೆ. ಈ ಅರಿವಿನಿಂದಲೇ ನಾವು ದೇಹದಾನಕ್ಕೆ ಮುಂದಾಗಿದ್ದೇವೆ’ ಎಂದು ಯುವಕ ಮಹಾಂತೇಶ ಸಿದ್ನಾಳ ಹೇಳುತ್ತಾರೆ. ಗ್ರಾಮದ ಯುವಕರು ಜಾಗೃತಿ ಕಾರ್ಯಕ್ರಮ-ಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ.

‘ಮೃತದೇಹವೇ ನನ್ನ ಮೊದಲ ಗುರು’

ಅಧ್ಯಯನಕ್ಕಾಗಿ ಬಳಸುವ ಮೃತದೇಹವನ್ನು ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಸಾಮಾನ್ಯ ಶವವಾಗಿ ನೋಡುತ್ತಿಲ್ಲ. ಅದನ್ನು ಅವರು ‘ನನ್ನ ಮೊದಲ ಗುರು’ ಎಂದು ಭಾವಿಸುತ್ತಾರೆ.

ಮೃತದೇಹವನ್ನು ಸ್ವೀಕರಿಸುವಾಗ ವೈದ್ಯಕೀಯ ವಿದ್ಯಾರ್ಥಿಗಳು ಅದರ ಮುಂದೆ ಕೈ ಜೋಡಿಸಿ ನಮಸ್ಕರಿಸುತ್ತಾರೆ. ‘ನನ್ನ ವೃತ್ತಿಪರ ಗುರಿಗಳನ್ನು ಸಾಧಿಸಲು ನೆರವಾಗುತ್ತಿರುವ ಈ ಮೃತದೇಹವನ್ನು ಜೀವಂತ ವ್ಯಕ್ತಿಯಂತೆ ಗೌರವಿಸುತ್ತೇನೆ’ ಎಂದು ಪ್ರತಿಜ್ಞೆ ಸ್ವೀಕರಿಸು-ತ್ತಾರೆ.

ಮರಣಾನಂತರವೂ ಸಮಾಜಸೇವೆ ಮಾಡಿದ ದಾನಿಯ ಕುಟುಂಬಕ್ಕೆ ಕೃತಜ್ಞತೆ ಸಲ್ಲಿಸುವುದಾಗಿ ಅವರು ವಾಗ್ದಾನ ಮಾಡುತ್ತಾರೆ. ಈ ಪ್ರತಿಜ್ಞೆ ವೈದ್ಯಕೀಯ ವಿದ್ಯಾರ್ಥಿಗಳಿಗೆ ಕೇವಲ ಪಾಠವಲ್ಲ; ಅದು ಮಾನವೀಯತೆಯ ಪಾಠವೂ ಆಗಿದೆ.

2010ರ ವೇಳೆಗೆ ಬೆಳಗಾವಿ ಜಿಲ್ಲೆಯಲ್ಲಿ ವರ್ಷಕ್ಕೆ 15–20 ದೇಹದಾನಗಳು ಮಾತ್ರ ನಡೆಯುತ್ತಿತ್ತು. ಆದರೆ ಜಾಗೃತಿ ಕಾರ್ಯಕ್ರಮಗಳ ಪರಿಣಾಮದಿಂದ ಈ ಸಂಖ್ಯೆ ನಿಧಾನವಾಗಿ ಹೆಚ್ಚಿತು.

2014ರಲ್ಲಿ ಶೇಗುಣಸಿಯಲ್ಲಿ ಒಂದೇ ದಿನ 108 ಜನರು ದೇಹದಾನಕ್ಕೆ ವಾಗ್ದಾನ ಮಾಡಿದ ನಂತರ ದೇಹದಾನ ಚಳವಳಿಗೆ ಹೊಸ ಉತ್ತೇಜನ ದೊರೆಯಿತು. ಕಳೆದ ಕೆಲವು ವರ್ಷಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ದೇಹದಾನಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ಕೋವಿಡ್ ನಂತರ 2022ರಲ್ಲಿ 74, 2023ರಲ್ಲಿ 63, 2024ರಲ್ಲಿ 85 ಹಾಗೂ 2025ರಲ್ಲಿ 135 ಜನರು ದೇಹದಾನಕ್ಕೆ ವಾಗ್ದಾನ ಮಾಡಿದ್ದಾರೆ.

11ನೇ ಪುಟಕ್ಕೆ...

ವೈದ್ಯಕೀಯ ವಿದ್ಯಾರ್ಥಿಗಳಿಗೆ ಮೃತ ಶರೀರವೇ ಮೊದಲ ಗುರು...

ಕರಿ ಚಿರತೆ ನೆಪದಲ್ಲಿ ಇಷ್ಟೆಲ್ಲ...

ಭದ್ರಾ ಹಿನ್ನೀರಿನಲ್ಲಿ ಕ್ಯಾಮೆರಾ ಕಣ್ಣಿಗೆ ಸೆರೆಯಾದ ಚಿರತೆಗಳು

ಚಿತ್ರಗಳು: ಸೋಹನ್ ಸಿಂಗ್

• ಕೆ.ಎಚ್. ಓಬಳೇಶ್

ಅದು ಭದ್ರಾ ಹುಲಿ ರಕ್ಷಿತಾರಣ್ಯದ ಹಿನ್ನೀರು ಪ್ರದೇಶ. ಸಂಜೆ ಮಸುಕಾಗುತ್ತಿದ್ದಂತೆ, ನೀರಿನ ಮೇಲೆ ಹಬ್ಬಿಕೊಂಡಿದ್ದ ಮೌನ ಇನ್ನಷ್ಟು ಗಾಢವಾಗುತ್ತಿತ್ತು. ಪ್ರವಾಸಿಗರನ್ನು ಹೊತ್ತಿದ್ದ ಸಫಾರಿ ಬೋಟ್ ಆ ಮೌನವನ್ನು ಸೀಳಿಕೊಂಡು ನಿಧಾನವಾಗಿ ಮುನ್ನುಗ್ಗು-ತ್ತಿತ್ತು. ಹಿನ್ನೀರಿನಲ್ಲಿ ಆಹಾರ ಹುಡುಕುತ್ತಿದ್ದ ಹಕ್ಕಿಗಳು ಬೋಟಿನ ಸದ್ದಿಗೆ ಹೆದರಿ ಆಕಾಶಕ್ಕೇರಿದವು. ಕಾಡಿನ ಅಂಚುಗಳಲ್ಲಿ ಚಲನೆಯ ಸುಳಿವೇ ಕಾಣದಿದ್ದಾಗ, ಬೋಟಿನಲ್ಲಿದ್ದ ಸೋಹನ್ ಸಿಂಗ್ ಅವರ ಮನದಲ್ಲಿ ಬೇಸರ ಮಡುಗಟ್ಟಿತು.

ಸೋಹನ್ ಸಿಂಗ್

ಬೆಂಗಳೂರು ಮೂಲದ ಸೋಹನ್ ಸಿಂಗ್‌ಗೆ ವನ್ಯಜೀವಿ ವೀಕ್ಷಣೆ ಕೇವಲ ಹವ್ಯಾಸವಲ್ಲ–ಅದು ಆಸಕ್ತಿ ಮೀರಿದ ಒಲವು. ದೇಶದ ಅನೇಕ ರಕ್ಷಿತಾರಣ್ಯಗಳಲ್ಲಿ ಅವರು ಸಂಚರಿಸಿ, ಅನೇಕ ಅಪರೂಪದ ಕ್ಷಣಗಳನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದರು. ಆದರೆ ಆ ದಿನ ತಳಮಳ ಹೆಚ್ಚಾಗಿತ್ತು.

ಅಷ್ಟರಲ್ಲಿ, ಹಿನ್ನೀರಿನ ಬದಿಯಲ್ಲಿದ್ದ ದಟ್ಟ ಪೊದೆಯಲ್ಲಿ ಒಂದು ಸಣ್ಣ ಚಲನೆ. ಜೊತೆಯಲ್ಲಿದ್ದ ನ್ಯಾಚುರಲಿಸ್ಟ್ ರಮೇಶ್ ಅವರ ಕಣ್ಣು ತಕ್ಷಣ ಆ ದಿಕ್ಕಿನತ್ತ ತಿರುಗಿತು. ಬೋಟಿನಲ್ಲಿದ್ದ ಎಲ್ಲರೂ ಉಸಿರುಬಿಗಿಹಿಡಿದುಕೊಂ-ಡರು. ಕ್ಷಣಕಾಲದ ಬಳಿಕ, ಪೊದೆಯಿಂದ ಹೆಣ್ಣು ಚಿರತೆಯೊಂದು ನಿಧಾನವಾಗಿ ಹೊರಬಂದು ನೀರಿನತ್ತ ನಡೆದುಬಂತು. ಅದರ ಹಿಂದೆ ಕಾಡಿನ ಕತ್ತಲೆಯಂತೆಯೇ ಕಪ್ಪಾಗಿದ್ದ ಗಂಡು ಕರಿಚಿರತೆಯೂ ಪ್ರತ್ಯಕ್ಷ!

ಆ ಕ್ಷಣ ಕಾಡಿನ ಮೌನ ಕೇವಲ ಸೀಳಲ್ಪಟ್ಟದ್ದಲ್ಲ, ಅದು ಜೀವಂತವಾಯಿತು.

ಎರಡು ಚಿರತೆಗಳು ಒಂದೇ ಜಾಗದಲ್ಲಿ ನಿಂತು ನೀರು ಕುಡಿಯಲಾರಂಭಿಸಿದವು. ಬೋಟಿನಲ್ಲಿದ್ದವರತ್ತ ಒಂದು ಕ್ಷಣ ಕಣ್ಣಾಡಿಸಿ, ದಂತಪಂಕ್ತಿಯನ್ನು ಪ್ರದರ್ಶಿಸಿದವು. ಆ ದೃಶ್ಯ ಕಂಡಾಗ ಸೋಹನ್ ಸಿಂಗ್ ಅವರ ಕೈಯಲ್ಲಿದ್ದ ಕ್ಯಾಮೆರಾ ನಡುಗಿತು, ಆದರೆ ಅದು ಉತ್ಸಾಹದ ನಡುಗು. ಒಂದು ಅಪರೂಪದ ಕ್ಷಣ ಅವರ ಲೆನ್ಸ್‌ನಲ್ಲಿ ಶಾಶ್ವತವಾಗಿ ಬಂಧಿಯಾಯಿತು.

ಕರಿಚಿರತೆ: ನಿಜಕ್ಕೂ ಅಪರೂಪವೇ?

ಕಾಡಿಗೆ ಸಫಾರಿಗೆ ತೆರಳುವ ಬಹುತೇಕ ಎಲ್ಲರ ಕನಸು ಕರಿಚಿರತೆಯನ್ನು ನೋಡುವುದು. ಅದರ ಕಪ್ಪು ಮೈಬಣ್ಣ, ಚಲನೆಯ ನಿಗೂಢತೆ, ಕಾಣಿಸಿಕೊಳ್ಳುವ ಅಪರೂಪ. ಇವುಗಳೆಲ್ಲ ಅದನ್ನು ಒಂದು ‘ಮಿಥ್’ ಆಗಿ ರೂಪಿಸುತ್ತವೆ. ಆದರೆ ವೈಜ್ಞಾನಿಕವಾಗಿ ನೋಡಿದರೆ, ಕರಿಚಿರತೆ ಎಂಬುದು ಪ್ರತ್ಯೇಕ ಪ್ರಭೇದವಲ್ಲ. ಇದು ‘ಮೆಲನಿಸಮ್’ ಎನ್ನುವ ಪ್ರಕೃತಿಯ ಒಂದು ವೈಶಿಷ್ಟ್ಯದ ಫಲ.

ಚಿರತೆಗಳ ಚರ್ಮದಲ್ಲಿರುವ ಮೆಲಾನಿನ್ ಅಂಶದ ಪ್ರಮಾಣ ಹೆಚ್ಚಾದಾಗ, ಅವುಗಳ ಮೈಬಣ್ಣ ಕಪ್ಪಾಗುತ್ತದೆ. ಈ ಬಣ್ಣದ ವ್ಯತ್ಯಾಸವಷ್ಟೇ ಹೊರತು, ಅವುಗಳ ವರ್ತನೆ, ಆಹಾರ ಪದ್ಧತಿ, ವಾಸಸ್ಥಳ ಎಲ್ಲವೂ ಸಾಮಾನ್ಯ ಚಿರತೆಗಳಂತೆಯೇ ಇರುತ್ತವೆ. ಹತ್ತಿರದಿಂದ ಗಮನಿಸಿದರೆ, ಕಪ್ಪು ಮೈಮೇಲೂ ರೋಸೆಟ್ ಗುರುತುಗಳು ಕಾಣಿಸಿಕೊಳ್ಳುತ್ತವೆ.

ಮೆಲನಿಸಮ್ ಅನುವಂಶಿಕ ಗುಣ. ಆದರೆ ಪ್ರತಿಯೊಂದು ಪೀಳಿಗೆಯಲ್ಲೂ ಅದು ವ್ಯಕ್ತವಾಗುತ್ತದೆ ಎನ್ನಲು ಸಾಧ್ಯವಿಲ್ಲ. ಸಾಮಾನ್ಯ ಬಣ್ಣದ ಚಿರತೆಗಳಲ್ಲಿಯೂ ಈ ಜೀನ್ ಅಡಗಿರಬಹುದು. ಗಂಡು ಮತ್ತು ಹೆಣ್ಣು ಚಿರತೆ ಎರಡೂ ಈ ಜೀನ್ ಹೊಂದಿದ್ದರೆ, ಅವುಗಳ ಮರಿಗಳು ಕಪ್ಪಾಗುವ ಸಾಧ್ಯತೆ ಹೆಚ್ಚಾಗುತ್ತದೆ.

ಈ ವೈಶಿಷ್ಟ್ಯ ಚಿರತೆಗಳಿಗೆ ಮಾತ್ರ ಸೀಮಿತವಲ್ಲ. ಜಾಗ್ವರ್, ಕೆಲವು ಹಾವುಗಳು, ಇತರ ಸಣ್ಣ ಪ್ರಾಣಿಗಳಲ್ಲೂ ಮೆಲನಿಸಮ್ ಕಂಡುಬರುತ್ತದೆ.

ಕರ್ನಾಟಕದ ಅರಣ್ಯ ಪ್ರದೇಶಗಳು ಕರಿಚಿರತೆಗಳ ಅಸ್ತಿತ್ವಕ್ಕೆ ಸಾಕ್ಷಿಯಾಗಿವೆ. ಅಣಶಿ–ದಾಂಡೇಲಿ, ಭದ್ರಾ, ಬಂಡೀಪುರ, ಬಿಳಿಗಿರಿರಂಗನಬೆಟ್ಟ, ಮಲೆ ಮಹದೇಶ್ವರ ವನ್ಯಜೀವಿಧಾಮ–ಈ ಪ್ರದೇಶಗಳಲ್ಲಿ ಅವುಗಳ ಓಡಾಟ ದಾಖಲಾಗಿದೆ. ವಿಶೇಷವಾಗಿ ಕಾಳಿ ಹುಲಿ ರಕ್ಷಿತಾರಣ್ಯದಲ್ಲಿ ಕರಿಚಿರತೆಗಳ ಸಂಖ್ಯೆ ಹೆಚ್ಚು ಎಂಬುದು ಕ್ಯಾಮೆರಾ ಟ್ರ್ಯಾಪಿಂಗ್ ಅಧ್ಯಯನಗಳಿಂದ ತಿಳಿದುಬಂದಿದೆ.

ಕಾಡಿನಿಂದ ಹಳ್ಳಿಗಳತ್ತ

ಚಿರತೆಗಳು ಅತ್ಯಂತ ಹೊಂದಾಣಿಕೆ ಶಕ್ತಿಯ ಪ್ರಾಣಿಗಳು. ದಟ್ಟ ಕಾಡುಗಳಲ್ಲಷ್ಟೇ ಅಲ್ಲ, ಮಾನವ ವಸತಿ ಪ್ರದೇಶಗಳ ಅಂಚಿನಲ್ಲಿಯೂ ಅವು ಬದುಕಲು ಕಲಿತಿವೆ. ತೋಟಗಳ ಪೊದೆಗಳಲ್ಲಿ ಅವಿತುಕೊಳ್ಳುವುದು, ರಾತ್ರಿ ಹೊತ್ತು ಬೇಟೆಗೆ ಹೊರಡುವುದು ಅವುಗಳ ಬದುಕಿನ ಭಾಗವಾಗಿದೆ.

ಆದರೆ, ಕಳೆದ ಕೆಲವು ವರ್ಷಗಳಲ್ಲಿ ಪರಿಸ್ಥಿತಿ ಬದಲಾಗಿದೆ. ನಗರೀಕರಣ, ಗಣಿಗಾರಿಕೆ, ಅರಣ್ಯ ನಾಶಗಳ ಪರಿಣಾಮವಾಗಿ ಚಿರತೆಗಳ ನೈಸರ್ಗಿಕ ಆವಾಸ ಹದಗೆಟ್ಟಿದೆ. ಬಂಡೆ ಪ್ರದೇಶಗಳು, ಗುಡ್ಡಗಳು ಅವುಗಳ ಆಶ್ರಯಸ್ಥಳಗಳು ನಿಧಾನವಾಗಿ ಅಳಿದು-ಹೋಗುತ್ತಿವೆ. ಅದರ ಪರಿಣಾಮವಾಗಿ, ಅವು ಕಬ್ಬಿನ ಗದ್ದೆಗಳು, ಜೋಳದ ಹೊಲಗಳು, ನೀಲಗಿರಿ ತೋಪುಗಳತ್ತ ವಲಸೆ ಹೋಗುತ್ತಿವೆ.

ಇದರ ಜೊತೆ, ಕಳ್ಳಬೇಟೆಯ ಪರಿಣಾಮವಾಗಿ ಕಾಡಿನಲ್ಲಿನ ಬಲಿಪ್ರಾಣಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಜಿಂಕೆ, ಕಡವೆ, ಮೊಲಗಳ ಕೊರತೆಯಿಂದ, ಚಿರತೆಗಳು ಆಹಾರಕ್ಕಾಗಿ ಗ್ರಾಮಗಳತ್ತ ಮುಖಮಾಡುತ್ತಿವೆ. ಜಾನುವಾರುಗಳು ಅವುಗಳಿಗೆ ಸುಲಭ ಬೇಟೆಯಾಗುತ್ತಿವೆ.

2022ರಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ನಡೆದ ಸಮೀಕ್ಷೆಯ ಪ್ರಕಾರ, ಕರ್ನಾಟಕದಲ್ಲಿ ಸುಮಾರು 1,879 ಚಿರತೆಗಳಿವೆ ಎಂದು ಅಂದಾಜಿಸಲಾಗಿದೆ. ಆದರೆ ಈ ಅಂಕಿ ಇನ್ನಷ್ಟು ಗಂಭೀರ ಸತ್ಯವೊಂದನ್ನು ಸೂಚಿಸುತ್ತದೆ. ಮಾನವ ಮತ್ತು ಚಿರತೆಗಳ ನಡುವಿನ ಸಂಘರ್ಷ.

ರಾಜ್ಯದ 700ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಈ ಸಂಘರ್ಷ ದಾಖಲಾಗಿದೆ. ರಾಮನಗರ, ತುಮಕೂರು, ಮಂಡ್ಯ, ಮೈಸೂರು, ಹಾಸನ ಜಿಲ್ಲೆಗಳು ಪ್ರಮುಖ ಕೇಂದ್ರಗಳಾಗಿವೆ.

10ನೇ ಪುಟಕ್ಕೆ...



ಭದ್ರಾ ಹಿನ್ನೀರು ಪ್ರದೇಶದಲ್ಲಿ ಕರಿ ಚಿರತೆ ಓಡಾಟ...

ಮಣ್ಣಿನ ನೆನಪುಗಳಿಗೆ ಜೀವ ತುಂಬಿದ ಮಲ್ಲಯ್ಯ

ಕೃಷಿ ಚಟುವಟಿಕೆಗಳಲ್ಲಿ ಬಳಸುವ ನೈಜ ಉಪಕರಣಗಳು

ಆಧುನಿಕ ತಂತ್ರಜ್ಞಾನದ ಗಾಳಿ ಕೃಷಿಗೂ ಬೀಸಿ ಬಹಳ ಕಾಲವಾಯ್ತು. ಹೀಗಾಗಿ ಇವತ್ತು ಹಳೆ ಕಾಲದ ಕೃಷಿ ಉಪಕರಣಗಳು ಬಳಕೆಗಲ್ಲ, ನೋಡಲು ಸಿಗುವುದೂ ಬಹಳ ಅಪರೂಪ. ಇಂಥ ಹೊತ್ತಿನಲ್ಲಿ ಕುಂಟೆ, ಕೂರಿಗೆ, ನೊಗ, ಕುಡುಗೋಲು, ಜಲ್ಲೆ, ರೊಟ್ಟ ಮಣೆಯಂಥ ಸಾವಿರಾರು ಹಳೆಯ ಪರಿಕರ, ಉಪಕರಣಗಳನ್ನು ಸಂಗ್ರಹಿಸಿ, ಕೃಷಿಮೇಳಗಳಲ್ಲಿ ಪ್ರದರ್ಶಿಸುತ್ತ ಗಮನ ಸೆಳೆಯುತ್ತಿದ್ದಾರೆ ಗದಗ ಜಿಲ್ಲೆಯ ರೈತ ಮಲ್ಲಯ್ಯ ಗುರುಬಸಪ್ಪಜ್ಜನಮಠ.

• ಶೇಖರಯ್ಯ ಟಿ.ಎಚ್.ಎಂ.ಗೆದ್ದಲಗಟ್ಟೆ


ಮಲ್ಲಯ್ಯ ಗುರುಬಸಪ್ಪಜ್ಜನಮಠ

ಒಮ್ಮೆ ಕಣ್ಣುಮುಚ್ಚಿ ಊಹಿಸಿ ನೋಡಿ... ಮಣ್ಣಿನ ವಾಸನೆ. ಎತ್ತುಗಳ ಗಂಟೆಯ ಶಬ್ದ. ಕೊಳವೆ ನೀರಿನ ಚಿಮುಕಾಟ. ಮನೆಮಠಗಳಲ್ಲಿ ಅಕ್ಕಿ ಒಕ್ಕಣೆಯ ಸದ್ದು.

ಆ ಹಳ್ಳಿಯ ಬದುಕು ಈಗ ನಮ್ಮ ನೆನಪುಗಳಲ್ಲೇ ಉಳಿದಂತಿದೆ. ಆದರೆ ಆ ನೆನಪುಗಳನ್ನು ಕೈಯಲ್ಲಿ ಹಿಡಿದು ತೋರಿಸುವ ಒಬ್ಬ ರೈತನಿದ್ದಾರೆ.

ಇತ್ತೀಚೆಗೆ ನಡೆದ ಹಂಪಿ ಉತ್ಸವ ಅಂಗವಾಗಿ ಏರ್ಪಡಿಸಿದ್ದ ವಸ್ತುಪ್ರದರ್ಶನ ಮಳಿಗೆಯಲ್ಲಿ ಕಾಲಿಟ್ಟ ಕ್ಷಣವೇ ನನಗೆ ಗತಕಾಲದ ಹಳ್ಳಿಯೊಳಗೆ ನಡೆದುಹೋಗುತ್ತಿರುವ ಅನುಭವವಾಯಿತು. ಅಲ್ಲಿ ಸಾಲಾಗಿ ಕುಂಟೆ, ಕೂರಿಗೆ, ನೊಗ, ಕುಡುಗೋಲು, ಜಲ್ಲೆ, ರೊಟ್ಟ ಮಣೆ, ಹಗ್ಗಗಳು,
ಕೊರಳಪಟ್ಟಿಗಳು, ಗಂಟೆಗಳು, ಚೊಂಬುಗಳು, ಲೋಟಗಳು, ದೀಪಗಳು... ಹೀಗೆ ನೂರಾರು ಕೃಷಿ ಹಾಗೂ ಹಳ್ಳಿಗರ ಜೀವನದ ಉಪಕರಣಗಳು ಇದ್ದವು.

ಪ್ರತಿಯೊಂದು ವಸ್ತುವೂ ಒಂದು ಕಥೆ ಹೇಳುತ್ತಿತ್ತು.

'ನನ್ನನ್ನು ಹಿಡಿದು ಬಿತ್ತನೆ ಮಾಡುತ್ತಿದ್ದ ರೈತ ಈಗ ಎಲ್ಲಿ?'

'ನನ್ನನ್ನು ಬಳಸಿ ಎತ್ತುಗಳ ಜೊತೆ ಹೊಲ ಹಸುರಾಗಿಸುತ್ತಿದ್ದ ಕೈಗಳು ಈಗ ಯಂತ್ರದ ಹ್ಯಾಂಡಲ್ ಹಿಡಿದಿವೆಯೇ?'

ಆ ಪ್ರಶ್ನೆಗಳ ನಡುವೆ ನಿಂತಿದ್ದವರು ಗದಗ ಜಿಲ್ಲೆಯ ರೋಣ ಗ್ರಾಮದ ರೈತ ಮಲ್ಲಯ್ಯ ಗುರುಬಸಪ್ಪಜ್ಜನಮಠ.

'ನನಗೆ ಚಿಕ್ಕಂದಿನಿಂದಲೇ ಹಳೆಯ ಕೃಷಿ ಪರಿಕರಗಳ ಮೇಲೆ ಆಸಕ್ತಿ' ಎಂದು ಮಲ್ಲಯ್ಯ ಹೇಳುತ್ತಾರೆ.

ಎಲ್ಲಿಯಾದರೂ ಹಳೆಯ ಉಪಕರಣಗಳಿವೆ ಎನ್ನುವ ಮಾತು ಕಿವಿಗೆ ಬಿದ್ದರೆ ಸಾಕು, ಅಲ್ಲಿ ತೆರಳಿ ಅವುಗಳನ್ನು ಸಂಗ್ರಹಿಸಿ ಜತನದಿಂದ ಕಾಪಾಡಿಕೊಳ್ಳುವುದು ಅವರ ಹವ್ಯಾಸ ಮಾತ್ರವಲ್ಲ, ಅದು ಅವರಿಗೆ ಪ್ರಿಯವಾದ ಕೆಲಸವೂ ಹೌದು. ಕಳೆದ 25 ವರ್ಷಗಳಲ್ಲಿ ಸಾವಿರಾರು ಕೃಷಿ ಪರಿಕರಗಳು, ದೈನಂದಿನ ಬಳಕೆಯ ವಸ್ತುಗಳು ಅವರ ಸಂಗ್ರಹ ಸೇರಿವೆ.

ಇದು ಸಂಗ್ರಹವಲ್ಲ. ಇದು ಮರೆಯಾಗುತ್ತಿರುವ ಸಂಸ್ಕೃತಿಯನ್ನು ಹಿಡಿದಿಟ್ಟ ಪ್ರಯತ್ನ. ಇದು ಪೂರ್ವಜರ ಜ್ಞಾನಕ್ಕೆ ಸಲ್ಲಿಸಿದ ಗೌರವ.

ಮಳಿಗೆಯೊಳಗಿನ ಹಳ್ಳಿ

ಮಳಿಗೆಯೊಳಗೆ ಸುಮಾರು 20 ಅಡಿ ಎತ್ತರದ ಮುಂಗಾರು ಕೆಂಜೋಳದ ಮಾದರಿ ವೀಕ್ಷಕರನ್ನು ನಿಬ್ಬೆರಗಾಗಿಸಿತು. ಮಕ್ಕಳು ಆಶ್ಚರ್ಯದಿಂದ ನೋಡುತ್ತಿದ್ದರು. ಹಿರಿಯರು ನೆನಪಿನಲ್ಲಿ ಮುಳುಗುತ್ತಿದ್ದರು. 'ಈ ಉಪಕರಣದಿಂದ ನಾವು ಒಕ್ಕಣೆ ಮಾಡುತ್ತಿದ್ದೆವು...' ಎಂದು ಒಬ್ಬ ವೃದ್ಧರು ತಮ್ಮ ಮೊಮ್ಮಗನಿಗೆ ಹೇಳುತ್ತಿದ್ದ ದೃಶ್ಯ ಮನಮುಟ್ಟಿತು.

ಮಲ್ಲಯ್ಯ ಅವರು ಪ್ರತಿಯೊಬ್ಬ ವೀಕ್ಷಕರಿಗೂ ತಾಳ್ಮೆಯಿಂದ ವಿವರಿಸುತ್ತಿದ್ದರು. ಯಾವ ಉಪಕರಣ ಯಾವ ಕೆಲಸಕ್ಕೆ? ಹೇಗೆ ಬಳಸುತ್ತಿದ್ದರು? ಎಷ್ಟು ಶ್ರಮ, ಎಷ್ಟು ನೈಸರ್ಗಿಕ ಜ್ಞಾನ ಅದರ ಹಿಂದೆ ಅಡಗಿದೆ? ಅವರ ಕಣ್ಣುಗಳಲ್ಲಿ ಹೆಮ್ಮೆ ಕಾಣಿಸುತ್ತಿತ್ತು. ಆದರೆ ಅದು ವೈಯಕ್ತಿಕ ಹೆಮ್ಮೆ ಅಲ್ಲ. ಅದು ರೈತ ಸಮುದಾಯದ ಗೌರವದ ಹೆಮ್ಮೆ.

ಇಂದು ಕೃಷಿಯಲ್ಲಿ ಯಂತ್ರೋಪಕರಣಗಳ ಭರಾಟೆ. ವೇಗ, ಲಾಭ, ಉತ್ಪಾದನೆ ಇವುಗಳೇ ಚರ್ಚೆಯ ವಿಷಯಗಳು. ಆದರೆ ಪರಿಸರ ಸ್ನೇಹಿ, ಮಾನವ ಸ್ನೇಹಿ ಪಾರಂಪರಿಕ ಉಪಕರಣಗಳು ಸದ್ದಿಲ್ಲದೆ ಮಾಯವಾಗುತ್ತಿವೆ. ಇಂತಹ ಸಮಯದಲ್ಲಿ ಮಲ್ಲಯ್ಯ ಅವರ ಪ್ರಯತ್ನ ಒಂದು ಎಚ್ಚರಿಕೆ: 'ನಮ್ಮ ಬೇರುಗಳನ್ನು ಮರೆತರೆ, ನಮ್ಮ ಭವಿಷ್ಯವೂ ಮಂಕಾಗುತ್ತದೆ'.

ಮುಂಗಾರು ಕೆಂಜೋಳ

ಕೃಷಿ ಉಪಕರಣಗಳ ಮಾದರಿಗಳು

ರಾಜ್ಯದ ವಿವಿಧ ಕೃಷಿ ಮೇಳಗಳಲ್ಲಿ ಇವರ ಪ್ರದರ್ಶನಕ್ಕೆ ಕೃಷಿ ಇಲಾಖೆ ಅವಕಾಶ ಕಲ್ಪಿಸುತ್ತದೆ. ಪ್ರತಿಯೊಂದು ಮೇಳವೂ ಇವರಿಗೆ ಒಂದು ಹಬ್ಬ. ಸ್ನೇಹಿತರು, ಗ್ರಾಮಸ್ಥರು ಕೈಜೋಡಿಸುತ್ತಾರೆ. ಇತ್ತೀಚಿನ ಹಂಪಿ ಉತ್ಸವದಲ್ಲಿಯೂ 15ಕ್ಕೂ ಹೆಚ್ಚು ಮಂದಿ ಅವರೊಂದಿಗೆ ಬಂದಿದ್ದರು.

ಸಂಗ್ರಹವಲ್ಲ, ಸಂಸ್ಕೃತಿ

ಮಲ್ಲಯ್ಯ ಅವರ ಸಂಗ್ರಹ ಕೇವಲ ವಸ್ತುಗಳ ಗುಡ್ಡವಲ್ಲ. ಅದು ಒಂದು ಜೀವಂತ ಮ್ಯೂಸಿಯಂ. ಒಂದು ಪಾಠಶಾಲೆ. ಒಂದು ಮಣ್ಣಿನ ಸ್ಮಾರಕ. ಪ್ರತಿ ಕುಂಟೆ, ಪ್ರತಿ ನೊಗ, ಪ್ರತಿ ಹಗ್ಗವೂ ಹೇಳುತ್ತವೆ: 'ನಾವು ಇಲ್ಲಿದ್ದೇವೆ... ನಮ್ಮ ಕಥೆ ಕೇಳಿ' ಎಂದು. ನಾವು ಕೇಳುತ್ತೇವೆಯೇ? ಅಥವಾ ಯಂತ್ರಗಳ ಗದ್ದಲದಲ್ಲಿ ಆ ಮಣ್ಣಿನ ಮಾತು ಮರೆಯಾಗಿಬಿಡುತ್ತದೆಯೇ?

ಮಲ್ಲಯ್ಯ ಅವರಂತೆ ಯಾರಾದರೂ ನೆನಪುಗಳನ್ನು ಜೋಪಾನ ಮಾಡದಿದ್ದರೆ, ನಮ್ಮ ಹಳ್ಳಿಯ ಇತಿಹಾಸ ಚಿತ್ರಗಳಲ್ಲಿ ಮಾತ್ರ ಉಳಿಯುತ್ತಿತ್ತೇನೋ. ಆದರೆ ಇಂದು, ಒಬ್ಬ ರೈತನ ಶ್ರಮದಿಂದ, ಆ ಇತಿಹಾಸ ಜೀವಂತವಾಗಿದೆ. ಮಣ್ಣಿನ ವಾಸನೆ ಇನ್ನೂ ಉಳಿದಿದೆ. ಆದರೆ ಅದನ್ನು ಅನುಭವಿಸುವ ಮನಸ್ಸು ನಮಗಿದೆಯೇ? ❖

ಶರೀಫರ ಉಚಿತ ತರಕಾರಿ ಸೇವೆಯೂ...

ಬಿಸಿಯೂಟಕ್ಕೆ ಸಿದ್ಧವಾದ ಮಕ್ಕಳು

8ನೇಪುಟದಿಂದ...

'ಉನ್ನತ ಕೆಲಸಗಳು ಸಣ್ಣ ಸಣ್ಣ ದೇಣಿಗೆಗಳಿಂದಲೇ ಆರಂಭವಾಗುತ್ತವೆ. ಹಲವಾರು ಕೈಗಳು ಸೇರಿದಾಗ ಅಭಿವೃದ್ಧಿ ಕೆಲಸಗಳು ಸುಲಭವಾಗುತ್ತವೆ. ವಿಶೇಷವಾಗಿ ಶಿಕ್ಷಣದ ಕ್ಷೇತ್ರದಲ್ಲಿ ಶರೀಫರು ಮಾಡುತ್ತಿರುವ ಕೆಲಸ ಮಾದರಿಯಾಗಿದೆ' ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಶರೀಫರ ಈ ಸೇವೆಯ ಹಿಂದೆ ಅವರ ಕುಟುಂಬದ ಬೆಂಬಲವೂ ಇದೆ. ತಂದೆ ಅಬ್ದುಲ್ ಹಮೀದ್ ಮತ್ತು ಸಹೋದರರಾದ ಮಹಮ್ಮದ್ ನಜೀರ್, ಮಿಯಾಜ್ ಈ ಕಾರ್ಯಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ಕೆಲ ವರ್ಷಗಳ ಹಿಂದೆ ರಸ್ತೆ ಅಗಲೀಕರಣದ ಕಾರಣದಿಂದ ತರಕಾರಿ ಅಂಗಡಿ ತೆರವುಗೊಳ್ಳಬೇಕಾದ ಪರಿಸ್ಥಿತಿ ಎದುರಾದಾಗ ಇವರು ಸಂಕಷ್ಟಕ್ಕೆ ಸಿಲುಕಿದ್ದರು. ಆ ಸಂದರ್ಭದಲ್ಲಿ ವೈದ್ಯ ಗಂಗಾಧರ ರಾವ್ ಅವರು ತಮ್ಮ ಅಂಗಡಿಯನ್ನು ಕಡಿಮೆ ಬಾಡಿಗೆಗೆ ನೀಡುವ ಮೂಲಕ ಶರೀಫರಿಗೆ ನೆರವಾದರು. ಅವರು ಈಗ ಇಲ್ಲದಿದ್ದರೂ, ಅವರ ಸಹಕಾರವನ್ನು ಶರೀಫ್ ಸದಾ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ನಿತ್ಯದ ಬಿಸಿಯೂಟಕ್ಕೆ ಮಾತ್ರವಲ್ಲದೆ ಶಾಲೆಗಳ ವಿವಿಧ ಕಾರ್ಯಕ್ರಮಗಳ ಸಂದರ್ಭದಲ್ಲೂ ಶರೀಫ್ ಉಚಿತವಾಗಿ ತರಕಾರಿಗಳನ್ನು ನೀಡುತ್ತಾರೆ. ಅವರ ಈ ಸೇವೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಮತ್ತು ಹಲವು ಸಂಘ–ಸಂಸ್ಥೆಗಳು ಮೆಚ್ಚಿಕೊಂಡಿವೆ.

'ಮಕ್ಕಳ ಬಿಸಿಯೂಟದಲ್ಲಿ ನನ್ನದೊಂದು ಸಣ್ಣ ಸೇವೆ ಅಷ್ಟೇ. ಅನುಕೂಲಸ್ಥರು ತಮ್ಮ ಸುತ್ತಮುತ್ತಲಿನ ಸರ್ಕಾರಿ ಶಾಲೆಗಳ ಕಡೆ ಗಮನಹರಿಸಿ ಕೈಲಾದಷ್ಟು ಸಹಾಯ ಮಾಡಿದರೆ ಶಾಲೆಗಳು ಇನ್ನಷ್ಟು ಸುಧಾರಣೆಯಾಗುತ್ತವೆ' ಎಂದು ಶರೀಫ್ ಹೇಳುತ್ತಾರೆ.

ಒಬ್ಬ ಶಿಕ್ಷಕಿಯ ಕಳವಳದಿಂದ ಆರಂಭವಾದ ಈ ಕಥೆ ಇಂದು ಅನೇಕ ಮಕ್ಕಳ ತಟ್ಟೆಯಲ್ಲಿ ಹೆಚ್ಚಿದ ಒಂದು ತರಕಾರಿ ತುಂಡಿನ ರೂಪದಲ್ಲಿ ಜೀವಂತವಾಗಿದೆ. ಸಮಾಜದಲ್ಲಿ ದೊಡ್ಡ ಬದಲಾವಣೆ ತರಲು ದೊಡ್ಡ ಸಂಪತ್ತು ಬೇಕಾಗುವುದಿಲ್ಲ ಎಂಬುದನ್ನು ಬಂಟ್ವಾಳದ ಈ ಯುವಕ ಸದ್ದಿಲ್ಲದೆ ತೋರಿಸುತ್ತಿದ್ದಾರೆ. ❖

ಚೇತನರ ನೋಟು, ನಾಣ್ಯಗಳ ಜಗತ್ತು

ಚೇತನ್ ಎಂ. ಗಾಂವ್ಕಾರ್

• ದತ್ತಾತ್ರೇಯ ಭಟ್ಟ, ಕಣ್ಣಿಪಾಲ

ಆವತ್ತು ಎರಡನೇ ತರಗತಿಯಲ್ಲಿ ಓದುತ್ತಿದ್ದ ಚೇತನ್‌ಗೆ, ದುಬೈನಲ್ಲಿ ಕೆಲಸ ಮಾಡುತ್ತಿದ್ದ ಪಕ್ಕದ ಮನೆಯ ಸಾಹೇಬರು ಒಂದು ಚಿಕ್ಕ ಉಡುಗೊರೆ ನೀಡಿದರು. ಅದು ದುಬೈನಲ್ಲಿ ಚಲಾವಣೆಯಲ್ಲಿರುವ ಒಂದು ನೋಟು.

ಆ ಕಾಗದದ ತುಂಡು ಕೇವಲ ನೋಟಲ್ಲ; ಅದು ಒಂದು ಬಾಗಿಲು. ಜಗತ್ತಿನತ್ತ ತೆರೆದ ಬಾಗಿಲು. ಅಲ್ಲಿ ಆರಂಭವಾದ ಕುತೂಹಲ, ಇಪ್ಪತ್ತು ವರ್ಷಗಳ ನಂತರವೂ ಮಂಕಾಗಿಲ್ಲ. ಅದು ತಪಸ್ಸಿನಂತೆ ಬೆಳೆದಿದೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಚೇತನ್ ಎಂ. ಗಾಂವ್ಕಾರ್ ಅವರ ಮನೆಗೆ ಕಾಲಿಟ್ಟಾಕ್ಷಣ, ನಮ್ಮ ಗಮನ ಸೆಳೆಯುವುದು ಗೋಡೆಯ ಅಲಂಕಾರವಲ್ಲ, ಟಿವಿಯಲ್ಲ, ಜಗುಲಿಯ ಮಧ್ಯೆ ಇಟ್ಟಿರುವ ಒಂದು ಮರದ ಟಿಪಾಯಿ.

ಆ ಟಿಪಾಯಿ ಕೇವಲ ಮೇಜಲ್ಲ. ಅದು ಒಂದು ಜಗತ್ತಿನ ನಕ್ಷೆ. ಗಾಜಿನ ಚೌಕಟ್ಟಿನ ಒಳಗೆ, ವ್ಯವಸ್ಥಿತವಾಗಿ ಜೋಡಿಸಲಾದ ವಿವಿಧ ದೇಶಗಳ ನೋಟುಗಳು ಮತ್ತು ನಾಣ್ಯಗಳು. ಸಣ್ಣ ವಿದ್ಯುತ್ ದೀಪಗಳ ಬೆಳಕಿನಲ್ಲಿ ಅವು ಮಿಂಚುತ್ತವೆ. ಆಸ್ಟ್ರೇಲಿಯಾ, ಅಮೆರಿಕ, ಟರ್ಕಿ, ಯುಎಇ (ದುಬೈ), ಮಾಲ್ದೀವ್ಸ್, ಜಮೈಕಾ, ಮಲೇಷ್ಯಾ, ಹಾಂಗ್‌ಕಾಂಗ್, ಕೊರಿಯಾ... ದೇಶಗಳ ಪಟ್ಟಿ ಇನ್ನೂ ಬೆಳೆಯುತ್ತದೆ.

ಸುಮಾರು ಇಪ್ಪತ್ತು ದೇಶಗಳ ಅಪರೂಪದ ನೋಟುಗಳು, ಮೂವತ್ತಕ್ಕೂ ಹೆಚ್ಚು ದೇಶಗಳ ನಾಣ್ಯಗಳು– ಇವೆಲ್ಲವೂ ಒಂದು ಯಲ್ಲಾಪುರ ಮನೆಯ ಜಗುಲಿಯಲ್ಲಿ ಅಲಂಕರಿಸಿವೆ.

ನೋಟಿನ ಮೇಲೆ ಇತಿಹಾಸ

ಚೇತನ್‌ಗೆ ನೋಟು ಎಂದರೆ ಕೇವಲ ಹಣವಲ್ಲ. ಅದು ಒಂದು ಕಥೆ.

ಈ ನೋಟಿನ ಮೇಲೆ ಮುದ್ರಿಸಿದ ವ್ಯಕ್ತಿ ಯಾರು?

ಈ ಚಿತ್ರ ಯಾವ ಘಟನೆಯನ್ನು ಸೂಚಿಸುತ್ತದೆ?

ಈ ಲಿಪಿ ಯಾವ ಭಾಷೆಯದು?

ಈ ಪ್ರಶ್ನೆಗಳ ಉತ್ತರ ಹುಡುಕುವುದೇ ಅವರಿಗೆ ಸಂಭ್ರಮ, ಸಮಾಧಾನ.

ಒಂದು ದೇಶದ ನೋಟಿನ ಮೇಲೆ ರಾಜನ ಚಿತ್ರ ಇದ್ದರೆ, ಅದು ಆ ದೇಶದ ಆಡಳಿತದ ಒಂದು ಅಧ್ಯಾಯ. ಯುದ್ಧ ಸ್ಮಾರಕದ ಚಿತ್ರ ಇದ್ದರೆ, ಅದು ಒಂದು ರಾಷ್ಟ್ರದ ನೋವು-ಗೌರವಗಳ ಸಂಕೇತ. ನೋಟು-ನಾಣ್ಯಗಳ ಮೂಲಕ ದೇಶದ ಇತಿಹಾಸವನ್ನು ಓದುವುದು– ಇದು ಅವರ ಮೆಚ್ಚಿನ ಹವ್ಯಾಸ.

ಇಂಡೋನೇಷ್ಯಾದ ಒಂದು ಲಕ್ಷ ಮುಖಬೆಲೆಯ ನೋಟು ಅವರ ಸಂಗ್ರಹದಲ್ಲಿದೆ. ಮೊದಲ ಬಾರಿಗೆ ನೋಡಿದವರು ಬೆಚ್ಚಿಬೀಳುತ್ತಾರೆ, 'ಒಂದು ಲಕ್ಷಾ?' ಎಂದು.

ಭಾರತದಲ್ಲಿ ಈಗ ಚಲಾವಣೆಯಲ್ಲಿ ಇಲ್ಲದ ಒಂದು, ಎರಡು, ಐದು ಸಾವಿರ ರೂಪಾಯಿಗಳ ನೋಟುಗಳೂ ಅವರ ಟಿಪಾಯಿಯೊಳಗೆ ಸುರಕ್ಷಿತವಾಗಿ ಮಲಗಿವೆ.

ಆದರೆ ಚೇತನ್‌ಗೆ ಇನ್ನೊಂದು ವಿಶೇಷ ಹವ್ಯಾಸವಿದೆ. ಎಲ್ಲಾ ದೇಶಗಳ ನೋಟು-ನಾಣ್ಯಗಳನ್ನು ಭಾರತೀಯ ರೂಪಾಯಿಗಳಲ್ಲಿ ಲೆಕ್ಕ ಹಾಕುವುದು! ಅವರ ಮನೆಯ ಜಗುಲಿಯಲ್ಲಿ ಕೆಲವೊಮ್ಮೆ ವಿದೇಶಿ ಕರೆನ್ಸಿ ವಿನಿಮಯದ ಚಿಕ್ಕ ತರಗತಿಯೇ ನಡೆಯುತ್ತದೆ.

ಟರ್ಕಿಯ ನೋಟು

ಮನೆಗೆ ಬರುವ ಮಕ್ಕಳು ಮೊಬೈಲ್ ಮರೆತು ಟಿಪಾಯಿ ಮುಂದೆ ನಿಂತುಬಿಡುತ್ತಾರೆ.

'ಅಣ್ಣಾ, ಇದು ಯಾವ ದೇಶದ್ದು?'

'ಇದರಲ್ಲಿ ಏಕೆ ಬೇರೆ ಲಿಪಿ?'

'ಇದರಲ್ಲಿ ಏಕೆ ಇಷ್ಟು ಸೊನ್ನೆಗಳು?'

ಚೇತನ್ ಕ್ಷಣದಲ್ಲೇ ಮೇಷ್ಟ್ರಾಗುತ್ತಾರೆ. ವಿಶ್ವ ಆರ್ಥಿಕತೆ, ವಿನಿಮಯ ಮೌಲ್ಯ, ದೇಶಗಳ ಪರಿಚಯ ಎಲ್ಲವನ್ನೂ ಸರಳವಾಗಿ ಹೇಳಿಕೊಡುತ್ತಾರೆ. ಮೊಬೈಲ್ ಪರದೆಯ ಜಗತ್ತಿಗಿಂತ, ಈ ಗಾಜಿನ ಒಳಗಿನ ಜಗತ್ತು ಅವರಿಗೆ ಹೆಚ್ಚು ಆಪ್ತ.

ಹವ್ಯಾಸದಿಂದ ಕನಸಿನತ್ತ

ಚೇತನ್ ಸಂಗ್ರಹಿಸಿದ ನಾಣ್ಯ, ನೋಟುಗಳು

ಕೆಲವು ನೋಟು-ನಾಣ್ಯಗಳನ್ನು ಅವರು ಖರೀದಿಸಿದ್ದಾರೆ. ಇನ್ನೂ ಕೆಲವು ಸ್ನೇಹಿತರು, ಪರಿಚಿತರು ಅವರ ಹವ್ಯಾಸ ನೋಡಿ ಸಂಗ್ರಹಿಸಿ ಕೊಟ್ಟಿದ್ದಾರೆ. ಇದೀಗ ಅವರ ಕನಸು ಇನ್ನೂ ದೊಡ್ಡದು. ಜಗತ್ತಿನ ಎಲ್ಲಾ ರಾಷ್ಟ್ರಗಳ ಚಲಾವಣೆಯ ನೋಟು-ನಾಣ್ಯಗಳನ್ನು ಸಂಗ್ರಹಿಸುವುದು. ಒಂದು ಪುಟ್ಟ ಮ್ಯೂಸಿಯಂ ನಿರ್ಮಿಸುವುದು. ಯಲ್ಲಾಪುರದ ಒಂದು ಮನೆಯ ಜಗುಲಿಯಿಂದ ಜಗತ್ತಿನತ್ತ ಹೋಗುವ ಪಯಣವದು.

ಆವತ್ತು ದುಬೈನಿಂದ ಬಂದ ಒಂದು ನೋಟು ಚೇತನ್‌ನ ಕೈಗೆ ಸಿಕ್ಕಾಗ, ಅದರ ಮೌಲ್ಯ ಎಷ್ಟು ರೂಪಾಯಿ ಎಂಬುದು ಮುಖ್ಯವಾಗಿರಲಿಲ್ಲ. ಆದರೆ ಅದರ ಮೂಲಕ ಹುಟ್ಟಿದ ಕನಸು, ಅದಕ್ಕೆ ಬೆಲೆ ಕಟ್ಟಲಾಗದು.

ಇಂದು ಅವರ ಮರದ ಟಿಪಾಯಿಯಲ್ಲಿರುವ ನೋಟು-ನಾಣ್ಯಗಳ ಮೌಲ್ಯವನ್ನು ಲೆಕ್ಕ ಹಾಕಬಹುದು. ಆದರೆ ಅವು ಹುಟ್ಟಿಸಿದ ಕುತೂಹಲ, ಜ್ಞಾನ, ಕನಸುಗಳಿಗೆ ಬೆಲೆ ಕಟ್ಟಲಾಗದು. ❖

ಮುನ್ನೋಟ 22-03-2026 ರಿಂದ 28-03-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ವಾರದ ಆರಂಭದಲ್ಲಿ ಸಂತೋಷ ಕೂಟಗಳಲ್ಲಿ ಭಾಗವಹಿಸುವಿರಿ. ಆದಾಯವು ಕಡಿಮೆ ಇರುತ್ತದೆ. ಖರ್ಚು ಹೊಂದಾಣಿಕೆ ಮಾಡಿಕೊಳ್ಳುವುದು ಉತ್ತಮ. ನಿಮ್ಮ ಕೆಲಸಗಳಿಗೆ ಹಿರಿಯರ ಸಹಕಾರ ದೊರೆಯುತ್ತದೆ. ಕುಟುಂಬದಲ್ಲಿ ಶಾಂತಿ ಇರುತ್ತದೆ. ಆಯುರ್ವೇದ ಓದುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಸರ್ಕಾರಿ ಹಣ ಹೂಡಿಕೆಯ ಬಗ್ಗೆ ಸಾಕಷ್ಟು ಆಲೋಚನೆ ಮಾಡುವಿರಿ. ಆದಾಯವು ನಿಮ್ಮ ನಿರೀಕ್ಷೆಯನ್ನು ಮೀರಿ ಇರುತ್ತದೆ. ಸಹೋದರಿಯರಿಗಾಗಿ ಹಣ ಖರ್ಚು ಮಾಡಬೇಕಾಗುತ್ತದೆ. ಆಸ್ತಿ ಮಾಡುವ ವಿಚಾರದಲ್ಲಿ ಅತಿ ಆತುರ ಬೇಡ. ಸ್ತ್ರೀರೋಗ ತಜ್ಞರಿಗೆ ಬಹಳ ಬೇಡಿಕೆ ಬರುತ್ತದೆ. ಸಂಗಾತಿಯ ಸಹಾಯದಿಂದ ಉದ್ಯೋಗದಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ವೃತ್ತಿಯಲ್ಲಿ ಈಗ ಏಳಿಗೆ ಇದ್ದರೂ ಹಿತ ಶತ್ರುಗಳಿರುವರು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸಮಾಜದಿಂದ ಗೌರವ ಸಿಗುವ ಸಾಧ್ಯತೆಗಳಿವೆ. ಆದಾಯವು ನಿರೀಕ್ಷೆಯಷ್ಟಿರುತ್ತದೆ. ಆಸ್ತಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ವೃತ್ತಿ ಸಂಬಂಧಿತ ಪರೀಕ್ಷೆಗಳನ್ನು ತೆಗೆದುಕೊಂಡು ಪದೋನ್ನತಿಯನ್ನು ಸಾಧಿಸಬಹುದು. ಶಸ್ತ್ರ ಚಿಕಿತ್ಸಕರಿಗೆ ಬೇಡಿಕೆ ಹೆಚ್ಚಾಗುವುದು. ಸಂಗಾತಿಯಿಂದ ಆರ್ಥಿಕ ಸಹಕಾರ ಸಿಗುತ್ತದೆ. ಉದ್ಯೋಗದಲ್ಲಿದ್ದ ತೊಂದರೆಗಳು ಸ್ವಲ್ಪ ಮಟ್ಟಿಗೆ ನಿವಾರಣೆಯಾಗುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನೀವು ಅಂದುಕೊಂಡ ಕೆಲಸವನ್ನು ಸಾಧಿಸಿ ಸಂತೋಷಪಡುವಿರಿ. ಆದಾಯವು ಕಡಿಮೆ ಇರುತ್ತದೆ. ಧರ್ಮ ಕಾರ್ಯ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಆಭರಣ ಮಾರಾಟಗಾರರಿಗೆ ವ್ಯವಹಾರಗಳಲ್ಲಿ ಏರಿಳಿತ ಇರುವುದಿಲ್ಲ. ಕೃಷಿ ವಿಜ್ಞಾನವನ್ನು ಓದುತ್ತಿರುವವರಿಗೆ ಬಹಳ ಯಶಸ್ಸು ಇರುತ್ತದೆ. ಹಣಕಾಸಿನ ವ್ಯವಹಾರಗಳಲ್ಲಿ ಅಷ್ಟು ಅಭಿವೃದ್ಧಿ ಇರುವುದಿಲ್ಲ. ಸಂಗಾತಿಯಿಂದ ವೃತ್ತಿಯಲ್ಲಿ ಸ್ವಲ್ಪ ಅನುಕೂಲವಾಗುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಬಂಧುಗಳ ಜತೆವಿನ ಹಣಕಾಸಿನ ವ್ಯವಹಾರ ನಷ್ಟಕ್ಕೆ ಕಾರಣವಾಗುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚು ಅಂಕ ಪಡೆಯುವ ಯೋಗವಿದೆ. ತಲೆನೋವು ಅಥವಾ ಮೂಳೆ ಸಂಬಂಧಿತ ದೋಷಗಳು ಕಾಡುತ್ತವೆ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಸಾಕಷ್ಟು ಹಿನ್ನಡೆ ಇರುತ್ತದೆ. ತಾಯಿಯಿಂದ ನಿರೀಕ್ಷೆಗೆ ಮೀರಿದ ಸಹಕಾರ ಸಿಗುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಆದಾಯವು ಕಡಿಮೆ ಇದ್ದು ಖರ್ಚು ಹೆಚ್ಚಾಗುವ ಸಾಧ್ಯತೆಯಿದೆ. ಆಸ್ತಿ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ಇರುತ್ತದೆ. ತಳಿ ಸಂಶೋಧಕರಿಗೆ ಬೇಡಿಕೆ ಹೆಚ್ಚುತ್ತದೆ. ವ್ಯವಹಾರಗಳಲ್ಲಿ ಹೆಚ್ಚು ಎಚ್ಚರವಾಗಿರಿ. ನಿಮ್ಮ ಪಾಲಿನ ಲಾಭಗಳನ್ನು ಸರಿಯಾಗಿ ಗಮನಿಸಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವಾರದ ಆರಂಭದಲ್ಲೇ ಆರ್ಥಿಕ ಸಂಕಟಗಳನ್ನು ಕಾಣಬಹುದು. ಆದಾಯವು ತಕ್ಕಮಟ್ಟಿಗೆ ಇರುತ್ತದೆ. ನಿಮ್ಮ ನಡವಳಿಕೆಯಲ್ಲಿ ಈಗ ನಿಮ್ಮ ಸಂಗಾತಿಯ ಪ್ರಭಾವವನ್ನು ಕಾಣಬಹುದು. ಕೃಷಿಯಿಂದ ಅಪೇಕ್ಷಿತ ಆದಾಯ ದೊರೆಯುವುದಿಲ್ಲ. ವಾಯುಯಾನ ಕ್ಷೇತ್ರದಲ್ಲಿ ಅಭ್ಯಾಸ ಮಾಡುತ್ತಿರುವವರಿಗೆ ಅಭಿವೃದ್ಧಿ ಇರುತ್ತದೆ. ಬೆಂಕಿಯ ಜೊತೆ ಕೆಲಸ ಮಾಡುವವರು ಎಚ್ಚರದಿಂದಿರಿ. ಕೆಲವರ ಪ್ರೀತಿ ಪ್ರೇಮಗಳು ವಿವಾಹವಾಗಿ ಪರಿವರ್ತನೆಯಾಗುತ್ತವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಶತ್ರುಗಳನ್ನು ಎದುರಿಸುವ ಮನೋಬಲ ನಿಮ್ಮಲ್ಲಿ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಈಗ ಹಿಡಿದ ಕೆಲಸವನ್ನು ಸಾಧಿಸುವ ಇಚ್ಛಾಶಕ್ತಿ ನಿಮ್ಮಲ್ಲಿ ಇರುತ್ತದೆ. ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಅನುಕೂಲವಿರುತ್ತದೆ. ಶೀತ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ನಿಮ್ಮ ಸಂಗಾತಿಯ ಸಹಕಾರದಿಂದ ವಿದ್ಯಾಭ್ಯಾಸ ಮುಂದುವರಿಸಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಕೃಷಿ ಭೂಮಿಯನ್ನು ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಹೆಚ್ಚು ಅಂಕಗಳನ್ನು ಪಡೆಯುವ ಯೋಗವಿದೆ. ಹೆಣ್ಣುಮಕ್ಕಳಿಗೆ ಯಶಸ್ಸು ಇರುತ್ತದೆ. ಸಂಗಾತಿಯಿಂದ ನಿಮ್ಮ ನಿರೀಕ್ಷೆಗೆ ಮೀರಿದ ಆರ್ಥಿಕ ಸಹಕಾರ ದೊರೆಯುತ್ತದೆ. ತಾಯಿಯಿಂದ ಸಿಗುತ್ತಿದ್ದ ಸಹಕಾರ ಕಡಿಮೆಯಾಗಬಹುದು. ನಾಟಿ ವೈದ್ಯರುಗಳಿಗೆ ಬೇಡಿಕೆ ಹೆಚ್ಚಾಗುವ ಸಂದರ್ಭವಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ನಿಮ್ಮ ಗುರಿಯನ್ನು ತಲುಪಲು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವಿರಿ. ಆದಾಯ ಸ್ವಲ್ಪಮಟ್ಟಿಗೆ ಉತ್ತಮವಾಗುತ್ತದೆ. ಶತ್ರುಗಳನ್ನು ನಿಗ್ರಹ ಮಾಡುವಲ್ಲಿ ನೀವು ಯಶಸ್ವಿಯಾಗುವಿರಿ. ಕೃಷಿಯಿಂದ ಆದಾಯವನ್ನು ನಿರೀಕ್ಷೆ ಮಾಡಬಹುದು. ಹಾಲಿನ ಉತ್ಪನ್ನಗಳನ್ನು ಮಾರುವವರ ಆದಾಯ ಹೆಚ್ಚುತ್ತದೆ. ಬಟ್ಟೆ ವ್ಯಾಪಾರಿಗಳಿಗೆ ಲಾಭ ಹೆಚ್ಚುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಉತ್ತಮ ಗುರಿಯೊಂದಿಗೆ ನೀವು ಮುಂದುವರಿಯುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳು ಈಗ ನಿಮ್ಮಿಂದ ಸಹಾಯ ಪಡೆಯಲು ಮಾತ್ರ ಬರುವರು. ನಿಮ್ಮ ತಾಯಿಯ ಆರೋಗ್ಯದಲ್ಲಿ ಸ್ಥಿರತೆಯನ್ನು ಕಾಣಬಹುದು. ಬಟ್ಟೆಯ ಮೇಲೆ ಕಸೂತಿ ಮಾಡುವವರಿಗೆ ಬೇಡಿಕೆ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಅಲ್ಪ ಶ್ರಮದಿಂದ ಪೂರ್ಣ ಫಲಿತಾಂಶ ಪಡೆಯುವ ಯೋಗವಿದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಎಲ್ಲರೊಂದಿಗೆ ಬಹಳ ಗತ್ತಿನಿಂದ ನಡೆದುಕೊಳ್ಳುವಿರಿ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಮಹಿಳೆಯರಿಂದ ಕೆಲವು ತೊಡಕುಗಳನ್ನು ಎದುರಿಸಬೇಕಾಗಬಹುದು. ನರರೋಗ ತಜ್ಞರಿಗೆ ಬೇಡಿಕೆ ಹೆಚ್ಚಾಗಬಹುದು. ಸಂಗಾತಿಯ ಸಹಕಾರ ನಿರೀಕ್ಷಿತ ಸಮಯದಲ್ಲಿ ದೊರೆಯುವುದಿಲ್ಲ. ರೇಷ್ಮೆ ಸೀರೆ ನೇಯುವವರಿಗೆ ಅನಿರೀಕ್ಷಿತ ಲಾಭವಿರುತ್ತದೆ.

ಪದಬಂಧ: 2936

ಮೇಲಿಂದ ಕೆಳಕ್ಕೆ

2. ಬುದ್ಧಿಯುಳ್ಳ ಭೂಮಾತೆ 4
3. ಸಮಯ ಸಂದರ್ಭವನ್ನು ತನಗೆ ಬೇಕಾದ ರೀತಿ ಬಳಸಿಕೊಳ್ಳುವ ಸಿದ್ಧಾಂತ 6
4. ತಿಮಿಂಗಲದಂತೆ ಆವರಿಸುವ ಕತ್ತಲು 3
5. ತಾನು ನಂಬಿದ ಸಿದ್ಧಾಂತವನ್ನು ಪ್ರಚಾರಮಾಡುವವ 4
6. ಕುವೆಂಪುಗೆ ದೇಶದ ಕಾವ್ಯಬ್ರಹ್ಮನೆಂಬ ಬಿರುದು 4
7. ಹಿಂದೆ ಅರಸನ ತಂತ್ರ ಈಗ ಪಕ್ಷಗಳಲ್ಲಿ ಮತ್ತು ಇತರ ವ್ಯವಸ್ಥೆಗಳಲ್ಲಿ ನಡೆಯುತ್ತಿದೆ 4
9. ಪ್ರಜಾತಂತ್ರದಲ್ಲಿ ಹದಿನೆಂಟು ದಾಟಿದ ಮೇಲೆ ನೀಡುವ ಓಟಿನ ಕೊಡುಗೆ 4
13. ಸಂಗೀತದಿಂದ ಆವರಿಸಿದ್ದು 4
14. ಕಾಣುವ ಸ್ವಪ್ನ ಮತ್ತು ಅದು ಮೈಗೂಡಿದ ವಾಸ್ತವ 6
16. ವಾಯುವಿನಿಂದ ಹುಟ್ಟಿದ ರಾಮಭಕ್ತ 4
17. ಪ್ರಸ್ತುತ ಪ್ರೀತಿ ಮತ್ತು ಖುಷಿಗೆ ಹತ್ತಿರವೆನಿಸುವ ಸೀತಾರಾಮರ ಅವಳಿ ಪುತ್ರರು 4
19. ದೇವರನಾಮದ ಪುನರುಕ್ತಿಯ ಎಣಿಕೆಗೆ ಬರುವ ಹಾರ 4
21. ಮನ್ಮಥ ಮತ್ತು ಕ್ಷುದ್ರದೇವಿಯ ನಡುವೆ ಹಣಾಹಣಿ ಕಲಹ 4
22. ಮಿಥಿಲೆಯಲ್ಲಿ ಯಮುನೆ ಮಂಡಿಯವರೆಗೆ ಹರಿಯುವಳೆ? 3

ಎಡದಿಂದ ಬಲಕ್ಕೆ

1. ಸೋಲಿನ ದೀರ್ಘಾವಸ್ಥೆಯಿಂದ ಹೊರತರಬಹುದೆ ಈ ಹೊಸ ಸಂವತ್ಸರ 4
3. ವಸಿಷ್ಠರ ಪತ್ನಿ ಚಿರಸ್ಥಾಯಿ ತಾರೆ 4
5. ಓಂಕಾರ ಸ್ವರೂಪ 3
6. ದಶರಥಾತ್ಮಜನನ್ನು ಎರಡು ಸಲ ಸ್ಮರಿಸಿ 4
8. ಅರಣ್ಯಕ್ಕೆ ಸೀಮಿತವಾದ ವೃಕ್ಷ 4
10. ನೃತ್ಯ, ಸಂಗೀತದಲ್ಲಿ ಜೊತೆಯಾಗುವ ಕೊರಳ ಧ್ವನಿ 4
11. ಹಿಂದಿಯಲ್ಲಿ ಸತ್ಯದ ಕಠಿಣ ಸ್ವರೂಪ 3
12. ಈಶಪುತ್ರ ವಿಘ್ನನಾಶಕ ಗುಂಪಿನ ಒಡೆಯ 4
15. ಸುಟ್ಟು ಭಸ್ಮಮಾಡುವ ಬಡಬಾಗ್ನಿ 4
18. ಆಭರಣದಿಂದ ಹುಟ್ಟಿದವನೇ ಈತ 3
20. ಬಹಳ ಶ್ರೇಷ್ಠನಾದ ನಮ್ಮನ್ನು ಕಾಪಾಡುವ ಭಗವಂತ 4
22. ಹುಟ್ಟಿನಿಂದಲೇ ಬಂದ ಪ್ರವೃತ್ತಿಯ ಮಾಪಕ 4
23. ಅರಸನಿಗೆ ಬರಬಹುದಾದ ಸಿಟ್ಟು 4
24. ರೆಕ್ಕೆ ಬಿಚ್ಚಿ ಕುಣಿವ ಹಕ್ಕಿಯನ್ನು ಕರೆಯಿರಿ 3
25. ದೃಷ್ಟಿ ದೋಷವನ್ನು ನಿವಾರಿಸಲು ಸುತ್ತಿ ಹಾಕಿ ಎಸೆ 4
26. ಶತ್ರುವಿನ ಬಿಡಾರದಲ್ಲಿ ಹಾರಿಸಿದ ಬಾವುಟ 4

ಪದಬಂಧ ಉತ್ತರ -2935

ಮೇಲಿಂದ ಕೆಳಕ್ಕೆ

1.ಅರಿಹಂತ 2.ಕಟಕಟೆ 4.ಗಣಕಯಂತ್ರ 5.ಭಗವತಿ 6.ನಿರಾಹಾರಿ 9.ಮಧುಸಂಚಯ 11.ವಾಯುನಂದನ 12.ಪನಸ 13.ಮಕಾನ 17.ಕಾಲನಿಯಮ 18.ಪಾರಿಜಾತ 19.ಸಕಲಾರ್ಥ 20.ಮಣೆಹಾಕು 21.ವಿಕಸಿತ

ಎಡದಿಂದ ಬಲಕ್ಕೆ

1. ಅಡಕ 3.ಅಂಗಳ 5.ಭವಾನಿ 7.ಕರ್ನಾಟಕವೈಭವ 8.ತಮಟೆ 10. ತಿವಾರಿ 12.ಪವಿತ್ರಪ್ರೇಮ 14.ಸಂಧಾನ 15.ಕಾನನಂ 16.ಸಮಕಾಲೀನ 18.ಪಾಯಸ 20.ಮನವಿ 22.ಕರ್ತವ್ಯನಿರ್ವಹಣೆ 23.ತತ್ವಾರ್ಥ 24.ಗಮನ 25.ಕುಸಿತ

ಲೋಹಿಯಾ ಕಣ್ಣಲ್ಲಿ ರಾಮ ಕೃಷ್ಣ ಶಿವ

ನಾಟಕದ ದೃಶ್ಯ
ಚಿತ್ರ: ಅನೂಪ್ ರಾಘ ಟಿ.

• ಮೋಹನ್ ಕುಮಾರ ಸಿ.

ವಿಮರ್ಶಾ ಲೇಖನವೊಂದನ್ನು ರಂಗಪಠ್ಯವಾಗಿಸಿ, ಭಾರತದ ಪುರಾಣ, ಇತಿಹಾಸ ಮತ್ತು ವರ್ತಮಾನವನ್ನು ಎರಡೂವರೆ ಗಂಟೆಯಲ್ಲಿ ಜೋಡಿಸುವುದು ಸುಲಭವಲ್ಲ. ಯಾವುದು ಪುರಾಣ– ಯಾವುದು ಇತಿಹಾಸ ಎಂಬ ಅರಿವುಗಾಣದೇ ವರ್ತಮಾನದಲ್ಲಿ ಎಂದೂ ಬದುಕದ ಭಾರತೀಯರಿಗೆ ನಿಜವಾದ 'ಭಾರತ ದರ್ಶನ'ವನ್ನು ಕಾಣಿಸಿ, ವಿಮರ್ಶಾ ಪ್ರಜ್ಞೆಯನ್ನು ಎದೆಯಲ್ಲಿ ಬಿತ್ತುವುದು ಪವಾಡವೇ ಆಗುತ್ತದೆ.

ಸಮಾಜವಾದಿ ರಾಮಮನೋಹರ ಲೋಹಿಯಾ ಅವರ ಪ್ರಸಿದ್ಧ 'ರಾಮ ಕೃಷ್ಣ ಶಿವ' ಲೇಖನವನ್ನು ಅದೇ ಹೆಸರಿನಲ್ಲಿ ನಾಟಕವಾಗಿಸಿರುವ 'ಕರಾವಳಿಯ ನಿರ್ದಿಗಂತ' ತಂಡವು ರಂಗಪವಾಡವನ್ನೇ ಆಗು ಮಾಡಿತು. ಸಮಕಾಲೀನ ರಾಜಕೀಯ, ಸಾಮಾಜಿಕ ಪರಿಸ್ಥಿತಿಗೆ ಲೇಖನವನ್ನು ಕನ್ನಡಿಯಾಗಿಸಿ 'ವಿಮರ್ಶೆಯ ವಿಮರ್ಶೆ' ಅಲೆಗಳನ್ನೂ ಎಬ್ಬಿಸಿತು. ಮೈಸೂರಿನ ರಮಾಗೋವಿಂದ ರಂಗಮಂದಿರದಲ್ಲಿ 'ಅರಿವು ರಂಗ ಮೈಸೂರು' ಹಾಗೂ 'ನೃಪತುಂಗ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಸ್ಥೆ' ಈಚೆಗೆ ಈ ಪ್ರದರ್ಶನವನ್ನು ಏರ್ಪಡಿಸಿದ್ದವು.

ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಕಾವ್ಯದೌತಣದ ಸವಿಯುಣಿಸಿದ್ದ ರಂಗ ನಿರ್ದೇಶಕ ಗಣೇಶ್ ಮಂದಾರ್ತಿ, ಲೋಹಿಯಾ ನೋಟದ ಭಾರತವನ್ನು ಕಣ್ಣ ಮುಂದೆ ತಂದರು. ಲೋಹಿಯಾ ವಿಮರ್ಶೆಯ ನೋಟಗಳಿಗೆ ತಮ್ಮ ರಂಗಪಯಣದಲ್ಲಿ ದಕ್ಕಿಸಿಕೊಂಡಿದ್ದ ಕನ್ನಡ ವಿಮರ್ಶಾ ಲೋಕದ ಬೆಳಕನ್ನೂ ಹಾಯಿಸಿದರು. ನಾಟಕ ಮುಗಿದಾಗ ವೈವಿಧ್ಯದ ಭಾರತವನ್ನು ಅರ್ಥೈಸಿಕೊಳ್ಳಬೇಕಾದ ಮಾರ್ಗವಿದು ಎಂಬುದನ್ನು ಎದೆಯೊಳಗೆ ಇಳಿಯುವಂತೆ ಮಾಡಿದರು.

ಅಲ್ಲಮಪ್ರಭುವಿನ 'ವೇದವೆಂಬುದು ಓದಿನ ಮಾತು' ವಚನ ಹಾಗೂ ಕುವೆಂಪು ಅವರ 'ಶತಮಾನಗಳು ಬರಿಯ ಜಡಶಿಲೆಯ ಪೂಜಿಸಾಯ್ತು' ಕವಿತೆಯ ವಾಚನ– ಗಾಯನದಿಂದ ಆರಂಭವಾಗುವ ನಾಟಕ ಕೊನೆಯಾಗುವುದು ಶಿಶುನಾಳ ಷರೀಫರ 'ಕೇಳ ಜಾಣ.. ಶಿವ ಧ್ಯಾನವ ಮಾಡಣ್ಣ' ತತ್ವಪದದಿಂದ. 'ಸತ್ಯ ಎಂಬುದು ಗುಹೇಶ್ವರನ ಮೀರಿದ ಘನವು..' ಎನ್ನುವ ಅಲ್ಲಮ.. 'ನಿನ್ನೊಳಗ ನೀನು ತಿರುಗಿ ನೋಡಣ್ಣ' ಎನ್ನುವ ಷರೀಫ; ಈ ಎರಡೂ ಅಧ್ಯಾತ್ಮದ ಅನುಭಾವದ ಬಿಂದುಗಳಿಗೆ ನಾಟಕದ ಐವರು ಪಾತ್ರಧಾರಿಗಳು ಲೋಹಿಯಾರ ಲೇಖನದ ಬೆಳಕಿನ ಗೆರೆಯನ್ನೆಳೆದರು.

ರಾಮ, ಕೃಷ್ಣ, ಶಿವ ಭಾರತದ ಸಂಸ್ಕೃತಿಯನ್ನು ಆವರಿಸಿಕೊಂಡ ಕಥನವನ್ನು ತೆರೆಯುತ್ತಲೇ, ತಮ್ಮ ಗುರು ಮಹಾತ್ಮ ಗಾಂಧಿ ಅವರ ರಾಜಕೀಯ ಜೀವನವನ್ನೂ ವಿಶ್ಲೇಷಿಸುವ ಲೋಹಿಯಾ ಮಾದರಿಯಲ್ಲಿಯೇ, ನಾಟಕದ ನಿರ್ದೇಶಕರು ಲೇಖನವನ್ನು ಕನ್ನಡ ಲೋಕದ ಅಲ್ಲಮ, ಕುವೆಂಪು, ಷರೀಫ, ಮಂಟೇಸ್ವಾಮಿ, ಸವದತ್ತಿ ಯಲ್ಲಮ್ಮ ಕಾವ್ಯದ ನುಡಿಗಳಲ್ಲಿ ವಿವೇಚಿಸಿ, ವಿಸ್ತರಿಸಿದ್ದಾರೆ. ಭಾರತ ದರ್ಶನವನ್ನು ಹಲವು ಬಗೆಯಲ್ಲಿ ಸಂದರ್ಶಿಸಬಹುದಾದ ಕನ್ನಡ ಮಾರ್ಗವೊಂದನ್ನು ಇಲ್ಲಿ ತೋರಿಕೊಟ್ಟಿದ್ದಾರೆ.

'ತಾಯಿ ಭಾರತಿ.. ನನಗೆ ಶಿವನ ಮನಸ್ಸನ್ನು, ಕೃಷ್ಣನ ಹೃದಯವನ್ನು, ರಾಮನ ಕಾರ್ಯಪ್ರಪಂಚವನ್ನೂ ಕೊಡು. ಪ್ರಮಾಣಾತೀತ ಮನಸ್ಸು, ಸಮೃದ್ಧ ಹೃದಯ, ಸೀಮಿತ ಬದುಕು ಇವುಗಳಿಂದ ನಮ್ಮನ್ನು ನಿರ್ಮಿಸು' ಎಂಬುದು ಲೋಹಿಯಾ ಲೇಖನದ ಕೊನೆಯಲ್ಲಿ ಹೇಳುವ ಮಾತು. ಈ ಮಾತುಗಳ ತಳಹದಿಯಲ್ಲಿಯೇ ಲೇಖನ ಬೆಳೆದಿರುವಂತೆ, ನಾಟಕವೂ ಮೈದಳೆದಿದೆ.

'ರಾಮನದು ಸೀಮಿತ ವ್ಯಕ್ತಿತ್ವ, ಕೃಷ್ಣನದು ಸಮೃದ್ಧ ವ್ಯಕ್ತಿತ್ವ' ಎಂದು ಅನಾವರಣಗೊಳಿಸುವಾಗ ನಿರ್ದೇಶಕರು ಜಾಣ್ಮೆಯಿಂದಲೇ 'ರಘುಪತಿ ರಾಘವ', 'ವೈಷ್ಣವ ಜನತೋ' ಭಜನೆಯನ್ನು ಬಳಸಿಕೊಳ್ಳುತ್ತಾರೆ. 'ಪ್ರಮಾಣಾತೀತ ವ್ಯಕ್ತಿತ್ವ'ದ ಶಿವನನ್ನು ಕೊಂಡಾಡುವಾಗ ಷರೀಫರ ತತ್ವಪದ, ಜನಪದ ನೆರವಾಗುತ್ತದೆ. ಮೂವರನ್ನೂ ಅವರವರ ವ್ಯಕ್ತಿತ್ವವನ್ನು ಎದುರಿಗಿಟ್ಟು ಪರಮಾರ್ಶಿಸುತ್ತಾರೆ.

ಮಂಜು ಕಾಸರಗೋಡು ರಾಮ, ಕೃಷ್ಣ, ಶಿವನಾಗಿ ನಾಟಕವನ್ನೇ ಆವರಿಸಿಕೊಳ್ಳುತ್ತಾರೆ. ಅವರಿಗೆ ಸವಾಲೆಸೆಯುವಂತೆ ಅಜಿತ್ ಸಿಂಹ ಮತ್ತು ಮಾಧವ ಜೋಗಿ ಅವರು 'ರಾವಣ', 'ಧರ್ಮರಾಯ', 'ಲಕ್ಷ್ಮಣ', 'ಬ್ರಹ್ಮ', 'ಚಂದ್ರ', 'ಕುಚೇಲ'ನಾಗಿ ಅಭಿನಯಿಸಿದ್ದಾರೆ. ಸಿ.ನಯನಾ, ರಾಧಾ ರಾಮಚಂದ್ರನ್ ಅವರು ಕುಂತಿ, ಸೀತೆ, ಕಾಳಿ, ಪಾರ್ವತಿ, ರಾಧೆಯ ಸ್ನೇಹಿತೆ 'ಚಂದ್ರಾ'ಳಾಗಿ ಜೀವ ತುಂಬಿದ್ದಾರೆ. ಎಲ್ಲರೂ ಪಾತ್ರದಿಂದ ಪಾತ್ರಕ್ಕೆ ಪ್ರವೇಶ ಮಾಡಿದರೂ ಅಭಿನಯದ ಛಾಯೆ ಮರುಕಳಿಸದಂತೆ ಮಾಡಿದ್ದಾರೆ.

ರಾಮನ ಸೀಮಿತ ವ್ಯಕ್ತಿತ್ವವನ್ನು ಹೇಳಲು ಸೀತಾಪಹರಣ, ವಾಲಿ– ಸುಗ್ರೀವರ ಯುದ್ಧ, ಶಂಭೂಕ ವಧೆ, ಅಶ್ವಮೇಧ ಯಜ್ಞದ ಪ್ರಸಂಗಗಳು ದೃಶ್ಯವಾದರೆ, ಕೃಷ್ಣನ ಸಮೃದ್ಧ ವ್ಯಕ್ತಿತ್ವವನ್ನು ಕಟ್ಟಿಕೊಡಲು ಕೃಷ್ಣ– ಸುಧಾಮರ ಕೊನೆಗಾಲದ ಕಥನ ಬಳಸಲಾಗಿದೆ. ಕರ್ಣನನ್ನು ಕಳೆದುಕೊಂಡು ಪರಿತಪಿಸುವ ಕುಂತಿ, ಧರ್ಮಪಟ್ಟವೇ ಬೇಡವೆನ್ನುವ ಧರ್ಮರಾಯನ ಮಾತುಗಳನ್ನು ನೆನೆಯುವ ಕೃಷ್ಣ; ಬೃಂದಾವನಕ್ಕೆ ಬಾರದ ಕೃಷ್ಣನನ್ನು ನೆನೆದು ಪರಿತಪಿಸಿ ಪತ್ರ ಬರೆಯುವ ರಾಧೆಯ ಗೆಳತಿ ಗೋಪಿಕೆ 'ಚಂದ್ರಾ'. ಕೊನೆಯಲ್ಲಿ ಶಿವನ ಗಾತ್ರಾತೀತ ವ್ಯಕ್ತಿತ್ವ ಹುಡುಕಲು ಬ್ರಹ್ಮ– ವಿಷ್ಣುವಿನ ಜಗಳ, ಗಣೇಶನ ಸೃಷ್ಟಿ, ರಾವಣನು ಪಾರ್ವತಿಯನ್ನೇ ವರವಾಗಿ ಕೇಳಿದದ್ದು, ಶಿವನ ಮದುವೆ ಪ್ರಸಂಗಗಳನ್ನು ಅನಾವರಣಗೊಳಿಸಲಾಗಿದೆ.

ಗಣೇಶ್ ಮಂದಾರ್ತಿ ಅವರೇ ಸಂಗೀತ ನೀಡಿದ್ದು, ಶುಭಕರ ಪುತ್ತೂರು– ಕೃಷ್ಣ ಅಟ್ಟದಮನಿ ಸಹಾಯಕರಾಗಿ ಮೇಳವನ್ನು ಮುನ್ನಡೆಸಿದ್ದಾರೆ. ಪೃಥ್ವಿನ್ ಉಡುಪಿ ಅವರ ಬೆಳಕು, ಗೋಪಿನಾಥ ಸಾಗರ ಮತ್ತು ನಾಗರಾಜ ಶಿವಸಂಪಿ ಅವರು ರೂಪಿಸಿರುವ ರಂಗ ಪರಿಕರಗಳು ಸರಳತೆಯಲ್ಲಿಯೇ ಅಸಾಧಾರಣ ರೂಪಕ ಕಟ್ಟಿಕೊಡುತ್ತವೆ. ರಂಗ ವಿನ್ಯಾಸ– ಸಂಘಟಕರಾಗಿ ರಾಜು ಮಣಿಪಾಲ ನಾಟಕದ ಒಟ್ಟಂದ ಹೆಚ್ಚಿಸಿದ್ದಾರೆ. ❖


ಚಿರತೆಗಳು

ಕರಿ ಚಿರತೆ ನೆಪದಲ್ಲಿ...

8ನೇ ಪುಟದಿಂದ...

ಇತ್ತೀಚೆಗೆ ಕೊಪ್ಪಳ, ಬಳ್ಳಾರಿ, ಕೋಲಾರ ಜಿಲ್ಲೆಗಳಲ್ಲಿಯೂ ಸಮಸ್ಯೆ ಉಲ್ಬಣಿಸುತ್ತಿದೆ. ಇದು ಗಣಿಗಾರಿಕೆಯ ಪರಿಣಾಮ.

ಗ್ರಾಮೀಣ ಜನರಿಗೆ ಜಾನುವಾರುಗಳೇ ಜೀವನಾಧಾರ. ಒಂದು ಹಸು ಅಥವಾ ಮೇಕೆಯನ್ನು ಕಳೆದುಕೊಳ್ಳುವುದು, ಅವರ ಬದುಕಿನ ಮೇಲೆ ನೇರ ಪರಿಣಾಮ ಬೀರುತ್ತದೆ. ಪರಿಹಾರ ವಿಳಂಬವಾದಾಗ, ಆಕ್ರೋಶ ಚಿರತೆಗಳ ಮೇಲೆ ಬೀಳುತ್ತದೆ. ವಿಷ ಪ್ರಯೋಗ, ಬಲೆಗೆ ಬೀಳಿಸುವ ಮೂಲಕ ಚಿರತೆಗಳ ಜೀವಕ್ಕೆ ಅಪಾಯ ಉಂಟಾಗುತ್ತಿದೆ.

ಚಿರತೆಗಳ ಉಳಿವು, ಅವುಗಳೊಂದಿಗೆ ನಮ್ಮ ಸಹಬಾಳ್ವೆಯ ಮೇಲೆ ಅವಲಂಬಿತವಾಗಿದೆ. ಆದರೆ ಇದು ಸುಲಭವಾದ ಕೆಲಸವಲ್ಲ. ಸಿಬ್ಬಂದಿ ಕೊರತೆಯಿಂದ ಬಳಲುತ್ತಿರುವ ಅರಣ್ಯ ಇಲಾಖೆಗೆ ಈ ಸಂಘರ್ಷವನ್ನು ನಿಯಂತ್ರಿಸುವುದು ದೊಡ್ಡ ಸವಾಲಾಗಿದೆ.

ಜನರಲ್ಲಿ ಅರಿವು ಮೂಡಿಸುವುದು, ಸಮಯಕ್ಕೆ ಸರಿಯಾಗಿ ಪರಿಹಾರ ಒದಗಿಸುವುದು, ಕಾಡು ಪ್ರದೇಶಗಳ ಸಂರಕ್ಷಣೆ—ಇವುಗಳೆಲ್ಲ ಒಟ್ಟಾಗಿ ನಡೆದಾಗ ಮಾತ್ರ ಪರಿಹಾರ ಕಂಡುಬರಬಹುದು.

ಕೊನೆಯ ಮಾತು

ಭದ್ರಾ ಹಿನ್ನೀರಿನಲ್ಲಿ ಸೋಹನ್ ಸಿಂಗ್ ಕಂಡ ಆ ಕರಿಚಿರತೆಯ ಕ್ಷಣ, ಒಂದು ಅದ್ಭುತ ಅನುಭವವಾಗಿರಬಹುದು. ಆದರೆ ಅದು ಕೇವಲ ಒಂದು ದೃಶ್ಯವಲ್ಲ, ಅದೊಂದು ಸಂಕೇತ.

ಕಾಡಿನ ಆ ಕಪ್ಪು ನೆರಳು, ಪ್ರಕೃತಿಯ ನಿಗೂಢತೆಯ ಪ್ರತೀಕ ಮಾತ್ರವಲ್ಲ; ಅದು ಮಾನವ ಮತ್ತು ಪ್ರಕೃತಿ ನಡುವಿನ ಸೂಕ್ಷ್ಮ ಸಮತೋಲನದ ನೆನಪೂ ಹೌದು.

ಚಿರತೆಗಳನ್ನು ಉಳಿಸುವುದು ಎಂದರೆ ಕೇವಲ ಒಂದು ಪ್ರಾಣಿಯನ್ನು ಉಳಿಸುವುದಲ್ಲ; ಕಾಡಿನ ಆತ್ಮವನ್ನೇ ಉಳಿಸುವುದು. ❖

ಕಥೆ
ಎಫ್. ಎಂ. ನಂದಗಾವ ಅವರ **ದೊಂದಿ ದಾನಪ್ಪ**
prajavani.net/short-story

ಕವನ
ಎಂ.ವಿ. ಶಶಿಭೂಷಣ ರಾಜು ಅವರ **ಒಡಲೊಳಗಿನ ಅಗ್ನಿ**
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಗದ್ದೆಯಲ್ಲಿ ಉಪ್ಪು ತಯಾರಿಕೆ ಚಿತ್ರಗಳು: ದುರ್ಗೇಶ ಕಾಗಲ್

ಸಾಣಿಕಟ್ಟಾ ಕಂದುಪ್ಪಿನ ರುಚಿ ಬಲ್ಲಿರಾ?

• ಸುರೇಂದ್ರ ಪೈ

ಗೋಕರ್ಣದ ಮಹಾಬಲೇಶ್ವರ ದೇವಾಲಯಕ್ಕೆ ಹೋಗುವ ದಾರಿಯಲ್ಲಿ, ರಸ್ತೆಯ ಇಕ್ಕೆಲಗಳಲ್ಲಿ ಕಣ್ಣು ಚಾಚಿದಷ್ಟೂ ದೂರ ಭತ್ತದ ಗದ್ದೆಗಳು, ಅಡಿಕೆ ತೋಟಗಳು ಕಂಗೊಳಿಸುತ್ತವೆ. ಆದರೆ ಈ ಹಸಿರು ಜಗತ್ತಿನ ಮಧ್ಯೆ ಅಚ್ಚರಿಯೊಂದು ಕಣ್ಣಿಗೆ ಬೀಳುತ್ತದೆ. ಅದೇ ಉಪ್ಪಿನ ಗುಡ್ಡೆಗಳು. ಬಿಸಿಲಿನಲ್ಲಿ ಝಳ ಝಳ ಹೊಳೆಯುವ ಆ ಗದ್ದೆಗಳಲ್ಲಿ, ಕೆಲಸಗಾರರು ಕೈಯಲ್ಲಿ ಕೋಲ ಹಿಡಿದು ಚೌಕಾಕಾರದ ಕಟ್ಟೆಗಳಲ್ಲಿ ಸಂಗ್ರಹಿಸಿದ ನೀರಿನಿಂದ ಕಂದು ಬಣ್ಣದ ಉಪ್ಪನ್ನು ತೆಗೆಯುತ್ತಿರುವ ದೃಶ್ಯ, 'ಉಪ್ಪನ್ನೂ ಹೀಗೆ ಗದ್ದೆಯಲ್ಲಿ ಬೆಳೆಯುತ್ತಾರಾ?' ಎಂಬ ಕುತೂಹಲ ಹುಟ್ಟಿಸುತ್ತದೆ.

ಈ ಕುತೂಹಲ ಭರಿತ ಪ್ರಶ್ನೆಗೆ ಉತ್ತರ ಸಿಗುವುದು ಕುಮಟಾ ಸಮೀಪದ ಆಗರ ಸಾಣಿಕಟ್ಟಾದಲ್ಲಿ. ಇಲ್ಲಿನ ಗಜನಿ ಭೂಮಿಯಲ್ಲಿ ಭತ್ತವೋ, ಅಡಕೆಯೋ ಬೆಳೆಯುವುದಿಲ್ಲ; ಬದಲಿಗೆ ನೈಸರ್ಗಿಕವಾಗಿ ಉಪ್ಪು 'ಬೆಳೆಯುತ್ತದೆ'. ಪಶ್ಚಿಮಘಟ್ಟಗಳಿಂದ ಹರಿದುಬರುವ ಅಘನಾಶಿನಿ ನದಿ ತನ್ನ ದಾರಿಯಲ್ಲಿ ಅನೇಕ ಔಷಧೀಯ ಸಸ್ಯಗಳ ಸಾರವನ್ನು ಹೊತ್ತುಕೊಂಡು ಬರುತ್ತದೆ. ಅದೇ ನೀರನ್ನು ಬಳಸಿಕೊಂಡು ಸಾಣಿಕಟ್ಟಾದಲ್ಲಿ ವಿಶಿಷ್ಟ ಕಂದು ಬಣ್ಣದ ಉಪ್ಪು ತಯಾರಿಸಲಾಗುತ್ತದೆ.

ಈ ಉದ್ಯಮದ ಇತಿಹಾಸವೇ ವಿಶಿಷ್ಟ. 1720ರಲ್ಲೇ ಇಲ್ಲಿ ಉಪ್ಪು ಉತ್ಪಾದನೆ ಆರಂಭವಾಗಿದೆ ಎಂಬುದು ಸ್ಥಳೀಯ ದಾಖಲೆಗಳು ಮತ್ತು ಅಧ್ಯಯನಗಳು ಸೂಚಿಸುತ್ತವೆ. ಆರಂಭದಲ್ಲಿ ಸುಮಾರು 50 ಎಕರೆಯಲ್ಲಿ ಪ್ರಾರಂಭವಾದ ಈ ಕಸುಬು, ಕಾಲಕ್ರಮೇಣ 400–450 ಎಕರೆಗಳಿಗೆ ವಿಸ್ತರಿಸಿದೆ. ಮೊದಲು ನೂರಾರು ಕುಟುಂಬಗಳು ತಮ್ಮ ತಮ್ಮ ಗದ್ದೆಗಳಲ್ಲಿ ಸ್ವತಂತ್ರವಾಗಿ ಉಪ್ಪು ತಯಾರಿಸುತ್ತಿದ್ದವು. ಆದರೆ, ಉದ್ಯೋಗದ ಅನ್ವೇಷಣೆಯಲ್ಲಿ ಹೊರ ಊರುಗಳಿಗೆ ವಲಸೆ ಹೆಚ್ಚಾದಂತೆ, ಈ ಉದ್ಯಮ ಕುಂಠಿತವಾಗುವ ಸಾಧ್ಯತೆ ಎದುರಾಯಿತು.

ಅದೇ ಸಮಯದಲ್ಲಿ 1952ರಲ್ಲಿ 'ನಾಗರಬೈಲ್ ಉಪ್ಪಿನ ಸಹಕಾರಿ ಸಂಘ' ಸ್ಥಾಪನೆಯಾಗಿ, ಉಪ್ಪು ಉತ್ಪಾದನೆಗೆ ಹೊಸ ದಿಕ್ಕು ನೀಡಿತು. ಸಹಕಾರಿ ಪದ್ಧತಿಯಲ್ಲಿ ಗದ್ದೆಗಳನ್ನು ಒಟ್ಟುಗೂಡಿಸಿ, ಉತ್ಪಾದನೆ, ಸಂಗ್ರಹ ಮತ್ತು ಮಾರಾಟವನ್ನು ವ್ಯವಸ್ಥಿತಗೊಳಿಸಲಾಯಿತು. ಇಂದಿಗೂ ಈ ಸಂಘವೇ ಸಾಣಿಕಟ್ಟಾ ಉಪ್ಪಿನ ಬೆನ್ನೆಲುಬಾಗಿದೆ.

ಉಪ್ಪು ತಯಾರಿಕೆಯ ವಿಧಾನ ನೈಸರ್ಗಿಕವಾದದ್ದು. ಸಮುದ್ರದ ಹಿನ್ನೀರನ್ನು ಕಾಲುವೆಗಳ ಮೂಲಕ ಗದ್ದೆಗಳಿಗೆ ಹರಿಸಿ, ಮೊದಲು ಆಳವಾದ ಕಟ್ಟೆಗಳಲ್ಲಿ ಸಂಗ್ರಹಿಸಲಾಗುತ್ತದೆ. ನಂತರ ಹಂತ ಹಂತವಾಗಿ ನೀರನ್ನು ಕಡಿಮೆ ಆಳದ ಕಟ್ಟೆಗಳಿಗೆ ಬಿಡಲಾಗುತ್ತದೆ. 12 ಇಂಚಿನಿಂದ 8 ಇಂಚು, ನಂತರ 6 ಇಂಚು. ಸೂರ್ಯನ ಬಿಸಿಲಿಗೆ ನೀರು ನಿಧಾನವಾಗಿ ಆವಿಯಾಗುತ್ತಾ, ಉಪ್ಪಿನ ಅಂಶ ಮಾತ್ರ ಉಳಿಯುತ್ತದೆ. ಸುಮಾರು 25 ದಿನಗಳ ನಂತರ ಉಪ್ಪು ಕಾಣಿಸಿಕೊಳ್ಳಲು ಪ್ರಾರಂಭಿಸುತ್ತದೆ. ಬಳಿಕ ಅದನ್ನು ಕೈಯಿಂದ ಸಂಗ್ರಹಿಸಿ, ಅಗತ್ಯ ಪ್ರಮಾಣದಲ್ಲಿ ಆಯೋಡಿನ್ ಸೇರಿಸಿ ಪ್ಯಾಕಿಂಗ್ ಮಾಡಲಾಗುತ್ತದೆ.

ಈ ಪ್ರಕ್ರಿಯೆ ಸಂಪೂರ್ಣವಾಗಿ ಹವಾಮಾನದ ಮೇಲೆ ಅವಲಂಬಿತವಾಗಿದೆ. ಸಾಮಾನ್ಯವಾಗಿ ಫೆಬ್ರುವರಿಯಿಂದ ಮೇ ತನಕ ಸುಮಾರು ನೂರು ದಿನಗಳು ಉಪ್ಪಿನ ಸೀಸನ್ ಇರುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳು ಅತ್ಯಧಿಕ ಉತ್ಪಾದನೆಯ ಕಾಲ. ಆದರೆ ಅಕಾಲಿಕ ಮಳೆ ಬಂದರೆ, ಸಂಪೂರ್ಣ ಗದ್ದೆಯೇ ಹಾನಿಯಾಗಬಹುದು. ಸ್ಥಳೀಯ ಕೆಲಸಗಾರರ ಅನುಭವ ಪ್ರಕಾರ, ಕೆಲವೊಮ್ಮೆ ಫೆಬ್ರುವರಿಯಲ್ಲಿ ಸಿಗಬೇಕಾದ ಉಪ್ಪು ಮಾರ್ಚ್‌ಗೆ ಮುಂದೂಡಲ್ಪಡುತ್ತದೆ.

'ಹವಾಮಾನದ ಪರಿಣಾಮ ಬೆಲೆಯ ಮೇಲೂ ಕಾಣಿಸುತ್ತದೆ. ಒಂದು ಕಾಲದಲ್ಲಿ ₹10–13 ಕೆಜಿಗೆ ಸಿಗುತ್ತಿದ್ದ ಉಪ್ಪು, ಈಗ ಉತ್ಪಾದನಾ ವೆಚ್ಚ ಮತ್ತು ಬೇಡಿಕೆಯ ಪರಿಣಾಮವಾಗಿ ₹25–30ಗೆ ಏರಿದೆ. ಮಾರುಕಟ್ಟೆಯಲ್ಲಿ ₹35–50ಗೆ ಮಾರಾಟವಾಗುತ್ತದೆ' ಎನ್ನುತ್ತಾರೆ ಕಿರಾಣಿ ಮಾಲೀಕರಾದ ಭಗೀರಥ ಕಾಮತ್.

> **ಮೊದಲೆಲ್ಲ ವರ್ಷಕ್ಕೆ 8 ರಿಂದ 10 ಸಾವಿರ ಮೆಟ್ರಿಕ್ ಟನ್ ಉಪ್ಪು ಉತ್ಪಾದನೆ ಮಾಡಲಾಗುತ್ತಿತ್ತು. ಈಗ 5 ರಿಂದ 6 ಸಾವಿರ ಮೆಟ್ರಿಕ್ ಟನ್ ಉತ್ಪಾದಿಸಲಾಗುತ್ತದೆ. ಒಂದು ಚೀಲದಲ್ಲಿ 50 ಕೆ.ಜಿ ಉಪ್ಪಿನ ಚೀಲಗಳು ಇರುತ್ತವೆ. ಒಂದು ಚೀಲ ಉಪ್ಪಿಗೆ ₹700 ದರವಿದೆ. ಇದರ ಹೊರತಾಗಿ ಆಯೋಡಿನ್ ಮಿಶ್ರಣ ಮಾಡದ ಸಾದಾ ಉಪ್ಪಿಗೆ ಚೀಲಕ್ಕೆ ₹ 500 ದರವಿದೆ. ಸಾದ ಉಪ್ಪನ್ನು ಸಾವಯುವ ಗೊಬ್ಬರದ ರೂಪದಲ್ಲಿ ಕೃಷಿ ಚಟುವಟಿಕೆಗಳಿಗೆ ಮಾತ್ರ ಬಳಸಲಾಗುತ್ತದೆ**
> **ನವೀನ್ ನಡ್ಕಣಿ,** ಕಾರ್ಯದರ್ಶಿ, ನಾಗರಬೈಲ್ ಉಪ್ಪಿನ ಸಹಕಾರಿ ಸಂಘ

ಈ ಉಪ್ಪಿನ ಹಿಂದೆ ನಿಂತಿರುವುದು 'ಆಗೇರ' ಸಮುದಾಯ. ತಲೆಮಾರಿನಿಂದ ತಲೆಮಾರಿಗೆ ಈ ಕಸುಬನ್ನು ಮುಂದುವರೆಸುತ್ತಿರುವ ಇವರು, ಗದ್ದೆ ತಯಾರಿಕೆಯಿಂದ ಹಿಡಿದು ಉಪ್ಪು ಸಂಗ್ರಹಿಸುವವರೆಗೂ ಎಲ್ಲಾ ಹಂತಗಳಲ್ಲಿ ಪರಿಣತಿ ಹೊಂದಿದ್ದಾರೆ. ಹಿರಿಯ ಸಾಹಿತಿ ರಾಮಕೃಷ್ಣ ಗುಂದಿ ಅವರ ಪ್ರಕಾರ, ಉಪ್ಪಿನ ಆಗರಗಳಲ್ಲಿ ವಾಸಿಸುತ್ತಿದ್ದ ಕಾರಣದಿಂದಲೇ ಈ ಸಮುದಾಯಕ್ಕೆ 'ಆಗೇರರು' ಎಂಬ ಹೆಸರು ಬಂದಿತು ಎನ್ನಲಾಗುತ್ತದೆ.

ಸಾಣಿಕಟ್ಟಾ ಉಪ್ಪಿನ ಮತ್ತೊಂದು ವಿಶೇಷತೆ ಅದರ ರುಚಿ ಮತ್ತು ಗುಣ. ಅಘನಾಶಿನಿ ನದಿ ಪಶ್ಚಿಮಘಟ್ಟದ ಔಷಧೀಯ ಸಸ್ಯಗಳ ನಡುವೆ ಹರಿಯುವುದರಿಂದ, ಅದರ ನೀರಿನಲ್ಲಿ ಖನಿಜಾಂಶಗಳಿರುವ ಸಾಧ್ಯತೆ ಇದೆ ಎಂದು ಸ್ಥಳೀಯ ನಂಬಿಕೆ. ಇದರಿಂದ ಈ ಉಪ್ಪು ಸಾಮಾನ್ಯ ಉಪ್ಪಿಗಿಂತ ಸ್ವಲ್ಪ ವಿಭಿನ್ನ ರುಚಿ ಹೊಂದಿದೆ. ಮಾವಿನ ಉಪ್ಪಿನಕಾಯಿ, ಒಣಮೀನು ತಯಾರಿಕೆ ಮತ್ತು ಅಡುಗೆಯಲ್ಲಿ ಇದನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಾರೆ. ಆಯುಷ್ ಚಿಕಿತ್ಸೆಯಲ್ಲಿ, ವಿಶೇಷವಾಗಿ ಸೂರ್ಯಸ್ನಾನ ಮತ್ತು ಕೆಲವು ನೈಸರ್ಗಿಕ ಚಿಕಿತ್ಸಾ ವಿಧಾನಗಳಲ್ಲಿ ಇದರ ಬಳಕೆ ಕಂಡುಬರುತ್ತದೆ.

ಮಾರುಕಟ್ಟೆಯ ವಿಚಾರಕ್ಕೆ ಬಂದರೆ, ಸಾಣಿಕಟ್ಟಾ ಉಪ್ಪು ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲೇ ಅಲ್ಲದೇ, ಪಕ್ಕದ ಗೋವಾ ರಾಜ್ಯಕ್ಕೂ ಸರಬರಾಜಾಗುತ್ತದೆ. ಹುಬ್ಬಳ್ಳಿ-ಧಾರವಾಡ, ಹಾವೇರಿ, ಹಾನಗಲ್ ಭಾಗಗಳಲ್ಲಿ ಇದಕ್ಕೆ ವಿಶೇಷ ಬೇಡಿಕೆ ಇದೆ. ಸ್ಥಳೀಯ ಕಿರಾಣಿ ವ್ಯಾಪಾರಿಗಳು ಇದನ್ನು ಕ್ವಿಂಟಲ್‌ಗಳಲ್ಲಿ ಖರೀದಿಸಿ ಚಿಲ್ಲರೆ ಮಾರಾಟ ಮಾಡುತ್ತಾರೆ.

ಈ ಉಪ್ಪಿನ ಉದ್ಯಮಕ್ಕೆ ಇತಿಹಾಸದ ಇನ್ನೊಂದು ಮುಖವೂ ಇದೆ. ಪ್ರಾದೇಶಿಕ ಆಡಳಿತದ ಕಾಲದಲ್ಲಿ ಇದು ಬೈಂದೂರು ಅರಸರ ಅಧೀನದಲ್ಲಿದ್ದು, ನಂತರ ಹೈದರಾಲಿ ಹಾಗೂ ಟಿಪ್ಪು ಸುಲ್ತಾನ್ ಅವರ ಆಳ್ವಿಕೆಗೆ ಒಳಪಟ್ಟಿತು. ಟಿಪ್ಪು ಸುಲ್ತಾನ್ ಕಾಲದಲ್ಲೇ ಉಪ್ಪಿಗೆ ತೆರಿಗೆ ವಿಧಿಸಲಾಗಿತ್ತು ಎಂಬ ಉಲ್ಲೇಖಗಳು ದೊರೆಯುತ್ತವೆ. ನಂತರ ಬ್ರಿಟಿಷರ ಆಳ್ವಿಕೆಯಲ್ಲಿ ಉಪ್ಪಿನ ಮೇಲಿನ ತೆರಿಗೆ ಹೆಚ್ಚಾಗಿ, ಸಾಮಾನ್ಯ ಜನರಿಗೆ ಭಾರವಾಗಿತ್ತು.

1930ರ ಕಾಲಘಟ್ಟದಲ್ಲಿ ಮಹಾತ್ಮ ಗಾಂಧಿ ಅವರ ಉಪ್ಪಿನ ಸತ್ಯಾಗ್ರಹದಿಂದ ಪ್ರೇರಿತರಾಗಿ, ಈ ಭಾಗದಲ್ಲೂ ಉಪ್ಪಿನ ಮೇಲಿನ ಕರವನ್ನು ವಿರೋಧಿಸಿ ಹೋರಾಟಗಳು ನಡೆದವು. ಅದರ ಪರಿಣಾಮವಾಗಿ ಪಕ್ಕದ ಅಂಕೋಲಾ ಭಾಗಕ್ಕೆ 'ಕರ್ನಾಟಕದ ಬಾರ್ಡೋಲಿ' ಎಂಬ ಹೆಸರೇ ಬಂದಿದೆ ಎನ್ನುವುದು ಸ್ಥಳೀಯರ ಮಾತು.

ಇಂದಿಗೂ ಸಾಣಿಕಟ್ಟಾದಲ್ಲಿ ಸಾವಿರಾರು ಮೆಟ್ರಿಕ್ ಟನ್ ಉಪ್ಪು ಉತ್ಪಾದನೆ ಯಾಗುತ್ತಿದ್ದು, ನೂರಾರು ಕುಟುಂಬಗಳು ಇದರ ಮೇಲೆ ಅವಲಂಬಿತವಾಗಿವೆ. ನೈಸರ್ಗಿಕ ವಿಧಾನ, ಪಾರಂಪರಿಕ ಜ್ಞಾನ ಮತ್ತು ಸಹಕಾರಿ ವ್ಯವಸ್ಥೆಯ ಸಂಗಮವೇ ಈ ಉದ್ಯಮವನ್ನು ಇಂದಿಗೂ ಜೀವಂತವಾಗಿರಿಸಿದೆ.

ಸಾಣಿಕಟ್ಟಾ ಉಪ್ಪು ಕೇವಲ ಅಡುಗೆ ಮನೆಯ ಒಂದು ಪದಾರ್ಥವಲ್ಲ; ಅದು ಪಶ್ಚಿಮಘಟ್ಟದ ನೈಸರ್ಗಿಕ ಸೊಗಡು, ತಲೆಮಾರಿನ ಶ್ರಮ, ಇತಿಹಾಸದ ಹಾದಿ ಮತ್ತು ಸ್ಥಳೀಯ ಸಂಸ್ಕೃತಿಯ ಜೀವಂತ ಗುರುತು. ಒಂದು ಚಿಟಿಕೆ ಉಪ್ಪಿನಲ್ಲೇ ಈ ನೆಲದ ರುಚಿ, ಜನರ ಶ್ರಮ ಮತ್ತು ಕಾಲದ ಕಥನಗಳು ಬೆರೆತಿದೆ. ❖

ಮಾರುಕಟ್ಟೆಗೆ ಬರಲು ಸಿದ್ಧವಾದ ಉಪ್ಪು

ಮೊದಲ ಓದು

ಇತಿಹಾಸ ಕಟ್ಟುವ ಭಾಷೆ



ಅಳವು ಅರಿಯದ ಭಾಷೆ
ಲೇ: ನಿತ್ಯಾನಂದ ಬಿ. ಶೆಟ್ಟಿ
ಪ್ರ: ಕನ್ನಡ ಸಂಘ ಕಾಂತಾವರ
ಸಂ: 9901863961

ಕಲಾ ಮಾಧ್ಯಮ ನಾಲ್ಕು ದಶಕಗಳಲ್ಲಿ ವಿಕಾಸ ಆದ ಬಗೆಯನ್ನು ಲೇಖಕ ನಿತ್ಯಾನಂದ ಬಿ. ಶೆಟ್ಟಿ 'ಮಾತಿನ ಮೊದಲು' ಟಿಪ್ಪಣಿಯಲ್ಲಿ ಅರ್ಥಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ. ಯಕ್ಷಗಾನ ತಮ್ಮ ಬಾಲ್ಯದಲ್ಲಿ ಉದ್ದೀಪಿಸುತ್ತಿತ್ತು. ಅದೇ ಯಕ್ಷಗಾನ ಈಗ ಉದ್ರೇಕಿಸುತ್ತಿದೆ ಎನ್ನುವ ಮೂಲಕ ಕರಾವಳಿಯ ಅದ್ಭುತ ಕಲೆ ಸಾಗುವ ದಾರಿಯನ್ನು ವಿಮರ್ಶೆಗೆ ಒಳಪಡಿಸಿದ್ದಾರೆ. ವರ್ತಮಾನಕ್ಕೂ ಕಲೆಯಲ್ಲಿ ಆದ ಪಲ್ಲಟಕ್ಕೂ ನಂಟಿದೆ ಎನ್ನುವ ಅರ್ಥ ಇಲ್ಲಿ ವಿಧಿತವಾಗುತ್ತದೆ.

ಅಲ್ಲಮಪ್ರಭುವಿನ 'ಅಳವು ಅರಿಯದ ಭಾಷೆ' ವಚನದ ಒಂದು ಸಾಲು ಕೃತಿಯ ಹೆಸರಾಗಿದೆ. ಹೆಸರಿಗೆ ತಕ್ಕಂತೆ ಭಾಷೆಗೆ ತನ್ನ ಸಾಮರ್ಥ್ಯದ ಅರಿವಿಲ್ಲ. ಅದು ಕಲೆ, ಸಾಹಿತ್ಯ, ಮೀಮಾಂಸೆ, ತತ್ವಜ್ಞಾನ, ಭಾಷೆ, ಇತಿಹಾಸವನ್ನು ಅನುಸಂಧಾನ ಮಾಡುವ ಜೊತೆಗೆ ಸಮಾಜವನ್ನು ಕಟ್ಟುವ ಸ್ವರೂಪವನ್ನು ವಿಶ್ಲೇಷಣಾತ್ಮಕವಾಗಿ ನೋಡಲಾಗಿದೆ. ಇಲ್ಲಿ ಯಕ್ಷಗಾನವನ್ನು ಪರಿಚಯಿಸುವ ಜೊತೆಗೆ, ಅದರ ಇತಿಹಾಸ ಬೆಳವಣಿಗೆಯ ಹಂತವನ್ನ 'ಕೇಳು ಜನಮೇಜಯನೇ', 'ಕಲೇತಿಹಾಸದ ಚಿತ್ರಸಂಪುಟ' ಮೊದಲಾದ ಲೇಖನಗಳಲ್ಲಿ ವಿವರಿಸಲಾಗಿದೆ.

ಸಂಶೋಧನಾತ್ಮಕ ದೃಷ್ಟಿಕೋನವನ್ನು ಇಲ್ಲಿನ ಲೇಖನಗಳು ಒಳಗೊಂಡಿವೆ. ದು. ಸರಸ್ವತಿ ಅವರ 'ಸಂವಾದದಲ್ಲಿ ನಂಬಿ', ಲಕ್ಷ್ಮೀಶ ತೋಳ್ಪಾಡಿ ಬರೆದ 'ನೋಯುವುದು ಕಷ್ಟ. ಅದು ಸರಳವಾದ ಮಾತಲ್ಲ', 'ಎನ್.ಎ.ಎಂ. ಇಸ್ಮಾಯಿಲ್ ಅವರ 'ಕೇಡಿನ ಭಾಷೆಯೇ ಆಡು ಭಾಷೆಯಾದಾಗ...', ಟಿ.ಎಸ್. ಸತ್ಯನಾಥ್ ಅವರ 'ಪರಿಧಿ ನೋಟದ ಮೂಲಕ ಕಟ್ಟಿದ ಸಾಮಾಜಿಕ ಇತಿಹಾಸ' ಮುಂತಾದ ಲೇಖನಗಳು ಕೃತಿಯ ನಾಲ್ಕನೆ ಭಾಗದಲ್ಲಿದೆ.

ಸ್ವವಿವರದೊಂದಿಗೆ ತಮ್ಮ ಲೇಖನವನ್ನು ಲೇಖಕ ಇಸ್ಮಾಯಿಲ್ ಆರಂಭಿಸುತ್ತಾರೆ. 'ಹಳ್ಳಿಯನ್ನು ತೊರೆದು ಹತ್ತಿರದ ದೊಡ್ಡ ಊರು ಮತ್ತು ಹಾಸನ ನಗರವನ್ನೇ ಸೇರಿದ ನಂತರವೂ 'ಮುಸ್ಲಿಂ' ಎಂಬ ಗುರುತು ಹೆಸರಿನಲ್ಲಿತ್ತೇ ಹೊರತು, ಅದೊಂದು ವಿಶಿಷ್ಟ ಗುರುತು ಎಂಬ ಅರಿವು ಮೂಡುವಂತ ಅನುಭವಗಳೇ ನನಗಿರಲಿಲ್ಲ...' ಎನ್ನುವ ಅಂಶವನ್ನು ದಾಖಲಿಸುತ್ತಾರೆ. ಆಮೇಲೆ 'ಅನ್ಯಮತೀಯ' ಎಂಬ ಮಾಧ್ಯಮ ಭಾಷೆಯನ್ನು ಪ್ರಸ್ತಾಪಿಸುವ ಮೂಲಕ ಸಮಾಜದಲ್ಲಿ ಭಾಷೆ ಬೆಳೆಯುತ್ತಿರುವ ಕೇಡಿನ ಸ್ವರೂಪವನ್ನು ತಿಳಿಸುತ್ತಾರೆ. ಮಹತ್ವದ ಆಶಯದಿಂದ ಚರಿತ್ರೆಯನ್ನು ದಾಖಲಿಸುವ ಮೂಲಕ ಅಕರ ಗ್ರಂಥವನ್ನು ನಿತ್ಯಾನಂದ ಬಿ. ಶೆಟ್ಟಿ ಕಟ್ಟಿಕೊಟ್ಟಿದ್ದಾರೆ.

ಪುಟ: 352 ₹600

ದೇವರು ದೈವ, ಬಂಧ ಸಂಬಂಧಗಳ ಕಥನ



ಚಂದ್ರಭಾಗಾ
ಲೇ: ಶ್ರೀನಿಧಿ ಕರಣಂ
ಪ್ರ: ಸಾಹಿತ್ಯ ಪ್ರಕಾಶನ
ಸಂ: 94481 10034

ಕಾಡಿನ ದೇವತೆಯೊಬ್ಬಳು, ಎರಡು ಪಂಗಡಗಳ ಅಹಂಕಾರದ ಭರದಲ್ಲಿ ನಾಡಿನ ದೇವತೆಯಾಗಿ ಬದಲಾಗುತ್ತಾಳೆ. ದೇವಿ ಆರಾಧನೆ ಶೈವ ಪರಂಪರೆಯಂತೆ ಆಗಬೇಕೆ, ವೈಷ್ಣವ ಪರಂಪರೆಯಂತಾಗಬೇಕೆ, ಸಾಂಪ್ರದಾಯಿಕವಾಗಿ ದೈವಾರಾಧನೆಯಂತಾಗಬೇಕೆ ಎಂಬ ಪ್ರಶ್ನೆಯೊಂದಿಗೆ ಆರಂಭವಾಗುವ ಈ ಕಾದಂಬರಿಯಲ್ಲಿ ದೇವನಷ್ಟೇ ಜೀವವೂ ಚರ್ಚೆಗೆ ಈಡಾಗುತ್ತದೆ.

ದೇವಿ ಆರಾಧನೆಯಷ್ಟೇ ಬಾಂಧವ್ಯಗಳೂ ನಿಕಷಕ್ಕೆ ಒಳಪಡುತ್ತವೆ. ಬಂಧಗಳು, ಪ್ರೀತಿ, ಪರಸ್ಪರ ಅವಲಂಬನೆ, ದಾಂಪತ್ಯ ಇವುಗಳೊಂದಿಗೆ ಹದವಾಗಿ ಇತಿಹಾಸ, ಪರಂಪರೆ, ಅಧ್ಯಾತ್ಮ ಮತ್ತು ಧರ್ಮವೂ ಜಿಜ್ಞಾಸೆಗೆ ಬರುತ್ತದೆ. ಕಥನ ನಿರೂಪಣೆಯಲ್ಲಿ ಸರಳ ತಂತ್ರವೂ, ನಿರೂಪಿಸುವಾಗ ಆಡುನುಡಿಯ ಮಾತುಗಳೂ ಆ ಕಾಲಕ್ಕೆ, ಆಯಾ ದೇಶಕ್ಕೆ ಕರೆದೊಯ್ಯುತ್ತವೆ.

ಪಂಢರಪುರದ ಬಳಿ ಚಂದ್ರನಂತೆ ತಿರುವು ಪಡೆಯುವ ಭೀಮೆಯ ಒಡಲಿನಲ್ಲಿ ಅದೆಷ್ಟು ರಹಸ್ಯಗಳು ಅಡಗಿವೆ ಎಂಬುದನ್ನು ಕತೆ ಹೇಳುತ್ತಲೇ ಬದುಕಿನ ಸೂತ್ರಗಳನ್ನೂ ಹೇಳುತ್ತ ಹೋಗುತ್ತಾರೆ. ಅಂತಿಮವಾಗಿ ಜೀವಕ್ಕೆ ಬೇಕಿರುವುದು ಅಂತಃಕರಣೆಯ ಬಾಂಧವ್ಯ. ದೈವಕ್ಕೆ ಬೇಕಿರುವುದು ಶ್ರದ್ಧೆ ಭಕುತಿಯ ನಂಬಿಗೆ. ಉಳಿದಂತೆ ಪ್ರಶ್ನೆಗಳೆಲ್ಲವೂ ನಮ್ಮಲ್ಲಿಯ ತರ್ಕಕ್ಕೆ ಸ್ಪಷ್ಟ ರೂಪಗಳನ್ನು ಕೊಡುತ್ತ ಹೋಗುತ್ತವೆ.

ಯುವ ಕಲಾವಿದ ದಂಪತಿ ತಮ್ಮ ಸಂಶೋಧನೆಗೆ ಸುತ್ತಾಡುತ್ತಲೇ, ಸಾಮಾನ್ಯ ಓದುಗನ ಪ್ರಶ್ನೆಗಳನ್ನು ಲೇಖಕರೊಂದಿಗೆ ಮುಖಾಮುಖಿಯಾಗಿಸುತ್ತ, ಕತೆಯ ವಿಸ್ತಾರವನ್ನು, ಕತೆಯ ರೂಹಾಗಿರುವ ನಿಗೂಢತನವನ್ನೂ ಉಳಿಸುತ್ತ ಹೋಗುತ್ತಾರೆ. ಬಿಡುವು ಮಾಡಿಕೊಂಡು, ಒಂದಷ್ಟು ಸಮಯವನ್ನು ಮೀಸಲಾಗಿರಿಸುವಂತೆ ಕೇಳುವ ಕಾದಂಬರಿ ಇದು. ನಂತರವೂ ಗುಂಗು ಉಳಿಸುವ ಪುಸ್ತಕವೂ ಹೌದು.

ಪುಟ: 448 ₹650

ವೈವಿಧ್ಯಮಯ ಲೇಖನಗಳು

ಕದಡಿದ ಕೊಳವು ತಿಳಿಯಾಗಿರಲು
ಲೇ: ಎನ್. ಸಂಧ್ಯಾರಾಣಿ
ಪ್ರ: ಅಂಕಿತ ಪುಸ್ತಕ
ಸಂ: 080 2661 7100

'ಕದಡಿದ ಕೊಳವು ತಿಳಿಯಾಗಿರಲು' ಕೃತಿಯು ಹಲವು ಲೇಖನಗಳ ಗುಚ್ಛವಾಗಿದ್ದು, ವಸ್ತುವಿಷಯ ವೈವಿಧ್ಯಮಯವಾಗಿದೆ. ಪುಸಕ್ತದಲ್ಲಿ ಸಿನಿಮಾ, ಪ್ರವಾಸ, ಸಾಹಿತ್ಯ ಹೀಗೆ ಬೇರೆ ಬೇರೆ ಜಗತ್ತಿನ ಅನಾವರಣವಿದೆ. ಲೇಖಕಿ ಸಂಧ್ಯಾರಾಣಿ ತಾನು ಕಂಡ ಜಗತ್ತನ್ನು ನಿರ್ಭಿಡೆಯಿಂದ ಹೇಳುತ್ತಾ, ಓದುಗರೊಳಗೆ ಹೊಸ ಹೊಳಹುಗಳನ್ನು ಅನಾಯಾಸವಾಗಿ ದಾಟಿಸುತ್ತಾರೆ ಎನ್ನುವುದೇ ವಿಶೇಷ

ಪುಸ್ತಕದ ಆರಂಭವೇ ಅಪರೂಪದ 'ಅಪ್ಪು'ವಿನ ಕುರಿತು. ಅಪ್ಪುವಿನ ಆನ್ ಸ್ಕ್ರೀನ್ ಪಾತ್ರಗಳು ಮತ್ತು ಅಪ್ಪುವಿನ ಆಫ್ ಸ್ಕ್ರೀನ್ ವ್ಯಕ್ತಿತ್ವವನ್ನು ಬಹಳ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಒಂದಿನಿತೂ ಉತ್ಪ್ರೇಕ್ಷೆ ಎನಿಸಿದ ಅವರ ಬರಹ ಮನಸ್ಸಿನಾಳಕ್ಕೆ ಇಳಿಯುತ್ತಾ ಹೋಗುತ್ತದೆ.

ದುರ್ಗಾ ಪೆಂಡಾಲ್ vs ಸೋನಾಗಚ್ಚಿ ಲೇಖನದಲ್ಲಿ ಲೈಂಗಿಕ ದಮನಿತರು ಎನ್ನುವ ಪದ ನಿರಾಕರಣೆಯ ಮೂಲಕವೇ ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಾ ಕೊನೆಯದಾಗಿ ಏನೇ ಹೇಳಿದರೂ ಭಾವಿಸುವಿಕೆಯೇನೋ ಎಂಬ ವಿಧೇಯತೆಯನ್ನು ತೋರಿಸುತ್ತಾರೆ. ಈ ಕಾರಣಕ್ಕೆ ಲೇಖಕಿ ಸಂಧ್ಯಾರಾಣಿ ಇಷ್ಟವಾಗುತ್ತಾರೆ.

ಸತ್ಯಜಿತ್ ರೇ ನಾಯಕಿಯರು ಎನ್ನುವ ಶೀರ್ಷಿಕೆಯ ಲೇಖನದಲ್ಲಿ ಮಹೋನ್ನತ ನಿರ್ದೇಶಕ ಸತ್ಯಜಿತ್ ರೇ ಸಿನಿಮಾಗಳ ನಾಯಕಿ ಪಾತ್ರಗಳ ಬಗ್ಗೆ ಗಹನವಾದ ವಿಶ್ಲೇಷಣೆ ಇದೆ. ಭಾರತದ ಮಹಾಕಾವ್ಯಗಳಲ್ಲಿ ಹೆಣ್ಣಿನ ಪ್ರತಿಭಟನೆಯ ಎರಡು ಮಾದರಿಗಳಿವೆ. ದ್ರೌಪದಿಯ ಜೋರುದನಿಯ ಪ್ರತಿಭಟನೆ ಒಂದೆಡೆಯಾದರೆ, ಸೌಮ್ಯ ಸೀತೆಯ ಮಂಜಿನಂಥ ಪ್ರತಿಭಟನೆ.. ಸತ್ಯಜಿತ್ ರೇ ಅವರ ನಾಯಕಿಯರು ಈ ಎರಡು ಪ್ರತಿಭಟನಾ ಮಾದರಿಗಳ ಸಹಜ ಮಿಳಿತವಾಗಿದ್ದಾರೆ ಎಂಬ ಹೊಸ ಹೊಳಹನ್ನ ಈ ಕೃತಿ ನೀಡುತ್ತದೆ.

ಇದು ಬಿಡಿಬರಹಗಳ ಗುಚ್ಛವಾದರೂ ಓದುಗರಿಗೆ ಇಡಿಯಾಗಿ ಹೊಸ ಹೊಳಹುಗಳನ್ನು ನೀಡುವ ಮೂಲಕ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ.

ಪುಟ: 192 ₹250

ಗಾಂಧಾರ ಬುದ್ಧನೊಂದಿಗೆ ಮುಖಾಮುಖಿ

• ಚಿತ್ರ–ಬರಹ: ಜೆ.ಬಾಲಕೃಷ್ಣ

ಅಮೆರಿಕದ ಸಾಂತಾ ಬಾರ್ಬರಾ ಕಲಾಸಂಗ್ರಹಾಲಯದಲ್ಲಿ ಹೆಜ್ಜೆ ಹಾಕಿದ ಲೇಖಕರು ಗಾಂಧಾರ ಬುದ್ಧನೊಡನೆ ಒಡನಾಡಿದ ಅನುಭವಕ್ಕೆ ಅಕ್ಷರ ರೂಪ ನೀಡಿದ್ದಾರೆ. ಗಾಂಧಾರ ಶಿಲ್ಪಕಲೆಯ ವೈಶಿಷ್ಟ್ಯವನ್ನು ವಿವರಿಸುವ ಅವರು ಅವುಗಳ ಆಸ್ವಾದನೆಯೇ ಒಂದು ವಿಶಿಷ್ಟ ಸೌಂದರ್ಯಾನುಭೂತಿ ಎಂದಿದ್ದಾರೆ...

ಪ್ರವಾಸ

ಅಮೆರಿಕದ ಪಶ್ಚಿಮ ಕರಾವಳಿಯ ಸಾಂತಾ ಬಾರ್ಬರಾ ನಗರದ ಪ್ರಶಾಂತ ಬೀದಿಗಳ ಮಧ್ಯೆ, ಬಿಳಿ ಗೋಡೆಗಳ ಶಾಂತ ಕಟ್ಟಡದೊಳಗೆ ಇರುವ ಸಾಂತಾ ಬಾರ್ಬರಾ ಕಲಾ ಸಂಗ್ರಹಾಲಯದಲ್ಲಿ ನಾನು ಗಾಂಧಾರ ಬುದ್ಧನನ್ನು ಮೊದಲ ಬಾರಿಗೆ ಭೇಟಿಯಾದೆ! ಕಲ್ಲಿನಲ್ಲಿದ್ದರೂ, ಅವನ ಮುಖದಲ್ಲಿ ಜೀವಂತವಾದ ಮೌನ ನೆಲೆಸಿತ್ತು. ಆ ಮೌನದೊಳಗೆ ಸಾವಿರಾರು ಮೈಲಿಗಳ ದೂರ, ಸಾವಿರಾರು ವರ್ಷಗಳ ಇತಿಹಾಸ ಮತ್ತು ಅನೇಕ ಸಂಸ್ಕೃತಿಗಳ ಹೆಜ್ಜೆ ಗುರುತುಗಳು ಇವೆ.

ಗೌತಮ ಬುದ್ಧ ಕ್ರಿಸ್ತಪೂರ್ವ ಆರರಿಂದ ನಾಲ್ಕನೇ ಶತಮಾನಗಳ ನಡುವೆ ಬದುಕಿದ್ದರೆಂದು ನಾವು ಊಹಿಸುತ್ತೇವೆ. ಆದರೆ ಅವರ ನಿರ್ವಾಣದ ನಂತರ ಹಲವು ಶತಮಾನಗಳವರೆಗೆ ಬುದ್ಧನನ್ನು ಮಾನವ ರೂಪದಲ್ಲಿ ಕೆತ್ತಲಾಗಲಿಲ್ಲ ಎಂಬುದು ವಿಚಿತ್ರ ಸತ್ಯ. ಸ್ತೂಪಗಳ ಮೇಲೆ ಪಾದಚಿಹ್ನೆ, ಕಮಲದ ಹೂ, ಬೋಧಿವೃಕ್ಷ...ಇವುಗಳ ಮೂಲಕವೇ ಬುದ್ಧನ ಸನ್ನಿಧಿಯನ್ನು ಸೂಚಿಸಲಾಗುತ್ತಿತ್ತು. ಮಾನವ ರೂಪವನ್ನು ತಪ್ಪಿಸಿಕೊಂಡ ಆ ಶೂನ್ಯತೆ, ಬಹುಶಃ, ನಿರ್ವಾಣದ ಅತೀತತೆಯನ್ನು ಸೂಚಿಸಿತೇನೋ!

ಆದರೆ ಕ್ರಿಸ್ತಶಕ ಮೊದಲ ಶತಮಾನದ ಹೊತ್ತಿಗೆ ಗಾಂಧಾರ ಮತ್ತು ಮಥುರಾದಲ್ಲಿ ಬುದ್ಧನನ್ನು ಮಾನವ ರೂಪದಲ್ಲಿ ಕೆತ್ತಲು ಪ್ರಾರಂಭವಾಯಿತು.ಅದು ಕೇವಲ ದೇಹದ ಪ್ರತಿರೂಪವಾಗಿರಲಿಲ್ಲ; ಅದು ಭಾವದ ರೂಪಕವಾಗಿತ್ತು. ಶಾಂತ ಮುಖ, ಆಳವಾದ ಕಣ್ಣುಗಳು, ಜಗ್ಗಿದ ಕಿವಿಗಳು—ರಾಜವೈಭವವನ್ನು ತ್ಯಜಿಸಿದ ಸ್ಮರಣೆ. ಹಣೆಯ ಮೇಲಿನ ಊರ್ಣ, ತಲೆಯ ಮೇಲಿನ ಉಷ್ಣೀಷ—ಜ್ಞಾನೋದಯದ ಚಿಹ್ನೆಗಳು. ಸರಳವಾದ ವಸ್ತ್ರಗಳ ಮಡಿಕೆಗಳಲ್ಲಿ ಗ್ರೀಕ್ ಶಿಲ್ಪಕಲೆಯ ಸ್ಪರ್ಶ ಕಂಡುಬರುತ್ತದೆ; ತಲೆಯ ಹಿಂದೆ ಪ್ರಭಾವಳಿ ಗ್ರೀಕೊ–ರೋಮನ್ ದೇವತೆಗಳ ನೆರಳನ್ನು ಹೊತ್ತು ನಿಂತಂತೆ ತೋರುತ್ತದೆ.

ಗಾಂಧಾರ ಪ್ರದೇಶವು ಕೇವಲ ಭೌಗೋಳಿಕ ಸ್ಥಳವಲ್ಲ; ಅದು ಸಂಸ್ಕೃತಿಗಳ ಸಂಗಮವಾಗಿತ್ತು. ಇಂದಿನ ಪಾಕಿಸ್ತಾನ–ಅಫ್ಘಾನಿಸ್ತಾನದ ಗಡಿಯ ಭಾಗಗಳಲ್ಲಿ ಹರಡಿಕೊಂಡಿದ್ದ ಈ ಪ್ರದೇಶ ‘ಸಿಲ್ಕ್ ರೋಡ್’ ವ್ಯಾಪಾರ ಮಾರ್ಗದ ಪ್ರಮುಖ ಹಂತವಾಗಿತ್ತು. ಅಲೆಕ್ಸಾಂಡರ್‌ನ ದಂಡಯಾತ್ರೆಯಿಂದ ಹಿಡಿದು ಕುಶಾನರ ಆಳ್ವಿಕೆಯವರೆಗೂ ಅನೇಕ ಸಾಮ್ರಾಜ್ಯಗಳ ಹೆಜ್ಜೆಗಳು ಇಲ್ಲಿ ಮೂಡಿವೆ. ಪ್ರತಿಯೊಂದು ಆಳ್ವಿಕೆಯೂ ತನ್ನ ಕಲ್ಪನೆ, ತನ್ನ ಕಲಾ ಭಾಷೆಯನ್ನು ಇಲ್ಲಿ ಬಿತ್ತಿತು. ಅದಕ್ಕಾಗಿಯೇ ಗಾಂಧಾರ ಬುದ್ಧನ ಮುಖದಲ್ಲಿ ಅಪೋಲೊನನ್ನು ನೆನಪಿಸುವ ಮುಖಚಹರೆ ಕಂಡುಬರುತ್ತದೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ವಜ್ರಪಾಣಿಯ ರೂಪದಲ್ಲಿ ಹೆರಾಕ್ಲೆಸ್‌ನ ಬಲಶಾಲಿ ಭಂಗಿ ಮೂಡುತ್ತದೆ.

ಈ ಸಮ್ಮಿಶ್ರಣ ಕೇವಲ ಆಕೃತಿಯ ಮಟ್ಟದಲ್ಲಿಲ್ಲ; ಅದು ಚಿಂತನೆಯ ಮಟ್ಟದಲ್ಲಿಯೂ ಇದೆ. ಪೂರ್ವದ ಆತ್ಮಸಾಧನೆಯ ಮೌನಕ್ಕೆ ಪಶ್ಚಿಮದ ಶರೀರಶಾಸ್ತ್ರದ ನಿಖರತೆ ಸೇರ್ಪಡೆಯಾಗಿದೆ. ಶಿಲ್ಪಿ ಕಲ್ಲನ್ನು ಕೆತ್ತಿದಾಗ, ಆತ ಕೇವಲ ದೇವರ ರೂಪವನ್ನು ರೂಪಿಸಲಿಲ್ಲ; ಎರಡು ಲೋಕಗಳ ಸಂವಾದವನ್ನು ಸ್ಥಾಪಿಸಿದ.

ಗಾಂಧಾರ ಬುದ್ಧನೆಂದಾಕ್ಷಣ ಮನಸ್ಸು ಅಫ್ಘಾನಿಸ್ತಾನದ ಬಾಮಿಯಾನ್ ಕಣಿವೆಗೆ ಹಾರುತ್ತದೆ. 2001ರಲ್ಲಿ ಧ್ವಂಸಗೊಂಡ ಆ ಮಹಾಕಾಯ ಬುದ್ಧ ಮೂರ್ತಿಗಳು ಈಗ ಕಲ್ಲಿನ ಧೂಳಾಗಿ ಉಳಿದಿರಬಹುದು, ಆದರೆ ಅವುಗಳ ಶೂನ್ಯ ಗುಹೆಗಳು ಇನ್ನೂ ಒಂದು ಮೌನದ ಪ್ರಶ್ನೆಯಾಗಿ ನಿಂತಿವೆ. ಕಲೆ ಮತ್ತು ಭಕ್ತಿ ನಾಶವಾಗಬಹುದೇ? ಅಥವಾ ಅವು ನೆನಪುಗಳ ರೂಪದಲ್ಲಿ ಮುಂದುವರಿಯುತ್ತವೆಯೇ?

ಗಾಂಧಾರದಲ್ಲಿ ಮಹಾಯಾನ ಬೌದ್ಧ ಧರ್ಮ ಪ್ರಮುಖವಾಗಿ ವಿಸ್ತಾರವಾಗಿ ಅರಳಿತ್ತು. ತಕ್ಷಿಲಾ, ಪುಷ್ಕಲಾವತಿ, ಸ್ವಾಟ್—ಇವುಗಳ ಅವಶೇಷಗಳು ಇನ್ನೂ ಆಧ್ಯಾತ್ಮಿಕ ಚಟುವಟಿಕೆಯ ಪ್ರತಿಧ್ವನಿಯನ್ನು ಹೊತ್ತಿವೆ. ಕುಶಾನರ ಅರಸ ಕಾನಿಷ್ಕನ ಕಾಲದಲ್ಲಿ ಬೌದ್ಧ ಧರ್ಮಕ್ಕೆ ದೊರೆತ ಪೋಷಣೆ ಗಾಂಧಾರ ಕಲೆಯ ಚಿಗುರುವಿಕೆಗೆ ನೆರವಾಯಿತು. ನಾಣ್ಯಗಳ ಮೇಲೆಯೇ ಬುದ್ಧನ ಚಿತ್ರ ಮೂಡಿದ್ದು ಆ ಪರಿವರ್ತನೆಯ ಚಿಹ್ನೆ.

ಇಂದು ದೆಹಲಿಯಿಂದ ಚಂಡೀಗಢ, ಕೋಲ್ಕತ್ತದವರೆಗಿನ ವಸ್ತುಸಂಗ್ರಹಾಲಯಗಳಲ್ಲಿ, ಹಾಗೆಯೇ ಜಗತ್ತಿನ ಅನೇಕ ಮ್ಯೂಸಿಯಂಗಳಲ್ಲಿ ಗಾಂಧಾರ ಶಿಲ್ಪಗಳು ಹರಡಿಕೊಂಡಿವೆ. ಅವು ಕೆಲವೊಮ್ಮೆ ವಲಸೆಯ ಕಥೆಯನ್ನು ಹೇಳುತ್ತವೆ; ಕೆಲವೊಮ್ಮೆ ಸಂಸ್ಕೃತಿಯ ವಿಸ್ತಾರದ ಕಥೆಯನ್ನು.

ಆದರೆ ಯಾವ ಮ್ಯೂಸಿಯಂನಲ್ಲೇ ನೋಡಿದರೂ, ಗಾಂಧಾರ ಬುದ್ಧನ ಮುಖದಲ್ಲಿ ಒಂದೇ ರೀತಿಯ ಶಾಂತಿ ಕಾಣಿಸುತ್ತದೆ. ಆ ಶಾಂತಿ ಕಾಲಾತೀತ. ಅದು ರಾಜಕೀಯ ಗಡಿಗಳನ್ನು ಮೀರುತ್ತದೆ, ಧರ್ಮಗಳ ಗಡಿಗಳನ್ನು ಮೀರುತ್ತದೆ.

ಗಾಂಧಾರ ಕಲೆ ನಮಗೆ ಕಲಿಸುವುದು ಏನೆಂದರೆ: ಸಂಸ್ಕೃತಿಗಳು ಒಂದನ್ನೊಂದು ಸ್ಪರ್ಶಿಸಿದಾಗ ಅವು ದುರ್ಬಲವಾಗುವುದಿಲ್ಲ; ಅವು ಹೊಸ ರೂಪಗಳಲ್ಲಿ ಪುನರ್ಜನ್ಮ ಪಡೆಯುತ್ತವೆ. ಕಲ್ಲಿನ ಮೂರ್ತಿಯಲ್ಲಿ ನಿಂತ ಬುದ್ಧನ ಮೌನವು ಇದೇ ಸಂದೇಶವನ್ನು ಹೊತ್ತಿದೆ: ಜ್ಞಾನವು ಗಡಿಗಳನ್ನು ತಿಳಿಯದು, ಸೌಂದರ್ಯವು ಮೂಲಗಳನ್ನು ಪ್ರಶ್ನಿಸದು, ಸಂವಾದವೇ ನಾಗರಿಕತೆಯ ನಿಜವಾದ ಆಕಾರ. ❖

ಧ್ಯಾನ ಬುದ್ಧ



ಸೆರಪಿಸ್ ಶಿಲ್ಪಕೃತಿ

ಶಿಲ್ಪಕಲೆಯಲ್ಲಿ ಮೂಡಿದ ಸಿದ್ಧಾರ್ಥ ಗೌತಮನ ಜನನ

ಧ್ಯಾನಮಗ್ನವಾಗಿ ನಿಂತಿರುವ ಬುದ್ಧ

ಶೇಗುಣಸಿ ದೇಹದಾನಿಗಳ ಗ್ರಾಮ!

ಊರ ಜನರ ಬದುಕಿನಲ್ಲಿ ಹೊಸ ಚಳವಳಿ ಆರಂಭಿಸಿದ ರಾಷ್ಟ್ರೀಯ ಬಸವ ದಳ

8ನೇ ಪುಟದಿಂದ...

‘ಮರಣಾನಂತರ ರಾಜ್ಯದ ವಿವಿಧ ವೈದ್ಯಕೀಯ ಕಾಲೇಜುಗಳಿಗೆ ಅಧ್ಯಯನಕ್ಕಾಗಿ ಈ ದೇಹಗಳನ್ನು ನೀಡಲಾಗುತ್ತದೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಇದು ದೊಡ್ಡ ನೆರವಾಗುತ್ತದೆ’ ಎಂದು ಡಾ. ಮಹಾಂತೇಶ ರಾಮಣ್ಣವರ ತಿಳಿಸಿದ್ದಾರೆ.

ದೇಹದಾನದ ಬಗ್ಗೆ ಜನರಲ್ಲಿ ಇದ್ದ ಅಂಜಿಕೆ, ಅಂಧಶ್ರದ್ಧೆಗಳನ್ನು ದೂರ ಮಾಡುವಲ್ಲಿ ಶೇಗುಣಸಿ ಗ್ರಾಮ ಮಾದರಿಯಾಗಿದೆ ಎಂದು ವಿರಕ್ತಮಠದ ಮಹಾಂತಪ್ರಭು ಸ್ವಾಮೀಜಿ ಹೇಳುತ್ತಾರೆ.

‘ಮರಣಾನಂತರವೂ ಸಮಾಜಕ್ಕೆ ಉಪಕಾರ ಮಾಡಬಹುದು ಎಂಬ ಅರಿವು ಜನರಲ್ಲಿ ಮೂಡುವುದು ಅತ್ಯಂತ ಮಹತ್ವದ ವಿಷಯ. ಶೇಗುಣಸಿಯ ಜನರು ಈ ದಾರಿಯಲ್ಲಿ ಮಾದರಿ ಆಗಿದ್ದಾರೆ’ ಎಂದು ಅವರು ಅಭಿಪ್ರಾಯಪಡುತ್ತಾರೆ.

ನೆಲದ ನಕ್ಷತ್ರಗಳು

ಇದುವರೆಗೆ ಶ್ರೀಶೈಲ ರಾಚಪ್ಪನವರ, ರಾಮಪ್ಪ ಹೊಸಪೇಟಿ, ಅಣ್ಣಪ್ಪ ಬಿ. ಪಾಟೀಲ, ರಾಚನಗೌಡ ಗೌಡಪ್ಪನವರ, ಶ್ರೀಶೈಲ ಬಿ. ಪಾಟೀಲ, ಅಪ್ಪಯ್ಯ ಕಲ್ಯಾಣಮಠ, ಕಸ್ತೂರಿ ಹೊಸಪೇಟಿ, ಅಡಿವೆವ್ವ ಬಾಳಿಕಾಯಿ, ಚನ್ನಬಸಪ್ಪ ಸಸಾಲಟ್ಟಿ, ಗುರುಸಿದ್ಧಯ್ಯ ವಸ್ತ್ರದ, ಪುಂಡಲಿಕ ಸಸಾಲಟ್ಟಿ, ಶರಣವ್ವ ಬಿ. ಪಾಟೀಲ, ಮಲ್ಲಪ್ಪ ಹೊಸಪೇಟಿ, ಬಾಬು ಸಿದ್ನಾಳ, ಗಂಗಪ್ಪ ಪಟ್ಟಣಶೆಟ್ಟಿ ಸೇರಿದಂತೆ ಹಲವರು ದೇಹದಾನ ಮಾಡಿ ಈ ಚಳವಳಿಗೆ ದಾರಿದೀಪವಾಗಿದ್ದಾರೆ.

ಈ ಜನರು ಇನ್ನು ಜೀವಂತವಾಗಿಲ್ಲದಿದ್ದರೂ, ಅವರ ದೇಹಗಳು ವೈದ್ಯಕೀಯ ವಿದ್ಯಾರ್ಥಿಗಳಿಗೆ ಪಾಠ ಕಲಿಸುತ್ತಿವೆ. ಅನೇಕ ವೈದ್ಯರು, ಶಸ್ತ್ರಚಿಕಿತ್ಸಕರು ಅವರ ದೇಹಗಳಿಂದಲೇ ತಮ್ಮ ಮೊದಲ ಪಾಠವನ್ನು ಕಲಿಯುತ್ತಿದ್ದಾರೆ.

ಅದರಲ್ಲೇ ಶೇಗುಣಸಿಯ ಜನರು ಹೆಮ್ಮೆಪಟ್ಟು ಹೇಳುತ್ತಾರೆ– ಮರಣವು ಅಂತ್ಯವಲ್ಲ; ಅದು ಮತ್ತೊಬ್ಬರ ಬದುಕಿಗೆ ಆರಂಭವಾಗಬಹುದು. ಹೀಗಾಗಿ ಈ ಗ್ರಾಮವನ್ನು ಜನರು ಗೌರವದಿಂದ ಕರೆಯುತ್ತಾರೆ, ‘ಶೇಗುಣಸಿ... ದೇಹದಾನಿಗಳ ಗ್ರಾಮ.’ ❖

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಗುರು	+	ಮಾಡಿ	+	ತಿ	=	
2	ಮರಿ	+	ಬಲೆ	+	ಶ	=	
3	ಹಾಜಿ	+	ನಲ್ಲೆ	+	ಸ	=	
4	ದಡಿ	+	ಬಾವು	+	ಹೂ	=	
5	ಜಾಡು	+	ಹುಗಿ	+	ಣ	=	

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಬೇಸಿಗೆ ಮಳೆ!

ಗುಂಡನಿಗೆ ಬೇಸಿಗೆ ರಜೆ ಆರಂಭವಾಗಿತ್ತು. ದಿನ ಕಳೆಯಲೆಂದು ತನ್ನ ಹಳೆಯ ಬಿಳಿ ಬಣ್ಣದ ಟಿಶರ್ಟ್ ಮತ್ತು ಟವಲ್‌ಗೆ ಬಣ್ಣ ಬಳಿಯಲು ನಿರ್ಧರಿಸಿದ. ತನ್ನ ಚೀಲದಿಂದ ಹಲವು ಬಣ್ಣಗಳನ್ನು ಆಯ್ಕೆ ಮಾಡಿಕೊಂಡು ಬಟ್ಟೆಯಲ್ಲಿ ಚಿತ್ತಾರ ಮೂಡಿಸಿದ. ಅದನ್ನು ಬಿಸಿಲಿಗೆ ಒಣ ಹಾಕಿದ. ಕೆಲ ಕ್ಷಣದಲ್ಲೇ ಆಕಾಶದಲ್ಲಿ ದಟ್ಟ ಕಾರ್ಮೋಡ ಕಾಣಿಸಿಕೊಂಡಿತು. ಏಕಾಏಕಿ ಸುರಿದ ಮಳೆಗೆ ಬಣ್ಣವೆಲ್ಲವೂ ನೀರಲ್ಲಿ ಕರಗಿ ಹೋಯಿತು. ಇದನ್ನು ಕಂಡ ಗುಂಡ ಅವಾಕ್ಕಾದ.

ಜಾಣಪದ ಆಟ

1. ಇಲ್ಲಿ ಕೊಟ್ಟಿರುವ ಎರಡಕ್ಷರಗಳಿಗೆ ಅಕ್ಷರ ಪಟ್ಟಿಯಿಂದ ಒಂದೊಂದು ಅಕ್ಷರ ಆರಿಸಿಕೊಂಡು ಹಿಂದೆ ತುಂಬಿದರೆ ಮೂರಕ್ಷರದ ಪದವಾಗುತ್ತದೆ.

ಅಕ್ಷರ ಪಟ್ಟಿ

ಜ	ತ	ಆ	ಪ
ಬೆ	ನೂ	ಜ	ಚೇ
ಕ	ವೇ	ಕೇ	ಚಿಂ
ಶು	ನಾ	ಜ	ಪಾ

1		ನ	ಕ
2		ನ	ಕ
3		ನ	ಕ
4		ನ	ಕ
5		ನ	ಕ
6		ನ	ಕ
7		ನ	ಕ
8		ನ	ಕ

1		ತ	ನ
2		ತ	ನ
3		ತ	ನ
4		ತ	ನ
5		ತ	ನ
6		ತ	ನ
7		ತ	ನ
8		ತ	ನ

2. ಇಲ್ಲಿ ಕೊಟ್ಟಿರುವ ‘ರಾಜ್ಯ’ ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ರಾ	ಜ್ಯ		
2	ರಾ	ಜ್ಯ		
3	ರಾ	ಜ್ಯ		
4	ರಾ	ಜ್ಯ		
5	ರಾ	ಜ್ಯ		

ಅಕ್ಷರ ಪಟ್ಟಿ

ರ	ಪಾ	ಭಾ	ಲ	ಸ್ತ್ರ
ಶಾ	ಸ	ತ್ರ	ಸೂ	ಭೆ

ಮೋಜಿನ ಇಂಗ್ಲಿಷ್

ಸ್ನೇಹಿತರ ಸವಾಲ್

ಇಲ್ಲಿ ಎಂಟು ಜನ ಸ್ನೇಹಿತರು ನಿಮಗೆ ಒಂದು ಸವಾಲು ಹಾಕಿದ್ದಾರೆ. ಅವರು ತಮ್ಮ ಹೆಸರಿನ ಕೊನೆಯಲ್ಲಿ ಬರುವ ಇಂಗ್ಲಿಷ್ ಶಬ್ದಗಳನ್ನು ಉಳಿಸಿಕೊಂಡು ಹಿಂದಿನ ಕೆಲವು ಅಕ್ಷರಗಳನ್ನು ಅಳಿಸಿ ಹಾಕಿದ್ದಾರೆ. ನೀವು ಆ ಅಕ್ಷರ ಕಂಡು ಹಿಡಿದು ತುಂಬಿದರೆ ಆ ಸ್ನೇಹಿತರ ಹೆಸರು ಪೂರ್ಣಗೊಳ್ಳುತ್ತದೆ. ಪ್ರಯತ್ನಿಸಿ

1		ANT
2		AND
3		OR
4		SAD
5		IN
6		HIT
7		YAK
8		JAY

ಬ್ರೇನ್‌ವ್ಹೀಟಾ ಆಟ

600ರ ಮೇಲಿನ ಹಾಗೂ 800ರ ಒಳಗಿನ ಒಂದು ಸಂಖ್ಯೆ ಇದೆ. ಆ ಸಂಖ್ಯೆ ಬರೆದು ತಲೆಕೆಳಗಾಗಿ ಓದಿದರೆ ಅದು ಒಂದು ಇಂಗ್ಲಿಷ್ ಪದವಾಗುತ್ತದೆ. ಆ ಪದ ಯಾವುದು?

ಉತ್ತರ:

ಹುಡುಕಾಟ

ಇಲ್ಲಿ ಕೊಟ್ಟಿರುವ ಪದಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಓರ್ವ ಹಾಸ್ಯ ಹಾಗೂ ನಾಯಕ ನಟನ ಬಿರುದನ್ನು ಹುಡುಕಿಕೊಡಿ.

1. ವಾನರಸೇನೆ
2. ಸವತಿಕಾಯಿ
3. ನೇರಸಂಬಂಧ
4. ಹೊಸಬೆಳಕು
5. ಜನಾಭಿಪ್ರಾಯ
6. ಆಯಕಟ್ಟಿನ
7. ಲೋಕಕಲ್ಯಾಣ

ಉತ್ತರ:

ವರ್ಡ್ ಗೇಮ್

ಇಲ್ಲಿರುವ ಎರಡು ಪದ ಹಾಗೂ ಒಂದು ಅಕ್ಷರ ಸೇರಿಸಿ ಒಂದು ಪದ ಮಾಡಿ.

NO + RED + W =

ಶಬ್ದಾಟ

ಇಲ್ಲಿ ಕೊಟ್ಟಿರುವ ಸಂಕ್ಷಿಪ್ತ ಅಕ್ಷರಗಳನ್ನು ಹಾಗೂ ಒಂದು ಪದದ ಅಕ್ಷರಗಳನ್ನು ಬಳಸಿಕೊಂಡು ಒಂದೇ ಪದ ಮಾಡು

ಪು.ತಿ.ನ. + ಸರ್ವ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಸಾಲದಬಡ್ಡಿ 2.ಸಬರಮತಿ 3.ಆದಿಮಾನವ 4.ಗಾಳಿಬೆಳಕು 5.ಕಾಗದಹೂವು

ಶಬ್ದಾಟ: ಆರಾಮದಾಯಕ

ಬ್ರೇನ್‌ವ್ಹೀಟಾ ಆಟ: Vivekananda

ತಾರ್ಕಿಕ ಗಣಿತ: 65(ಪ್ರತಿ ಎರಡು ಅಂಕಿಗಳ ವರ್ಗಗಳ ಮೊತ್ತ ಮೇಲಿನ ಸಂಖ್ಯೆಯಾಗಿದೆ)

ಜಾಣಪದ ಆಟ 1: 1.E, 2.G, 3.C, 4.F, 5.I, 6.D, 7.B, 8.H, 9.J, 10.A

ಜಾಣಪದ ಆಟ 2: 1.ಮುಖಭಂಗ 2.ಮುಖವಾಡ 3.ಮುಖಸ್ತುತಿ 4.ಮುಖಮುರಿ 5.ಮುಖಚರ್ಯೆ

ಮೋಜಿನ ಇಂಗ್ಲಿಷ್:

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಆಕಾಂಕ್ಷ ಹುನಕುಂಟಿ
ಸಿಂಧನೂರು

ಸಮನ್ವಿತ ಎಸ್.
ಮಂಡ್ಯ

ಯಶು
ಮಂಡ್ಯ

ಜಯಂತ್ ವಿ.
ಬೆಂಗಳೂರು

ಬೃಂದಾ
ಚಿಕ್ಕಮಗಳೂರು

ಅಕ್ಷರ ಎಂ.ಎಸ್.
ಮೈಸೂರು

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಚಿನ್ನಸ್ವಾಮಿಯಲ್ಲಿ ಕೊಹ್ಲಿ ಆಟ–ಪಾಠ

ಇಂಟ್ರಾ ಸ್ಕ್ವಾಡ್ ಪಂದ್ಯವಾಡಿದ ಆರ್‌ಸಿಬಿ • ಒಂದು ಕ್ಷಣವನ್ನೂ ವ್ಯರ್ಥ ಮಾಡದೆ ಅಭ್ಯಾಸ ಮಾಡಿ: ವಿರಾಟ್ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರಾಟ್ ಕೊಹ್ಲಿ ಎಂದರೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಧಾರಸ್ತಂಭ. ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡಲು ಆರಂಭಿಸಿದ ವರ್ಷದಿಂದಲೂ ವಿರಾಟ್ ಈ ತಂಡದಲ್ಲಿ ಇದ್ದಾರೆ. ಬ್ಯಾಟರ್, ನಾಯಕ ಮತ್ತು ಹೊಸ ಹುಡುಗರಿಗೆ ಮಾರ್ಗದರ್ಶಕನಾಗಿ ಅವರ ಪಾತ್ರ ಬಹಳ ಮುಖ್ಯವಾಗಿದೆ.

18 ವರ್ಷಗಳ ಸುದೀರ್ಘ ಕಾಯುವಿಕೆಯ ನಂತರ ಹೋದ ವರ್ಷ ಆರ್‌ಸಿಬಿಯು ಮೊದಲ ಸಲ ಐಪಿಎಲ್ ಟ್ರೋಫಿ ಗೆದ್ದಿತ್ತು. ಇದೀಗ ಆ ಕಿರೀಟವನ್ನು ಉಳಿಸಿಕೊಳ್ಳುವತ್ತ ಚಿತ್ತ ನೆಟ್ಟಿದೆ. ಅದಕ್ಕಾಗಿಯೇ ಯಾವುದೇ ಹಂತದಲ್ಲಿಯೂ ಹಿಡಿತ ಸಡಿಲಗೊಳಿಸದಂತೆ ನೋಡಿಕೊಳ್ಳುವ ಯೋಜನೆ ತಂಡದ್ದಾಗಿದೆ. ಅದಕ್ಕೆ ತಕ್ಕಂತೆ ಶನಿವಾರವೂ ತಂಡವು ಅಭ್ಯಾಸ ನಡೆಸಿತು. ಆಟಗಾರರು ನೆಟ್ಸ್ ಮತ್ತು ಫೀಲ್ಡಿಂಗ್ ಡ್ರಿಲ್ ಜೊತೆಗೆ 'ಇಂಟ್ರಾಸ್ಕ್ವಾಡ್' ಪಂದ್ಯವನ್ನೂ ಆಡಿದರು.

ಫಿಲ್ ಸಾಲ್ಟ್, ವಿರಾಟ್ ಕೊಹ್ಲಿ, ಜಿತೇಶ್ ಶರ್ಮಾ, ನಾಯಕ ರಜತ್ ಪಾಟೀದಾರ್ ಅವರು ಬ್ಯಾಟಿಂಗ್ ಮಾಡಿದರು. ಎಲ್ಲರೂ ಉತ್ತಮ ಲಯದಲ್ಲಿದ್ದರು. ಭುವನೇಶ್ವರ್ ಕುಮಾರ್ ಮತ್ತು ಎಡಗೈ ಬೌಲರ್ ಮಂಗೇಶ್ ಯಾದವ್ ಅವರ ಎಸೆತಗಳನ್ನು ಸಾಲ್ಟ್ ಮತ್ತು ಕೊಹ್ಲಿ ಎದುರಿಸಿದರು. ದೇವದತ್ತ ಪಡಿಕ್ಕಲ್ ಕೂಡ ತಮ್ಮ ಬ್ಯಾಟಿಂಗ್‌ಗೆ ಸಾಣೆ ಹಿಡಿದರು.

ವಿರಾಟ್ ಕಿವಿಮಾತು: ಅಭ್ಯಾಸಕ್ಕೂ ಮುನ್ನ ತಮ್ಮ ಸಹ ಆಟಗಾರರನ್ನು ಉದ್ದೇಶಿಸಿ ಮಾತನಾಡಿದ ವಿರಾಟ್, 'ಪೂರ್ವಭ್ಯಾಸದ ಸಂದರ್ಭದಲ್ಲಿ ಒಂದೇ ಒಂದು ನಿಮಿಷವನ್ನೂ ವ್ಯರ್ಥ ಮಾಡಬೇಡಿ. ಕಳೆದ ಎರಡ್ಮೂರು ಋತುಗಳಲ್ಲಿ ನಾವೆಲ್ಲರೂ ಬಹಳ ಕಠಿಣ ಪರಿಶ್ರಮಪಟ್ಟಿದ್ದೇವೆ. ಅದರ ಫಲ ಹೋದ ಋತುವಿನಲ್ಲಿ ಲಭಿಸಿತು. ಮುಂಬರುವ ಸವಾಲು ಮತ್ತಷ್ಟು ಕಠಿಣವಾಗುವುದು ಖಚಿತ. ಉಳಿದೆಲ್ಲ ತಂಡಗಳೂ ಮತ್ತಷ್ಟು ಬಲ ತುಂಬಿಕೊಂಡು ನಮ್ಮನ್ನು ಎದುರಿಸಲು ಬರಲಿವೆ. ಆದ್ದರಿಂದ ಪೂರ್ಣ ಸಾಮರ್ಥ್ಯವನ್ನು ಪಣಕ್ಕೊಡ್ಡಿ ತಾಲೀಮು ನಡೆಸಬೇಕು' ಎಂದು ಹೇಳಿದರು.

'ನೆಟ್ಸ್, ತಾಲೀಮುಗಳ ಸಂದರ್ಭದಲ್ಲಿ ಒಂದು ನಿಮಿಷವನ್ನು ವ್ಯರ್ಥಗೊಳಿಸಬಾರದು. ಶೇ 120ರಷ್ಟು ಸಾಮರ್ಥ್ಯವನ್ನು ಪಣಕಕ್ಕೊಡ್ಡಿದರೆ ಮುಂದಿನ ಎರಡೂವರೆ ತಿಂಗಳುಗಳಲ್ಲಿ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು' ಎಂದರು.

ಯಶ್ ದಯಾಳ್ ಗೈರು

ಆರ್‌ಸಿಬಿಯ ಬೌಲರ್ ಯಶ್ ದಯಾಳ್ ಅವರು ಶನಿವಾರವೂ ನೆಟ್ಸ್‌ನಲ್ಲಿ ಕಾಣಿಸಿಕೊಳ್ಳಲಿಲ್ಲ.

ತಂಡವು ಕಳೆದ ನಾಲ್ಕು ದಿನಗಳಿಂದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸುತ್ತಿದೆ. ಆದರೆ ಇದುವರೆಗೆ ಒಮ್ಮೆಯೂ ಯಶ್ ಅವರು ಅಭ್ಯಾಸ ಮಾಡಿಲ್ಲ. ಹೋದ ತಿಂಗಳು ನೋಯಿಡಾದಲ್ಲಿ ಯಶ್ ಅವರು ಮದುವೆಯಾಗಿದ್ದರು.

ಇದೇ 28ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಐಪಿಎಲ್ ಉದ್ಘಾಟನೆ ಪಂದ್ಯದಲ್ಲಿ ಆರ್‌ಸಿಬಿ ತಂಡವು ಸನ್‌ರೈಸರ್ಸ್ ಹೈದರಾಬಾದ್ ಎದುರು ಕಣಕ್ಕಿಳಿಯಲಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯ ಕೋಚ್ ಆ್ಯಂಡಿ ಫ್ಲವರ್, 'ಹರಾಜು ಪ್ರಕ್ರಿಯೆಯಲ್ಲಿ ನಾವು ಕೆಲವು ಆಸಕ್ತಿಕರವಾದ ಆಯ್ಕೆಗಳನ್ನು ಮಾಡಿಕೊಂಡಿದ್ದೇವೆ. ಅದರಿಂದಾಗಿ ನಮ್ಮ ತಂಡವು ಮತ್ತಷ್ಟು ಬಲಶಾಲಿಯಾಗಿದೆ. ಈಗಾಗಲೇ ತಂಡದಲ್ಲಿದ್ದು ನುರಿತ ಆಟಗಾರರೊಂದಿಗೆ ಹೊಸದಾಗಿ ಬರುವ ಕ್ರಿಕೆಟಿಗರ ಜೊತೆಗೆ ಸಮನ್ವಯ ಸಾಧಿಸುವುದು ಮುಖ್ಯ. ಈ ಸವಾಲನ್ನು ನಾವು ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದೇವೆ' ಎಂದರು.

'ಹೋದ ವರ್ಷಗಳಿಗೂ ಮತ್ತು ಈ ವರ್ಷಕ್ಕೂ ಒಂದು ವ್ಯತ್ಯಾಸವಿದೆ. ಈ ಸಲ ನಮ್ಮ ಜೆರ್ಸಿ ಮೇಲೆ ಸ್ಟಾರ್ (ಪ್ರಶಸ್ತಿ ವಿಜೇತರು) ಇದೆ. ಆ ಋತು ಮುಗಿದುಹೋಗಿದೆ. ಈಗ ಮುಂದೆ ಹೊಸ ಸವಾಲು ಇದೆ. ಅತ್ಯಂತ ರೋಚಕವಾಗುವ ಸಾಧ್ಯತೆಗಳಿರುವ ಋತು ಇದಾಗಬಹುದು' ಎಂದು ಫ್ಲವರ್ ಹೇಳಿದರು.

ಕಳೆದ ಹರಾಜು ಪ್ರಕ್ರಿಯೆಯಲ್ಲಿ ಆರ್‌ಸಿಬಿಯು ವೆಂಕಟೇಶ್ ಅಯ್ಯರ್, ಮಂಗೇಶ್ ಯಾದವ್, ಜೋರ್ಡಾನ್ ಕಾಕ್ಸ್, ವಿಕಿ ಜೈಸ್ವಾಲ್ ಮತ್ತು ಸಾತ್ವಿಕ್ ದೇಸ್ವಾಲ್ ಅವರನ್ನು ಸೇರಿಸಿಕೊಂಡಿದೆ.

ಈ ಸಂದರ್ಭದಲ್ಲಿ ಹಾಜರಿದ್ದ ವಿಕೆಟ್‌ಕೀಪರ್ ಜಿತೇಶ್ ಶರ್ಮಾ, 'ಪರಸ್ಪರ ಒಬ್ಬರನ್ನೊಬ್ಬರು ಭೇಟಿಯಾಗಲು ಎಲ್ಲರೂ ಉತ್ಸುಕರಾಗಿದ್ದೆವು. ಬ್ಯಾಟಿಂಗ್ ಅಭ್ಯಾಸಕ್ಕಾಗಿ ಹೆಚ್ಚು ಸಮಯ ಸಿಗುತ್ತಿದೆ. ಎಲ್ಲ ಕೋಚ್‌ಗಳೊಂದಿಗೆ ಭೇಟಿಯಾಗಲು ಅವಕಾಶ ಸಿಕ್ಕಿತು' ಎಂದು ಹೇಳಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿರಾಟ್ ಕೊಹ್ಲಿ ತಾಲೀಮು 'ಎಕ್ಸ್' ಚಿತ್ರ

ಕೆಕೆಆರ್ ತಂಡಕ್ಕೆ ಆಕಾಶ್ ದೀಪ್ ಅಲಭ್ಯ

ಕೋಲ್ಕತ್ತ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡದ ವೇಗಿ ಆಕಾಶ್ ದೀಪ್ ಅವರು ಕೆಳ ಬೆನ್ನು ನೋವಿನಿಂದಾಗಿ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಕಣಕ್ಕಿಳಿಯುತ್ತಿಲ್ಲ.

ಇದರಿಂದಾಗಿ ಕೋಲ್ಕತ್ತ ತಂಡಕ್ಕೆ ಮತ್ತೊಂದು ಆಘಾತ ಎದುರಾಗಿದೆ. ಏಕೆಂದರೆ ಈಗಾಗಲೇ ಇನ್ನೊಬ್ಬ ವೇಗಿ ಹರ್ಷಿತ್ ರಾಣಾ ಅವರೂ ಗಾಯದ ಸಮಸ್ಯೆಯಿಂದಾಗಿ ತಂಡಕ್ಕೆ ಲಭ್ಯವಾಗುತ್ತಿಲ್ಲ.

ಆಕಾಶ್ ದೀಪ್ ಅವರು ಜೂನ್‌ನಲ್ಲಿ ನಡೆಯಲಿರುವ ಅಫ್ಗಾನಿಸ್ತಾನ ಎದುರಿನ ಏಕೈಕ ಟೆಸ್ಟ್ ಪಂದ್ಯಕ್ಕೂ ಅಲಭ್ಯರಾಗುವ ಸಾಧ್ಯತೆ ಇದೆ.

'ಆಕಾಶ್ ದೀಪ್ ಅವರು ಕೆಳಬೆನ್ನುನೋವಿನಿಂದಾಗಿ ಬಳಲಿದ್ದಾರೆ. ಅವರು ಗುಣಮುಖರಾಗಲು 8 ರಿಂದ 12 ವಾರಗಳು ಬೇಕಾಗಬಹುದು. ಆದ್ದರಿಂದ ಅವರು ಐಪಿಎಲ್ ಟೂರ್ನಿಯಲ್ಲಿ ಆಡುವುದಿಲ್ಲ. ಅಫ್ಗಾನಿಸ್ತಾನ ವಿರುದ್ಧದ ಟೆಸ್ಟ್‌ನಲ್ಲಿಯೂ ಆಡುವುದು ಅನುಮಾನ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ. 29 ವರ್ಷದ ಆಕಾಶ್ ಅವರು ಈಚೆಗೆ ರಣಜಿ ಟ್ರೋಫಿ ಸೆಮಿಫೈನಲ್‌ನಲ್ಲಿ ಜಮ್ಮು ಮತ್ತು ಕಾಶ್ಮೀರ ಎದುರು ಆಡಿದ್ದರು. ಅದರ ನಂತರ ಅವರು ಕಣಕ್ಕಿಳಿದಿಲ್ಲ.

ರಾಷ್ಟ್ರೀಯ ಸೀನಿಯರ್ ಟೇಬಲ್ ಟೆನಿಸ್

ಮಾನವ್, ಯಶಸ್ವಿನಿಗೆ ಸಿಂಗಲ್ಸ್ ಕಿರೀಟ

ಇಂದೋರ್ (ಪಿಟಿಐ): ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರೊಮೋಷನ್ ಬೋರ್ಡ್ (ಪಿಎಸ್‌ಪಿಬಿ) ಅನ್ನು ಪ್ರತಿನಿಧಿಸಿದ ಮಾನವ್ ಠಕ್ಕರ್ ಮತ್ತು ಯಶಸ್ವಿನಿ ಘೋರ್ಪಡೆ ಅವರು ಇಲ್ಲಿ ನಡೆದ ರಾಷ್ಟ್ರೀಯ ಸೀನಿಯರ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ತಮ್ಮ ಮೊದಲ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದರು.

ಶನಿವಾರ ನಡೆದ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಅಗ್ರಶ್ರೇಯಾಂಕದ ಮಾನವ್ 4-1 (11-2, 11-4, 6-11, 11-9, 11-3) ರಿಂದ ರೈಲ್ವೆ ಸ್ಪೋರ್ಟ್ಸ್ ಪ್ರೊಮೋಷನ್ ಬೋರ್ಡ್‌ನ (ಆರ್‌ಎಸ್‌ಪಿಬಿ) ಜೀತ್ ಚಂದ್ರ ಅವರನ್ನು ಮಣಿಸಿದರು.

ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಸುತ್ತಿನ ರೋಚಕ ಹಣಾಹಣಿಯಲ್ಲಿ ಕನ್ನಡತಿ ಯಶಸ್ವಿನಿ 4-3 (11-6, 12-14, 11-5, 9-11, 13-11, 6-11, 11-8)ರಿಂದ ಪಿಎಸ್‌ಪಿಬಿಯ ಸಿಂಡ್ರೆಲಾ ದಾಸ್ ವಿರುದ್ಧ ಗೆಲುವು ದಾಖಲಿಸಿ, ಚಾಂಪಿಯನ್ ಆದರು. 21 ವರ್ಷದ ಯಶಸ್ವಿನಿ ಅವರು 16 ವರ್ಷದ ಸಿಂಡ್ರೆಲಾ ಅವರಿಂದ ಏಳು ಗೇಮ್‌ಗಳ ಕಠಿಣ ಸ್ಪರ್ಧೆಯನ್ನು ಎದುರಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಅಂಕುರ್ ಭಟ್ಟಾಚಾರ್ಜಿ (ಪಶ್ಚಿಮ ಬಂಗಾಳ) ಮತ್ತು ಸುಹಾನಾ ಸೈನಿ (ಹರಿಯಾಣ) ಜೋಡಿಯು ಚಾಂಪಿಯನ್ ಆಯಿತು. ಐದು ಗೇಮ್‌ಗಳ ರೋಚಕ ಹಣಾಹಣಿಯಲ್ಲಿ 3-2 (11-9, 11-7, 9-11, 13-15, 12-10) ಅಂತರದಿಂದ ಪಶ್ಚಿಮ ಬಂಗಾಳದ ಅನಿಕೇತ್ ಬೋಸ್ ಮತ್ತು ಸಂಪ್ರೀತಿ ರಾಯ್ ವಿರುದ್ಧ ಗೆಲುವು ದಾಖಲಿಸಿತು.

ದಿವ್ಯಾಂಶಿಗೆ ಗೌರವ: ಸೀನಿಯರ್ ನ್ಯಾಷನಲ್ಸ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಭರವಸೆಯ ಸ್ಪರ್ಧಿಗೆ ನೀಡಲಾಗುವ 'ಡಿ. ವಿಶ್ವ ಟ್ರೋಫಿ'ಯನ್ನು ದಿವ್ಯಾಂಶಿ ಭೌಮಿಕ್ ಅವರಿಗೆ ಪ್ರದಾನ ಮಾಡಲಾಯಿತು. ಅವರು ಕ್ವಾರ್ಟರ್ ಫೈನಲ್ ತಲುಪುವ ಹಾದಿಯಲ್ಲಿ ಹಾಲಿ ಚಾಂಪಿಯನ್ ದಿಯಾ ಚಿತಳೆ ಅವರಿಗೆ ಆಘಾತ ನೀಡಿ ಗಮನ ಸೆಳೆದಿದ್ದರು.

ಕಳೆದ ವರ್ಷ ಏಷ್ಯಾ ಯೂತ್ ಚಾಂಪಿಯನ್‌ಷಿಪ್‌ನಲ್ಲಿ 15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನಲ್ಲಿ ಚಿನ್ನ ಗೆದ್ದಿರುವ ದಿವ್ಯಾಂಶಿ ಅವರು ಐಟಿಟಿಎಫ್ ಯೂತ್ ವರ್ಲ್ಡ್ ಚಾಂಪಿಯನ್‌ಷಿಪ್‌ನ 19 ವರ್ಷದೊಳಗಿನ ವಿಭಾಗದಲ್ಲೂ ಚಾಂಪಿಯನ್ ಆಗಿದ್ದರು.

ಕೋಚ್ ಅನ್ಶುಮಾನ್ ರಾಯ್ ಜೊತೆಗೆ ಯಶಸ್ವಿನಿ ಘೋರ್ಪಡೆ

ಮಾನವ್ ಠಕ್ಕರ್

ಸೆಮಿಯಲ್ಲಿ ತನ್ವಿ, ಬರೂವಾಗೆ ನಿರಾಸೆ

ಆರ್ಲೀನ್ಸ್ ಮಾಸ್ಟರ್ಸ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿ

ಆರ್ಲೀನ್ಸ್ (ಫ್ರಾನ್ಸ್), (ಪಿಟಿಐ): ಭಾರತದ ಉದಯೋನ್ಮುಖ ತಾರೆಯರಾದ ತನ್ವಿ ಶರ್ಮಾ ಹಾಗೂ ಇಶಾರಾಣಿ ಬರೂವಾ ಅವರು ಆರ್ಲೀನ್ಸ್ ಮಾಸ್ಟರ್ಸ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶನಿವಾರ ಸೆಮಿಫೈನಲ್‌ನಲ್ಲಿ ಪರಾಭವಗೊಂಡರು.

ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತೆ ತನ್ವಿ ಮಹಿಳೆಯರ ಸಿಂಗಲ್ಸ್ ಪಂದ್ಯದಲ್ಲಿ 9-21, 16-21ರಿಂದ ಮಾಜಿ ವಿಶ್ವ ಚಾಂಪಿಯನ್ ನೊಜೊಮಿ ಒಕುಹರಾ ಅವರಿಗೆ ಶರಣಾದರು.

2016ರ ಒಲಿಂಪಿಕ್ ಕಂಚು ವಿಜೇತೆ, 31 ವರ್ಷದ ನೊಜೊಮಿ ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿ 3-0 ಮುನ್ನಡೆ ಸಾಧಿಸಿದರು. ತನ್ವಿ ಎಸಗುತ್ತಿದ್ದ ತಪ್ಪಿನ ಲಾಭ ಪಡೆದ ಜಪಾನ್ ಆಟಗಾರ್ತಿ ಮುನ್ನಡೆಯನ್ನು ಹಿಗ್ಗಿಸುತ್ತಾ ಸಾಗಿ, 12 ಅಂಕಗಳಿಂದ ಮೊದಲ ಗೇಮ್ ಅನ್ನು ತಮ್ಮದಾಗಿಸಿಕೊಂಡರು.

ಎರಡನೇ ಗೇಮ್‌ನಲ್ಲಿ ಭಾರತದ ಆಟಗಾರ್ತಿ ಕೊಂಚ ಪ್ರತಿರೋಧ ತೋರಿದರು. ಒಂದು ಹಂತದಲ್ಲಿ ಪಂದ್ಯವು 12-12ರಿಂದ ಸಮಬಲದ ಹೋರಾಟ ಕಂಡುಬಂತು. ಆದರೆ, ಅದೇ ಲಯವನ್ನು ಕಾಯ್ದುಕೊಳ್ಳಲು ತನ್ವಿ ವಿಫಲವಾದರು.

ಮತ್ತೊಂದು ಸೆಮಿಫೈನಲ್‌ನಲ್ಲಿ ಬರೂವಾ ಅವರು 12-21, 21-23ರಿಂದ ಥಾಯ್ಲೆಂಡ್‌ನ ಪಿಚಮನ್ ಒಪತ್ನಿಪತ್ ವಿರುದ್ಧ ಸೋತರು. ಮೊದಲ ಗೇಮ್ ಅನ್ನು ಸುಲಭವಾಗಿ ಗೆದ್ದುಕೊಂಡ ಪಿಚಮನ್ ಅವರು ಎರಡನೇ ಗೇಮ್ ಗೆಲ್ಲಲು ಬೆವರು ಹರಿಸಬೇಕಾಯಿತು. ಪಂದ್ಯ 52 ನಿಮಿಷಗಳವರೆಗೆ ಸಾಗಿತು.

ಭಾರತದ ತನ್ವಿ ಶರ್ಮಾ 'ಎಕ್ಸ್' ಚಿತ್ರ

ಜೂನ್‌ನಲ್ಲಿ ಭಾರತ ತಂಡ ಐರ್ಲೆಂಡ್ ಪ್ರವಾಸ

ನವದೆಹಲಿ (ಪಿಟಿಐ): ಭಾರತ ಪುರುಷರ ಕ್ರಿಕೆಟ್ ತಂಡವು ಜೂನ್‌ನಲ್ಲಿ ಐರ್ಲೆಂಡ್ ಪ್ರವಾಸ ಕೈಗೊಳ್ಳಲಿದ್ದು, ಅಲ್ಲಿ ಎರಡು ಪಂದ್ಯಗಳ ಟಿ20 ಸರಣಿಯನ್ನು ಆಡಲಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಶನಿವಾರ ತಿಳಿಸಿದೆ.

ಜುಲೈನಲ್ಲಿ ಭಾರತ ತಂಡವು ಸೀಮಿತ ಓವರ್‌ಗಳ ಸರಣಿಗಾಗಿ ಇಂಗ್ಲೆಂಡ್ ಪ್ರವಾಸ ಹಮ್ಮಿಕೊಂಡಿದ್ದು, ಅದಕ್ಕೂ ಮುನ್ನ ಐರ್ಲೆಂಡ್‌ಗೆ ತೆರಳಲಿದೆ. ಅಲ್ಲಿನ ಬೆಲ್‌ಫಾಸ್ಟ್ ಕ್ರೀಡಾಂಗಣದಲ್ಲಿ ಜೂನ್ 26 ಮತ್ತು 28ರಂದು ಪಂದ್ಯಗಳನ್ನು ಆಡಲಿದೆ.

'ಕಳೆದ 8 ವರ್ಷಗಳಲ್ಲಿ ಭಾರತ ತಂಡವು ಮೂರು ಬಾರಿ (2018, 2022 ಮತ್ತು 2023) ಐರ್ಲೆಂಡ್ ಪ್ರವಾಸ ಕೈಕೊಂಡಿದೆ. ಆದರೆ, 2007ರ ಬಳಿಕ ಇದೇ ಮೊದಲ ಬಾರಿಗೆ ಬೆಲ್‌ಫಾಸ್ಟ್ ಕ್ರೀಡಾಂಗಣದಲ್ಲಿ ಕಣಕ್ಕಿಳಿಯಲಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಮಾಹಿತಿ ನೀಡಿದ್ದಾರೆ.

ಐರ್ಲೆಂಡ್ ತಂಡದ ಅನುಭವಿ ಪಾಲ್ ಸ್ಟರ್ಲಿಂಗ್ ಅವರು ಈಚೆಗೆ ಟಿ20 ನಾಯಕತ್ವದಿಂದ ಕೆಳಗಿಳಿದಿದ್ದರು. 2028ರ ಟಿ20 ವಿಶ್ವಕಪ್‌ಗೆ ಅರ್ಹತೆ ಪಡೆದಿರುವ ಐರ್ಲೆಂಡ್, ಹೊಸ ತಂಡವನ್ನು ಕಟ್ಟುವ ಗುರಿಯನ್ನು ಹೊಂದಿದೆ. ಭಾರತ ವಿರುದ್ಧದ ಸರಣಿಯು ಅದಕ್ಕೆ ಮುನ್ನುಡಿಯಾಗಲಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಮುಕ್ತಾಯದ ಬೆನ್ನಲ್ಲೇ ಭಾರತ ತಂಡವು ತನ್ನ ತವರಿನಲ್ಲಿ ಅಫ್ಗಾನಿಸ್ತಾನ ಎದುರು ಒಂದು ಟೆಸ್ಟ್ ಮತ್ತು ಮೂರು ಪಂದ್ಯಗಳ ಏಕದಿನ ಸರಣಿಯನ್ನು ಆಡಲಿದೆ. ಈ ಸರಣಿಯು ಜೂನ್ 20ರಂದು ಕೊನೆಗೊಳ್ಳಲಿದೆ.

ಸಯ್ಯದ್ ಶಬೀರ್‌ಗೆ ಚಿನ್ನದ ಪದಕ

ತಿರುವನಂತಪುರ (ಪಿಟಿಐ): ಕರ್ನಾಟಕದ ಅಥ್ಲೀಟ್ ಸಯ್ಯದ್ ಶಬೀರ್ ಅವರು ಶನಿವಾರ ಆರಂಭವಾದ ಋತುವಿನ ಮೊದಲ ಇಂಡಿಯನ್ ಓಪನ್ ಅಥ್ಲೆಟಿಕ್ಸ್ ಕೂಟದಲ್ಲಿ ಚಿನ್ನದ ಸಾಧನೆ ಮಾಡಿದರು. ರಾಜ್ಯದ ವಿಜಯಕುಮಾರಿ ಜಿ.ಜೆ. ಕಂಚಿನ ಪದಕಕ್ಕೆ ಕೊರಳೊಡ್ಡಿದರು.

18 ವರ್ಷದೊಳಗಿನ ಪುರುಷರ 400 ಮೀಟರ್ ಓಟವನ್ನು 47.73 ಸೆಕೆಂಡ್‌ಗಳಲ್ಲಿ ಕ್ರಮಿಸಿದ ಸಯ್ಯದ್ ಅವರು ಚಾಂಪಿಯನ್ ಆದರು. ಮಹಾರಾಷ್ಟ್ರದ ಥಾನಿಷ್ ವಿಜಯ್ ಗದ್ದಂ (48.17ಸೆ) ಮತ್ತು ಎನ್‌ಸಿಒಇ ತಿರುವನಂತಪುರದ ಹರಿಹರಣ್ ಆರ್ (48.31ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಮಹಿಳೆಯರ 400 ಮೀಟರ್ ಓಟದಲ್ಲಿ ವಿಜಯಕುಮಾರಿ 53.55 ಸೆಕೆಂಡುಗಳಲ್ಲಿ ಗುರಿ ತಲುಪಿ ಮೂರನೇ ಸ್ಥಾನ ಗಳಿಸಿದರು. ಈ ಸ್ಪರ್ಧೆಯಲ್ಲಿ ತಮಿಳುನಾಡಿನ ವಿದ್ಯಾ ರಾಮರಾಜ್ (53.31ಸೆ) ಚಿನ್ನ ಗೆದ್ದರೆ, ಜೆಎಸ್‌ಡಬ್ಲ್ಯುನ ರಶ್‌ದೀಪ್ ಕೌರ್ ಬೆಳ್ಳಿ ಪದಕ ಜಯಿಸಿದರು.

ಪುರುಷರ ವಿಭಾಗದಲ್ಲಿ ತಮಿಳುನಾಡಿನ ರಾಜೇಶ್ ರಮೇಶ್ (45.26ಸೆ) ಚಾಂಪಿಯನ್ ಆದರು. ಎನ್‌ಸಿಒಇ ತಿರುವನಂತಪುರದ ಮನು ಟಿ.ಎಸ್ (45.96ಸೆ) ಬೆಳ್ಳಿ, ದೆಹಲಿಯ ಅಮೋಜ್ ಜೇಕಬ್ (45.99ಸೆ) ಕಂಚಿನ ಪದಕ ಗೆದ್ದರು.

ಇಂಡಿಯನ್ ಸೂಪರ್ ಲೀಗ್: ಗೆಲುವಿನತ್ತ ಸುನಿಲ್ ಚೆಟ್ರಿ ಪಡೆಯ ಚಿತ್ತ

ಬಿಎಫ್‌ಸಿಗೆ ಇಂಟರ್ ಕಾಶಿ ಸವಾಲು

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಕಳೆದ ಎರಡು ಪಂದ್ಯಗಳಲ್ಲಿ ಅಜೇಯವಾಗಿರುವ ಹಾಲಿ ರನ್ನರ್ಸ್ ಅಪ್ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಭಾನುವಾರ ನಡೆಯಲಿರುವ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಪಂದ್ಯದಲ್ಲಿ ಇಂಟರ್ ಕಾಶಿ ತಂಡವನ್ನು ಎದುರಿಸಲಿದೆ.

ಕೋಲ್ಕತ್ತದ ಕಿಶೋರ್ ಭಾರತಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು, ಸುನಿಲ್ ಚೆಟ್ರಿ ಬಳಗವು ತವರಿನಾಚೆ ಗೆಲುವಿನ ಓಟವನ್ನು ಮುಂದುವರಿಸುವ ಛಲದಲ್ಲಿದೆ. ಮತ್ತೊಂದೆಡೆ ಇಂಟರ್ ಕಾಶಿ ತಂಡವು ತವರಿನಲ್ಲಿ ಜಯದ ಹಳಿಗೆ ಮರಳುವ ಪ್ರಯತ್ನ ನಡೆಸಲಿದೆ.

ಬೆಂಗಳೂರು ಎಫ್‌ಸಿ ತಂಡವು ತನ್ನ ಕೊನೆಯ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡದ ನಾಲ್ಕು ಪಂದ್ಯಗಳ ಗೆಲುವಿನ ಓಟಕ್ಕೆ ತಡೆಯೊಡ್ಡಿತ್ತು. ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಆ ಪಂದ್ಯವು ಗೋಲುರಹಿತವಾಗಿ ಡ್ರಾ ಆಗಿತ್ತು. ಆ ಹಣಾಹಣಿಯಲ್ಲಿ ಉತ್ತಮ ಪ್ರದರ್ಶನ ತೋರಿದ 'ಬ್ಲೂಸ್' ಪಡೆ ಆತ್ಮವಿಶ್ವಾಸ ವೃದ್ಧಿಸಿಕೊಂಡಿದೆ.

ಐಎಸ್‌ಎಲ್‌ನಲ್ಲಿ ಮೊದಲ ಬಾರಿ ಕಣಕ್ಕಿಳಿದಿರುವ ಇಂಟರ್ ಕಾಶಿ ತಂಡವು ಕಳೆದ ವಾರ ಬಲಿಷ್ಠ ಮುಂಬೈ ಸಿಟಿ ತಂಡಕ್ಕೆ ಪ್ರಬಲ ಪೈಪೋಟಿ ನೀಡಿ 1-2ರಿಂದ ಸೋತಿತ್ತು. ಅದಕ್ಕೂ ಮುನ್ನ ಕೇರಳ ಬ್ಲಾಸ್ಟರ್ ತಂಡವನ್ನು 2-1ರಿಂದ ಮಣಿಸಿ ಅಚ್ಚರಿ ಮೂಡಿಸಿತ್ತು.

ಹಾಲಿ ಆವೃತ್ತಿಯಲ್ಲಿ ಬಿಎಫ್‌ಸಿ ತಂಡವು ಆಡಿರುವ ಐದು ಪಂದ್ಯಗಳ ಪೈಕಿ (2 ಗೆಲುವು, 2 ಡ್ರಾ, 1 ಸೋಲು) 8 ಅಂಕಗಳೊಂದಿಗೆ 14 ತಂಡಗಳಿರುವ ಲೀಗ್ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿದೆ. ಇಂಟರ್ ಕಾಶಿ ತಂಡವು ಐದು ಪಂದ್ಯಗಳಲ್ಲಿ (1 ಗೆಲುವು, 2 ಡ್ರಾ, 2 ಸೋಲು) 5 ಅಂಕ ಸಂಪಾದಿಸಿ ಒಂಬತ್ತನೇ ಸ್ಥಾನದಲ್ಲಿದೆ.

'ಇಂಟರ್ ಕಾಶಿ ತಂಡವು ಪೂರ್ಣ ಶಕ್ತಿಯೊಂದಿಗೆ ಕಣಕ್ಕಿಳಿಯುವ ನಿರೀಕ್ಷೆಯಿದೆ. ಗೋವಾ ಮತ್ತು ಮುಂಬೈ ವಿರುದ್ಧ ಕಠಿಣ ಹೋರಾಟ ನಡೆಸಿದ್ದನ್ನು ನೋಡಿದ್ದೇವೆ. ಆ ತಂಡವನ್ನು ಲಘುವಾಗಿ ಪರಿಗಣಿಸುವಂತಿಲ್ಲ. ನಾವೂ ಸವಾಲಿಗೆ ಸಜ್ಜಾಗಿದ್ದೇವೆ' ಎಂದು ಬಿಎಫ್‌ಸಿ ಕೋಚ್ ರೆನೆಡಿ ಸಿಂಗ್ ಹೇಳಿದ್ದಾರೆ.

ಇಂಟರ್ ಕಾಶಿ ತಂಡಕ್ಕೆ ಐಎಸ್‌ಎಲ್ ಹೊಸತಾದರೂ ಅದರ ಕೋಚ್ ಆಂಟೋನಿಯೊ ಲೋಪೆಜ್ ಹಬಾಸ್ ಅವರಿಗೆ ಹೊಸದಲ್ಲ. ಎಟಿಕೆ ಫುಟ್‌ಬಾಲ್ ಕ್ಲಬ್, ಪುಣೆ ಸಿಟಿ, ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡಗಳೊಂದಿಗೆ ಕೆಲಸ ಮಾಡಿದ ಅನುಭವ ಅವರಿಗಿದೆ.

ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡದ ಡಿಫೆಂಡರ್ ರಿಕ್ಕಿ ಮೀಟಿ ಅಭ್ಯಾಸ

ಇಂದಿನ ಪಂದ್ಯ

ಇಂಟರ್ ಕಾಶಿ V/s ಬೆಂಗಳೂರು ಎಫ್‌ಸಿ

ಕೋಲ್ಕತ್ತ: ರಾತ್ರಿ 7.30

ಲೈವ್: ಸೋನಿ ಸ್ಪೋರ್ಟ್ಸ್ ಟೆನ್ 2, ಫ್ಯಾನ್ ಕೋಡ್ ಆ್ಯಪ್

ಸ್ನೇಹಾ ಕೊಲ್ಲೇರಿಗೆ 3 ವರ್ಷ ನಿಷೇಧ

ನವದೆಹಲಿ (ಪಿಟಿಐ): ಭಾರತದ ಅಥ್ಲೀಟ್ ಸ್ನೇಹಾ ಕೊಲ್ಲೇರಿ ಅವರು ಹೋದ ವರ್ಷ ನಡೆಸಿದ್ದ ಉದ್ದೀಪನ ಮದ್ದು ಸೇವನೆ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಾರೆ. ಅದ್ದರಿಂದ ಅವರ ಮೇಲೆ 3 ವರ್ಷಗಳ ನಿಷೇಧ ಹೇರಲಾಗಿದ್ದು, ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುವ ತಂಡದಿಂದ ಕೈಬಿಡಲಾಗಿದೆ.

ಚಂಡೀಗಢದಲ್ಲಿ ಈ ಹಿಂದೆ ಅವರಿಂದ ಪರೀಕ್ಷೆಗಾಗಿ ಮಾದರಿಯನ್ನು ಸಂಗ್ರಹಿಸಲಾಗಿತ್ತು. ದೆಹಲಿಯಲ್ಲಿ ಮಾಡಿದ್ದ ಪರೀಕ್ಷೆಯಲ್ಲಿ ನೆಗೆಟಿವ್ ಎಂದು ಬಂದಿತ್ತು. ಆದರೆ ನಂತರದ ಮತ್ತೊಂದು ಟೆಸ್ಟ್‌ನಲ್ಲಿ ಅನಾಬೊಲಿಕ್ ಸ್ಟೆರಾಯ್ಡ್ ಸ್ಟಾನೊಝೊಲೊಲ್ ಸೇವನೆಯು ದೃಢಪಟ್ಟಿತ್ತು. ಅದಕ್ಕಾಗಿ ಅವರನ್ನು ತಾತ್ಕಾಲಿಕವಾಗಿ ಅಮಾನತು ಮಾಡಲಾಗಿತ್ತು.

ಕಲಬೆರಕೆಯಾದ ಶಕ್ತಿವರ್ಧಕ ಪೇಯ ಸೇವಿಸಿದ್ದರಿಂದ ಈ ರೀತಿಯ ಫಲಿತಾಂಶ ಬಂದಿದೆ ಎಂದು ಸ್ನೇಹಾ ಅವರು ನೀಡಿದ್ದ ಸ್ಪಷ್ಟನೆಯನ್ನು ಅಥ್ಲೆಟಿಕ್ಸ್ ಇಂಟಿಗ್ರಿಟಿ ಯೂನಿಟ್ (ಎಐಯು) ತಳ್ಳಿಹಾಕಿತ್ತು.

ಕೊಚ್ಚಿಯ 26 ವರ್ಷದ ಸ್ನೇಹಾ ಅವರ ಮಾದರಿಯನ್ನು 2025ರ ಮೇ 10ರಂದು ಗುವಾಂಗ್ಝುವಿನಲ್ಲಿ ಸಂಗ್ರಹಿಸಲಾಗಿತ್ತು. ಸಾಲು ಸಾಲು ಪರೀಕ್ಷೆಗಳ ನಂತರವೂ ನೆಗೆಟಿವ್ ಎಂದು ತೋರಿಸಿದ್ದರಿಂದ ಭಾರತದಲ್ಲಿ ಪರಿಶೀಲನೆ ಮಾಡಲಾಯಿತು. ಅದರಲ್ಲಿ ನಿಷೇಧಿತ ಮದ್ದು ಸ್ಟಾನೊಝೊಲೊಲ್ ಇರುವುದು ದೃಢಪಟ್ಟಿತು.

ತುಮಕೂರಿನಲ್ಲಿ ಮೇ 4ರಿಂದ ಐಟಿಎಫ್ ಮಹಿಳಾ ಟೆನಿಸ್ ಟೂರ್ನಿ

ಬೆಂಗಳೂರು: ತುಮಕೂರಿನಲ್ಲಿ ಚೊಚ್ಚಲ ಆವೃತ್ತಿಯ ಐಟಿಎಫ್ ಡಬ್ಲ್ಯು35 ಮಹಿಳಾ ಟೆನಿಸ್ ಟೂರ್ನಿಯು ಮೇ 4ರಿಂದ 10ರವರೆಗೆ ನಡೆಯಲಿದೆ. ತುಮಕೂರು ವಿಶ್ವವಿದ್ಯಾಲಯದ ಆವರಣದಲ್ಲಿರುವ ಜಿಲ್ಲಾ ಟೆನಿಸ್ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ.

₹28 ಲಕ್ಷ ಬಹುಮಾನ ಮೊತ್ತದ ಟೂರ್ನಿಯಲ್ಲಿ ವಿವಿಧ ದೇಶಗಳ ಉದಯೋನ್ಮುಖ ಆಟಗಾರ್ತಿಯರು ಹಾಗೂ ಭಾರತದ ಅಗ್ರ ಆಟಗಾರ್ತಿಯರು ಕಣಕ್ಕಿಳಿಯಲಿದ್ದಾರೆ. ಈ ಟೂರ್ನಿಯು ಕರ್ನಾಟಕದಲ್ಲಿ ಬೆಳೆಯುತ್ತಿರುವ ಟೆನಿಸ್ ವಲಯಕ್ಕೆ ಮತ್ತಷ್ಟು ಇಂಬು ನೀಡಲಿದೆ.

ತುಮಕೂರಿನಲ್ಲಿ ಒಟ್ಟಾರೆ ಎರಡನೇ ಬಾರಿಗೆ ಅಂತರರಾಷ್ಟ್ರೀಯ ಮಟ್ಟದ ಟೆನಿಸ್ ಟೂರ್ನಿ ಆಯೋಜನೆಗೊಳ್ಳುತ್ತಿದೆ. 2003ರಲ್ಲಿ ತುಮಕೂರು ಓಪನ್ ಎಟಿಪಿ ಚಾಲೆಂಜರ್ ಟೂರ್ನಿ ನಡೆದಿತ್ತು. ಭಾರತದ ದಿಗ್ಗಜ ಆಟಗಾರ ರೋಹನ್ ಬೋಪಣ್ಣ ಹಾಗೂ ಪ್ರಕಾಶ್ ಅಮೃತರಾಜ್ ಅವರು ಕಣಕ್ಕಿಳಿದಿದ್ದರು. ಜರ್ಮನಿಯ ಫಿಲಿಪ್ ಕೋಲ್‌ಶ್ರೈಬರ್ ಅವರು ಪ್ರಶಸ್ತಿ ಗೆದ್ದಿದ್ದರು.

ಎಎಫ್‌ಸಿ ಮಹಿಳಾ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿ: ಆಸ್ಟ್ರೇಲಿಯಾ ತಂಡಕ್ಕೆ ನಿರಾಸೆ

ಜಪಾನ್ ವನಿತೆಯರಿಗೆ ಪ್ರಶಸ್ತಿ

ಸಿಡ್ನಿ (ಎಎಫ್‌ಪಿ): ಮೈಕಾ ಹಮಾನೊ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಜಪಾನ್ ಮಹಿಳೆಯರ ಫುಟ್‌ಬಾಲ್ ತಂಡವು ಶನಿವಾರ ಆಸ್ಟ್ರೇಲಿಯಾ ತಂಡವನ್ನು 1-0ಯಿಂದ ಮಣಿಸಿ ಮೂರನೇ ಬಾರಿ ಎಎಫ್‌ಸಿ ಏಷ್ಯನ್ ಕಪ್ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಸಿಡ್ನಿಯ ಕ್ರೀಡಾಂಗಣದಲ್ಲಿ 'ಟೊಟೆನ್‌ಹ್ಯಾಮ್' ತಾರೆ ಮೈಕಾ ಅವರು 17ನೇ ನಿಮಿಷದಲ್ಲಿ ಅದ್ಭುತವಾಗಿ ಕಾಲ್ಚಳಕ ತೋರಿ ಚೆಂಡನ್ನು ಗೋಲು ಪೆಟ್ಟಿಗೆಗೆ ಸೇರಿಸಿದರು. ಈ ಗೋಲು ಗೆಲುವಿಗೆ ನಿರ್ಣಾಯಕವಾಯಿತು.

ಈ ಸೋಲಿನೊಂದಿಗೆ ತವರಿನಲ್ಲಿ ಎರಡನೇ ಬಾರಿ ಚಾಂಪಿಯನ್ ಆಗುವ ಆಸ್ಟ್ರೇಲಿಯಾ ತಂಡದ ಕನಸು ಭಗ್ನವಾಯಿತು. ಅಲ್ಲದೆ, ದಾಖಲೆಯ ಸಂಖ್ಯೆಯಲ್ಲಿ ಸೇರಿದ್ದ ಆತಿಥೇಯ ತಂಡದ ಅಭಿಮಾನಿಗಳಿಗೂ ಭಾರೀ ನಿರಾಸೆಯಾಯಿತು.

ಜಪಾನ್ ತಂಡವು 2014 ಮತ್ತು 2018ರ ಆವೃತ್ತಿಗಳ ಫೈನಲ್‌ಗಳಲ್ಲಿ ಆಸ್ಟ್ರೇಲಿಯಾ ತಂಡವನ್ನೇ ಸೋಲಿಸಿ ಪ್ರಶಸ್ತಿ ಗೆದ್ದಿತ್ತು. ಈ ಪಂದ್ಯಗಳಲ್ಲೂ ಇಷ್ಟೇ ಗೋಲು ಅಂತರದಿಂದ (1-0) ಜಯ ಗಳಿಸಿತ್ತು.

ಫೈನಲ್ ಪಂದ್ಯಕ್ಕೆ 3.50 ಲಕ್ಷ ಮಂದಿ ಸಾಕ್ಷಿಯಾದರು. ಟೂರ್ನಿಯ ಇತಿಹಾಸದಲ್ಲಿ ಒಂದೇ ಪಂದ್ಯಕ್ಕೆ ಇಷ್ಟು ಪ್ರೇಕ್ಷಕರು ಸೇರಿದ್ದು ದಾಖಲೆಯಾಗಿದೆ. 2010ರಲ್ಲಿ ಚೀನಾದಲ್ಲಿ ನಡೆದಿದ್ದ ಪಂದ್ಯದಲ್ಲಿ 74,397 ಪ್ರೇಕ್ಷಕರು ಸೇರಿದ್ದು ಈವರೆಗಿನ ದಾಖಲೆಯಾಗಿತ್ತು. ಈ ಬಾರಿ ಅದಕ್ಕಿಂತ ಆರು ಪಟ್ಟು ಹೆಚ್ಚು ಮಂದಿ ಜಮಾಯಿಸಿದ್ದರು.

ಈ ಟೂರ್ನಿಯ ಮೂಲಕ ಆರು ತಂಡಗಳು ಮುಂದಿನ ವರ್ಷ ಬ್ರೆಜಿಲ್‌ನಲ್ಲಿ ನಡೆಯಲಿರುವ ವಿಶ್ವಕಪ್‌ಗೆ ರಹದಾರಿ ಪಡೆದುಕೊಂಡವು. ಆಸ್ಟ್ರೇಲಿಯಾ, ಜಪಾನ್, ದಕ್ಷಿಣ ಕೊರಿಯಾ, ಚೀನಾ, ಉತ್ತರ ಕೊರಿಯಾ ಮತ್ತು ಫಿಲಿಪ್ಪಿನ್ಸ್ ಅರ್ಹತೆ ಪಡೆದ ತಂಡಗಳು.

12 ತಂಡಗಳಿದ್ದ ಟೂರ್ನಿಯಲ್ಲಿ ಭಾರತವು ಗುಂಪು ಹಂತದಲ್ಲೇ ಹೊರಬಿದ್ದಿದೆ. ಸಿ ಗುಂಪಿನಲ್ಲಿ ಆಡಿದ ಮೂರೂ ಪಂದ್ಯಗಳಲ್ಲಿ ಸೋತು ನಿರಾಸೆ ಅನುಭವಿಸಿದೆ.

ಗೆಲುವಿನ ಸಂಭ್ರಮದಲ್ಲಿ ಜಪಾನ್ ತಂಡದ ಆಟಗಾರ್ತಿಯರು ಎಎಫ್‌ಪಿ ಚಿತ್ರ

ಫೈನಲ್‌ಗೆ ಅನಾಹತ್

ಮುಂಬೈ (ಪಿಟಿಐ): ಅಗ್ರ ಶ್ರೇಯಾಂಕದ ಆಟಗಾರ್ತಿ, ಭಾರತದ ಅನಾಹತ್ ಸಿಂಗ್ ಅವರು ಇಂಡಿಯನ್ ಓಪನ್ ಸ್ಕ್ವಾಷ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಶನಿವಾರ ಫೈನಲ್ ಪ್ರವೇಶಿಸಿದರು.

ಪುರುಷರ ವಿಭಾಗದಲ್ಲಿ ಎರಡನೇ ಶ್ರೇಯಾಂಕದ ಆಟಗಾರ ಅಭಯ್ ಸಿಂಗ್ ಹಾಗೂ ನಾಲ್ಕನೇ ಶ್ರೇಯಾಂಕದ ಆಟಗಾರ ವೀರ್ ಚೋಟರಾನಿ ಅವರು ಪ್ರಶಸ್ತಿ ಸುತ್ತಿಗೆ ಮುನ್ನಡೆದರು.

ಅನಾಹತ್ ಅವರು ನಾಲ್ಕರ ಘಟ್ಟದ ಪಂದ್ಯದಲ್ಲಿ 3-1ರಿಂದ ಸ್ವದೇಶದ ತನ್ವಿ ಖನ್ನಾ ಅವರನ್ನು ಸೋಲಿಸಿದರು. ಮತ್ತೊಂದು ಸೆಮಿಫೈನಲ್‌ನಲ್ಲಿ ಈಜಿಪ್ಟ್‌ನ ಹನಾ ಮೋತಾಜ್ ಅವರು ಇಷ್ಟೇ ಅಂತರದಲ್ಲಿ ಸ್ವದೇಶದ ನಡೀನ್ ಎಲ್ ಹಮ್ಮನಿ ವಿರುದ್ಧ ಗೆದ್ದರು.

ಪುರುಷರ ಸಿಂಗಲ್ಸ್ ಸೆಮಿಫೈನಲ್ ಪಂದ್ಯಗಳಲ್ಲಿ ಅಭಯ್ 3-1ರಿಂದ ಮಲೇಷ್ಯಾದ ಅಮೀಶೆನ್‌ರಾಜ್ ಚಂದರನ್ ವಿರುದ್ಧ ಹಾಗೂ ವೀರ್ ಇಷ್ಟೇ ಅಂತರದಲ್ಲಿ ಮಲೇಷ್ಯಾದ ಮತ್ತೊಬ್ಬ ಆಟಗಾರ ಸಂಜಯ್ ಜೀವಾ ವಿರುದ್ಧ ಗೆಲುವು ಸಾಧಿಸಿದರು.